ಯಲ್ಲಿ ಥಾಮಸ ಎಡ್ವರ್ಡಸ್ ಯೆಂಬ ಒಬ್ಬ ಬಹು ಶೋಧಕನಾದ ಪ್ರಾಣಿಶಾಸ್ತ್ರಜ್ಞನು ಪ್ರಸಿದ್ಧಿಗೆ ಬಂದಿದ್ದಾನೆ. ಇವನು ತನ್ನ ಜಾತಿಯ ಉದ್ಯೋಗದಿಂದ ಹೊಟ್ಟೆಯ ತುಂಬಿಕೊಳ್ಳುತ್ತಿದ್ದು, ಅವಕಾಶ ಸಿಕ್ಕಾಗ ಪ್ರಾಣಿಧರ್ಮಶಾಸ್ತ್ರವನ್ನು ಸಾದ್ಯಂತವಾಗಿ ಅಭ್ಯಾಸಿಸಿದನು. ಬಹು ಸಂದುಗಳಿಂದ ಕೂಡಿದ ಹತ್ತು, ಅಥವಾ ಹೆಚ್ಚು ಕಾಲುಗಳುಳ್ಳ ಚಿಕ್ಕ ಜಾತಿಯ ಕೀಟಕಗಳನ್ನು ಕುರಿತು ಅವನು ಮಾಡಿದ ಶೋಧದಿಂದ ಹೊಸದೊಂದು ಜಾತಿಯು ಗೊತ್ತಾಯಿತು. ಅದಕ್ಕೆ ಪ್ರಾಣಿಧರ್ಮಶಾಸ್ತ್ರಜ್ಞರು "ಪ್ರಾನಿಝೂ ಎಡ್ವರ್ಡಸಿ" ಯೆಂಬ ಹೆಸರನ್ನು ಕೊಟ್ಟಿದ್ದಾರೆ.

ಶಿಂಪಿಗರಲ್ಲಿ ಯಾರು ಹೆಸರಾಗಲಿಲ್ಲೆಂಬ ಹಾಗಿಲ್ಲ. ಜಾನ ಸ್ಟೋಯೆಂಬ ಚರಿತ್ರಗಾರನು ಕೆಲದಿವಸ ತನ್ನ ಜಾತಿಯ ಉದ್ಯೋಗವನ್ನೇ ಮಾಡುತ್ತಿದ್ದನು. ಜಾಕಸನ್ನನೆಂಬ ಚಿತ್ರಗಾರನು ಪ್ರೌಢನಾಗುವವರೆಗೆ ಹೊಲಿಯುವ ಕೆಲಸವನ್ನೇ ಮಾಡಿದನು. ಶೂರನಾದ ಜಾನ್ ಹಾಕವರ್ಡನು ಚಿಕ್ಕಂದಿನಲ್ಲಿ ಲಂಡನಪಟ್ಟಣದೊಳಗೆ ಒಬ್ಬ ಶಿಂಪಿಗನ ಕೈಕೆಳಗೆ ಹೊಲಿಯುವ ಕೆಲಸ ಕಲಿಯುತ್ತಿದ್ದನು. ಇವನು ಪ್ರೊಯಿಟೇಯರ್ಸಯೆಂಬ ಪಟ್ಟಣದ ಕಾಳಗದಲ್ಲಿ ಬಹಳ ಶೌರ್ಯವನ್ನು ತೋರಿಸಿದರಿಂದ ಮೂರನೇ ಎಡ್ವರ್ಡರಾಜನು ಇವನಿಗೆ "ನಾಯಿಟ" ಯೆಂಬ ಪದವಿಯಕೊಟ್ಟನು–ಹಾಬಸನ್ನನೆಂಬ ಹಡಗಪಡೆಯ ದಳವಾಯಿಯು ಇದೇ ಜಾತಿಯವನಿದ್ದನು. ಇವನು, ಸನ್ನ ೧೭೦೨ ನೇ ವರ್ಷದಲ್ಲಿ ವೀಗೋ ಬಂದರದ ಹತ್ತರ ಹಡಗಗಳಿಗೆ ಅಡ್ಡಿಯ ಮಾಡುವದಕ್ಕೋಸರ ಸಮುದ್ರದೊಳಗೆ ಅಡ್ಡಗಟ್ಟಿದ ಸರಪಣಿಯನ್ನು ಮು

ರಿದನು. ಕ್ರೇಯಿಟ್ ಯೆಂಬ ಗಡ್ಡೆಯಲ್ಲಿ ಬಾನ್‌ಚರ್ಚ ವೂರಿನ ಹತ್ತಿರ ಇವನು ಒಬ್ಬ ಶಿಂಪಿಗನ ಅಂಗಡಿಯಲ್ಲಿ ಕಲಿಯುತ್ತಿದ್ದನು. ಆಗ ಆ ನಡುಗಡ್ಡೆಯ ನೆರೆಯಲ್ಲಿ ಯೆಷ್ಟೋ ಯುದ್ಧ ಹಡಗಗಳು ಹೋಗುತ್ತವೆಂಬ ಸುದ್ದಿಯು ಆ ವೂರೊಳಗೆ ಹಬ್ಬುತ್ತಲೇ, ಇವನು ತನ್ನ ಅಂಗಡಿಯೊಳಗಿಂದ ಜಿಗಿದು ಕೆಲ ಜೊತೆಗಾರರೊಂದಿಗೆ ಆ ಹಡಗಗಳನ್ನು ನೋಡುವದಕ್ಕೋಸ್ಕರ ಸಮುದ್ರ ತೀರಕ್ಕೆ ಓಡಿ ಹೋದನು. ಈ ಹುಡುಗನು ಅವುಗಳನ್ನು ನೋಡಿದಕ್ಷಣವೇ ತಾನೂ ಒಬ್ಬ ಅಂಬಿಗನಾಗಬೇಕೆಂಬ ಅಭಿಲಾಷೆಯಿಂದ ತುಂಬಿಕೊಂಡವನಾಗಿ, ಒಂದು ದೋಣಿಯೊಳಗೆ ಹಾರಿಕೊಂಡು, ಆ ಹಡಗಗಳ ಸಮೀಪಕ್ಕೆ ಹೋದನು. ತರುವಾಯ ಅವನು ದಳವಾಯಿಯ ಹಡಗವನ್ನು ಹುಡುಕಿ, ತನ್ನನ್ನು ಕರಕೊಳ್ಳುವದರ ಬಗ್ಗೆ ಬೇಡಿಕೊಳ್ಳಲಾಗಿ, *ವಾಲಂತೀಯರರೊಳಗೆ ಕರಕೊಳ್ಳಲ್ಪಟ್ಟನು. ಕೆಲ ವರ್ಷಗಳನಂತರ ಅವನು ಬಹುಮಾನಗಳನ್ನು ಪಡೆದು ಕೊಂಡು ತನ್ನ ಹಳ್ಳಿಗೆ ತಿರುಗಿ ಬಂದನು. ಅವನು ತಾನು ಶಿಂಪಿಗರ ಕೈಕೆಳಗೆ ಯಾವ ಗುಡಸಲಲ್ಲಿ ಕೂತು ಕೆಲಸಮಾಡುತ್ತಿದ್ದನೋ, ಅದೇ ಗುಡಸಲಲ್ಲಿ ವಿಧವಿಧದ ಮಿಷ್ಟಾನ್ನಗಳನ್ನುಉಂಡು ಸುಖದಿಂದ ವಾಸಮಾಡಿದನು. ಆದರೆ ಅಮೇರಿಕದೊಳಗಿನ ಸಂಯುಕ್ತ *ರಾಜ್ಯದ ಅಧ್ಯಕ್ಷನಾಗಿ ಹೋದ ಅಂಡ್ರೂ ಜಾನಸನ್ನನೆಂಬವನು ಬಹು ದೊಡ್ಡ ಶಿಂಪಿಗನೆಂಬದಕ್ಕೆ ಸಂದೇಹವಿಲ್ಲ. ಇವನು ಅಸಾಧಾರಣವಾದ ಗು

---

* ವಾಲಂಟೀಯರರೆಂದರೆ ಸ್ವಸಂತೋಷದಿಂದ ಯುದ್ಧಕ್ಕೆ ಹೋಗುವ ಶಿಪಾಯಿಗಳು.

* ಈ ರಾಜ್ಯವು ಪ್ರಜಾಸತ್ತಾತ್ಮಕವಾದದ್ದು - ಇದರ ಆಡಳಿತೆಯು ನಡಿಸುವ ಸಭೆಯವರ ಮುಖ್ಯಸ್ಥನಿಗೆ ಅಧ್ಯಕ್ಷನೆಂದೆನ್ನುತ್ತಾರೆ.

ಣಗಳುಳ್ಳವನೂ, ಬಲವಾದ ಬುದ್ಧಿಶಾಲಿಯೂ. ಅವನು ವಾಶಿಂಗಟನ್ ಪಟ್ಟಣದಲ್ಲಿ ಮಾಡಿದ ದೊಡ್ಡ ಸಂಭಾಷಣೆಯಲ್ಲಿ ತಾನು ಚೌಧರಿಯಾಗಿ ರಾಜ್ಯದಾಡಳಿತೆಯಲ್ಲಿ ಸೇರಿ, ಕಾಯ್ದೆಗಳನ್ನು ರಚಿಸುವದಕ್ಕೆ ಸಂಬಂಧವಾದ ಯೆಲ್ಲ ಶಾಖೆಗಳಲ್ಲಿ ಕೆಲಸಮಾಡುತ್ತ ಹೋದನೆಂದು ಹೇಳುತ್ತಿರಲಾಗಿ, ಅಲ್ಲಿ ಕೂಡಿದ ಸಮಾಜದೊಳಗಿಂದ ಒಬ್ಬವನು ಕೂಗಿದ್ದುಯೇನಂದರೆ, "ಶಿಂಪಿಗತನದಿಂದ ಮೇಲಕ್ಕೆ". ಜಾನಸನ್ನನ ವಿಶೇಷಗುಣವು ಹ್ಯಾಗೆಂದರೆ, ತನ್ನ ಸಂಗಡ ಯಾರಾದರೂ ನಗೆಯಾಡಿದರೆ ಆ ನಗೆಮಾತಿನೊಳಗಿನ ಒಳಿತಾದ ಭಾಗವನ್ನು ಗ್ರಹಿಸಿ, ಅದರ ಉಪಯೋಗವನ್ನು ಸಹ ತೋರಿಸಿಬಿಡುವದು. ಆದದರಿಂದ ಅವನು ಪ್ರತ್ಯುತ್ತರವಾಗಿ ನುಡಿದದ್ದುಯೇನಂದರೆ "ಯಾವನೋ ಒಬ್ಬ ಗೃಹಸ್ಥನು ನಾನು ಶಿಂಪಿಗನಿದ್ದೆನೆಂದೆನ್ನುತ್ತಾನೆ. ಅದದರಿಂದ ನನಗೆ ಯೆಷ್ಟು ಮಾತ್ರವೂ ಕ್ಷತಿಯಿಲ್ಲ. ಯಾಕೆಂದರೆ ನಾನು ಶಿಂಪಿಗನಿದ್ದಾಗ ಒಳ್ಳೇ ಶಿಂಪಿಗನೆಂತಲೂ, ಮೈಗೆ ತೀರ ಸರಿಯಾಗುವಂಥ ಪೋಷಾಕುಗಳನ್ನು ಮಾಡುವವನೆಂತಲೂ ಹೆಸರಾಗಿದ್ದೆನು. ನಾನು ನನ್ನ ಗಿರಾಕಿಗಳಿಗೆ ಹೇಳಿದ ವಾಯಿದೆಗಳನ್ನು ಯೆಂದು ಮೀರುತ್ತಿದ್ದಿಲ್ಲ; ಯಾವಾಗಲೂ ಚನ್ನಾಗಿ ಕೆಲಸಮಾಡುತ್ತಿದ್ದೆನು."

EXTRACTS FROM RAJASHEKHARA.

ರಾಜಶೇಖರದೊಳಗಿನ ಶ್ಲೋಕಗಳು.

॥ಚಂಪಕಮಾಲಾವೃತ್ತ॥

ಪಸಲೆಗೆ ಬಂದ ಫುಲ್ಲಿಯನೆತಳ್ದೆ ಸಯೋಳ್ಕರುವೇಡರೀವರ್ಗ
ರಾ।

ರ್ದಿಗಸೆ ಸರಿಸಕ್ಕೆ ನಿಂದು ನೆಗೆದತ್ತದು ಸತ್ವರಮಾಗಸಕ್ಕೆ ಬೆ॥
ಕ್ಕಸಮೆನೆ ತಳ್ತು ಪಾಯ್ವ ಕಣೆಗಳ್ಕೊ ರೆದಿಕ್ಕಿ ದುವೀರ್ವ
ರಂಸಿರೆ।
ಷ್ಣಿಸೆ ಪರನಿರ್ನಿಮಿತ್ತ ಹನನೋದ್ಯಮಮಾತ್ಮವಿನಾಶಕಾರಣಂ
॥೩॥

ಅರ್ಥ—ಹಸುರ ಹುಲ್ಲನ್ನು ಮೇಯುವದಕ್ಕೆ ಬಂದ ಎರಳೆಯನ್ನು ನೋಡಿ ಇಬ್ಬರು ಕಿರಿಬೇಡರು ಎರಡೂ ಬದಿಗಳಲ್ಲಿ ಸರತುಗೊಂಡು ನಿಂತು, ಅದಕ್ಕೆ ಬಾಣಗಳನ್ನು ಎಚೆಯಲಾಗಿ, ಆ ಎರಳೆಯು ಬೆದರಿ ಅತಿ ತ್ವರದಿಂದೆ ಮೇಲಕ್ಕೆ ಹಾರಿದ ಕೂಡಲೇ ಗುರಿತಪ್ಪಿ ಆ ಬಾಣಗಳು ಆ ಕಿರಾತರಿಗೆ ಬಡಿದು ಸತ್ತು ಹೋದರು. ನಿಷ್ಕಾರಣದಿಂದ ಅನ್ಯರನ್ನು ಕೊಲ್ಲಲಿಚ್ಛಿಸಿದವರು ತಾವೇ ಕೊಲೆಗೀಡಾಗುವರು.

॥ಉತ್ಪಲಮಾಲಾವೃತ್ತ॥

ಪೋಗದಿರೆಂದು ಗರ್ಜಿಪ ಕಿರಾತನ ಮಾತದು ತನ್ನ ಕರ್ಣ
ಮಂ।
ತಾಗದ ಮುನ್ನಮುಣ್ಮಿ ಕಿಡಿ ಕಣ್ಗಡೆಯೋಳ್ಕಿಪಿ ದಾಡೆಗು
ಟ್ಟಿತಾಂ॥
ತಾಗಲಿದಿರ್ಚಿ ಕೋಡುಡಿದ ಕಾಲನ ಸೈರಿಭಪಂತೆ ಬರ್ಪನಂ।
ತೂಗಿ ಕರಾಗ್ರದಿಂದೆ ಪೊಳೆವಿಟ್ಟಿಯೊಳಿಟ್ಟನದಂ ವನೇಚರಂ
॥೪॥

ಅರ್ಥ—ಹೋಗಬೇಡೆಂದು ಒದರುವ ಬೇಡನ ಮಾತು ತನ್ನ ಕಿವಿಗೆ ಬೀಳುವದಕ್ಕಿಂತ ಮುಂಚೆಯೇ ಶಿಟ್ಟಿಗೆದ್ದು ಕಡೆಗಣ್ಣಿನಿಂದ ಕಿಡಿಗಳನ್ನು ಸೂಸುತ್ತ ಕೋರೆಯನ್ನು ಚಾಚಿ ಆ ಕಿರಾತನನ್ನು ಇರಿದು ಶೀಳಬೇಕೆಂದು ಕೋಡು ಮುರಿದ

ಯಮನ ಕೋಣದಂತೆ ಎದುರಿಗೆ ಬರುವ ಆ ಕಾಡುಮಿಕವನ್ನು ಬೇಡನು ಈಟಿಗಳಿಯಿಂದ ತಿವಿದು ಕೆಡವಿದನು.

॥ಮತ್ತೇಭವಿಕ್ರೀಡಿತವೃತ್ತ॥

ಕಿಡಿಪುಟ್ಟುತ್ತಿರೆ ದಾಡೆಯಂ ಮಸೆದು ಕೆಗ್ಗಣ್ಣಿಕ್ಕಿ ನೋ
ಡುತ್ತೆ ಮೈ
ಗೂಡವುತ್ತುಬ್ಬಶಮಾಲಿಸುತ್ತೆ ಮೊಗಮಂ ತೂಗುತ್ತೆ ವಾಲಾ
ಗ್ರಮಂ॥
ಮಿಡುಕುತ್ತುಬ್ಬರಿಸುತ್ತೆ ರೋಮಚಯಮಂ ಮಿಂಟುತ್ತೆ
ಕಂದಂಗಳಂ।
ಕೆಡವುತ್ತುಂಗದೊಳಾರ್ದಿ ಬಲ್ಮರಗಳಂ ಬಂದತ್ತುದೊಂದೆಕ್ಕ
ಲಂ॥೫॥

ಅರ್ಥ—ಕಿಡಿಗಳು ಸೂಸುವಂತೆ ಕೋರೆಯನ್ನು ಮಸೆದು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ನೋಡುತ್ತಲೂ, ಮೈ ಕೊಡಹುತ್ತಲೂ, ಸಪ್ಪಳವನ್ನು ಆಲಿಸುತ್ತಲೂ, ಮೋರೆಯನ್ನು ತೂಗುತ್ತಲೂ, ಬಾಲವನ್ನು ಅಲ್ಲಾಡಿಸುತ್ತಲೂ, ಮೈ ಯುಬ್ಬಿಸಿ ರೋಮಗಳನ್ನು ನಿಗರಿಸುತ್ತಲೂ, ಅಡವಿಯೊಳಗಿನ ಗಡ್ಡೆಗಳನ್ನು ಅಗಿಯುತ್ತಲೂ, ಮೈ ತಿಕ್ಕಿ ದೊಡ್ಡ ದೊಡ್ಡ ಮರಗಳನ್ನು ಕೆಡವುತ್ತಲೂ ಒಂದು ಕಾಡುಹಂದಿಯು ಬಂದಿತು.

॥ಚಂಪಕಮಾಲಾವೃತ್ತ॥

ಪುಲಿ ಪೊರಮಟ್ಟು ಕಟ್ಟದಿರೊಳಬ್ಬರಿಸುತ್ತಿರೆ ಬೊಬ್ಬೆ
ಟ್ಟು
ಡುಲಿವೆರಸುತ್ತೆ ಪತ್ತಿ ಜಡಿದಾಯುಧದಿಂ ಪೊಡೆದಿಕ್ಕೆ
ಕ್ಕ

ಲನೆನಿಸುತ್ತೆ ನಿಂದರೆ ತ್ರಿಳಿಂದನನಪ್ಪ ದಳ್ಳಾಗಳಾತನಾ।
ಲನೆ ತದೀಯದಕ್ಷಿಣಭುಜಾಗ್ರಮನಾಜಯಲಕ್ಷ್ಮಿ ಯಾಂ
ಬಿನಂ॥೬॥

ಅರ್ಥ—ಒಂದು ಹುಲಿಯು ಹೊರಟು ಅಬ್ಬರಿಸುತ್ತ ಎ
ದುರಿಗೆ ಬರುವಾಗ ಒಬ್ಬ ಬೇಡನು ಕಲಿತನದಿಂದ ಕೈಯೊ
ಳಗಿನ ಖಡ್ಗವನ್ನು ಝಳಪಿಸಿ ಆ ಹುಲಿಯನ್ನು ಕಡಿದು ಕೆಡ
ಹಿದನು; ಆತನ ಹೆಂಡತಿಯು ಕಂಡು ಅವನ ಪರಾಕ್ರಮಕ್ಕೆ
ಮೆಚ್ಚಿ ಅತಿ ಸಂತೋಷದಿಂದ ಜಯಲಕ್ಷ್ಮಿಯು ಅವನ ಬ
ಲ ತೋಳನ್ನು ಅಪ್ಪಿದಳೋ, ಏನೋ ಅನ್ನುವ ಹಾಗೆ ಅ
ಪ್ಪಿಕೊಂಡಳು.

॥ಚಂಪಕಮಾಲಾವೃತ್ತ॥

ಪೊಳೆಯೊಳಗಿರ್ದು ಮೇವ ಏಗಮಂ ಏಗೆ ಪೆರ್ಬುಲಿ ಕಂ
ಡು ಕಾಣದಂ।
ತಳಪಿಗೆ ತಗ್ಗಿ ಕುಗ್ಗುತುಸುರಿಕ್ಕದೆ ಬಂದು ಹಣಂಗಿ ಪಾ
ರ್ದು ತಂ।
ನಳವನಭೀಕ್ಷಿಸುತ್ತೆ ಸಲೆ ಗರ್ಜಿಸಿ ಕಾಯ್ದು ಕಡಂಗಿ ಪಾ
ಯ್ದು ಪೊ।
ಯ್ದುಳೆಗಿರದಿಕ್ಕಿ ಘರ್ಘರಿತಕಂಠಮದೀಂಟಿತು ರಕ್ತವಾರಿ
ಯಂ॥೭॥

ಅರ್ಥ—ಪೊಳೆಯೊಳಗೆ ಮೇಯುವ ಎರಳೆಯನ್ನು ಕಂ
ಡು ಒಂದು ಹೆಬ್ಬುಲಿಯು ತಗ್ಗಿ, ಕಾಣದ ಹಾಗೆ ನೆಲಕ್ಕೆ ಕು
ಗ್ಗಿ, ಉಸುರುಹಾಕದೆ, ಹಣಕಿನೋಡಿ, ಹಾರುವ ತನ್ನ ಳವ
ನ್ನು ನೋಡಿ, ಗರ್ಜಿಸಿ, ಹಾರಿ ಅದರ ಗೋಮಾಳಯನ್ನು
ಹಿಡಿದು ನೆಲಕ್ಕೆ ಹಾಕಿ ರಕ್ತವನ್ನು ಕುಡಿಯಿತು.

||ಚಂಪಕಮಾಲಾವೃತ್ತ||

ಇದು ಕರಿ ಪೋದ ತಾಣವಿದು ಸೈರಿಭನೈದಿದ ದಾರಿ ನೋಳ್ಪಡಂ|
ಇದು ಪುಲಿಯಿರ್ದ ಬಲ್ಮೆಳೆ ಯಿದೆಕ್ಕಲನೇಳ್ಗಡಿ ಯಿಟ್ಟ ಬಟ್ಟೆ ನೋ||
ಇದು ಹರಿ ನಿಂದ ಪಜ್ಜೆ ಯಿದೆ ಪೊಕ್ಕ ಮದಾಂಬುವಿದಾಸ್ಯಫೇನಮಿಂ|
ಇದೆ ತನಿಗರ್ಬು ತಳ್ತುದೆ ಕೆಸರ್ವರಿಗೊಂಡಿದೆ ಹಸ್ತಿಮೌಕ್ತಿಕಂ||೭||

ಅರ್ಥ—ಈ ದಾರಿಯಲ್ಲಿ ಮದೋದಕವು ಬಿದ್ದದೆ, ಆನೆ ಹಾಯಿದು ಹೋಗಿರಬಹುದು; ಈ ಬಟ್ಟೆಯೊಳಗೆ ಬಾಯೊಳಗಿನ ನೊರೆಯು ಬಿದ್ದದೆ, ಕಾಡುಕೋಣವು ಹಾದು ಹೋಗಿರಬಹುದು; ಈ ಮೆಳೆಯಲ್ಲಿ ಗಬ್ಬುನಾತು ಬರುತ್ತದೆ, ಹುಲಿ ಯಿದ್ದೀತು; ಇಲ್ಲಿ ಕೆಸರುಂಟು, ಕಾಡುಹಂದಿ ಹಾಯಿದು ಹೋಗಿರಬಹುದು; ಇಲ್ಲಿ ಆನೆಯ ತಲೆಯೊಳಗಿನ ಮುತ್ತುಗಳು ಸೂರಿಗೊಂಡವೆ, ಸಿಂಹ ವಿರಬಹುದು; ಎಂದು ಬೇಟೆಕಾರರು ಬೇಟೆಗಳನ್ನು ಹುಡುಕುತ್ತಿದ್ದರು.

||ಮತ್ತೇಭವಿಕ್ರೀಡಿತವೃತ್ತ||

ಮರಗೊಂಬಂ ಪರಿದೇರಿ ನೋಳ್ಪ ಮೆಳೆಯಿಂದಂ ಸೋವುತಲ್ಲಲ್ಲಿ ಬೇ|
ಹರಿಸುತ್ತಂ ಪೊದರಿಂ ತೆರಳ್ಪನಡಿಗಂಡಾರ್ಕೈಪ ಸೀದಾರ್ಗಣದೋ||
ವರೀತೋಳ್ಕವ ಕಡಂಗಿ ಕಂಡು ಮಿಗಮಂ ಬೆಂಕೊಂಬ ಬೇಡರ್ನರೇ|

ಶ್ವರ ಕೇಳ್ವ ಬರ್ದರಣ್ಯದೊಳ್ಪರಿದರೇನೆಂಬೆಂ ತದಾಟೋ
ಪಮಂ॥೯॥

ಅರ್ಥ—ಎಲೈ ಅರಸನೇ, ಓಡಿಬಂದು ಮರದ ಪೊಂಗೆಗಳನ್ನು ಏರಿ ಬೇಟೆಯ ಮೃಗಗಳನ್ನು ನೋಡುವ, ಮೆಳೆಯೊಳಗಿಂದ ಬೆದರಿಸಿ ಹೊರಗೆಡಪುವ, ಹೊದರುಗಳಿಂದ ಮೃಗಗಳನ್ನು ಹೊರಡಿಸುವ, ಹೆಜ್ಜೆಗಳನ್ನು ಕಂಡು ಪರೀಕ್ಷೆ ಮಾಡುವ, ನೀರಿದ್ದ ಸ್ಥಳದಲ್ಲಿ ನಿಂತುಕೊಂಡು ಹೊಂಚು ಹಾಕುವ, ಮೃಗಗಳನ್ನು ಕಂಡು ಬೆನ್ನಹತ್ತುವ ಬೇಡರು ಹಬ್ಬಿದ ಕಾಡೊಳಗೆ ಬೇಟೆಯಾಡುತ್ತ ನಾಲ್ಕು ಕಡೆಗೆ ಹರಿಯುತಿದ್ದರು. ಅವರ ಪರಾಕ್ರಮವಿನ್ನೆಷ್ಟೆಂದು ಹೇಳಲಿ!!

॥ಚಂಪಕಮಾಲಾವೃತ್ತ॥

ಸರಳಿಸ ಪುಲ್ಲೆ ಯೋಡುವ ಮೊಲಂ ಬಿಡದಾಲಿಪ ಹಸ್ತಿ ನಿ
ಲ್ವ ಸೂ।
ಕರನಡಗೊಳ್ವ ಪೋಪುರ್ಗಿಯುಡಂಗುವ ಪೆರ್ಬುಲಿ ಪಾರ್ವ
ಪಕ್ಷಿಗ॥
ಳ್ಕ್ರೂರಗುಹ ಖಡ್ಗಿ ಲಂಘಿಪವೃಕಂ ಮುರಿದೇಳ್ವ ಮೃಗೇಂ
ದ್ರನೆತ್ತಲುಂ।
ನೆರೆದಿರೆ ಕಾಡೊಳುಣ್ಮಿದುದು ಬೇಡರ ಬೆಂಟೆಯ ವಾದ್ಯದ
ಬ್ಬರಂ॥೧೦॥

ಅರ್ಥ—ಓಡುವ ಎರಳೆಗಳನ್ನೂ, ಮೊಲಗಳನ್ನೂ, ಅಲಿಯುವ ಆನೆಗಳನ್ನೂ, ನಿಲ್ಲುವ ಹಂದಿಯನ್ನೂ, ಕಾಡು ಕೋರಿಗಳನ್ನೂ, ಅಡಗುವ ಹೆಬ್ಬುಲಿಯನ್ನೂ, ಹಾರುವ ಪಕ್ಷಿಗಳನ್ನೂ, ಚಿಂತ್ರಿಮಾಡುವ ಏದುಗಳನ್ನೂ, ಹಾರುವ ತೋಳಗಳನ್ನೂ, ಮೈ ಮುರಿದೇಳುವ ಸಿಂಹಸನ್ನೂ, ಬೇಟೆಯಾಡು

ವಬೇಡರ ವಾದ್ಯಧ್ವನಿಯು ಅರಣ್ಯದಲ್ಲಿ ತುಂಬಿರುವದು.

||ಚಂಪಕಮಾಲಾವೃತ್ತ||

ನಡೆ ಬಿಸು ನಾಯ್ಗಳಂ ತೊಡು ಸರಳ್ಗಳನಾರ್ದೆಸೆ ಸುತ್ತುಸ
ತ್ತು ಬೊ|
ಬ್ಬಿಡು ಬಡಿ ಕೋಲ್ಗಳಿಂದಿಡು ಮೊಲಂಗಳನೇಳ್ಕೆ ಲವೀಸಿ
ಪುಲ್ಲಿಯಂ||
ಕೆಡವು ಕಡಂಗಿ ಪೊಯ್ಪುಲಿಯನಿಟ್ಟಯೊಳಾಂತಿಡು ಪಂದಿ
ಯಂ ಪಡ|
ಲ್ವಿಡಿಸು ಗಜಂಗಳಂ ಕುಳಿಯೊಳೆಂಬ ರವಂ ಪಿರಿದಾಯ್ತರ
ಣ್ಯದೊಳ್||೮೮||

ಅರ್ಥ_ನಾಯಿಗಳನ್ನು ಬಿಡು, ಬಾಣಗಳನ್ನು ಎಚೆ, ಸು
ತ್ತುವರಿ, ಮರವನ್ನು ಏರು, ಕೂಗು, ಕೋಲಿನಿಂದ ಮೊ
ಲವನ್ನು ಹೊಡಿ, ಬಲೆಹಾಕಿ ಚಿಗರಿಗಳನ್ನು ಹಿಡಿ, ಹುಲಿಯ
ನ್ನು ಕೊಲ್ಲು, ಹಂದಿಯನ್ನು ಈಟಿಯಿಂದ ತಿವಿ, ಕುಣಿಯೊ
ಳಗೆ ಆನೆಯನ್ನು ಕೆಡವು ಎಂಬ ಧ್ವನಿಯು ಅರಣ್ಯದಲ್ಲಿ
ತುಂಬಿರುವದು.

ಸಮಾಪ್ತ.

NOTICES.

ನೋಟಿಸುಗಳು.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿ
ಗೆ ತಿಳಿಯಪಡಿಸುವದೇನಂದರೆ_ಮಾರ್ಚ ತಿಂಗಳ ಕನಡ ಮ
ಠಪತ್ರಕದಲ್ಲಿ, ಹಾಜರಿ ಪತ್ರಕ ಯಾವ ಪ್ರಕಾರಾ ಯಿಡತ
ಕ್ಕದ್ದು ಈ ಬಗ್ಗೆ ನಾವು ನೋಟಿಸು ಕೊಟ್ಟಿರುತ್ತೇವೆ. ಆದ

ರೆ ಅದರಲ್ಲಿ ಕೆಲವು ಸಂಶಯಗಳು ಪ್ರಾಪ್ತವಾದ ಕಾರಣ ತ್ರೆಳ ಗೆ ಸಮಜೂತ ಬರೆದದೆ ಅದರಂತೆ ವಹಿವಾಟ ಯಿಡಬೇಕು.

		[illegible]	[illegible]	[illegible]	[illegible]	
೧	—	/ಅ			/ಅ	ಯಿಾ ಹುಡುಗಾ ಮುಂಜ್ಯಾನೆ ಹಾಜರ ಸಂಜಿಗೆ ಅಜಾರಿ.
೨	—				ರ/	ಯಿಾ ಹುಡುಗಾ ಮುಂಜ್ಯಾನೆ ರಜಾ ಸಂಜಿಗೆ ಹಾಜರ.
೩	—				ರಂ	ಯಿಾ ಹುಡುಗಾ ಮುಂಜ್ಯಾನೆ ರಜಾ ಮಧ್ಯಾನಕ್ಕೆ ಗೈರಹಾಜರ.
೪	—				ಅರ	ಯಿಾ ಹುಡುಗಾ ಮುಜ್ಯಾನೆ ಅಜಾರಿ ಸಂಜಿಗೆ ರಜಾ.
೫	—				ಂಅ	ಯಿಾ ಹುಡುಗಾ ಮುಜ್ಯಾನೆ ಗೈರ ಹಾಜರ ಮತ್ತು ಮಧ್ಯಾನಕ್ಕೆ ಅಜಾರಿ.

ಮುಕ್ಕಾಮ ಕಲಾದಗಿ ತಾರೀಖು ೨೫ ಜುಲಯಿ ೧೮೬೨.

(Signed) Hanmant Ramchandra,
ಡಿ. ಇ. ಇ. ಜಿಲ್ಲಾ ಕಲಾದಗಿ.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ ತಿಳಿಪಡಿಸುವದೇನಂದರೆ–ಪ್ರತಿತಿಂಗಳ ಮೊದಲನೇ ತಾರಿಖಿಗೆ ನಿಕಾಲೆ ಪತ್ರಕೆ ಕಳಸುವದಕ್ಕೆ ಹುಕುಮಾಯಿದ್ದ ಕೆಲವು ಮಾಸ್ತರರು ಕಳುಹಿಸಿ ವುಳಿದವರು ಕಳುಹಿಸುವದಿಲ್ಲ. ಯಿನ್ನುಮೇಲೆ ಸದರಿಪತ್ರಕೆ ಕಳುಹಿಸದೆ ಯಿರುವ ಮಾಸ್ತರರಬಗ್ಗೆ ಯೋಗ್ಯ ತಜವಿಜ ಮಾಡಲ್ಪಡುವದು.
ಕೆಳಗೆ ಬರದ ನಮೂನೆಯಂತೆ ಕಳುಹಿಸುತ್ತಾ ಯಿರಬೇಕು.

ರಿಪೋರ್ಟಗೆ ಹುಕುಮು ದೊರಿಯದೆ ಯಿದ್ದಬಗ್ಗೆ.

ರಿಪೋರ್ಟನ ನಂಬರು.	ರಿಪೋರ್ಟನ ತಾರೀಖ ತಿಂಗಳ.	ರಿಪೋರ್ಟನೊಳಗಿನ ಸಾರಾಂಶ.

ಸಹಿ (ಮಾಸ್ತರಂದು)

ಹುಕುಂಗೆ ಜವಾಬ ಕೊಡದೆಯಿದ್ದಬಗ್ಗೆ.

ಹುಕುಮಿನ ನಂಬರ.	ಹುಕುಮಿನ ತಾರೀಖ ತಿಂಗಳ.	ಹುಕುಮಿನೊಳಗಿನ ಸಾರಾಂಶ.	ಜವಾಬ ಕಳಸದೆ ಯಿರುವಕಾರಣ.

ಸಹಿ (ಮಾಸ್ತರಂದು)

ಬಾದಾಮಿ ತಾಲೂಕಿನ ಪೈಕಿ ಬಟಕುರಕಿ ಸಾಲಿಯ ಮಾಸ್ತರ ರಾಮಚಂದ್ರ ಅಣ್ಣಾಜಿ ರಾಯಬಾಗ ಯಿವನು ವೋ ತಿಂಗಳಲ್ಲಿ ಯಿತ್ತಕಡಿಯ ಅಪ್ಪಣೆ ದೊರಿಯುವ ಹಾದಿ ನೋಡದೆ ಯಕದಮ್ಮ ಸಾಲಿ ಬಂದಮಾಡಿ ತನ್ನ ವೂರಿಗೆ ಹೋಗಿ ಜೂನತಿಂಗಳಲ್ಲಿ ಬಂದು ಸಾಲಿ ಸುರು ಮಾಡಿದನು. ೨೪ ದಿವಸಗಳು ಸಾಲಿ ಬಂದ ಯಿತ್ತು; ಈ ಸಂಗತಿ ಮೆಹರಬಾನ ಇಜುಕೆಶನಲ ಇನಸ್ಪೆಕಟರ ಸಾಹೇಬ ಬಾಹಾದ್ದೂರ ದಕ್ಷಿಣಭಾಗ ಯಿವರ ನಜರಿಗೆ ತಂದು ಅವರ ಮಂಜೂರಿಯಿಂದ ಸದರ ಮಾಸ್ತರನಿಗೆ ಗೈರಹಾಜರ ಮುದ್ದತಿಯ ಸಂಬಳ ಕೊಯಿದದ್ದಲ್ಲದೆ, ವಂದು ರುಪಾಯಿ ದಂಡಾ ಮಾಡಿರುತ್ತದೆ ವೃಳದ ಮಾಸ್ತರ ಅಶಿಷ್ಟಂಟ ವಗೈರೆರ ತಿಳುವಳಿಕೆ ಬಗ್ಗೆ ಯಿದು ಪ್ರಗಟಿಸಲ್ಪಟ್ಟಿದೆ. ತಾರೀಖ ೫ ನೇ ಮಾಹೇ ಅಗಸ್ಟ ಸನ್ನ ೧೮೭೨ ಯಿಸವಿ

(Signed) Hanmant Ramchandra.

ಡಿಂ ಇಂ ಇಂ ಜಿಲ್ಹಾ ಕಲಾದಗಿ

New Poetry—Description of the Monsoon.

ವರ್ಷಾಕಾಲದ ವರ್ಣನೆಯು.

॥ವಸಂತತಿಲಕಾವೃತ್ತ॥

ಶ್ರೀವಿಘ್ನಸಂಹರಣಕಾರಣವಾರಣಾಸ್ಯಾ।
ಭೋವಕ್ರತುಂಡಭಯಖಂಡನಸುಪ್ರಚಂಡ॥
ಭೋವಿಶ್ವವೇದ್ಯನಿರವದ್ಯಸುಹೃದ್ಯದಾದೇ।
ವಾವಂದಿಪೆಂದಯದಿನೊಂದಿನಿತೀಕ್ಷಿಸೆಂನಂ॥೧॥
ತಾಯೋದಯಾಕಯೊಮಯೂರಸುಯಾನೆಗೇಯೋ।

ನೂಯಾಮುಯೂಮುಯುಭಯಾಸ್ತಮುಯೋಸುಕಾಯೋ॥
ಕಾಯೆಂನಡೇಯುವಿಸಹಾಯೆಚಿರಾಯುಮಾಯೆ।
ಧೀಯೆಂನಯಾನ್ವಯೆಪಯೋಜಶಯೋವಿಜೇಯೋ॥೬॥

॥ಮತ್ತೇಭವಿಕ್ರೀಡಿತವೃತ್ತ॥

ನಡೆಪರ್ಜನ್ಯನೃಪಾನಿದಾಘನಗೆಲಲ್ ಬಪ್ಪೆಂಸಹಾಯಕ್ಕೆನಾಂ।
ಪೃಡಿಯಂಗ್ಘೂಡಿಸವೇಳ್ದನೆಂಗನಯದಿಂಮುಬ್ಬಕ್ತಿಯಂಕಾಣದೇ॥
ತಡವೇಕೆಂನಿವನಸ್ರತಾಪ ವಿಹ್ರದೆ ತ್ರಾಂನೋಡ್ವೆನೆಂಬಂತ್ರಭೋ।
ರಿಡುತಂಬಿಸೆಮಹಾನಿಲಂ ದಶದಿಗಂತಭಾಗಗಳೊಳ್ ವೇಗದಿಂ॥೭॥
ಘನಕಾಲಪ್ರಭುವೈದಿದಂಪವನನೇಸೇನಾಧಿಪಂಸೈನ್ಯವಾ।
ವನದೌಘಂಸ್ತನಿತಂಭಟಧ್ವನಿ ತಟಿನ್ನಿಸ್ತ್ರಿಂಶಮುಂಝುಳ್ಪಸು।
ತ್ತನಿಶಂಶಕ್ರಧನುಸ್ಸುಧನ್ವಧರನಾಶಂಬಾರವೊತ್ತಿಂಹಗ।
ಜಗನೆಗ್ಯೆದಾಂತುಶಕಾಘಮುಂಮುನಿಯುತ್ತೈತಪ್ಪೊಗೇಲ್ಗೆಲಲ್ ಗ್ರೀಷ್ಮನಂ॥೮॥
ಕರಿವೋಡಂ ಮುಸುಕಿತ್ತು ಕತ್ತಲಿಡಿದತ್ತಿತ್ತಂಮಹಾಧೂಳಿಯಿಂ।
ಹರಿದಂತಂ ತುರುಗಿತ್ತು ಕಣ್ಣಿಕಸಗೆಳ್ಮೇಲಭ್ರಪರ್ಯಂತಮುಂ॥
ತ್ವರದಿಂಪಾದಪಶೇಖರಂಗಳುರೆಕೀಳುತ್ತಂಮಹಾವಾತಡು।
ಷ್ಪರದಿಂದಂಬುಡವೋಲವಾಡುವ್ರು ಬಹಾಭಾಗಟಕ್ಕೆ ಪಳ್ಯಗನಾ॥೯॥

॥ಮಾಲಿನೀ ವೃತ್ತವು॥

ಘನಯುತನತಿಶಾಂತಂನೀಲಕಂಠದ್ವಿಜಾನಂ।
ದನದನಖಿಲಸಂತಾಪಾಂತಕಂಸ್ನೇಹಸಂವ।
ರ್ಧನಕರನನಿಶಂಪದ್ಮಿಪ್ರಿಯಂಬಂದನೈಜೀ।
ವನದನಿವನೆವರ್ಷಾಕಾಲಭೂಪಾಲಕೇಂದ್ರಂ॥೬॥

॥ಮತ್ತೇಭವಿಕ್ರೀಡಿತವೃತ್ತ॥

ಅರಿಸಂಗುಪ್ತನವಂಗಿವಂರವಿಸಹಾಯಂಮಾಡಿಹಂವೈರಿಯೊ।
ಲರಿಯುಲ್ಕೀತನು ವೀತನಾಶ್ಯೆಯನೆತ್ತಾನುಂ ತಾಳ್ದಿದೀಪ
ಕ್ತಿಯಾ।
ಯ್ತಿರಿಯಂತ್ರೆಂದುನಿಧಾಘನಂಜಯಿಸಿ, ಸೂರ್ಯದ್ಯೋತವಂ
ಮುಚ್ಚಿ, ಸ।
ತ್ವರದಿಂಪಾರಿಸಿದಂದಿಗಂತರಕೆ ವರ್ಷಾಕಾಲನಾಹಂಸವಂ॥೭॥

॥ತರಳ ವೃತ್ತವು॥

ನಿರುತವುಂರವಿಚಂದ್ರರೋರ್ವರಕಂಡರೋರ್ವರಿಗಾಗದಂ।
ತಿರೆವಿರೋಧಿಸುತಿರ್ಪನಿಂಘನಕಾಲನೀರ್ವರಮುಚ್ಚುತಂ॥
ಬರಧರಾತಳರಾಜ್ಯಗಳ್ಗನನಾದೊಲೊಪ್ಪುತುವೋಡಗ।
ಪ್ಪರ ವಿಚಂದ್ರರಕಾಣೆನೀರ್ವರನಾಯುವೋರ್ವರಿಗಾಯುವೈ
॥V॥

॥ಮತ್ತೇಭವಿಕ್ರೀಡಿತವೃತ್ತ॥

ಜಗದಾನಂದಕರಂಜಗನ್ನಯನನಪ್ಪಂವೋಣನಂತಾಶ್ರಯಂ।
ಖಗನೀತಂಜಗತೀಸುಬಾಂಧವನೆ, ಮೆಣ್ದೋಷಾರಿಯಿಂ ತಿ
ದುರ್ವೀ॥
ಶಗೆಮುತ್ತಲ್ಪಡದೌಘಮುನ್ಮಲಿನತಾಯುಕ್ತಂವಿನಿಸ್ತೇಜ
ಮಾ।

ಗೋಗತೆಂತಾದಿನಕಾಷ್ಠೆ ದುರ್ದಿನವಾದೆಂದು ಭೋಜಸಂಭೂತ
ನಿಂ॥೯॥

॥ಸ್ರಗ್ಧರಾವೃತ್ತವು॥

ಶೂರಂ ದೂರಂ ನಭೋಧ್ವಂಸಮಯಮುಮಿದಯೋಗ್ಯಂತೆ
ವೋದಂಡಯಾತ್ರಾ।
ಘೋರಕ್ಷ್ಮಾಂಪ್ರೋಗಲಾರೇಂಬಳಮುಳಗಳೊಳುಂಟೆಂನವಾಲ್ಗ
ವಗಂತದ್॥
ಭಾರಂ ಛಾಯಾಸಹಂವಿಶ್ರಮಿಪುದು ಚಿತವೆಂದಾ ಘನಾವಾಸ
ದೋಳ್ಕಂ।
ದೋರಂತದೃಶ್ಯನಾಗಲ್ ಜಗವಮುಸು ಕುತಿರ್ಪ್ಪೊಲ್ತು ವೆಂಕಾರ
ದಿಕ್ಕುರ್ಗಂ॥೧೦॥

॥ಮತ್ತೇಭವಿಕ್ರೀಡಿತವೃತ್ತ॥

ಕರಪೂರ್ಣಂತರಥೀಷುಧಿಕ್ಷಿತಿಗಳಲ್ತುಂ ಜಿಷ್ಣು ಧನ್ವನ್ವಿತಂ।
ಸರಿಯಲ್ತುರಣರಂಗಮುಂ ಕುವಲಯಾಹ್ಲಾದಾಸ್ಪದಂತಾರ
ಕೇ॥
ಶ್ವರನಲ್ತುಚ್ಚಬಲಾನ್ವಿತಂ ಬಗೆವೊಡಲ್ತುಜಾರನುಂ ಕೃಷ್ಣ
ವ।
ರ್ಣರುಚಿಭ್ರಾಜಿತಮುಕ್ತಾವಲಿಯುಂ ಮುಕ್ತೀವೋಘವೋಂ
ಸೋಜಿಗಂ॥೧೧॥
ಇದುಕೋಲ್ಮಿಂ ಚೋಸಿಡಲ್ಕು ಲಿಗೆಯೊಸುರ ಕರಿಶ್ವೇತಸ
ದ್ದಂತವೋವೋ।
ಘದರಾಪಾಲಧೃತೋತ್ಪಲ್ಗಲತೆಯೊಗಗನಶ್ರೀಚಲಾಪಾಂಗವೋ
ವೋ॥
ರ್ದನಂತಾಬ್ಧ್ಯುಲ್ಲಸ ದ್ವಿ ದ್ರುಮಲತೆಯೊ ಘನಶ್ರೀಯುಸೀ

ಮಂತ್ರಮೋಘಾ|

ರಿದಮೈಕುಂತೇಶಕಂಠಸ್ಥ ಮಣಿಖಚಿತ ಸನ್ಮಾಲ್ಯಮೋಸ್ವಾರ್ಥ
ನುಸ್ಯೋ||೧೨||

ಇದುಸಿಂದೂ ರಸಮನ್ವಿತಂ ಹರಿಧನುಸ್ಸೀಮಂತಸದ್ರೇಖೆಮ||

ತ್ರಿದಶಶೋರ್ಣಪರಿವೇಷ್ಟಿತಂ ಕಚಚಯಂನೀಲಾಂಬುದಾಚ್ಛಾ
ದನಂ|

ಪ್ರದಿದಿಂನೊಂದುಘನೌಘಮೇಕಬರಿಯೊಳ್ಜ್ವಲ್ವಾಯ್ತುಕೋ
ಲ್ಮಿಂಚೆಸಾ|

ಶಿವಕುಂದಸ್ಫುಟಮಬ್ಧಮಂಡಲ ವಿದಭ್ರಶ್ರೀಸಿರಸ್ಸಿಂಬಿನಂ||
೧೩||ಶ್ರೀ

(ಮುಂದಕ್ಕೆ ಸಾಗಿರುತ್ತದೆ|)

ಧೊಂಡೋ ನರಸಿಂಹ ಮುಳಬಾಗಕರ.

Correspondence.

ಪತ್ರವ್ಯವಹಾರವು.

ರಾ|| ರಾ|| ದಕ್ಷಿಣಭಾಗದ ಶಾಲಾಪತ್ರಕರ್ತರಿಗೆ.

ಎಂ ಎಂ ಅಯ್ಯಾ, ಪ್ರೌಢ ಎಡಿಟರ ಮಹಾರಾಯರೆ; ನಾನು ಬರೆದ ಪತ್ರಗಳಿಗೆ ಸ್ಥಳ ದೊರಿಯುತ್ತದೆಂದು ನೋಡಿ, ಈಗ ಪುನಃ ಎರಡು ಒಳಗಳನ್ನು ಬರೆದು ಪ್ರಸಿದ್ಧ ಮಾಡುವ ಕ್ರಮವನ್ನು ತಮಗೆ ಕೊಡುತ್ತೇನೆ; ಈ ಕ್ರಮವನ್ನು ಲಕ್ಷಕ್ಕೆ ತಾರದೆ ನನ್ನ ಆಶೆಯನ್ನು ನೆರವೇರಿಸುವಿರೆಂದು ಕೋರುತ್ತೇನೆ.

ಚಂದ್ರನಗತಿ, ಕಿರಣಗಳು.

ಜಡ ಪದಾರ್ಥಗಳು ಕೆಳಗೆ ಬರಬೇಕೆಂಬುವ ನೇಮದ

ಪ್ರಕಾರ ಚಂದ್ರನು ತನ್ನ ಜಡತ್ವದಿಂದ ಕೆಳಗೆ ಜರಿಯುತ್ತಾನೆ; ಮತ್ತು ಪೃಥ್ವಿಯು ಆಕರ್ಷಣ ಶಕ್ತಿಯಿಂದ ತನ್ನ ಕಡೆಗೆ ಜಗ್ಗುತ್ತದೆ. ಈ ಪ್ರಕಾರ ಚಂದ್ರನಿಗೆ ಎರಡು ಗತಿಗಳು ಉಂಟಾದವೆಂದು ನೋಡಲಾಗಿ, ಪೃಥ್ವಿಗೆ ಸೂರ್ಯನ ಆಕರ್ಷಣ ಮತ್ತು ತನ್ನ ಜರಿಯೋಣ ಇವುಗಳ ಯೋಗದಿಂದ ವಾರ್ಷಿಕ ಮತ್ತು ದೈನಂದಿನಗತಿಗಳು ಉಂಟಾದ ಪ್ರಕಾರವೇ ಚಂದ್ರನಿಗಾದರೂ ಆಗಬೇಕು, ಹೀಗಿದ್ದು ವಾರ್ಷಿಕ (ಪೃಥ್ವಿಯ ಸುತ್ತ ಪ್ರದಕ್ಷಿಣಾಮಾಡುವ) ಗತಿ ಒಂದೇ ಇರುವಂತೆ ತೋರುತ್ತದೆ. ದೈನಂದಿನಗತಿಯು ಚೆನ್ನ ಕಾಣುವದಿಲ್ಲ; ಈ ಪಕ್ಷದಲ್ಲಿ ವಿಚಾರಮಾಡಿದರೆ ಚಂದ್ರನಮೇಲೆ ಸೂರ್ಯನ ಆಕರ್ಷಣಶಕ್ತಿ ಸಹಾ ಇರುವಂತೆ ಕಾಣುವದರಿಂದ ಮೂರ ಗತಿಗಳು ಆದವು; ಇದೇ ಕಾರಣದಿಂದ ದೈನಂದಿನಗತಿ ಚಂದ್ರನಲ್ಲಿ ಉಂಟಾಗಲಿಲ್ಲ ವೆಂದು ತಿಳಿಯಬರುತ್ತದೆ. ಚಂದ್ರನು ಪೃಥ್ವಿಯ ಸುತ್ತ ೨೯.೨೫ ದಿವಸದಲ್ಲಿ ತಿರಗುತ್ತಾನೆ. ಅದೇ ಚಂದ್ರನ ವಾರ್ಷಿಕಗತಿ ತಿಳಿಯಬೇಕು.

ಚಂದ್ರನಲ್ಲಿ ನೀರಿನ ಅಂಶ ಬಹಳ ಇರುವದರಿಂದ ಅವನ ಕಿರಣಗಳು ತಂಪು ಇರುತ್ತವೆ ಪ್ರೊತರ್ ಮತ್ತೇನು ಆಧಾರ ಶಿಗುವದಿಲ್ಲ.

ಈ ಮೇಲೆ ಬರದ ವಿಷಯದಲ್ಲಿ ಯಾರಿಗಾದರೂ ಸಂಶಯ ಬಂದರೆ ಅವರು ಇದೇ ಶಾಲಾಪತ್ರಿಕ ದ್ವಾರದಿಂದ ತಮ್ಮ ಮತವನ್ನು ಪ್ರಸಿದ್ಧ ಮಾಡುವರೆಂದು ವಿನಯಪೂರ್ವಕವಾಗಿ ಹೇಳಿಕೊಳ್ಳುತ್ತೇನೆ.

ತಾರೀಖು ೨೦ ಜುಲಾಯಿ ಸನ್ ೧೮೭೨ ಇಸವಿ.

ಮಲ್ಲಪ್ಪಾ ಕೆಂಚಪ್ಪಾ ಮಾಸ್ತರ ಹುಣಶಿಕಟ್ಟಿ.

ರಾಜಮಾನ್ಯ ರಾಜಶ್ರೀ ಬೆಳಗಾವಿ ಕನ್ನಡ ಮಠಪತ್ರಕರ್ತರಿಗೆ.

ವಿನಂತಿ ಭೋಜ ಮಾಸ್ತರರಾದ ಶಿವಾಜಿ ಅಪ್ಪಾಜಿ ಶಿರಸಂಗಿಕರ ಇವರು ಒಂದು ಸಮೀಕರಣ ಬಿಡಿಸುವ ಬಗ್ಗೆ ಪ್ರಶ್ನೆ ಮಾಡಿ ಕಳುಹಿಸಿದಲ್ಲಿ ತಾವು ಜುಲಾಯಿ ತಿಂಗಳ ಮಠಪತ್ರಿಕೆಯಲ್ಲಿ ಪ್ರಸಿದ್ಧಮಾಡಿದಕ್ಕೆ ಆ ಲೆಕ್ಕದ ರೀತಿವಾರ ಮಾಡಿ ಉತ್ತರಕೊಟ್ಟ ಬಗ್ಗೆ ತಮ್ಮ ಕರಕಮಲದಲ್ಲೊಗೆವ ಸುಂದರ ಪತ್ರದ್ವಾರದಿಂದ ತಿಳುಹಿಸ ತಕ್ಕದ್ದು.

$ಕ್ಷ^{೪}+೩ಕ್ಷ^{೩}+೪ಕ್ಷ^{೨}-೩೦ಕ್ಷ=೧೦೮$. ಇದರಲ್ಲಿ ಕ್ಷ ದ ಕಿಮ್ಮತ್ತು ತೆಗಿಯುವದು.

ಸ್ಥಳಾಂತರ ಮಾಡಲು

$ಕ್ಷ^{೪}+೩ಕ್ಷ^{೩}+೪ಕ್ಷ^{೨}-೩೦ಕ್ಷ-೧೦೮=0$. ಎಡಬಾಜುವಿನಲ್ಲಿ ಗುಣ್ಯ ಗುಣಕ ಪದಮಾಡಲು.

$(ಕ್ಷ^{೩}+೬ಕ್ಷ^{೨}+೨೨ಕ್ಷ+೩೬)(ಕ್ಷ-೩)=0$ ಎರಡೂ ಬಾಜುಗಳಿಗೆ $(ಕ್ಷ^{೩}+೬ಕ್ಷ^{೨}+೨೨ಕ್ಷ+೩೬)$

ಇದರಿಂದ ಭಾಗಿಸಿದರೆ.

$ಕ್ಷ-೩=0 \therefore ಕ್ಷ=೩$

ತಾರೀಖು ೧ ನೇ ಮಾಹೆ ಅಗಸ್ಟ ಸನ್ನ ೧೮೭೩ ಇಸವಿ

ಪರವಯ್ಯಾ ಲಿಂಗಯ್ಯಾ ಗೌಡಹೊನ್ನಿದಿಬ್ಬಕರ ೧ನೇ
ನಂಬರದ ಸಾಲಿಯ ಹೆಡ್ಡಮಾಸ್ತರ ಬೈಲಹೊಂಗಲ.

ರಾಜಮಾನ್ಯ ರಾಜೇಶ್ರೀ ಕನ್ನಡ ಮಠಪತ್ರಕ ಕರ್ತರಾದ ಬೆಳಂಗಾವೀ ತ್ರಾನ್ಸಲೇಟರ ಇವರ ಚರಣಸನ್ನಿಧಿಗೆ—

ವಿಜ್ಞಾಪನೆ—ತಾವು ಸನ್ನ ಮಜಕೂರ ಜುಲಾಯಿ ತಿಂಗಳ ಮಠ

ಪತ್ರ ಅಂಕಿ ೪ನೇಯ ೯೬ನೇ ಪುಟದಲ್ಲಿ ಭೋಜ ಸಾಲಿಯ ಮಾಸ್ತರರ ಕಡಿಯಿಂದ ಬಂದ ಸಮೀಕರಣವನ್ನು ಪ್ರಸಿದ್ಧ ಮಾಡಿದ್ದು ಬಿಡಿಸಿ ಕೆಳಗೆ ವಿವರಿಸಿರುತ್ತದೆ ದಯಮಾಡಿ ಆಶ್ರಯಕೊಟ್ಟು ನಮ್ಮ ಮಿತ್ರರಿಗೆ ತಿಳಿಸುವ ತಜವೀಜು ಆಗಬೇಕು.

ಉದಾಹರಣೆ $ಕ್ಷ^{೪}+೩ಕ್ಷ^{೩}+೪ಕ್ಷ^{೨}-೩೦ಕ್ಷ=೧೦೮$

ಎರಡೂ ಪೇರಿಯಲ್ಲಿ ಈ ಬಲಭಾಗದ ೩ ಪದಗಳು ಕೂಡಿಸಿ	$೩ಕ್ಷ^{೩}+೧೮ಕ್ಷ^{೨}+೬೬ಕ್ಷ=೩ಕ್ಷ^{೩}+೧೮ಕ್ಷ^{೨}+೬೬ಕ್ಷ$
ಬೇರೀಜು	$ಕ್ಷ^{೪}+೬ಕ್ಷ^{೩}+೨೨ಕ್ಷ^{೨}+೩೬ಕ್ಷ=೩ಕ್ಷ^{೩}+೧೮ಕ್ಷ^{೨}+೬೬ಕ್ಷ+೧೦೮.$
ಮೊದಲಿನ ಪೇರಿಯಲ್ಲಿ (ಕ್ಷ) ಕಾಂಶದಲ್ಲಿ ತಗಿದು ಮತ್ತು ಎರಡನೇ ಪೇರಿಯಲ್ಲಿ ೩ ಕಾಂಶದಲಿ ತಗಿದು.	$ಕ್ಷ(ಕ್ಷ^{೩}+೬ಕ್ಷ^{೨}+೨೨ಕ್ಷ+೩೬)=೩(ಕ್ಷ^{೩}+೬ಕ್ಷ^{೨}+೨೨ಕ್ಷ+೩೬).$
ಎರಡೂ ಪೇರಿಗೆ ಸಮಕಾಂಸ ಗುಣಕ ಇರುವದರಿಂದ ಸಂಕ್ಷೇಪಮಾಡಿ ಕ್ಷ ೩.	$ಕ್ಷ=೩$ ಉತ್ತರ.

ಈ ಪ್ರಕಾರ ಬಿಡಿಸಿ ಕಳುಹಿಸಿರುತ್ತದೆ. ಆದರೆ ಇದೇ ಪ್ರಕಾರದ್ದು ಮತ್ತೊಂದು ಸಮೀಕರಣವು ಇದರಕೆಳಗೆ ಬರೆದಿರುತ್ತದೆ. ಅದು ತಮ್ಮ ಸುಂದರವಾದ ಮುಂದಿನ ೫ನೇ ಸಂಚಿಕೆಯಲ್ಲಿ ಸ್ಥಳಕೊಟ್ಟರೆ ಯಾರಾದರೂ ಬಿಡಿಸಿ ಸಂಶ

ಯು ಪರಿಹಾರ ಮಾಡಿ ಅಭಿವೃದ್ಧಿ ಹೊಂದಿಸುವರೆಂದು ಕೋರುತ್ತೆನೆ ಅಭಿಜ್ಞರಿಗೆ ಹೆಚ್ಚಾಗಿ ಬರಕೊಳ್ಳಲಿಕ್ಕೆ ಶಕ್ತನಲ್ಲ ಇಂತಿವಿಜ್ಞಾಪನಃ.

ಮು॥ ಹುಕ್ಕೇರಿ ತಾ॥ ಚಿಕ್ಕೋಡಿ ಜಿ॥ ೭ನೇ ಅಗಷ್ಟ ೧೮೭೭ ಇಸವಿ.	ಅಣ್ಣಾಜೀ ಭೀಮರಾವ ವಾಳವೇಕರ ಸ್ಕೂಲಮಾಸ್ತರ ಹುಕ್ಕೇರಿ.

ಉದಾಹರಣೆ—೪ಷ^{೪}—$\frac{೩}{೨}$ಷ=೧೭೫

ಕನ್ನಡ ಶಾಲಾಪತ್ರ ಕರ್ತರಿಗೆ.

ವಿನಯಪೂರ್ವಕ ವಿಜ್ಞಾಪನಾಃ ಈ ನಾಲ್ಕು ಪಂಗತಿಗಳನ್ನು ತಮ್ಮ ಅಂದವಾದ ಪತ್ರದಲ್ಲಿ ಪ್ರಕಟಿಸಬೇಕೆಂದು ಪೂರ್ಣ ಆಶೇ ಇರುತ್ತದೆ.

ಮೆ. ಡಿ. ಎ. ಇ. ಜಿಲ್ಹಾ ಕಲಾದಗಿ ಇವರು ಹಾಜರಿ ತುಂಬುವ ನೇಮುಗಳನ್ನು ತಮ್ಮ ಜಿಲ್ಲೆಯಲ್ಲಿ ಕೊಟ್ಟದ್ದು ನೋಡಿ, ನಮ್ಮ ಧೊರೆಗಳಾದ ಮೇಹರ್ಬಾನ ಕ್ಯಾಂಡಿ ಸಾಹೇಬ ಬಾಹದುರ ದಕ್ಷಿಣಭಾಗ ಇವರು ತಮ್ಮ ಯಾವತ್ತು ಜಿಲ್ಹೆಗಳಲ್ಲಿ ಅದೇಮೋರಿಗೆ ಇಡಬೇಕೆಂದು, ಅಪ್ಪಣೆಯಾದ ಪ್ರಯುಕ್ತ ಯಾವತ್ತರು ಆ ನೇಮಕ್ಕೆ ಒಳಗಾಗಿರುತ್ತೇವೆ. ಅದರಲ್ಲಿ ಒಪ್ಪತ್ತು ಹುಡುಗರು ಕೇಳ ನಿಂತಿದ್ದರೆ ಅಥವಾ ಒಪ್ಪತ್ತು ಯಾವದಾದರು ಬ್ಯಾನಿಪ್ರಯುಕ್ತ ನಿಂತರೆ ಇದರ ಗುರ್ತುಗಳು ಯಾವರೀತಿ ಹಾಕಬೇಕು. ಎಂಬ ಬಗ್ಗೆ ಸಂಶಯಬಂದ ಮೂಲಕ ಬಿನ್ನೈಸುತ್ತೇನೆ ಅದನ್ನು ನಿವಾರ್ಣಮಾಡಬೇಕೆಂದು ನೇಮಕರ್ತರಿಗೆ—ವಿನಯಪೂರ್ವಕ ವಿಜ್ಞಾಪನಾಃ ಇರುತ್ತದೆ—ತಾರೀಖು ೨೪ ನೇ ಜುಲಾಯಿ ಸಂ

ನ್೧೮೭೨ ಇಸವಿ.

ಸ್ವಾಮಿರಾವ ರಾಮಚಂದ್ರ ಅಳಗವಾಡಿ ಹೆಡ್ಡಮಾಸ್ತರ.

*-೧೦೯ನೇ ಪುಟದೊಳಗಿನ ನೋಟೀಸು ನೋಡು.

ಎ. ಶಾ. ಪ.

ಮಹಾರಾಜಶ್ರೀತ್ರಾನ್ಸಲೇಟರ ಬೆಳಗಾವಇವರಶೇವಿಗೆ—
ಹುಕ್ಕೇರಿಯಲ್ಲಿ ಯಿರುವಾರಾಘವೇಂದ್ರಶ್ರೀನಿವಾಸಧಾರವಾಡ ಯಿತನ ಕಡಿಂದಾತಿಳಸುವದು ಯೇನಂದರ ನಾನು ಮ್ರೊರಸಾಲಿಗಳ ಸ್ಥಿತಿಯನ್ನೂ, ಅವ್ಯವಸ್ಥೆಯನ್ನೂ ಕಂಡು ವಿಪಯದಲ್ಲಿ ತಮ್ಮ ಮತಪತ್ರಿಕೆಯಲ್ಲಿ ಛಾಪಿಸಿ ಪ್ರಶಿದ್ಧ ಮಾಡೋದರದಶೆಯಿಂದ ಇದರ ಲಗತ ಕಳುಹಿಧೇನೆ. ಅದು ತಮ್ಮ ಸುಂದರವಾದ ಮತಪತ್ರಿಕದಲ್ಲಿ ಛಾಪಿಸಿ ಪ್ರಸಿದ್ಧ ಮಾಡಿ ಜನರ ಅಜ್ಞಾನತನದೂರಮಾಡುವಿರಿ ಯಂಬೋ ಆಶೆ ಬಹಳ ವುಂಟು ಯಂಪು ಶ್ರುತಪಡಿಸಿ ಯಿದ್ದೆನೆ ಹೆಚ್ಚಿಗೆ ಬರಿಯಲಿಕ್ಕೆ ಶಕ್ತನಲ್ಲಾ ಇಂತಿ ಬಿನ್ನಹ್ ತಾರೀಖು೨೩ನೇ ಜುಲಾಯಿ ಸನ್ನ೧೮೭೨ಇಸ್ವಿ.

ರಾಘವೇಂದ್ರ ಶ್ರೀನಿವಾಸ ಮುದಗಲಕರ.

ಶಾಲಾಪತ್ರಿಕವು.

ಪುಸ್ತಕ ೮]   [ಸಂಚಿಕೆ ೬.

ಬೆಳಗಾವಿ, ಮಾಹೆ ಸಪ್ಟೆಂಬರ. ೧೮೭೨.

SELF HELP.

ತನಗೆ ತಾನೇ ನೆರವಾಗುವದು.

ಕಾರ್ಡಿನಲ ವುಲ್ಸೀ, ಡೀಫೋ, ಅಕೆನ್‌ಸಾಯಿಡ, ಕರ್ಕ ಹ್ವಾಯಿಟ ಯೆಂಬವರು ಕಟುಕರ ಹೊಟ್ಟೆಯಲ್ಲಿ ಹುಟಿದರು; ಬನಿಯನ್ನೆಂಬವನು ಕಂಚುಗಾರನು, ಜೋಸೆಫ ಲಾಂಕಾಸ್ತರನು ಬುರುಡನು. ಹೊಗೆಯಂತ್ರವನ್ನು ರಚಿಸಿದವರ ದೊಡ್ಡ ಹೆಸರುಗಳಲ್ಲಿ ನ್ಯೂಕಮೆನ, ವಾಟ, ಸ್ಟೀಫನ್‌ಸನ್ ಯೆಂಬ ಹೆಸರುಗಳುಂಟು. ಮೊದಲಿನವನು ಕಂಮ್ಮಾರನು; ಯೆರಡನೇಯವನು ಗಣಿತಸಂಬಂಧದ ಆಯುಧಗಳನ್ನು ಮಾಡುವವನು; ಮೂರನೇಯವನು ಒಂದು ಯಂತ್ರದ ಬುಡಕ್ಕೆ ಉರಿಯ ಹಚ್ಚುವವನು. ಹಂಟಿಂಗ್‌ಡನ್ನನೆಂಬ ಧರ್ಮಬೋಧಕನು ಮೊದಲು ಇದ್ದಲಿಯ ಹೊರುವವನಿದ್ದನು. ಕಟ್ಟಿಗೆಯೊಳಗೆ ಮಾಡಬಹುದಾದ ಸೂಕ್ಷ್ಮವಾದ ಕೆತ್ತಿಕೆಯ ಕೆಲಸದ ತಂದೆಯೆಂದೆನಿಸಿಕೊಂಡ ಬಿವಿಕ್ಕನೆಂಬವನು ಇದ್ದಲೀ ಖನಿಯಲ್ಲಿ ಅಗಿಯುವವನಿದ್ದನು. ಡಾಡಸ್ಲೀಯೆಂಬವನು ಹುಜುರೆಯಿದ್ದನು, ಹಾಲಕ್ರಾಫ್ತನು ಮೊತಾದಾರನಿದ್ದನು. ಭಾಫಿನ್ನನೆಂಬ ಪ್ರಸಿದ್ಧ ನೌಕಾಪಂಡಿತನು ಹಡಗದಲ್ಲಿ ಪಟಸ್ತಾಂ-

ಭದಹತ್ತಿರ ಕೆಲಸಮಾಡುವ ಚಾಕರನಾಗಿ ತನ್ನ ಜಲಪರ್ಯಟನದ ಕೃತ್ಯಗಳನ್ನು ಆರಂಭಿಸಿದನು. ಇದೇ ಮೇರಿಗೆ ಸರಕ್ಲಾಡೆಸ್ಲೀಶಾವೆಲ್ಲ ನೆಂಬವನು ಹಡಗದೊಳಗಿನ ಕೋಣೆಯಲ್ಲಿ ಸೇವಕನಾಗಿನಿಂತು ಜಲಪರ್ಯಟನ ಕ್ರಮವನ್ನು ಆರಂಭಿಸಿದನು. ಹರ್ಶಲ್ಲ ದಂಡಿನವಾದ್ಯಗಳಲ್ಲಿ ಓಬೋಯೆಂಬವಾದ್ಯವನ್ನು ಬಾರಿಸುತ್ತಿದ್ದನು. ಕಾಂತ್ರೀಯೆಂಬವನು ದಿನಗೂಲಿಯಿಂದ ಕೆತ್ತಿಕೆಯಕಷ್ಟವನ್ನು; ಎಟ್ಟೀಯೆಂಬವನು ದಿನಗೂಲಿಯಿಂದ ಅಚ್ಚುಹಾಕುವಕೆಲಸವನ್ನು ಮಾಡುತ್ತಿದ್ದನು. ಸರಥಾಮಸಲಾರೆನ್ಸ ನೆಂಬವನತಂದೆಯು ಟಾವರ್ನ*ವೆಂಬ ಛತ್ರವಿಟ್ಟು ಹೊಟ್ಟೆ ತುಂಬಿಕೊಳ್ಳುತ್ತಿದ್ದನು. ಮಿಚಲಫಾರಾಡೆ ಯೆಂಬವನು ಕಂಮ್ಮಾರನಮಗನು. ಇವನು ಚಿಕ್ಕತನದಲ್ಲಿ ಒಬ್ಬ ಬುಕ್ಕುಗಳನ್ನು ಕಟ್ಟುವವನ ಕೈಕೆಳಗೆ ೨೨ ವರ್ಷದವನಾಗುವವರೆಗೆ ಕೆಲಸಮಾಡುತ್ತಿದ್ದನು. ಇವನು ಈಗ ತತ್ವಜ್ಞಾನಗಳಲ್ಲಿ ಮುಖ್ಯನೆಂದೆನಿಸಿಕೊಳ್ಳುತ್ತಾನೆ. ಇವನು ಪದಾರ್ಥವಿಜ್ಞಾನಶಾಸ್ತ್ರದೊಳಗಿನ ಅತಿಕಠಿಣವೂ ವ್ಯಾಪಕವೂ ಆದವಿಷಯಗಳನ್ನು ಸುಬೋಧವಾಗಿ ಸ್ಪಷ್ಟಪಡಿಸುವಪರಲ್ಲಿ ತನ್ನಗುರುವಾದ ಸರಹಂಫ್ರೀಡೇವೀಯೆಂಬವನಿಗಿಂತ ಹೆಚ್ಚಿನವನಾದನು.

ಭವ್ಯವಾದ ಜ್ಯೋತಿಷಶಾಸ್ತ್ರಕ್ಕೆ ಅತಿಶಯವಾಗಿ ಉತ್ತೇಜನವ ಕೊಟ್ಟವರಲ್ಲಿ ಹೆಸರಾದವರು ಯಾರಂದರೆ—ಕೋಪರ್ನಿಕಸನು, ಪೋಲಂಡದ ಒಬ್ಬ ಬಕ್ಕರಿಗಾರನಮಗನು; ಕೇಪ್ಲರನು, ಜರ್ಮನ್ನನಾದ ಒಬ್ಬ ಛತ್ರವಿಟ್ಟವನಮ

---

* ಪ್ರವಾಸಿಕರಿಂದ ಹಣತೆಗೆದುಕೊಂಡು ಅವರಿಗೆ ಊಟ, ಇಳುಕೊಳ್ಳುವದಕ್ಕೆ ಸ್ಥಳ ಮುಂತಾದದ್ದನ್ನು ಟಾವರ್ನದ ಯಜಮಾನನು ಕೊಡುತ್ತಾನೆ.

ಗೆನು; ತಾನು ಸ್ವತಃ ಸರಾಯಿಯ ಅಂಗಡಿಕಾರನು. ಡಿ ಅಲೆಂ
ಬರ್ಟನು, ಪಾರಿಸಪಟ್ಟಣದಲ್ಲಿ ಛಳಿಗಾಲದೊಳಗೆ ಬಂದಾ
ನೊಂದುರಾತ್ರಿಯಲ್ಲಿ 'ಸೇಂಟಜೀನಲೀರಾಂದ' ಯೆಂಬಗುಡಿ
ಯಮೇಲೆ ಶಿಕ್ಕದಿಕ್ಕಿಲ್ಲದಕೂಸು; ಒಬ್ಬ ಕನ್ನಡಿಗಾರನ ಹೆಂ
ಡತಿಯಿಂದ ಸಾಕಲ್ಪಟ್ಟವನು; ನ್ಯೂಟನ್ನನು ಗ್ರಂಥಂಪಟ್ಟಣ
ದಹತ್ತರ ಒಬ್ಬ ಚಿಕ್ಕಜೂಡಿಯ ಜಮೀದಾರನು; ಲಾಪ್ಲೇಸ
ನು, ಹಾನಫ್ಲೇಯುರಪಟ್ಟಣದ ಹತ್ತಿರ ಬೋಮಂಟವನ್ ಆ
ಜಿಯೆಂಬ ಊರೊಳಗಿನ ಒಬ್ಬ ಬಡರಯತನ ಮಗನು. ಇ
ವರೆಲ್ಲರು ಚಿಕ್ಕತನದಲ್ಲಿ ತಮ್ಮ ಹೆಚ್ಚುಕಡಿಮೆ ದುರ್ದೈವ
ದ ಸಂಗತಿಗಳನ್ನು ಲಕ್ಷಿಸದೆ, ತಮ್ಮ ಸ್ವಂತ ಬುದ್ಧಿಯಿಂದ
ಘನವೂ, ಸ್ಥಿರವೂ, ಆದ ಕೀರ್ತಿಯನ್ನು ಸಂಪಾದಿಸಿದರು;
ಇಂಥಾಕೀರ್ತಿಯು ಈ ಭೂಮಿಯೊಳಗಿನ ಸಂಪತ್ತಿಯನೆಲ್ಲ
ಕೊಟ್ಟರೂ ಸಿಕ್ಕದು. ಅವರು ಸಂಪತ್ತಿಯುಳ್ಳವರಾಗಿದ್ದರೆ
ಅದರಿಂದ ಅವರಿಗೆ ಅವರ ಬಡತನದಿಂದ ಉಂಟಾದ ತೊಂದರೆ
ಗಿಂತ ಹೆಚ್ಚು ತೊಂದರೆ ಯುಂಟಾಗುತ್ತಿತ್ತು. ಹೆಸರಾದ
ಜ್ಯೋತಿಷಿಯೂ, ಗಣಿತಜ್ಞನೂ ಆದ ಲಾಗ್ರಂಜನೆಂಬವನ
ತಂದೆಯು ತ್ಯೂರಿನಪಟ್ಟಣದಲ್ಲಿ ಯುದ್ಧ ಸಂಬಂಧದ ಖಜಾ
ನದಾರನಾಗಿದ್ದನು. ಆದರೆ ಅವನು ಗುತ್ತಿಗೆಯ ಮಾರಾಟ
ದಲ್ಲಿ ಹಣಕಳಕೊಂಡದರಿಂದ ಅವನ ಕುಟುಂಬದವರು ಬ
ಡತನಕ್ಕೆ ಬಂದರು. ಲಾಗ್ರಂಜನು ತನ್ನ ಕೀರ್ತಿಯೂ, ಸು
ಖವೂ ಇದೇ ಸಂಗತಿಯಿಂದ ಅಂಶತಃ ಉಂಟಾಯಿತೆಂದು ಮು
ಪ್ಪಿನಕಾಲದಲ್ಲಿ ಮೇಲೆಮೇಲೆ ಹೇಳುತ್ತಿದ್ದನು. ಅವನು ಅಂ
ದದ್ದು ಯೇನಂದರೆ "ನಾನು ಘನವಂತನಾಗಿದ್ದರೆ, ನಾನು ಬ
ಹುಶಃ ಗಣಿತಶಾಸ್ತ್ರಜ್ಞನಾಗುತ್ತಿದ್ದಿಲ್ಲ."

ಸಾಧಾರಣವಾಗಿ ಧರ್ಮೋಪದೇಶಕರ ಸಂತತಿಯವರು ಇಂಗ್ಲಂಡದ ಇತಿಹಾಸದಲ್ಲಿ ವಿಶೇಷವಾಗಿ ಪ್ರಸಿದ್ಧಿಗೆಬಂದರು. ಅವರಲ್ಲಿ ಡ್ರೇಕ, ನೆಲಸನ್ನೆಂಬವರು ನೌಕಾಪರ್ಯಟನದಲ್ಲಿ ಶೌರ್ಯವಂತರೆಂದೆನಿಸಿಕೊಂಡರು; ವ್ರೊಲಾಸ್ತನ, ಯಂಗ, ಪ್ಲೇಫೇಯರರೆಂಬವರು ಶಾಸ್ತ್ರದಲ್ಲಿ ಪ್ರವೀಣರಾದರು; ಥರ್ಲೋ, ಕ್ಯಾಂಬೆಲ್ಲ ಯೆಂಬವರು ಕಾಯ್ದೆಗಳಲ್ಲಿ ಹೆಸರಾದರು; ಅಡ್ಡಿಸನ್ನ, ಥಾಮಸನ್ನ, ಗೋಲ್ಡಸ್ಮಿಥ ಕೋಲರಿಜ್ಜ, ಟೆನಿಸನ್ನ ಯೆಂಬವರು ನಾಟಕಾಲಂಕಾರಾದಿಗಳಲ್ಲಿ ಕೀರ್ತಿಯು ಪಡೆದರು. ಹಿಂದುಸ್ಥಾನದ ಯುದ್ಧಗಳಲ್ಲಿ ಬಹುಮಾನವುಳ್ಳ ಕೀರ್ತಿಯನ್ನುಹೊಂದಿದವರಾದ ಲಾರ್ಡಹಾರ್ಡಿಂಜ, ಕರ್ನಲ ಎಡವರ್ಡ್ಸ, ಮೇಝರ ಹಾಡಸನ್ ಯೆಂಬವರು ಧರ್ಮೋಪದೇಶಕರ ಮಕ್ಕಳೇ ಇದ್ದರು. ಹಿಂದುಸ್ಥಾನದೊಳಗಿನ ಇಂಗ್ಲಿಷರರಾಜ್ಯವು ಕ್ಲೈವ, ಹೇಸ್ಟಿಂಗ್ಸ ಮೊದಲಾದ ಮಧ್ಯಮವರ್ಗದ ಮನುಷ್ಯರಿಂದಲೇಗದ್ದು ಸ್ಥಿರಪಡಿಸಲ್ಪಟ್ಟಿತೆಂಬದು ನಿಶ್ಚಯವು ಬಹುತರವಾಗಿ ಇವರೆಲ್ಲರು ಕಾರಖಾನೆಗಳಲ್ಲಿ ಕೆಲಸಕಲಿತು ಉದ್ಯೋಗಕ್ಕೆ ಮೆಚ್ಚಿದಸ್ವಭಾವವವುಳ್ಳವರಾದವರು.

ಎಡಮಂಡಬರ್ಕನು, ಸ್ಮೀತನ್ನನೆಂಬ ಯಾಂತ್ರಿಕನೂ, ಸ್ಕಾಟ್ಟನೂ, ವರ್ಡಸ್ವರ್ಥನೂ, ಸೋಮರ್ಸ, ಹಾರ್ಡವಿಕ್, ಡನ್ನಿಂಗಯೆಂಬ ಲಾರ್ಡರೂ, ಇವರೆಲ್ಲರು ವಕೀಲರಮಕ್ಕಳು. ಸರವ್ರಯಿಲಿಯೆಂಬ್ಲಾಕ್ಸ್ತನ್ನನು ಒಬ್ಬ ರೇಶಿಮೆಯವ್ಯಾಪಾರಮಾಡುವವನ ಮಗನು; ಇವನು ಗರ್ಭಗದಲ್ಲಿರುವಾಗಲೇ ತಂದೆಸತ್ತುಹೋದನು. ಲಾರ್ಡಗಿಫರ್ಡನ ತಂದೆಯು ಡೋವರ ಪಟ್ಟಣದಲ್ಲಿ ಚಿಲ್ಲರೆವ್ಯಾಪಾರ ನಡಿಸಿ ಹೊಟ್ಟೆ

ತುಂಬಿಕೊಳ್ಳುತ್ತಿದ್ದನು; ಲಾರ್ಡಟೆನ್ನಿಸ್ಸನ ತಂದೆಯು ಒಬ್ಬ ವೈದ್ಯನಿದ್ದನು; ತಾಲ್ಫರ್ಡನೆಂಬ ನ್ಯಾಯಾಧೀಶನ ತಂದೆಯು ಒಂದು ಹಳ್ಳಿಯೊಳಗೆ ಇರುವ ಒಬ್ಬ ಶೆರೆಗಾರನ ಮಗನು; ಲಾರ್ಡ ಟೇಥಬಾರನ್ನನೆಂದೆನಿಸಿಕೊಂಡ ಪಾಲಕ್ಕನತಂದೆಯು ಚೇರಿಂಗಕ್ರಾಸಯೆಂಬಲ್ಲಿ ಒಬ್ಬ ಹೆಸರಾದ ಜೀನಗಾರನಮಗನು. ಸಿನವೇಯೆಂಬ ಬುನಾದಿಯು ಪಟ್ಟಣದ ಕುರುಹುಗಳನ್ನು ಗೊತ್ತುಹಚ್ಚಿದ ಲೇಯಾರ್ಡನೆಂಬವನು ಲಂಡನ್‌ಪಟ್ಟಣದಲ್ಲಿ ಒಬ್ಬ ವಕೀಲನ ಕಚೇರಿಯಲ್ಲಿ ಕರಾರು ಬರೆಕೊಟ್ಟು ಮುತಾಲೀಕಿಯ ಕೆಲಸಮಾಡುತ್ತಿದ್ದನು.

ಜಲಪ್ರವಾಹಿಯಂತ್ರವನ್ನೂ, ಆರ್ಮಸ್ಟ್ರಾಂಗ ಆರ್ಡ್ನಾನ್ಸ ಯೆಂಬ ತೋಫುಗಳನ್ನೂ ಉಂಟುಮಾಡಿದ ವುಯಿಲಿಯಂ ಆರ್ಮಸ್ಟ್ರಾಂಗನೆಂಬವನು ಕಾಯದೆಯನ್ನು ಕಲಿತು, ಕೆಲದಿವಸ ವಕೀಲನಾಗಿದ್ದನು. ಮಿಲಟನ್ನನು ಲಂಡನ್ ಪಟ್ಟಣದಲ್ಲಿ ಕತಿಬೆ, ಕರಾರುಗಳನ್ನು ಬರೆದು ಹೊಟ್ಟೆತುಂಬಿಕೊಳ್ಳುತ್ತಿದ್ದನು. ಪೋಪ, ಸೌದೀಯೆಂಬ ಕವಿಗಳತಂದೆಗಳು ನೂಲಬಟ್ಟೆಗಳನ್ನು ಮಾರುತ್ತಿದ್ದರು. ಪ್ರೊಫೇಸರ ವುಯಿಲಸನ್ನನು ಪೇಸ್ಲೀಎಂಬಲ್ಲಿ ಇರುವ ಒಬ್ಬ ಕೈಗಾರಿಕೆಯವನ ಮಗನು; ಲಾರ್ಡಮಕಾಲೆಯ ತಂದೆಯು ಅಫ್ರಿಕದಲ್ಲಿ ವರ್ತಕನಾಗಿದ್ದನು. ಕೀತ್ಸನೆಂಬವನು ವನಸ್ಪತಿಗಳನ್ನು ಮಾರುತ್ತಿದ್ದನು; ಸರಹಂಫ್ರೀಡೇವಿಯು ಒಂದು ಹಳ್ಳಿಯಲ್ಲಿ ಒಬ್ಬ ವೈದ್ಯನಕೈಕೆಳಗೆ ಚಾಕರಿಯಮಾಡಿ ವೈದ್ಯಕ್ರಿಯವನ್ನು ಕಲಿಯುತ್ತಿದ್ದನು. ಅವನು ಒಮ್ಮೆ ತನ್ನವಿಷಯವಾಗಿ ಮಾತಾಡುವಾಗ ಅಂದದ್ದು ಯೇನಂದರೆ, "ನಾನು ಈಗಿನಸ್ಥಿತಿಗೆ ಬಂದದ್ದು ನನ್ನಸ್ವಂತಯತ್ನದಿಂದಲೇ; ಇವ

ನ್ನು ನಾನು ಅಭಿಮಾನದಿಂದಲ್ಲ, ಕೇವಲ ಶುದ್ಧವಾದ ಅಂತಃಕರಣದಿಂದ ಹೇಳುತ್ತೇನೆ." ಪ್ರಾಣಿಶಾಸ್ತ್ರದಲ್ಲಿ ಪ್ರತಿಷ್ಠಿತನ್ನನೆನಿಸಿಕೊಂಡ ರಿಚರ್ಡ್‌ಓವೆನ್ನನೆಂಬವನು ಒಂದು ಹಡಗದಲ್ಲಿ ಒಬ್ಬ ಚಾಕರನಾಗಿದ್ದನು; ಇವನು ಬಹಳವಯಸ್ಸಾಗುವವರೆಗೂ ಶಾಸ್ತ್ರಶೋಧಗಳಲ್ಲಿ ಮನಸ್ಸುಹಾಕಲಿಲ್ಲ; ತರುವಾಯ ಶಾಸ್ತ್ರಾಭ್ಯಾಸನಡಿಸಿ ಖ್ಯಾತಿಪಡೆದನು. ಇವನು ಜಾನಹಂಟರನೆಂಬವನು ಬಹಳ ಶ್ರಮಪಟ್ಟು ಕೂಡಿಸಿದನಾನಾವಿಧದ ಒಡಿವೆಗಳ ಭವ್ಯವಾದ ಪದಾರ್ಥಸಂಗ್ರಹಾಲಯದಲ್ಲಿ ಸರ್ಜನ್ಸಕಾಲೇಜಯೆಂಬ ವಿದ್ಯಾಲಯದೊಳಗೆ ೩೦ ವರ್ಷ ಕೆಲಸಮಾಡಿದನು. ಆಗ ಆ ಪದಾರ್ಥಗಳ ಪಟ್ಟಿಯನ್ನು ರಚಿಸುತ್ತಿರಲಾಗಿ ಇವನು ತನ್ನ ವಿಶಾಲವಾದ ಜ್ಞಾನದ ಅಂಕುರವನ್ನು ಊರಿದನು.

Champu Ramayen and Champu Bharata with commentaries in Canarese by Mr. Shantaviraya.

ಶಾಂತವೀರ ರಾಚದೇವ ಕೃತಕರ್ನಾಟಕ ವ್ಯಾಖ್ಯಾನಗಳು.

॥ಚಂಪೂಭಾರತೆಸವ್ಯಾಖ್ಯಾನೆ ಪ್ರಥಮಸ್ತಬಕಃ॥

॥ವಸಂತತಿಲಕಾವೃತ್ತಂ।

ಗ್ರೀಷ್ಮೇಷು ಶೀತಕರಕಾಂತ ಕೃತೋದರಾಸು।
ಯದ್ಯೋಷ್ಪು ರಾತ್ರಿಷು ದರೀಷು ಪಥಾಗತಸ್ಯ।
ವಿಶ್ರಾಮ್ಯತೋರವಿಹಯಸ್ಯ ವಿಳಂಬನೇಷು।
ಚಿಹ್ನಂತದೀಯಾದಿ ನಸಂತತಿದೀರ್ಘಭಾವಃ॥೪॥

॥ಅನ್ವಯಃ॥

ಶೀತಕರಕಾಂತಕೃತೋದರಾಸು, ಶೀತಕರಕಾಂತ=ಚಂದ್ರಕಾಂತರತ್ನದಿಂದ, ಕೃತ=ರಚಿಸಲ್ಪಟ್ಟ, ಉದರಾಸು=ಮಧ್ಯದೇಶವುಳ್ಳಂಥ, ಯದ್ಗೋಪುರಾಗ್ರಿಮದರೀಷು, ಯತ್=ಯಾವಹಸ್ತಿನಾಪುರದ, ಗೋಪುರ=ಪುರದ್ವಾರಗಳ, ಅಗ್ರಿಮ=ಮೇಲುಭಾಗದ, ದರೀಷು=ಗವಿಗಳಲ್ಲಿ, ಪಥಾ=ಮಾರ್ಗದಿಂದ ಗ್ರೀಷ್ಮೇಷು=ಬೇಸಗೆಯ ದಿವಸಗಳಲ್ಲಿ, ಆಗತಸ್ಯ=ಅಗಮನದ, ವಿಶ್ರಾಮ್ಯತಃ=ವಿಶ್ರಾಂತಿಯದೆಸೆಯಿಂದ, ರವಿಹಯಸ್ಯ=ಸೂರ್ಯನ ಕುದುರೆಯ, ವಿಳಂಬನೇಷು=ಕಾಲಕ್ಷೇಪಗಳಲ್ಲಿ, ತದೀಯದಿನಸಂತತಿದೀರ್ಘಭಾವಃ, ತದೀಯಾ=ಆ ಬೇಸಗೆಯ ಸಂಬಂಧವಾದ, ದಿನಸಂತತಿ=ದಿನಸಮೂಹದ, ದೀರ್ಘಭಾವಃ=ದೀರ್ಘತ್ವವು ಚಿಹ್ನಂ=ಜ್ಞಾಪಕವಾಗುತ್ತದೆ.

॥ಶಾಸ್ತ್ರವಿಷಯ॥

ದೀರ್ಘಭಾವಃ ಕರ್ತೃ, ಚಿಹ್ನಂ ಕಾರಕ ಕ್ರಿಯಾಪದ, ಅಕರ್ಮಕ, ಕ, ಪ್ರಂ; ಪಥಾ=(ಧಾ, ಪಂಥ್=ಗವಿಸೋಣ+ಅನ್=ಇದು ನಾಮ ಪ್ರತ್ಯಯ+ಆ=ಇದು ವಿಭಕ್ತಿ ಪ್ರತ್ಯಯ) ಯದ್ಗೋಪುರ= (ಯತ್+ಗೋಪುರ) ತ್ ಎಂಬ ಕಠಿಣ ವರ್ಣಕ್ಕೆ ಗೋ ಎಂಬ ಮೃದುವರ್ಣ ಪರವಾಗಲು ಆ ತಕಾರಕ್ಕೆ ಆ ವರ್ಗದ ಮೃದುವರ್ಣ ದಕಾರವಾಯಿತು.;—ಅನುಮಾನಾಲಂಕಾರ.;—ಅದ್ಭುತರಸ.;—ಉಕ್ತಾ ವಸಂತತಿಲಕಾ ತಭಜಾ ಜಗೌಗ ಎಂಬ ಛಂದಸ್ಸಲಕ್ಷಣ.

॥ಭಾವಾರ್ಥಃ॥

ಚಂದ್ರಕಾಂತ ಶಿಲೆಯಿಂದ ಮಾಡಿದ ಗೋಪುರಗಳ ಗವಿ

ಗಳೊಳಗೆ ಮಾರ್ಗದಿಂದ ಬೇಸಗೆಯ ದಿವಸಗಳಲ್ಲಿ ಉಂಟಾ
ದ ಶ್ರಮವನ್ನು ಪರಿಹರಿಸಿಕೊಂಬುವ ಕಾಲಕ್ಷೇಪಗಳಿಂದ ಆ
ಬೇಸಗೆಯ ದಿವಸಗಳ ದೀರ್ಘತ್ವವು ತಿಳಿಯಬರುವದು.

॥ಚಂಪೂ ರಾಮಾಯಣಸವ್ಯಾಖ್ಯಾನೆ ಬಾಲಕಾಂಡಃ॥

॥ವಸಂತತಿಲಕಾವೃತ್ತಂ॥

ವಾಲ್ಮೀಕಿ ಗೀತರ ಘುಪುಂಗ ವಕೀರ್ತಿ ಲೇಶೈ।
ಸ್ತೃಪ್ತಿಂಕ ರೋಮಿಕ ಥಮಪ್ಯ ಧುನಾಬು ಧಾನಾಂ।
ಗಂಗಾಜ ಲೈರ್ಭುವಿ ಭಗೀ ರ ಥಯತ್ನ ಲಬ್ಧೇಃ।(ಲಬ್ಧೈಃ)
ಕಿಂತರ್ಪ ಣಂನವಿ ದಧಾತಿ ಜನಃಪಿ ತೃಣಾಂ॥೪॥

॥ಅನ್ವಯಃ॥

ವಾಲ್ಮೀಕಿಗೀತರಘುಪುಂಗವ ಕೀರ್ತಿಲೇಶೈಃ, ವಾಲ್ಮೀಕಿ=ವಾಲ್ಮೀಕಿ ಮುನಿಯಿಂದ, "ವಲ್ಮೀಕಸ್ಯಾಪತ್ಯಂಪುಮಾನ್=ವಾಲ್ಮೀಕಿ," ಗೀತ=ವರ್ಣಿಸಲ್ಪಟ್ಟ, ರಘುಪುಂಗವ=ರಘುಕುಲಶ್ರೇಷ್ಟನಾದ ರಾಮಚಂದ್ರನ, ಕೀರ್ತಿಲೇಶೈಃ=ಕೀರ್ತಿಲವಗಳಿಂದ ಅಧುನಾ=ಯೀಗ ಕಥಮಪಿ=ಹ್ಯಾಂಗಾದರು, ಬುಧಾನಾಂ=ಪಂಡಿತರಿಗೆ,ತೃಪ್ತಿಂ=ಸಂತೋಷವನ್ನು,ಕರೋಮಿ=ಮಾಡುತ್ತೇನು,ಭುವಿ=ಭೂಮಿಯಲ್ಲಿ,ಭಗೀರಥಯತ್ನಲಬ್ಧೈಃ, ಭಗೀರಥ=ಭಗೀರಥರಾಜನ, ಯತ್ನ=ಪ್ರಯತ್ನದಿಂದ, ಲಬ್ಧೈಃ=ಪಡೆಯಲ್ಪಟ್ಟಂಥ ಗಂಗಾಜಲೈಃ=ದೇವ ಗಂಗೋದಕಗಳಿಂದ ಪಿತೃಣಾಂ=ಪಿತೃಗಳಗೆತರ್ಪಣಂ=ನಿವಾಪಾಂಜಲಿ ದಾನದಿಂದ ಸಂತೃಪ್ತಿಯನ್ನು ಜನಃ=ಜನವು ನವಿದಧಾತಿ= ಮಾಡುವದಿಲ್ಲವೆ ಏನು(ಮಾಡುತ್ತಾರೆಂಬರ್ಥವು).

॥ಶಾಸ್ತ್ರವಿಷಯ॥

ಜನಃ ಕರ್ತೃ, ತರ್ಪಣಂ ಕರ್ಮ, ನವಿದಧಾತಿ ಕ್ರಿಯಾ

ಪದ, ಸಕರ್ಮಕ, ಕ, ಪ್ರ; ವೈಧರ್ಮ್ಯದಿಂದ ದೃಷ್ಟಾಂತಾಲಂಕಾರ.; ಅಹಂ ಕರ್ತೃ, ಕೃಷ್ಣಂ ಕರ್ಮ, ಕರೋಮಿ ಕ್ರಿಯಾಪದ, ಸಕರ್ಮಕ, ಕ, ಪ್ರ; ಕರೋಮಿ=(√ಕೃ=ಕರ್+ಉ+ಮಿ) ಕೃ ಎಂಬುದು ಧಾತು, ಉ ಎಂಬುದು ವಿಕರಣ, ಮಿ ಎಂಬುದು ಪುರುಷ ಪ್ರತ್ಯಯ, ಅದು ಪಿತ್ ಪ್ರತ್ಯಯದಿಂದ ಗುಣವಾಯಿತು, ಲಟ್, ವರ್ತಮಾನಕಾಲ, ಏಕವಚನ, ಉತ್ತಮಪುರುಷ.; ವಿದಧಾತಿ=(ವಿ+ದ+ಧಾ+ತಿ) ವಿ ಎಂಬುದು ಉಪಸರ್ಗ, ದ ಎಂಬುದು ಮೂರನೆಗಣದ ವಿಶೇಷಾಕ್ಷರ, ತಿ ಎಂಬುದು ಪುರುಷ ಪ್ರತ್ಯಯ, ಲಟ್, ವರ್ತಮಾನಕಾಲ, ಏಕವಚನ, ಪ್ರಥಮಪುರುಷ. ಪಿತ್ ಪ್ರತ್ಯಯ ಪರವಾಗಲು ಧಾತುವಿನ ಸ್ವರವು ಲೋಪವಾಗಲಿಲ್ಲ.

॥ಭಾವಾರ್ಥ॥

ಕಪಿಲಮುನಿಯಿಂದ ಶಾಪಾನ್ವಿತರಾದ ಸಗರ ಮೊದಲಾದ ಪಿತೃಗಳು ಸ್ವರ್ಗವಾಸಿಗಳಾಗುವ ನಿಮಿತ್ತವಾಗಿ ಭೂಮಿಯ ಮೇಲೆ ಭಗೀರಥರಾಜನಿಂದ ಪಡೆಯಲ್ಪಟ್ಟ ದೇವಗಂಗೋದಕದ ಹನಿಯಿಂದ ತಮ್ಮ ಪಿತೃಗಳಿಗೆ ಜನರು ಸಂತರ್ಪಣವನ್ನು ಮಾಡಿದಹಾಂಗೆ–ಚತುರ್ವಿಂಶತಿ ಸಹಸ್ರ ಸಂಖ್ಯಾಪರಿಮಿತವಾದ ವಾಲ್ಮೀಕಿ ರಾಮಾಯಣದ ಕೀರ್ತಿಯು ಘನವಾಗಿರುವದು, ಅದರೊಳಗಿನ ಅಂಶದಿಂದ ಪಂಡಿತರಿಗೆ ಸಂತೋಷಪಡಿಸುವೆನು.

ಶಾಂತವೀರ ರಾಚಯ್ಯಾ ಕಿತ್ತೂರ ಟ್ರೇನಿಂಗಕಾಲೇಜ್.

THE MONSOON (A new Poetry.)

ವರ್ಷಾಕಾಲದ ವರ್ಣನೆಯು.

ಕಳೆದ ತಿಂಗಳ ಪತ್ರಿಕೆಯಲ್ಲಿ ಕೊಟ್ಟದರಿಂದಾ ಮುಂ

ದಕ್ಕೆ ಸಾಗಿಸಿದ್ದು.

॥ಮಾಲಿನೀವೃತ್ತ॥

॥ಗಜತುರಗಸಿಬಿಲಿನಾರಾವಂಗಳಿತ್ತೆತ್ತಲುಂ ಸ—।
॥ಬಿರ್ಡಿಯೆ, ಘುಡುಘುಡಲ್ ಖಟ್ ಖಟ್ ಖಡಲ್ಲೆಂದನಂತಂ॥
॥ಪೊಡವಿಗೆಕಡುಕೊಂಡೇಂಬೀಳ್ವುದಿಂನೆಂಬೊಲಾದಂ।
॥ಜಡೆಸುರಿದುದಜಸ್ರಂನೀರುನೀರಾಯಿತೆತ್ತಂ॥೧೪॥

॥ಮತ್ತೇಭವೃತ್ತ॥

॥ಎನಗಾಭಾರತಿದೇವಿತಾ ನೊಡತಿಯಾಕೇಗಂಡನೇಬ್ರಹ್ಮನಾ।
॥ತನೆಲೋಕಕ್ಕೆ ಪಿತಾಮಹಂತಿಳಿಯಲಾಂಮದ್ಬಂಧುವಾಯ್ತೀ
ಜಗಂ॥
॥ಧನ ಧಾನ್ಯಾದಿಗಳಿಂ ಸಮೃದ್ಧಿಯು ಹ್ರದಿಂನಾವರ್ಷದಿಂಜಿಂತೆ
ಪ್ರೋ-।
॥ತ್ತಿನುತಾಪ್ತಪ್ರಹಿತೇಚ್ಛವಂತೆ ಕುಣಿದತ್ತಾತ್ತಕೇಕಿಯುಲ್ಲಾ
ಸದಿಂ॥೧೫॥
॥ಮುದಮುಂಸ್ವಾಗಮಮುಂನಿರೀಕ್ಷಿಸಿನಿರಾಹಾರಂಗಳಂಮಾಡಿ,
ವ-।
॥ರ್ಷದಿನಾಯೊಂದು ನಿಜಾಸ್ಯಮುಂತೆರೆದುಮೋಕೋಭಾವದಿಂ
ಬಿಟ್ಟು ಜೇ-॥
॥ವಡಮಂಗಂ, ತನುಸೌಖ್ಯಮಂ ತಪಿಸುತಿರ್ಪ್ಪೋರ್ವಾರ್ದ್ವಿಜಂ
ಗಿತ್ತೊಡಾ—
॥ಯ್ತುಧರಾತೃಪ್ತಿ ಘನಾಗಮಂ ಘನವದೌದಾರ್ಯಕ್ಕೆ ದೇಸಾ
ವ್ಯಕಂ॥೧೬॥
॥ತುರಗಲ್ ನಿರ್ಝರದಿಂದೆಲೋಕಗಳ ಕಾರ್ಗಳ್ತಲ್ ತಪಿತೆಂಬ
ದೊಂ—

॥ದುರಿಪಾಪಂಜನೆಕೊಂಡುಕಾಲಘನಚೋರಂ—ಕೇಳ್ದು ಪರ್ಜ
ನ್ಯಭೂ—
॥ವರನೈತಪ್ಪುರ್ದ ನೋಡುತಿರ್ಪವನ ಕಂಡಾಗ್ರೀಷ್ಮನಂಪ್ರೋ
ಯ್ದನೈ—
॥ಶರದಿಂಸುಂಮನೆಸಾವ್ರೊಲೆಂದೊಡಿಪ್ರುದೇ ಕಳ್ಳ ಗೆರ್ಕಾರುಣ್ಯ
ವು॥೧೭॥

॥ಶಾರ್ದೂಲವಿಕ್ರೀಡಿತವೃತ್ತ॥

॥ಬಂದಂದಂಪತಿಗೆಹರ್ಷಮಾಗೆಮುದ ವರ್ಷಂನಿಂವ್ರೊಳಂತಾ
ಗಲೆಂ—
॥ಬಂದಂದಂಪತಿಗಳ್ಗೆ ತೋರುತುರುಧಾರಾಪಾತದಿಂಚಾತಕ—
॥ಕ್ಕಂದಿವ್ಯಾಮೃತಪಾನವಂನೆರೆವ್ರತಂ ವೋಘಾಗವೋವೀರ್ಶ
ನೊ—
॥ಲ್ದಂದಿತ್ತಂಕೃಷಿಕಂಗನುಪ್ರತಿಮಮಾದುಲ್ಲಾಸಮಂ ಬರ್ಹ
ಗಂ॥೧೮॥

॥ವಸಂತತಿಲಕಾವೃತ್ತ॥

॥ಆನಂದದಂ ಶಿಖಿಗಪಂ ವನದಂ ಯಥಾರ್ಥಂ।
॥ಸ್ವಾನಂದದಂ ಶಿಖಿಗಿಪಂ ವನದಂ ವಿಚಿತ್ರಂ॥
॥ಸಾನಂದದಂ ಕಮಲದಂ ಸರಮುಂ ಚಿಗುರ್ತಂ।
॥ನಾನಂದದಂ ಕಮಲದಂ ಘನನುಂ ವಿಚಿತ್ರಂ॥೧೯॥

॥ಮತ್ತೇಭವೃತ್ತ॥

॥ಅಸಿಪಿತ್ತಂ ತಣಿದೇಂಹಹಾಕುವಲಯಾನಂದ ಪ್ರಘುಲ್ಲತ್ವ
ವಂ।
॥ನುನುತೋದ್ಯದ್ವಿಜರಾಜತೇಜವಮುಸುಳ್ಸ್ವತ್ತಾಂತೆನಾಶ್ಲೋ
ಭವಂ—

॥ನನಿಶಂಪಂಕಜಪಕ್ಷದಿಂದ ಮದರಿಂಬಂತಯ್ಯೋ! ಮತ್ತೀಜ
ಕೀ—
॥ಘನವಿಘ್ನಂಯನುತಶ್ರುವಂಸುರಿಸುವಂತಾ ಸಾರವೊಪ್ಪಿತ್ತಿ
ನಂ॥೨೦॥
॥ಸುರಿದತ್ತಾತ್ಸ್ವದಮಿಲ್ಲ ಬಿಟ್ಟಡಿಯಿಡಲ್ ಗೇಹಂಗಳಂವೃಷ್ಟಿ
ನೀರ್—
॥ಪರಿದತ್ತಿಲ್ಲಿ ಯುಮುಖರ್ಯೂರ್ವಿ ಪಸುರಿಂಖಂಪುಲ್ಗಳಂ
ಪಂಕಂದಿಂ—
॥ಮೇರೆದತ್ತುದ್ಭಿಜಗಳ್ಬಳುಂಕಿ ಮುರಿದಾಮೂಲಂಗಳಂಕೀ
ಳುಪ್ರೋಲ್—
। ಮೊರೆದೆತ್ತಂಕಿವುಡಾಗೆಕರ್ಣಯುಗಳಂಬೀಸಿತ್ತುಝುಂಝಾ
। ನಿಲಂ॥೨೧॥

॥ಪೃ. ಧ್ವೀ॥

॥ಇಲಾಲಲನೇರತ್ನಗರ್ಭೆಯುಳುಕೇವಲಂಕಂಕಣಾ—
॥ವಲಿಪ,ಚುರವರ್ಷದಿಂದೊಲಿಯುಳೆಂದು ಮೆಂದಾಘನೋ—
॥ಪಲಸ್ಫಟಿಕದಿಂದ್ರಗೋಪಮಣಿವೃಂದದಾವೃಷ್ಟಿಯುಂ—
॥ವಲಂಸುರಿದನಲ್ಲದೇಬಹುದದೆಂತ್ರೊಮೇಘಾಗಮಂ॥೨೨॥

॥ಮ. ವೃ॥

॥ದರೆಯೊಂಬೊಂದು ವಿಶಾಲಪಾತ್ರೆಯೊಳುವರ್ಷಾಕಾಲ ಗೋ
ಪಾಲನಂ।
॥ಬರಗೋಪೀಸ್ತನಘನಸ್ತನಂಗಳನುದಂಚತ್ ಕ್ಷೀರಮುಂಭೋರೆ
ನು—
॥ತ್ತಿರೆಝುಂಝಾನಿಲರಾವದೋಹನನಿನಾದಂ ಪಿಂಡುವಂತುಂಬಿ
ಸಲ್—

NOTICE.

ನೋಟೀಸು.

ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಅನ್‌ಟ್ರೇಂಡ ಅಂದರ ಟ್ರೇನಿಂಗಕಾಲೇಜದಲ್ಲಿ ಕಲಿಯದೇ ಇದ್ದ ಮಾಸ್ತರ ಮತ್ತು ಅಸಿಸ್ಟಂಟರಿಗೆ–ಮೆಹರ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ಬಹದ್ದೂರ ಪ್ರಾಂತ ದಕ್ಷಿಣಭಾಗ ಇವರಕಡಿಂದ ಬರೆದು ಬಂದದರ ಮೇಲಿಂದ ತಿಳಿಸುವದೇನಂದರೆ. ಟ್ರೇನಿಂಗಕಾಲೇಜಕ್ಕೆ ಕಲಿಯುವದಕ್ಕೆ ಹೋಗತಕ್ಕ ಮಾಸ್ತರರು ನಮ್ಮ ಹುಕುಮಿನ ಪ್ರಕಾರ ಶೀಘ್ರವಾಗಿ ಟ್ರೇನಿಂಗಕಾಲೇಜದ ಪ್ರಿನಸಿಪಾಲರ ಕಡಿಗೆ ಹಾಜರಾಗದೇ ತಡವಾಗಿ ಹೋಗುವದರಿಂದ ಕಾಲೇಜದ ಕೆಲಸಕ್ಕೆ ಬಹು ತೊಂದರೆ ಯಾಗುತ್ತದೆ. ಆದರೆ ಈ ವರುಷದಲ್ಲಿ ಕಲಿಯುವದಕ್ಕೆ ಹೋಗತಕ್ಕ ಮಾಸ್ತರರು ಕಾಲೇಜದ ಪ್ರಿವಸಿಪಾಲರಕಡಿಂದ ಹುಕುಂ ಬಂದಕೂಡಲೇ ತಮ್ಮ ಶಾಲೆಯ ಅಸಿಸ್ಟಂಟನಕಡಿಗಾಗಲಿ ಅಥವಾ ನಾವು ನೇಮಿಸಿದ ಮನುಷ್ಯನಕಡಿಗಾಗಲಿ ಚಾರ್ಜ ಕೊಟ್ಟು ಅತಿಶೀಘ್ರ ಹೊರಟು ಸದರ ಕಾಲೇಜದ ಪ್ರಿನಸಿಪಾಲರಕಡಿಗೆ ಹಾಜರಾಗಬೇಕು. ಸನ ೧೮೭೩ ನೇ ಇಸವಿಯ ಜನವರಿ ತಿಂಗಳಿನ ೧ ನೇ ತಾರೀಖಿನವಳಗಾಗಿ ಯಾವ ಮಾಸ್ತರರು ಕಾಲೇಜಕ್ಕೆ ಹೋಗಿ ಹಾಜರಾಗಲಿಕ್ಕಿಲ್ಲವೋ ಅವರನ್ನು ಮೆಹರ್ಬಾನ ಇನಸ್ಪೆಕ್ಟರ ಘೋರೆಗಳವರು ತಮಗೆ ಯೋಗ್ಯಕಂಡಂತೆ ಶಿಕ್ಷಿಸುವರು. ತಿಳಿಯುವದು. ತಾ. ೧೩ ನೇ ಮಾಹೆ ಸಪ್ಟಂಬರ ೧೮೭೨ ಇ.

(Signed) Chanbussappa B. Dharwar,

ಡಿಪ್ಯೂಟಿ ಇ. ಇ. ಜಿಲ್ಲಾ ಧಾರವಾಡ.

Description of the Sardars' High School.
(A new poetry).

ಬೆಳಗಾವಿಯಲ್ಲಿ ಹೈಸ್ಕೂಲಿನ ವರ್ಣನೆ.

ಭಾಮಿನಿಷಟ್ಪದಿ.

೨

ವೇ[1]ಣುಗ್ರಾಮದಬಡಗದಿಕ್ಕಲಿ
ಸಾನುರಾಗದಿಎಸೆಯುತಿರ್ಪುದದು
ಹೂ[2]ಣಜನಭಾಷೆಯನುಶಿಕ್ಷಿಪದೊಂದುಮಹಶಾಲೆ॥
ಏಣ[3]ಲಾಂಛನನಂತೆಶೋಭಿಪ
ಪೋಣಿದರಅಂಶವನುಬಂಣಿಪ
ಕೇಣಿತ್ರೋರದಾಳಿಸುವದೆಂನಯಪ್ರಿಯಬಾಂಧವರೆ॥೧॥
ಮೂ[4]ಡಣಿಂಡಿಯಕಂಪನೀಯರ್
ಪ್ರೂಡಲೋಸುಗವಿದ್ಯಾಬೀಜವ
ನಾಡುಟೆಂಕಣಮಾಳ್ಯಗಾರೊಳ್ಸ್ಥಾಪಿಸಿದರಿದನು॥
ಬೋ[5]ರ್ಡರ್ಗಳಧ್ಯಕ್ಷಕೇಶನೆಂಬಾ
ಪ್ರೌಢಜನಸಂಘಕ್ಕೆಎಲಿದ
ರಾದಳ್ತೆವಪ್ಪುದರ್ಕೆಪರಿಧಾವಿಅಬ್ದದಲಿ॥೨॥
ದಕ್ಷಿಣದಸರದಾರಜನರಾ
ಪೇಕ್ಷೆಯುಳ್ಳವರಾಗಿನೆ[6]ರೆಸಂ
ರಕ್ಷಿಸುವಲವಲವಕೆಯಿಂದ್ರವ್ಯಾದಿಸಾಧನವ॥
ಅಕ್ಷಯದಿಈವೆಂಬಭಾಷೆಯ
ನಕ್ಷರದಿಬರದಿತ್ತುತನಯರ
ಪೇಕ್ಷೆಯಲಿಕಳುಹಿದರುಪ್ರಾರಂಭದಲಿನೀವರಿ[7]ಯೆ॥೩॥

॥ಕಂದ॥

ಕೇವಲರಾಜದಕುವರರೆ
ತಾಂವೀಸಾಲಿಗೆಬಹರುಸ್ವಲ್ಪರುಎಂದಂದಂ
ಭಾವಿಸಿಸರಕಾರದವರ್ಗಳ

---

೧ ಬೇಳಗಾವಿ. ೨ ಇಂಗ್ಲಿಷ. ೩ ಚಂದ್ರ. ೪ ಈಸ್ಟಇಂಡಿಯಾಕಂಪನಿ
೫ ವಿದ್ಯಾಖಾತೆಯ ಕಮೀಟಿ. ೬ ಚೆನ್ನಾಗಿ. ೭ ತಿಳಿಯೆ.

ಕಾವಾಗಲೆ ಇತ್ತರಪ್ಪಣೆವು ರಜನಕಂ॥೪॥

ಕುಸುಮಷಟ್ಪದಿ.

ಅಂದಿನಿಂದಪಾಠಶಾಲೆಗೆ
ಕಂದರನ್ನು ಕಳಿಸುವಾ
ಛಂದವಾದಕಾರ್ಯಜನವು ಮೂಡತೊಡಗಿತು॥
ಸುಂದರಾಬ್ಜತಂನಕಂಪಿ
ನಿಂದಅಲಿಗೆಸೌಖ್ಯವೀವ
ಅಂದದಿಂದಜ್ಞಾನವಿತ್ತುಎಂಪುವೊರುವದು॥೫॥

॥ವಾರ್ಧಕಷಟ್ಪದಿ.॥

ಪೊಳಲೊರಗೆ ನೆಲೆಗೊಳಿಸಿದೀಶಾಲೆಬಹುಶಾಂತ
ಸ್ಥಳವಾಗಿ ಇರ್ಪುದದರಿಂದ ಅಭ್ಯಾಸಿಗಳ್ಗೆನಿ
ರ್ಮಲಮನಸು ಇತ್ತು ಬುದ್ಧಿಯು ಹಬ್ಬು ವಿವೇಕೆಯುಂ ಸಲೆಪೆಚ್ಚು
ಸುವದಲ್ಲದೆ॥
ಲಲಿತತರುಗುಲ್ಮಲತೆಯಿಂದಪರಿಶೋಭಿಸುವ
ಅಲಿಕುಲಂಗಳರವದಿ ಅತಿಮನೋಹರವೆಲ್ಲ
ರಲಸಮಂತೊಡೆದುಮನಕಲ್ಹಾದವೀವ ಆರಾಮವಿಪ್ಪುದುಸು
ತ್ತಲು॥೬॥
ಮೇದಿನಿಯ ಅಖಿಳದೇಶದ ಪಟಗಳಿಂದೆಯುಂ
ತಾದಿಸಾಹಿತ್ಯದಾವಿವಿದಚಿತ್ರಂಅನೇ
ಕಾದಿಪ್ರಾಚೀನ ಸುಶೋಭಿಸುವ ಗ್ರಂಥಗಳಿಂವರಕಾಷ್ಟದಾ
ಸನಗಳಾ॥
ಸಾಧುತರರಮಣೀಯಸಾಲ್ಗಳಿಂಪಸುಳ್ಗೆಬೇ

---

೧ ಸುವಾಸನೆ. ೨ ತೆರದಿಂದ. ೩ ಊರು ೪ ಸ್ಥಾಪಿಸಿದ. ೫ ಬೆಳಗೆ, ೬ ಸ್ವರದಿಂದ ೭ **ನಕಾಶೆ.** ೮ **ಖುರ್ಚ** ಮೇಜಗಳು. ೯ ಚನ್ನಾಗಿರುವ,

ಕಾದಲೇ ಖನಿಪದಾರ್ಥಂಗಳಿಂ ಪರಿಪೂರ್ತಂ
ಮಾದಸೊಬಗಿಂದೆ ಸವಿವಿಸ್ತಾರಮುಳ್ಳ ಷಡ್ಭಾಗಮಿರುತಿರ್ಪುದವಿ
ಲ್ಗೆ ||೭||

||ಕಂದ||

ಮಹರಾಷ್ಟ್ರ ಕಂನಡೆಂಬೀ
ಮಹಭಾಗಗಳಾಗಿ ಇಂಗ್ಲ ಬಾಷೆಯುತಾ||
ಸಾಹಸದಿ ಕಲಿಸಲ್ಪಡುವದು
ಅಹ!! ಮರ್ದಣಿಕರಭಾಷೆಯಂತಾಂಬಿಟ್ಟಿರುವರ್ ||೮||

ಭಾಮಿನಿ ಷಟ್ಪದಿ

ರಂಗಿನಗಂನಡನುಡಿಗಳನುಉರೆ
ಸಂಸುತ್ರಾಕ್ರಮ ಪಟ್ಟು ಪರಿಪಾ
ಲಂನುಗೈಯ್ಯುವವಿದ್ಯಾಶಾಖೆಯ ಮೇಲ್ವಿಚಾರಿಕರಾ||
ದೊಂನುತದಸಂಕೀರ್ತಿಪಡದವ
ರೆಂನುತಾ ಈಪಾಠಶಾಲೆಯು
ಮುನ್ನಿನಕ್ಕರ ಷಟ್ಪದಿಯುವಿಡಿದರಹುವದುಪೆಸರು||೯||

||ಪದ||

"ಘಾಟಿ—ಬೆಳಗಾದವ್ಯಾಲೆ ಬ್ಯಾಸರಿಸುವ" ಎಂಬ ಕಂನಡ ಪದದಂತೆ ಇರುತ್ತವೆ.

ಕರಿರಾಜವರದ ಕರುಣಾಸಾಗರ ಪಾಲಿಸೈಹರೆ।
ಮೊರೆಇಡುವೆ ಇಂನುದುರಿತಗಳನು ತರಿಮುಕುಂದಸಾರೆ||

||ಪಲ್ಲ||

---

೧ ಶ್ರಮದಿಂದ ೨ ಅಹಾಹಾ. ಸಂಸ್ಕೃತ ಭಾಷೆ. (ಅಮೃತ ಉಂಣುವರ ಭಾಷೆ) ೪ ರತ್ನದೋಪಾದೆಯಲ್ಲಿರುವ. ೫ ಎಚ್ಚರಿಕೇಕಸಲ ಇನಸ್ಪೆಕ್ಟರರಾದ. ೬ ಅಕ್ಷರ ೬ ಕಡೆಭಾ. ೭. ಯ ಮೊದಲಕ್ಷರಗಳನ್ನು ತ್ತೊದಿದರೆ. ರಸಲದೊರೆ ಎಂಬ ಹೆಸರಾಗುತ್ತದೆ ೯ ಸಂಹರಿಸಿ.

ಕಡುವಿಸಿಲಿ[1]ಗೆತಾಂನೊಂ[2]ದುದ್ವಿಪ[3]ನುಮಡವು ಧುಮುಕಲು॥
ಜಡಮನಕ್ರ[4]ನಬಿಡಿಸಿದಂ[5]ತ್ರಿಯಾ ಸ್ಫೂರದೆಕೃಪಾಲು॥೧॥
ಏಸುಜನುಮಗಳಲಿಶ್ರೀಶಾಕ್ಲೇಶಬಟ್ಟೆನ್ನೈ॥
ವಾಸುದೇವನಿಂನಶೇವೆಗಾಸೆಗೊಂಡೆನ್ನೈ॥೨॥
ಅಪಾರಮಹಿಮಶ್ರೀಪತಿಹನುಮೋ[5]ಶಈಭವಾ॥
ತಾಪಬಿಡಿಸು ಪಾಪದೋ[6]ಷದೀಪಕೇಷವಾ॥೩॥

ತಾರೀಖ ೧೮ ಆಗಸ್ಟ ೧೮೬೭.

ಶ್ರೀನಿವಾಸ ರಾಮಚಂದ್ರ ಸೌದಿ ವಾಯಿಸ ಪ್ರಿನ್ಸಿಪಾಲ ಟ್ರೇ
ನಿಂಗ ಕಾಲೇಜ ಬೆಳಗಾಂವ.

List of contributions towards the Furniture for the Guduck English School.

ಧಾರವಾಡ ಜಿಲ್ಹೇಯೊಳಗಿನ ಗದಗ ಇಂಗ್ರಜೀ ಸಾಲಿಯ ಉಪಯೋಗದ ಸಲುವಾಗಿ ಖುರ್ಚಿ ಮೇಜು ಮುಂತಾದ ಸಾಮಾನುಗಳನ್ನು ಕೊಳ್ಳುವದಕ್ಕೆ ಪಟ್ಟಿ ಹಾಕಿದವರ ಹೆಸರುಗಳು, ಕೆಳಗೆಬರೆದಂತೆ—

ರಕಮು.	ಹೆಸರು.
೫	ಮಿ. ಕಾಂಡಿಸಾಹೇಬ ಎ. ಇನ್ಸಪೆಕ್ಟರ ದ. ಭಾ.
೨೦	ರಾ. ಶ್ರೀನಿವಾಸರಾವ ಕೃಷ್ಣ ಸ. ಚೆ.
೧೦	ರಾ. ಬಾಳಕೃಷ್ಣ ಗೋಪಿಂದ ಮಾಮಲೇದಾರ.
೧೦	ರಾ. ಚನಬಸಪ್ಪಾ ಬಸಲಿಂಗಪ್ಪಾ ಡಿ. ಎ. ಇ.
೫	ರಾ. ಶಂಕರರಾವ ವೆಂಕಟೇಶ ವಕೀಲ.

೧ ಹೆಜ್ಜು ಬಿಸಿಲಿಗೆ. ೨ ದುಃಖಬಟ್ಟು. ೩ ಆನೆಯು (ಕರಿರಾಜನು) ೪ ಮೊಸಳೆಯನ್ನು. ೫ ಆನೆಯನ್ನುಳ್ಳ ಮುದ್ರಿಕೆ ಗುರುತು. ೬ ಪಾಪವೆಂಬೊ ಕತ್ತಲೆಗೆ ದೀಪದೋಪಾದಿಯಲ್ಲಿರುವ.

೫ ರಾ. ರಾಘವೇಂದ್ರರಾವ ಶ್ರೀನಿವಾಸ ವಕೀಲ.

೨ ರಾ. ಪಾಂಡುರಂಗ ಬಾಳಕೃಷ್ಣ ಸ. ಒ. ಶೊ.

೨ ರಾ. ಕಾಳಪ್ಪಾ ನರಸು ಗದಗಕರ.

೨ ರಾ. ಅಪ್ಪಾಜಿ ವೆಂಕಟೇಶ ಸಿ. ತಾ. ಗದಗ.

೨ ರಾ. ಶೆಷೋಗೋಪಾಳ ಚಿ. ಕಾ. ಗದಗ.

೧ ರಾ. ತಮ್ಮಾಜಿ ಅನಂತ ಚಿಟಗುಬ್ಬಿ ಕಾರಕೂನ.

೧ ರಾ. ಭಾಸ್ಕರ ನಾರಾಯಣ ಕಾರಕೂನ.

೧ ರಾ. ಗೋವಿಂದ ಕೃಷ್ಣ ಬರವೇ ಕಾರಕೂನ.

೧ ರಾ. ಕೃಷ್ಣರಾವ ಲಕ್ಷ್ಮಣ ಬಾಪಟ ಕಾರಕೂನ

೩ ರಾ. ರಾಮರಾವ ವಕೀಲ

೩ ರಾ. ಸುಬ್ರಾವ ವಕೀಲ

೧ ರಾ. ಗೋಪಾಳ ವಾಸುದೇವ ವಕೀಲ.

೧ ರಾ. ಭೀಮರಾವ ಕಾರಕೂನ ಕೋರ್ಟ ಗದಗ

೧ ರಾ. ನಾರಾಯಣರಾವ ಕಾರಕೂ. ಕೋ. ಗದಗ.

೧ ರಾ. ಬಸಪ್ರಭು ಪ್ರೋಸ್ಟಮಾಸ್ತರ ಗದಗ.

೧ ರಾ. ವಾಸುದೇವರಾವ ನಾಜರ ಕೋ. ಗದಗ.

೧೦ ರಾ. ವೆಂಕಟದಾಸ ಸಾವುಕಾರ ಗದಗ.

೧೦ ರಾ. ದಾಸಪ್ಪಾ ವ್ಯಾಪಾರೀ ಗದಗ.

೫ ರಾ. ನಾರಾಯಣನಾಯಕ ಉಮಚಿಗಿ.

೫ ರಾ. ಮಡಿವಾಳಪ್ಪಾ ಬುಳಾ.

೫ ರಾ. ಇರಪ್ಪಾ ಕೊಟ್ಟಿ.

೫ ರಾ. ದಂಡಪ್ಪಾ ಮಾನವಿ.

೧ ರಾ. ಭಿಮಪ್ಪಾ ಮುಜುಮದಾರ.

೩ ರಾ. ವಿಠಲದಾಸ ಬೆಟಿಗೇರಿ.

೨ ರಾ. ವಲಭರಾಮಶೇಟಿ.

೩ ರಾ. ವೆಂಕಟದಾಸ ಬೆಟಿಗೇರಿ.

೩ ರಾ. ಮಲ್ಲಪ್ಪಾ ರವದಿ.

೨ ರಾ. ಈಶ್ವರಪ್ಪಾ ಹಬೀಬ.

೩ ರಾ. ಬಸಪ್ಪಾ ನಾಲವಾಡ.

೩ ರಾ. ಚನವೀರಪ್ಪಾ ಬೆಂಗಿನಕಾಯಿ.

೩ ರಾ. ಶೆಂಬೋಸಾ ಬೆಂವಿನಕಟ್ಟಿ.

೩ ರಾ. ಪಾಂಡುರಂಗಪ್ಪಾ ಬಾಕಳೆ.

೩ ರಾ. ದೂರಾಜೀ ಮಾರವಾಡಿ.

೨ ರಾ. ಗೋವಿಂದದಾಸ ನರಶಿದಾಸ.

೨ ರಾ. ಅಂಬೋಸಾ ಪೀತಾಂಬರ.

೨ ರಾ. ಸೋಮಣ್ಣಾ ಹೊಸಗೌಡ.

೨೦ ರಾ. ಸಣ್ಣತಮ್ಮಪ್ಪಾ ಇಳಗೇರಿ.

೨ ರಾ. ಲಮಾಜಿ ಮಾರವಾಡಿ.

೧ ರಾ. ಜಗೂಜಿ ಮಾರವಾಡಿ.

೨ ರಾ. ಬಸೆಟ್ಟೆಪ್ಪಾ ಬೆಂಗಿನಕಾಯಿ.

೨ ರಾ. ನೀಲಪ್ಪಾ ಸೆಂಗಶಾರಿ.

೨ ರಾ. ವನ್ನಾಜಿ ಮಾರವಾಡಿ.

೨ ರಾ. ಗಿರಿಯಪ್ಪಾ ಕೋಮಟಿ.

೨ ರಾ. ಅಡಿವ್ಯಾಪ್ಪಾ ಕೋಮಟಿ.

೧ ರಾ. ಬಸಪ್ಪಾ ಕಮತ್ರ.

೧ ರಾ. ಮರಿತಮ್ಮಪ್ಪಾ ಮೆಣಸಿಗಿ.

೩ ರಾ. ಸೂರಪ್ಪಾ ಪಾಟೀಲ

೨ ರಾ. ಕೃಷ್ಣಾಜಿ ರಾಘವೇಂದ್ರ ಕುಲಕರ್ಣಿ.

೩ ರಾ. ಬಸವೇಣೆಪ್ಪಾ ಹುಬ್ಬಳಿ.

೨ ರಾ. ಸಿದಲಿಂಗಪ್ಪಾ ಮಾನವಿ.

೨ ರಾ. ಬಸವಂತಪ್ಪಾ ಚಿತ್ರಗಾರ.

೨ ರಾ. ಸಿದ್ದಪ್ಪಾ ಬಿನ್ನಸಂಗಪ್ಪಾ ಹಸಬಿ.

೧ ರಾ. ನರಸಪ್ಪಾ ಖಟವೆಟ್ಟಿ
೫ ರಾ. ನಿಂಗನಗೌಡಾ ಪೋ
ಲಿಸಪಾಟೀಲ ಲಕ್ಕುರತಕೋಟಿ.
೫ ರಾ. ದ್ಯಾವನಗೌಡಾ ಮು
ಲಕೀಪಾಟೀಲ ಲಕ್ಕುರತಕೋಟಿ.
೨ ರಾ. ಶೇಷೋ ರಾಮಚಂ
ದ್ರ ಕುಲಕರ್ಣಿ.
೨ ರಾ. ದೊಡಜೀವಣಗೌಡಾ
ನಿಂಬಣಗೌಡನವರ.
೧ ರಾ. ಕರಿಬಸಪ್ಪಾ ಬಿದರಿ.
೫ ರಾ. ಹೊನವೀರಪ್ಪಾ ನಂ
ದರಗಿ.
೧ ರಾ. ಮೆಲಶಪ್ಪಾ ಬ್ಯಾಲೇ
ರಿ.
೨ ರಾ. ಪ್ರಭಂಣಾ ನೀಲಗುಂ
ದ.
೨ ರಾ. ರಂಗಪ್ಪಾ ಜಗಲಿ.
೨ ರಾ. ಈಶ್ವರಪ್ಪಾ ಹಬೀಬ
೨ ರಾ. ರಾಮಣಗೌಡಾ ಪೋ
ಲೀಸ.
೨ ರಾ. ರಾಮಚಂದ್ರಪ್ಪಾ ಸಾ
ರಪ್ಪನವರ.
೧ ರಾ. ಈಶ್ವರಪ್ಪಾ ನಿಲಗುಂ
ದ.
೧ ರಾ. ಮಹಂತಪ್ಪಾ ವಾಲಿ.
೪ ರಾ. ನರಸಪ್ಪಾ ಕಬ್ಬು.
೨ ರಾ. ಲಾಟೋಸಾ ಪಟವೆ
ಗಾರ.
೧ ರಾ. ಮಲ್ಲಪ್ಪಾ ಹುಬ್ಬಳಿ.
೧ ರಾ. ಅಂದಾನೆಪ್ಪಾ ಕಣವಿ.
೨ ರಾ. ಜೋರಬಕ್ಷಿ ಮಾ
ರವಾಡಿ.
೧ ರಾ. ಸಿದ್ದಪ್ಪಾ ಅಳಿ.
೫ ರಾ. ವೆಂಕಟೆಶ ರಾಮ
ಚಂದ್ರ ಅಸ. ಡಿ.
೭ ರಾ. ಬೀಮರಾವ ಕಾರ
ಕೂನ ಹೆಬ್ಬಳ ವಗೈರೆ
ಕೋರ್ಟ ಗದಗ.

Correspondence.

ಪತ್ರವ್ಯವಹಾರವು.

ರಾ॥ ರಾ॥ ಬೆಳಗಾಂವಿಯಲ್ಲಿ ಇರುವ ಕನ್ನಡ ಶಾಲಾಪತ್ರಕದ ಕರ್ತರಾದ ಎಡಿಟರರ ಚರಣಸನ್ನಿಧಾನಕ್ಕೆ —

ಬಾಗೆವಾಡಿ ತಾಲೂಕಸ್ಯೈಕಿ ಮೋಜೆ ಮುತ್ತಿಗಿ ಮಾಸ್ತರನಾದ ಭೀಮಾಜಿ ವಿರುಪಾಕ್ಷ ಹೊನವಾಡಕರ ಇವನಬಿನ್ನಃ ಯೇನಂದರೆ ಕೆಳಗೆ ಬರದ ನಾಲ್ಕು ಒಳ್ಳೆಯನ್ನು ತಂಮ ಸುಂದರವಾದ ಕರದ್ವಯಗಳಲ್ಲಿ ಹುಟ್ಟಲ್ಪಡುವ ಮನೋಹರವಾದ ಪತ್ರಿಕೆಯೊಳಗೆ ಸ್ವಲ್ಪ ಸ್ಥಳಕೊಟ್ಟು ಅಚ್ಚುಹಾಕಿ ಪ್ರಸಿದ್ಧಿಸಬೇಕೆಂಬಭಿಲಾಷೆಯಿಂದ ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

ಕಳೆದ ಯಪ್ರೀಲ ಮಠಪತ್ರಿಕದಲ್ಲಿ (ಸರಕಾರಿಶಾಲೆಯ ಹೆಡ್ಡಮಾಸ್ತರರಿಗೆ ಸೂಚನೆ) ಬರದದ್ದನ್ನು ನೋಡಿದೆನು. ಅದರಲ್ಲಿ ನನಗೂ ನನ್ನ ಶಾಲಾಬಾಂಧವರಾದ ಕೆಲವುಮಾಸ್ತರರಿಗೂ ಬಂದಥಾ ಸಂಶಯವನ್ನು ಸೂಚಿಸಿದವರೇ ಇದೇ ಪತ್ರ ಮುಖಾಂತರವಾಗಿಯೇ ಪರಿಹಾರಮಾಡುವರೆಂಬಭಿಲಾಷೆಯಿಂದ ಬೇಡಿಕೊಳ್ಳುತ್ತೇನೆ. ಏನಂದರೆ—ಸರಕಾರಿ ಶಾಲೆಯಲ್ಲಿ ಹುಡುಗರು ಕಡಿಮೆಯಾಗುವದಕ್ಕೂ, ಸರಕಾರಿ ಶಾಲೆಯಲ್ಲಿ ಅಭ್ಯಾಸ ನೆಟ್ಟಗಾಗುವದಿಲ್ಲವೆಂದು ಹಳ್ಳಿಯವರುಮಾತ್ರ ಅನ್ನುವದಕ್ಕೂ ಮುಖ್ಯ ಒಂದು ಕಾರಣ ಉಂಟು. ಅದೇನಂದರೆ—ಈಗ ಸರಕಾರದವರು ಸ್ಟ್ಯಾಂಡರ—ಗಳನ್ನು ಮಾಡಿರುವದರಿಂದಲೂ, ಅವುಗಳಲ್ಲಿ ಒಂದರಹಿಡದು ೬ ನೇ ಮರ್ಯಾದೆತನಕಾ ಅನುಕ್ರಮಪ್ರಕಾರವಾಗಿ ಒಳ್ಳೊಳ್ಳೇವಿಷಯಗಳನ್ನು ಹೆಚ್ಚೆಚ್ಚು ಇಟ್ಟಿರುವದರಿಂದಲೂ ಪ್ರತಿವರುಷಕ್ಕೆ ರಾವಸಾಹೇಬ ಡೆ. ಎ. ಇ. ಇವರು ಪರೀಕ್ಷೆಯನ್ನು ತೆಗೆದುಕೊಂಡು ಪಾಸಾದವರಿಗೆ ಇನಾಮುಇಲ್ಲವೇ ಸರಟೀಫಕೀಟನ್ನು ಕೊಡುವದರಿಂದಲೂ, ಆಗುವ ಲಾಭದವಿಷಯಕ್ಕೆ ಹಳ್ಳಿಯಲ್ಲಿರುವಂಥಾ ಜನರು ವಿಚಾರಮಾಡುವದೇಯಿ

ಲ್ಲ. ಅವರು ಅನ್ನುವದೇನಂದರೆ—ನಮ್ಮ ಮಕ್ಕಳಿಗೆ ಬುಕ್ಕಿನ ಅಭ್ಯಾಸವೆಂದರೆ (ವ್ಯಾಕರಣ, ಇತಿಹಾಸ, ಭೂಗೋಳ) ಬೇಡ. ನಾವೇನು ಸರಕಾರಿ ಚಾಕರಿಮಾಡತಕ್ಕವರಲ್ಲ. ನಮಗೆ ಸ್ವಲ್ಪ ಜಾಬ ಓದುವದಕ್ಕೂ, ಸಾಧಾರಣ ಬರೆಯುವದಕ್ಕೂ ಬಂದರೆಸಾಕು ಎಂದೆನ್ನುತ್ತಾರೆ. ನಾವು ಅವರ ಅಂಬೋಣಪ್ರಕಾರವೇ ಕಲಿಸಿದರೂ ಪರೀಕ್ಷೆಯಾಗಬೇಕಾದರೆ ಸ್ಟ್ಯಾಂಡರಡವೋರಿಗೆ ಅಭ್ಯಾಸ ಇರಬೇಕೆಂಬಿಭೆಯಿಂದ ಕಲಿಸುವ ಪದ್ಧತಿಯಲ್ಲಿ ಹೇಳಿದಪ್ರಕಾರ ಚಿಕ್ಕವರಿಗೆ ಬಾಯಿಂದಲೇ ಕಲಿಸಿದ ವಿಷಯಗಳನ್ನು ಮನಿಯಲ್ಲಿ ಮಾಡಿಕೊಂಡು ಬನ್ನಿ. ಮತ್ತು ಆ ವಿಷಯದ ಪುಸ್ತಕಗಳನ್ನು ತೆಗೆದುಕೊಳ್ಳಿ—ಎಂದುಹೇಳಲು; ಅದರಂತೆ ಆ ಹುಡುಗರು ಮನೆಯಲ್ಲಿ ಓದುವಾಗ್ಗೆ ಮತ್ತು ಬುಕ್ಕಿನವಿಷಯವಾಗಿ ಅದರ ಕ್ರಿಯ ಕೇಳುವಾಗ್ಗೆ ಅವರವರ ಮನಿಯವರು—ಮತ್ಯಾಕೆ ಅಭ್ಯಾಸ ಮಾಡುತ್ತಿ? ಮತ್ತು ಬುಕ್ಕು ಬೇಡುತ್ತಿ? ಎಂದು ತಮ್ಮ ಮಕ್ಕಳಿಗೆ ಸಿಟ್ಟು ಮಾಡುವದಲ್ಲದೆ ನಮಗೂ ಸಹ ಅದರಂತೆ ಹೇಳುತ್ತಾರೆ.* ಅಂದಮ್ಯಾಲೆ ಅವರಂತೆ ಅಭ್ಯಾಸ

---

* ಗಾವಟಿ ಶಾಲೆಯ ಅಭ್ಯಾಸವನ್ನು ಸರಕಾರಿ ಶಾಲೆಯ ಅಭ್ಯಾಸವನ್ನೂ ಸೂಕ್ಷ್ಮ ದೃಷ್ಟಿಯಿಂದ ವಿಚಾರಮಾಡಿ ನೋಡಲು, ಬಹಳೇ ಹೆಚ್ಚು ಕಡಿಮೆ ಎಂಬಂತೆ ಸುಜ್ಞರಾದವರಿಗೆ ಸಹಜವೇ ತಿಳಿದೀತು. ಮೂಢರಾದವರಿಗೆ ಅದು ತಿಳಿಯದಕಾರಣದಿಂದಲೇ ಅವರು ಗಾವಟಿಸಾಲೆಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ. ಸಾರಾಸಾರ ವಿಚಾರತಿಳಿದವರೂ, ಬುದ್ಧಿವಂತರೂ ಹೀಗೆಂದಿಗೂ ಮಾಡಲಿಕ್ಕಿಲ್ಲ—ಗಾವಟಿ ಸಾಲಿಯಲ್ಲಿ ಪ್ರಾತಃಕಾಲಹಿಡಿದು ಸಾಯಂಕಾಲತನಕ (ಕುರಿಹಿಂಡಿನಂತೆ) ಹುಡುಗರನ್ನು ಅಭ್ಯಾಸ ನಡಿಸದೆ ಸುಮ್ಮನೇ ಕಾಯಿಕೊಂಡು ಕೂತರೂ ಸಹ ಅವರು ವಿಚಾರಮಾಡದಲೆ ಅಭ್ಯಾಸ ಚನ್ನಾಗಿ ನಡದದೆ-ಎಂದೆನ್ನುವಂಥವರು ಶಾಣರೋ? ಅಂಥ ಸಾಲಿಯಲ್ಲಿ ತಯಾರಾದವರು ಪರೀಕ್ಷೆಯಲ್ಲಿ ಪಾಸಾಗುವರೋ? ಪಂಪೇಸವನೇ ಸಂಜೆತನಕಾ ಕೂಡಿಸುವದರಿಂದ ಅವರಲ್ಲಿ ಆಲಸ್ಯ ಹೆಚ್ಚಾಗಿ, ಜ್ಞಾನಶಕ್ತಿ ಕುಂದಿ ಯಾವಾಗಲೂ

ನಡಿಸಿದರೂ ಕಷ್ಟ—ಸರಕಾರ ಮರ್ಯಾದೆಪ್ರಕಾರ ಅಭ್ಯಾಸ ನಡಿಸಿದರೂ ಕಷ್ಟ—ಒಂದು ವೇಳೆ ಅವರಂತೆ ಅಭ್ಯಾಸ ನಡಿಸಿದರೆ ಹುಡುಗರು ಪುಷ್ಕಳಕೂಡ. ಫೀ+ ಮಾತ್ರ ಹೆಚ್ಚಾಗುವದು. ಪರಂತು ಇನಸ್ಪೇಕಟರ ರಸ್ವಾರಿ ಬಂದಾಗ್ಗೆ ಹುಡಗುರನ್ನು ೧ನೇ ಇಲ್ಲವೆ ೨ನೇ ಮರ್ಯಾದೆಪ್ರಕಾರ ಪರೀಕ್ಷೆಕ್ಕೆ ನಿಲ್ಲಿಸಿದರೂ ಅವರು—ಹುಡುಗುರು ಈ ಸಾಲಿಗೆ ಬಂದು ನಾಲ್ಕಾರು ವರುಷವಾಗತಬಂದಿದ್ದು ಇನ್ನು ಹೆಚ್ಚಿಗೆ ಅಭ್ಯಾಸಮಾಡಸಿಲ್ಲ ಯಾಕೆ? ಎಂದು ಹೇಳತಕ್ಕದ್ದೇನು? ಆಗ್ಗೆ ಸರಕಾರಿ ಅಭ್ಯಾಸ ಮಾಡಿಸಬೇಡರೆಂದವರು ಮುಂದಕ್ಕೆ ಬಂದು ನಮ್ಮನ್ನು ಕಾಪಾಡುವರೋ? ನಮ್ಮ ಹುಷಾರಿ ಎಷ್ಟಿಂಬುವದು ಸರಕಾರಕ್ಕೆ ಕಂಡಂತ್ಯಾಗುವದಿಲ್ಲವೊ? ಇದರಿಂದ ನಮ್ಮ ಕೀರ್ತಿಯೂ, ಸಂಬಳವೂ ಹೆಚ್ಚಾಗುವದೋ? ಈಪ್ರಕಾರ ಅವರ ಮಾತಿನಿಂದ ನಮ್ಮ ವಸ್ಥೆಯಾಗುವದು. ಮತ್ತು ಸ್ಟ್ಯಾಂಡರಡಮೋರಿಗೆ ಅಭ್ಯಾಸನಡಿಸಿ ಪ್ರತಿದಿವಸ ಒಂದೆರಡುತಾಸ ಕಾಗದ ಮತ್ತು ಅವರಿಗೆ ಹಿತವಾದ ಅಭ್ಯಾಸನಡಿಸಿದರೂ ಬುಕ್ಕಿಸತಿರಸ್ಕಾರದಿಂದಲೂ. ಆವರಿಗೆ ಇಂಥಾ ಅಭ್ಯಾ

ಮಣ್ಣಿನಲ್ಲಿ ತಮ್ಮ ಬಟ್ಟೆಗಳನ್ನು ಹೊರಳಿಸ್ಯಾಡುವದರಿಂದ ರೋಗಿಷ್ಟರಾಗುವದಿಲ್ಲವೋ? ಜರ ಇದರಂತೆ ಮಾಡುವದರಿಂದ ಖರೋಖರ ಹಿತವಿದ್ದರೆ, ಸರಕಾರಿಶಾಲೆಯಲ್ಲಿಯೂ ಕಾಲೇಜದಲ್ಲಿಯೂ ಅವರಕಿತ್ತೆಯುನ್ನೇ ಕಲಿಸಡರೋ? ಇಂಥ ಅನೇಕ ಕಾರಣಗಳುಂಟು. ಇವನ್ನು ಬಲ್ಲಂಥ ವಿದ್ವಜ್ಜನರು ಎಂದಿಗೂ ಹೋಗಲ್ಲಿಕ್ಕಿಲ್ಲ.

+ ತಂಮ ಮಕ್ಕಳನ್ನುವಿದ್ವಾಂಸರಾಗಿ ಮಾಡಬೇಕೆಂಬ ಇರಾದೆಯಿಂದಗಾವಟಿ ಸಾಲೆಯಲ್ಲಿ ಹೆಚ್ಚು ಹಣ ಕೊಡುವದಿಲ್ಲ—ಸರಕಾರಿ ಶಾಲೆಯಲ್ಲಿ ಸ್ಟ್ಯಾಂಡರಡಮೋರಿಗೆ ಅಭ್ಯಾಸನಡಿಸುವಕಾರಣ (ಅದು ತಮ್ಮಿಚ್ಛೆಗೆ ಬಾರದಮೂಲಕ) ಇಲ್ಲಿ ನೆಟ್ಟಗೆ ಅಭ್ಯಾಸ ಮಾಡಿಸುವದಿಲ್ಲವೆಂದು ನೆವಮಾಡಿ ತಮ್ಮ ಮಕ್ಕಳನ್ನು ಹೆಚ್ಚು ಹಣ ಕೊಟ್ಟುಹಾಕುತ್ತಾರೆ. ಇಲ್ಲಿಯೂ ಸಹ ಗಾವಟಿ ಸಾಲೆಯಂತೆ ಅಭ್ಯಾಸ ನಡಿಸಿದರೆ ಅವರು ಹೆಚ್ಚಿಗೆ ಣಹಕೊಟ್ಟು ಆ ಸಾಲಿಗೆ ಎಂದಿಗೂ ಕಳಿಸರು.

ಸ ಮನಃಪೂರ್ವಕವಾಗಿ ಬೇಡಾದದರಿಂದಲೂ, ತಂಮ ಮಕ್ಕಳನ್ನು ಬಿಡಿಸುವರು. ಆಗ್ಗೆ ಮೆ. ಡಿ. ಎ. ಇ. ಇವರು ಹುಡುಗರು ಯಾಕೆ ಕಡಿಮೆಯಾದವು ಎಂದು ಜವಾಬ ಸಹ ಜವೇ ಕೇಳುವರಲ್ಲದೆ, ಮೇಲೆ ಮೇಲೆ ಹುಡುಗರ ಸಂಖ್ಯ ಹೆಚ್ಚುಗೊಳಿಸೋ ವಿಷಯಕ್ಕೆ ಹುಕುಮ ಕೊಡುವರು. ಈ ಪ್ರಕಾರದೀನರಾದ ಮಾಸ್ತರರಿಗೆ ಅತ್ತ ಕಡೆಗೆ ಹೋದರೆ ಭಾವಿ, ಇತ್ತಕಡಿಗೆ ಬಂದರೆ ಕೆರೆ, ಎಂಬಂತೆ ಬಹು ಕಷ್ಟವುಂಟು. * ಇದರ ವಿಷಯವಾಗಿ ನಾವು ಮುಂದೆ ಯಾವಪ್ರಕಾರ ನಡಿಯಬೇಕೆಂಬುವದು ದಯವಾಡಿ ತಿಳಿಸಿದರೆ ಅದರಂತೆ ನಡೆಯುವೆವು—ಇಂತಿ. ವಿನಃ

ಮುಕಾಮ ಮುತ್ತಿಗೆ	ಭೀಮಾಜಿ ವಿರುಪಾಕ್ಷ. ಹೊಸ
ತಾ॥೧೦ ಅಗಸ್ಟ ೧೮೮೭.	ವಾಡಕರ ಸ್ಕು. ಮುತ್ತಿಗೆ.

* ಇಂಥಾ ಕಷ್ಟವು ತಾಲೂಕ ಶಾಲೆಯವರಿಗೂ ಜಿಲ್ಹೆಯ ಶಾಲೆಯವರಿಗೂ ಇರುವದಿಲ್ಲ— (ಇದರ ಕಾರಣವು ಬಹುಷಾ ಎಲ್ಲರಿಗೆ ಗೊತ್ತಿರಬಹುದು-ಕಾರಣ ಬರಿಯುವ ಪ್ರಯೋಜನವಿಲ್ಲ.

ಶಾಲಾಪತ್ರಕವು.

———000———

ಪುಸ್ತಕ ೮] [ಸಂಚಿಕೆ ೭

ಬೆಳಗಾವಿ, ಮಾಹೆ ಅಕ್ಟಂಬರ. ೧೮೭೨.

SELF HELP.

ತನಗೆ ತಾನೇ ನೆರವಾಗುವದು.

ಪರದೇಶಸ್ಥರ ಚರಿತ್ರಗಳು ಇಂಗ್ಲಿಷಜನರ ಚರಿತ್ರಗಳಿಗಿಂತ ಕಡಿಮೆಯಲ್ಲ; ಅವುಗಳಲ್ಲಿಸಹ ತಮ್ಮ ಸ್ವಂತಉದ್ಯೋಗದಿಂದಲೂ, ಬುದ್ಧಿಯಿಂದಲೂ ದಾರಿದ್ರ್ಯವನ್ನು ಪರಿಹರಿಸಿಕೊಂಡು ಘನತೆಗೆ ಯೇರಿದಂಥವರ ಉದಾಹರಣೆಗಳು ಸಮೃದ್ಧಿಯಾಗಿವೆ. ಕೆಲಿಗಳಲ್ಲಿ ಹೆಸರಾದವರು ಯಾರೆಂದರೆ, ಕ್ಲಾಡನೆಂಬವನು, ಕಣಕದ ರೊಟ್ಟಿ ಮುಂತಾದವುಗಳನ್ನು ಮಾರುವವನ ಮಗನು; ಗೇಸ್ನೆಯೆಂಬವನು, ರೊಟ್ಟಿಗಾರನಮಗನು, ಲಿಯೋಪೋಲ್ಡ ರಾಬರ್ಟನೆಂಬವನು, ಘಡಿಯಾಳಮಾಡುವವನ ಮಗನು; ಹೇಡನ್ನನೆಂಬವನು, ಬಂಡಿಗಳನ್ನು ಮಾಡುವವನ ಮಗನು; ದಾಗೇರನೆಂಬವನು ನಾಟಕಗಳಲ್ಲಿ ಬಣ್ಣ ಕೊಡುವ ಕೆಲಸಮಾಡುತ್ತಿದ್ದನು. ಯೇಳನೇ ಗ್ರೇಗರಿಯು ತಂದೆಯು ಬಡಿಗೆಯುವನಿದ್ದನು; ಐದನೇ ಸೀಕ್ಸತಸನೆಂಬವನ ತಂದೆಯು ಕುರುಬನಿದ್ದನು; ಆರನೇ ಅದ್ರಿಯನ್ನನೆಂಬವನ ತಂದೆಯು ಆಟಕ್ಕೋಸ್ಕರವಾಗಿ ಮಾಡಿದ ದೋಣಿಗಳನ್ನು ನಡಿಸುವ ಬಹು ಬಡ ಅಂಬಿಗನಿದ್ದನು. ಅದ್ರಿಯನ್ನನು ಚಿಕ್ಕವನಿದ್ದಾಗ ಅಭ್ಯಾಸಕ್ಕೋಸ್ಕರವಾಗಿ ದೀಪಕ್ಕೆ ಆಗತಕ್ಕ

ವೆಚ್ಚವನ್ನು ಮಾಡುವದಕ್ಕೆ ತ್ರಾಣೆಯಿಲ್ಲದವನಾಗಿ, ಓಣಿಗಳಲ್ಲಿಯೂ ಗುಡಿಗಳ ಬಾಗಿಲಗಳಲ್ಲಿಯೂ ಹಚ್ಚಿದ ದೀಪಗಳ ಬೆಳಕಿನಲ್ಲಿ ತನ್ನ ಪಾಠಗಳನ್ನು ಕಲಿಯುತ್ತಿದ್ದನು. ಆ ಕಾಲದಲ್ಲಿ ಅವನು ಪ್ರಕಟಿಸಿದ ತಾಳ್ಮೆಯೂ, ಉದ್ಯೋಗವೂ, ಅವನು ಮುಂದೆ ಪಡೆಕೊಂಡ ಘನತೆಯು ನಿಃಸಂದೇಹವಾದ ಕುರುಹುಗಳಾಗಿದ್ದವು. ಇದೇ ಮೇರಿಗೆ ಬಡತನದಲ್ಲಿ ಹುಟ್ಟಿದ ದೊಡ್ಡ ಮನುಷ್ಯರು ಯಾರ್ಯಾರೆಂದರೆ, ಹಾಯೀ ಯೆಂಬ ಖನಿಜಶಾಸ್ತ್ರಜ್ಞನು ಸೇಂತಜಸ್ತಯೆಂಬಲ್ಲಿ ಒಬ್ಬ ಜೇಡನ ಮಗನು; ಹಾತ್ರಿಫೀಲ್ಲ ಯೆಂಬ ಯಂತ್ರಜ್ಞನು ಆರ್ಲಿನ್ಸ ಯೆಂಬಲ್ಲಿ ಒಬ್ಬ ಬಕ್ಕರಿಗಾರನ ಮಗನು; ಜೋಜೆಫ ಫೋರೀಯರಯೆಂಬ ಗಣಿತಜ್ಞನು ಆಸೇಯರಯೆಂಬಲ್ಲಿ ಒಬ್ಬ ಶಿಂಪಿಗನ ಮಗನು; ಡೊರೆಂಡನೆಂಬ ಗೃಹರಚನಾಶಾಸ್ತ್ರಜ್ಞನು ಪಾರಿಸದಲ್ಲಿ ಒಬ್ಬ ಸಮ್ಮಗಾರನ ಮಗನು; ಜೆಸ್ನರನೆಂಬ ಪದಾರ್ಥವಿಜ್ಞಾನಶಾಸ್ತ್ರಜ್ಞನು ಝ್ಯೂರಿಚ್‌ಯೆಂಬಲ್ಲಿ ಒಬ್ಬ ಚರ್ಮಗಾರನ ಮಗನು. ಇವನು ಬಡತನ, ಬೆನೆ, ಮನೆತನದ ಬಾಧೆಗಳಿಂದ ಉಂಟಾಗುವ ಯೆಲ್ಲವಿಧದ ತೊಂದರೆಗಳಿದ್ದಾಗ್ಯೂ, ಅವುಗಳನ್ನು ಲಕ್ಷಿಸದೇ ತನ್ನ ಸದ್ವ್ಯಾಸಂಗವನ್ನು ಕೈಕೊಂಡನು; ಇವುಗಳಿಂದ ಅವನ ಧೈರ್ಯವು ಯೆಷ್ಟು ಮಾತ್ರವೂ ಕುಂದಲಿಲ್ಲ, ಅಭಿವೃದ್ಧಿಯೂ ಪ್ರತಿಬಂಧಿಸಲ್ಪಡಲಿಲ್ಲ. ಅವನ ಚರಿತ್ರೆಯು “ಬಹಳಕೆಲಸವುಳ್ಳವರಾಗಿ, ಆ ಕೆಲಸಮಾಡ ಮನಸ್ಸುಳ್ಳಂಥವರಿಗೆ ಬೇಕಾದಷ್ಟು ವ್ಯಾಳ್ಯ ಸಿಕ್ಕುವದು,” ಯೆಂಬ ಸಿದ್ಧಾಂತದ ಸತ್ಯತ್ವವನ್ನು ವ್ಯಕ್ತಪಡಿಸುವದಕ್ಕೆ ಅತ್ಯುತ್ತಮವಾದ ಉದಾಹರಣೆಯಾಗಿರುತ್ತದೆ. ಪಾಯರ ರಾಮುಸನೆಂಬವನಾದರೂ ಇದೇತರದ ಮನುಷ್ಯನಿದ್ದ

ನು. ಪಿಕಾರ್ಡೀಯೆಂಬಲ್ಲಿ ಅವನು ಬಡತಾಯಿ ತಂದೆಗಳ
ಹೊಟ್ಟೆಲ್ಲಿ ಹುಟ್ಟಿ, ಚಿಕ್ಕಂದಿನಲ್ಲಿ ಕುರಿಗಳನ್ನು ಕಾಯು
ತ್ತಿದ್ದನು. ಆದರೆ ಆ ಕೆಲಸಕ್ಕೆ ಅವನು ಮೆಚ್ಚದೆ ಪಾರಿ
ಸಪಟ್ಟಣಕ್ಕೆ ಓಡಿಹೋಗಿ, ಬಹಳ ತಾಪತ್ರಯದಲ್ಲಿ ಕೆಲ
ಕಾಲ ಕಳೆದನಂತರ ನವರಿಯೆಂಬ ಮಹಾವಿದ್ಯಾಲಯದಲ್ಲಿ
ಚಾಕರನಾಗಿ ನಿಂತನು. ಆ ಕೆಲಸದಲ್ಲಿ ಅವನಿಗೆ ವಿದ್ಯಾ
ಭ್ಯಾಸಕ್ಕೆ ಮಾರ್ಗವುಂಟಾಗಿ, ಸ್ವಲ್ಪಕಾಲದೊಳಗೆ ಅವನು
ಆಗಿನಕಾಲದಲ್ಲಿ ಹೆಸರಾದವರೊಳಗೆ ಯೆಣಿಸಲ್ಪಟ್ಟನು.

ವಾಂಕೆಲಿನ್ನೆಂಬ ರಸಾಯನಶಾಸ್ತ್ರಜ್ಞನು ಕಾಲ್ವಾದೋ
ಸ ಯೆಂಬ ಪ್ರಾಂತದೊಳಗಿನ ಸೇಂತ ಆಂದ್ರೆದಹಬರ್ಗತಾತ
ಯೆಂಬ ಊರಲ್ಲಿರುವ ಒಬ್ಬ ರಯತನಮಗನು. ಇವನು
ಚಿಕ್ಕಂದಿನಲ್ಲಿ ಸಾಲೆಗೆ ಹೋಗುತ್ತಿರುವಾಗ ಬಡತನದ ವ
ಸ್ತ್ರಗಳುಳ್ಳವನಾಗಿ ಇದ್ದಾಗ್ಯೂ, ಒಳ್ಳೇಬುದ್ಧಿವಂತನಾಗಿದ್ದ
ನು. ಅವನಿಗೆ ಓದ ಬರಿಯ ಕಲಿಸಿದ ಶಿಕ್ಷಕನು ಅವನು
ಮನಸ್ಸಿಟ್ಟು ಕಲಿಯುವದನ್ನುನೋಡಿ ಅವನನ್ನು ಹೊಗಳು
ತ್ತ ಅನ್ನುತ್ತಿದ್ದದ್ದು ಯೇನಂದರೆ, "ಹೊ, ಸಾಗಲಿ, ನನ್ನ
ಪ್ರಿಯಬಾಲಕನೇ, ನಿನ್ನ ಕೆಲಸ ನಡಿಸು, ಅಭ್ಯಾಸ ಮಾಡು,
ಕಾಲಿನ್ನನೇ; ಯೆಂದಾದರೂ ಒಂದುದಿವಸ ನೀನು ಈ ತಾ
ಲೂಕದ ದೇವಸ್ಥಾನದ ಅಧಿಕಾರಿಯಂತೆ ಬೆಲೆಯುಳ್ಳ ಬಟ್ಟೆ
ಗಳನ್ನು ಧರಿಸಿಕೊಂಡು ತಿರುಗಾಡುವಿ." ಆಪ್ರಾಂತದೊಳ
ಗಿನ ಒಬ್ಬ ವೈದ್ಯನು ಈ ಹುಡುಗನಿರುವ ಶಾಲೆಯನ್ನು
ನೋಡಲಿಕ್ಕೆ ಹೋದಾಗ ಈ ಧಷ್ಟಪುಷ್ಟನಾದಬಾಲ
ಕನ ರಟ್ಟೆಗಳನ್ನುನೋಡಿ ಆಶ್ಚರ್ಯಪಟ್ಟು, ನನ್ನರಸಾ
ಯನಶಾಲೆಯಲ್ಲಿ ಔಷಧಗಳನ್ನು ಕುಟ್ಟುವ ಕೆಲಸ ಮಾ

ಡುವಿಯಾ, ಯೆಂದು ಅವನನ್ನು ಕೇಳಲಾಗಿ, ವಾಂಕೆಲಿನ್ನನು ಅಲ್ಲಿ ತನ್ನ ಅಭ್ಯಾಸ ನಡಿಸುವದಕ್ಕಾದರೂ ವ್ಯಾಳ್ಯ ಶಿಕ್ಕುವದೆಂಬ ಆಶೆಯಿಂದ ಆ ಕೆಲಸವನ್ನು ಒಪ್ಪಿಕೊಂಡನು. ಆದರೆ ಆ ವೈದ್ಯನು ಅವನಿಗೆ ಕಲಿಯುವದಕ್ಕೆ ಯೆಷ್ಟು ಮಾತ್ರವಾದರೂ ವ್ಯಾಳ್ಯವನ್ನು ಕೊಡಲಿಲ್ಲ. ಆದದರಿಂದ ವಾಂಕೆಲಿನ್ನನು ಆ ವೈದ್ಯನನ್ನು ಬಿಡಬೇಕೆಂದು ನಿಶ್ಚೈಸಿ, ಸೇಂಟ ಅಂದ್ರೀ ಗ್ರಾಮವನ್ನು ಬಿಟ್ಟು, ಹೆಗಲಮೇಲೆ ತನ್ನ ಹೆಗಲಚೀಲವ ಚೆಲ್ಲಿಕೊಂಡು, ಪಾರಿಸಪಟ್ಟಣದ ದಾರಿಯನ್ನು ಹಿಡಿದನು. ಅಲ್ಲಿಗೆ ತಲಪಿದನಂತರ ಕೆಲವೊಬ್ಬ ವೈದ್ಯನನ್ನು ನೋಡಿಕೊಂಡು ಅವನ ಕೈಕೆಳಗೆ ಕೆಲಸ ಕಲಿಯಬೇಕೆಂದು ವಾಂಕೆಲಿನ್ನನು ಬಹಳ ಯತ್ನೈಸಿದಾಗ್ಯೂ, ಅವನಿಗೆ ಯೆಲ್ಲಿಯೂ ಆಶ್ರಯವು ಶಿಕ್ಕಲಿಲ್ಲ. ತರುವಾಯ ಅವನು ಶ್ರಮದಿಂದಲೂ, ತಿನ್ನಲಿಕ್ಕೆ ಅನ್ನವಿಲ್ಲದರಿಂದಲೂ, ಬೇನೆಬಿದ್ದು ಆಸಪತ್ರಿಯಲ್ಲಿ ಒಯ್ಯಲ್ಪಟ್ಟನು; ಆಗ ಆ ಬೇನೆಯೊಳಗಿಂದ ತಾನು ಬದುಕುವದಿಲ್ಲೆಂದು ಅವನು ತಿಳಿದುಕೊಂಡಿದ್ದನು. ಆದರೆ ಅವನ ದೈವದಲ್ಲಿ ಇನ್ನೂ ಒಳ್ಳೇದಿವಸಗಳನ್ನು ನೋಡುವದಿತ್ತು. ಅವನಿಗೆ ಆರೋಗ್ಯವಾದಮೇಲೆ ಪುನಃ ಅವನು ತನ್ನ ಅಪೇಕ್ಷೆಯಂತೆ ಚಾಕರಿಯ ಸ್ಥಳವನ್ನು ಹುಡುಕುತ್ತಿರಲಾಗಿ ಕಡೆಯಲ್ಲಿ ಒಬ್ಬ ವೈದ್ಯನ ಕೈಕೆಳಗೆ ಕೆಲಸ ಸಿಕ್ಕಿತ್ತು. ತರುವಾಯ ಸ್ವಲ್ಪಕಾಲದೊಳಗೇ ಅವನು ಫೋರಕ್ರಾಯ ಯೆಂಬ ಹೆಸರಿನಿಂದ ಪ್ರಖ್ಯಾತನಾದ ರಸಾಯನ ಶಾಸ್ತ್ರಜ್ಞನ ಗುರುತು ಮಾಡಿಕೊಂಡನು. ಆ ವಿದ್ವಾಂಸನು ಈ ಹುಡುಗನನ್ನು ನೋಡಿ ಸಂತೋಷಪಟ್ಟು ತನ್ನ ಮನೆತನದ ಪತ್ರವ್ಯವಹಾರ ಮುಂತಾದ ಕೆಲಸವನ್ನು ನೋಡ

ಹೇಳಿದನು. ತರುವಾಯ ಯೆಷ್ಟೋ ವರ್ಷಗಳಾದನಂತರ ಆ ವಿದ್ವಾಂಸನು ತೀರಿದಮೇಲೆ ಅವನ ಸ್ಥಳದಲ್ಲಿಯೇ ವಾಂಕೆಲಿನ್ನನು ರಸಾಯನ ಶಾಸ್ತ್ರದ ಶ್ರೇಷ್ಠಗುರು (ಪ್ರೊಫೇಸರ) ವೆಂಬ ಕೆಲಸಕ್ಕೆ ನೇಮಿಸಲ್ಪಟ್ಟನು. ಕಡೆಯಲ್ಲಿ ಸನ್ನ ೧೮೨೭ ನೇ ವರ್ಷದಲ್ಲಿ ಕಾಲ್ವಾಡೋಸ ಪ್ರಾಂತದ ವಕೀಲನನ್ನು ನೇಮಿಸುವ ಅಧಿಕಾರವುಳ್ಳವರೆಲ್ಲರು ಕೂಡಿ, ಚೇಂಬರ ಆಫ ಡೆಪ್ಯುಟೀಜ್ ಯೆಂಬ ಸಭೆಯಲ್ಲಿ ಅವನನ್ನು ವಕೀಲನಾಗಿ ನೇಮಿಸಿದರು. ಈ ವಿಧವಾಗಿ ಅವನು ತಾನು ಕೆಲವರ್ಷಗಳ ಪೂರ್ವದಲ್ಲಿ ತೀರ ಬಡವನೂ, ಕೇವಲ ಅಪ್ರಸಿದ್ಧನೂ ಆಗಿ ಬಿಟ್ಟ ಊರನ್ನು ಘನವಾದ ಐಶ್ವರ್ಯ ಮಾನಗಳೊಂದಿಗೆ ಪುನಃ ಪ್ರವೇಶಿಸಿದನು.

ಸಾಮಾನ್ಯರಾದ ಶಿಪಾಯಿಗಳು ದಂಡಿನಲ್ಲಿ ಅತ್ಯುನ್ನತವಾದ ಅಧಿಕಾರಗಳನ್ನು ಸಂಪಾದಿಸಿದ ಉದಾಹರಣೆಗಳು ಇಂಗ್ಲಂಡದಲ್ಲಿ ಇಲ್ಲ. ಇಂಥಾ ಉದಾಹರಣೆಗಳು ಫ್ರಾನ್ಸ ದೇಶದಲ್ಲಿ ಮೊದಲಿನ ದೊಡ್ಡ ದಂಗೆ ಆದಂದಿನಿಂದ ಇತ್ತಕಡೆಯಲ್ಲಿ ಬಹಳವಾಗಿ ಕಾಣಬರಹತ್ತಿದವು. ಆ ದೇಶದಲ್ಲಿ "ಬುದ್ಧಿವಂತರಿಗೆ ಘನತೆಯ ಮಾರ್ಗವು ತೆರದೇ ಇರುತ್ತದೆ" ಯೆಂಬ ಮಾತಿನ ಪ್ರತ್ಯಯಗಳು ಮನಸ್ಸಿಗೆ ತಗಲುವಂತೆ ಯೆಷ್ಟೋಸಾರಿ ವರ್ತಿಸಿದವು. ಫ್ರಾನ್ಸದಂತೆ ಇಂಗ್ಲಂಡದಲ್ಲಿಯೂ ದಂಡಿನೊಳಗೆ ಅಧಿಕಾರವು ಬೆಳೆಯುವದಕ್ಕೆ ಪ್ರತಿಬಂಧವಿಲ್ಲದಿದ್ದರೆ, ಅಲ್ಲಿ ಸಹ ಫ್ರಾನ್ಸದಂತೇ ಉದಾಹರಣೆಗಳು ಕಾಣಬರುತ್ತಿದ್ದವೆಂಬದಕ್ಕೆ ಸಂದೇಹವಿಲ್ಲ. ಹೋಕ, ಹಂಬರ್ಟ, ಪಿಕೆಗ್ರೂ, ಯೆಂಬವರು ತಲಬನ್ನು ಅಪೇಕ್ಷಿಸದೆ ಶಿಪಾಯಿಗಳಾಗಿ ದಂಡಿನಲ್ಲಿ ಸೇರಿದರು. ಹೋಕನು ಅರಸನ ದಂಡಿ

ನಲ್ಲಿ ಇರುವಾಗ ಅಂಗಗಳ ಮೇಲೆ ಜರದ ಕಸೀದಿಯನ್ನು ತೆಗೆದು ಸಂಪಾದಿಸಿದ ಹಣದಿಂದ ಯುದ್ಧ ವಿದ್ಯೆಯ ಪುಸ್ತಕಗಳನ್ನು ಕೊಳ್ಳುತ್ತಿದ್ದನು. ಹಂಬರ್ಟನು ಚಿಕ್ಕಂದಿನಲ್ಲಿ ವ್ಯತ್ಯಾಸವಾಗಿ ತೋರುವ ತಲೆಗೂದಲುಗಳುಳ್ಳ ಹುಡುಗನಾಗಿದ್ದನು. ಅವನು ೧೬ ವರ್ಷದವನಾದಮೇಲೆ ಮನೆ ಬಿಟ್ಟು ಓಡಿಹೋಗಿ ಮೊದಲು ನಾನ್ಸಿಯೆಂಬ ಒಬ್ಬ ವ್ಯಾಪಾರಸ್ಥನ ಚಾಕರಿಯವನಾದನು; ತರುವಾಯ ಲಾಯನ್ಸ ಪಟ್ಟಣದಲ್ಲಿ ಕೆಲ ದಿವಸ ಕೂಲಿಯ ಮಾಡುತ್ತಿದ್ದನು; ಆ ಮೇಲೆ ಯೆಷ್ಟೋದಿವಸ ಮೊಲಗಳ ಚರ್ಮಗಳನ್ನು ತಲೆಯ ಮೇಲೆ ಹೊತ್ತುಕೊಂಡು ಮನೆ ಮನೆ ಮಾರುತ್ತ ತಿರುಗುತ್ತಿದ್ದನು. ಆದರೆ ಸನ್ನ ೧೭೯೨ನೇ ವರ್ಷದಲ್ಲಿ ಅವನು ಸ್ವಸಂತೋಷದಿಂದ ಶಿಪಾಯಿಯಾಗಿ ದಂಡಿನೊಳಗೆ ಸೇರಿ, ಒಂದು ವರ್ಷದೊಳಗೇ ಬ್ರಿಗೇಡೆಂಬದೊಂದು ದೊಡ್ಡ ದಳಭಾಗದ ಮುಖ್ಯಸ್ಥನಾದನು. ಕ್ಲೆಬರ, ಲೆಫೆವರ, ಸುಕೆತ, ವಿಕ್ಟರ, ಲಾನ್ಸಿಸ, ಸೊಲ್ತ, ಮೆಸ್ಸಿನ, ಸೇಂತಸೀರ, ಡಿಇರ್ಲನ, ಮುರತ, ಆಜೆರೊ, ಬೆಸ್ಸೀರಿಸ, ನೇ, ಇವರೆಲ್ಲರು ಮೊದಲು ಸಾಮಾನ್ಯತರದ ಶಿಪಾಯಿಗಳೇ ಇದ್ದು, ತಮ್ಮ ಸ್ವಂತ ಪರಾಕ್ರಮದಿಂದ ದೊಡ್ಡ ದೊಡ್ಡ ಅಧಿಕಾರಗಳನ್ನು ಸಂಪಾಸಿಕೊಂಡರು. ಇವರಲ್ಲಿ ಕೆಲವರು ಸಾವಕಾಶದಿಂದ ಕೆಲವರು ಬಹುತೀವ್ರವಾಗಿ ಯೇರಿದರು. ಸೇಂತಸೀರ ಯೆಂಬವನು ತೋಲಪಟ್ಟಣದಲ್ಲಿ ಚರ್ಮಕ್ಕೆ ಮಸಾಲೆಯ ಹಚ್ಚಿ ಮೆತ್ತಗೆಮಾಡುವ ಒಬ್ಬ ಬಡವನ ಮಗನಿದ್ದನು. ಇವನು ಮೊದಲು ನಾಟಕಗಳಲ್ಲಿ ವೇಷಧಾರಿಯಾಗಿ ಹೊಟ್ಟೆ ಹೊರಕೊಳ್ಳುತ್ತಿದ್ದನು. ತರುವಾಯ ಇವನು ಚಾಸೀಯುತಯೆಂಬ ಕುದುರೇ ಸ

ವಾರರಲ್ಲಿ ಚಾಕರಿಯು ಹಿಡಿದು ಒಂದು ವರ್ಷದೊಳಗೇ ಕಪ್ತಾನನಾದನು. ವಿಕ್ತರಡಾಕಡಿಬೆಲ್ಲನೋ ಯೆಂಬವನು ಸನ್ನ ೧೭೮೧ ನೇ ವರ್ಷ ಒಂದು ತ್ರೋಫಖಾನೆಯಲ್ಲಿ ಚಾಕರಿಯು ಹಿಡಿದನು. ಆದರೆ ದೊಡ್ಡ ದಂಗೆಯು* ಪೂರ್ವದಲ್ಲಿ ಅವನನ್ನು ಕೆಲಸದಿಂದ ತೆಗೆದಿದ್ದರೂ. ಆದಾಗ್ಯೂ ಆ ದಂಗೆಯಲ್ಲಿ ಯುದ್ಧವು ಆರಂಭವಾದಕೂಡಲೆ ಅವನು ಪುನಃ ದಳದೊಳಗೆ ಸೇರಿ, ಸ್ವಲ್ಪ ದಿನಗಳೊಳಗೇ ತನ್ನ ಧೈರ್ಯದಿಂದಲೂ, ಪರಾಕ್ರಮದಿಂದಲೂ ಅಡಜುಟಂಟಮೇಜರಯೆಂಬ ಪದವಿಗೆ ಯೇರಿದನು. ಖಗ್ಗಶೂರನಾದ ಮೂರತನೆಂಬವನು, ಸೆರಿಗ್ನಾರ್ಡಯೆಂಬಲ್ಲಿ ಒಬ್ಬ ಭೋಜನಶಾಲೆಯವನ ಮಗನಿದ್ದನು; ಅವನು ಚಿಕ್ಕಂದಿನಲ್ಲಿ ಕುದುರೆಗಳನ್ನು ಕಾಯುತ್ತಿದ್ದನು. ಅವನು ಮೊದಲು ಕುದುರೇಸವಾರರ ಒಂದು ದಳದಲ್ಲಿ ಸೇರಿದನು; ಆದರೆ ಅಲ್ಲಿ ಅವನು ತನ್ನ ಮೇಲಧಿಕಾರಿಗಳ ಅಪ್ಪಣೆಯಂತೆ ನಡಿಯದಕಾರಣ ಅವನನ್ನು ಕೆಲಸದಿಂದ ತೆಗೆದರು. ಆದರೆ ಪುನಃ ದಳದಲ್ಲಿ ಅವನು ಸ್ವಲ್ಪ ಕಾಲದೊಳಗೇ ಕರ್ನಲಯೆಂಬ ಪದವಿಗೆ ಯೇರಿದನು. ನೇಯೆಂಬವನು ೧೮ ವರ್ಷದವನಾದಾಗ ಒಂದು ಕುದುರೇ ಸವಾರರ ದಳದಲ್ಲಿ ಸೇರಿ, ಮುಂದೆ ಕ್ರಮ ಕ್ರಮವಾಗಿ ಹೆಚ್ಚು ಹೆಚ್ಚಿನ ಅಧಿಕಾರವನ್ನು ಸಂಪಾದಿಸುತ್ತ ನಡೆದನು. ಕ್ಲೇಬರನು ಬೇಗ ಅವನ ಗುಣಗಳನ್ನು ಅರಿತು, ಅವನಿಗೆ "ದಣಿವಿಲ್ಲದವ"ನೆಂಬ ಹೆಸರನ್ನು ಇಟ್ಟು, ೨೫ ವರ್ಷದ ವಯಸ್ಸಿನಲ್ಲಿ ಅವನಿಗೆ ಅಡಜುಟಂಟ ಜನರಲಯೆಂಬ ಅಧಿಕಾ

* ಫ್ರಾನ್ಸದೇಶದಲ್ಲಿ ಸನ್ನ ೧೭೮೯ ನೇ ವರ್ಷದಲ್ಲಿ ಮೊದಲನೇದು, ಸನ್ನ ೧೮೩೦ ನೇ ವರ್ಷ ಯೆರಡನೇದು, ೧೮೪೮ ನೇ ವರ್ಷ ಮೂರನೇದು, ಹೀಗೆ ಮೂರು ದೊಡ್ಡ ದಂಗೆಗಳಾದವು.

ರವನ್ನು ಕೊಟ್ಟನು. ಆದರೆ ಸೋಲ್ತ*ನೆಂಬವನು ದಳದಲ್ಲಿ ಸೇರಿದ ನಂತರ ಸಾರ್ಜಂಟನೆಂಬ ಚಿಕ್ಕ ಅಧಿಕಾರಕ್ಕೆ ಯೇರಬೇಕಾದರೆ ೬ ವರ್ಷಗಳು ದಾಟಿ ಹೋದವು. ಆದರೆ ಮೆಸ್ಸೇನ ಯೆಂಬವನ ಯೇರುವಿಕೆಯನ್ನು ನೋಡಲಾಗಿ ಸೋಲ್ತನಯೇರುವಿಕೆಯು ಬಹು ತೀವ್ರವಾದದ್ದೆಂದೆಣಿಸಬಹುದು. ಮೆಸ್ಸೇನನು ಸಾರ್ಜಂಟನಾಗಬೇಕಾದರೆ ೧೪ ವರ್ಷಗಳು ಬೇಕಾದವು. ಆ ಮೇಲೆ ಅವನು ಕ್ರಮವಾಗಿ ಕರ್ನಲ, ಜನರಲ, ಮಾರ್ಶಲಯೆಂಬ ಪದವಿಗಳನ್ನು ಹೊಂದುತ್ತ ನಡೆದಾಗ್ಯೂ, ಅವನು ಕಡೆಯಲ್ಲಿ ನುಡಿದದ್ದು ಯೇನಂದರೆ, ಬೇರೆ ಯೆಲ್ಲ ಅಧಿಕಾರಗಳಿಗಿಂತ ಸಾರ್ಜಂಟನೆಂಬ ಅಧಿಕಾರವನ್ನು ಸಂಪಾದಿಸುವದಕ್ಕೋಸ್ಕರ ತಾನು ಬಹು ಶ್ರಮಪಡಬೇಕಾಯಿತು. ಈ ವಿಧವಾಗಿ ಫ್ರೆಂಚದಳದಲ್ಲಿ ಯೆಲ್ಲಕ್ಕೂ ಕಡಿಮೆ ತರದ ಮನುಷ್ಯರ ಅಧಿಕಾರಗಳು ಬೆಳೆಯುವದು ಈಗ ಪಪ ವಾಡಿಕೆಯಾಗಿದೆ. ಚಾಂಗರನೀರನೆಂಬವನು ಸನ್ನು ೧೮೧೫ ನೇ ವರ್ಷದಲ್ಲಿ ಅರಸನ ಪರಿವಾರದ ದಳ*ದಲ್ಲಿ ಸ್ವಸಂತೋಷದ ಶಿಪಾಯಿಯಾಗಿ ಸೇರಿದನು. ಮಾರ್ಶಲ ಬುಗೋದ ಯೆಂಬವನು ನಾಲ್ಕು ವರ್ಷಗಳ ವರೆಗೆ ಶಿಪಾಯಿಯಾಗಿದ್ದನು; ಆ ತರುವಾಯು ಅವನಿಗೆ ಒಂದು ಅಧಿಕಾರದ ಕೆಲಸವು ಸಿಕ್ಕಿತು. ಮ್ಯಾರ್ಶಲರಾಂಡನ್ನನೆಂಬ ಈಗಿನ ಯು

---

* ಸೋಲ್ತನು ಚಿಕ್ಕಂದಿನಲ್ಲಿ ಸ್ವಲ್ಪಮಾತ್ರ ವಿದ್ಯಾಭ್ಯಾಸವ ಮಾಡಿದ್ದನು. ಫ್ರಾನ್ಸದಲ್ಲಿ ಪರದೇಶಗಳ ಸಂಬಂಧದ ಪ್ರಧಾನನಾಗುವವರೆಗೂ ಅವನು ಭೂಗೋಲದ ಹೊರ್ತು ಬೇರೆಯೇನೂ ಕಲಿತಿದ್ದಿಲ್ಲ. ಆತರುವಾಯು ಭೂಗೋಲದ ಜ್ಞಾನದಿಂದ ಅವನಿಗೆ ಬಹುಸಂತೋಷವಾಯಿತೆಂದು ಹೇಳುತ್ತಾರೆ.

* ಇದಕ್ಕೆ ಇಂಗ್ಲಿಷದಲ್ಲಿ "ಬೊಡೀಗಾರ್ಡ" ಅನ್ನುತ್ತಾರೆ. ಈ ದಳದವರ ಕೆಲಸವು ಸರ್ವಕಾಲ ಅರಸನನ್ನು ಸಂರಕ್ಷಿಸುವದೇ.

ದ್ಧ ಸಂಬಂಧದ ಪ್ರಧಾನನು ಆರಂಭದಲ್ಲಿ ಯುದ್ಧದವಾದ್ಯಗಳಲ್ಲಿ ಡೊಳ್ಳು ಬಾರಿಸುವ ಹುಡುಗನಾಗಿದ್ದನು. ಇವನು ಒಂದು ಡೊಳ್ಳಿನಮೇಲೆ ಕೈಯನ್ನು ಇಟ್ಟುಕೊಂಡು ನಿಂತಹಾಗೆ ತೆಗೆದ ಇವನಚಿತ್ರವು ವರ್ಸಲೀಸಯೆಂಬ ಚಿತ್ರಸಂಗ್ರಹಾಲಯದೊಳಗೆ ಈಗಲೂ ಉಂಟು; ಇಂಥಾಚಿತ್ರವು ಇವನ ಹೇಳಿಕೆಯಿಂದಲೇ ತೆಗೆಯಲ್ಪಟ್ಟದೆ. ಈ ವಿಧದ ಉದಾಣೆಗಳಿಂದ ಫ್ರೇಚಶಿಪಾಯಿಗಳಿಗೆ ಮುಂದಕ್ಕೆಬಿದ್ದು ಕೆಲಸ ಮಾಡುವದಕ್ಕೋಸ್ಕರ ಒಳ್ಳೇ ಉತ್ತೇಜನವು ಉಂಟಾಗಿಧೆ. ಅವರು ಒಮ್ಮಿಲ್ಲಒಂಮ್ಮೆ ತಾವು ಮಾರ್ಶಲ್ಲೆಂಬ ಪದವಿಗೆ ಯೇರಬಹುದೆಂಬ ಕೋರಿಕೆಯುಳ್ಳವರಾಗಿದ್ಧಾರೆ.

THE MONSOON (A new Poetry).

ವರ್ಷಾಕಾಲದ ವರ್ಣನೇ

(ಕಳೆದತಿಂಗಳಿನಿಂದ ಮುಂದಕ್ಕೆ ಸಾಗಿಸಿದ್ದು)

॥ಕಂದ॥ ಸಕಲಕುಶಲತಾಕುಲವೆ।
ಧರ್ಕನೇಂಚಿತ್ರಂ? ದ್ವಿಜಾತಿಮೊದಕನಪ್ಪಂ॥
ಪ್ರಕಟಂದ್ವಿಜಾತಿಮೊದಕ।
ನೆಕುಲೀನಜನೋಪಮಾನನಿಂ ಪರ್ಜನ್ಯಂ॥೨೬॥

ವಚನ॥ ಮೇಘಾಪರ್ಜನ್ಯಕಾಲಂ।
ಕಾವ್ಯದಂತೆ ನವರಸಭರಿತಪದ್ಯಾನ್ವಿತಂ॥
ವಾಲ್ಮೀಕಿಯಂತೆ ಕುಶಲವಾಭಿವೃದ್ಧಿಕರನುಂ॥
ಸುಜ್ಞಾನಿಯಂತೆ ಸಕಲ ಮಹಿತಂ॥
ಸ್ವರ್ಗದಂತೆ ಇಂದ್ರಗೋಪಾನ್ವಿತಂ।
ವೀರಸೈನ್ಯದಂತೆ ಪ್ರಬಲಶಾಲಿಸಮೃದ್ಧಿಸಮೇತಂ॥

ಸೌಂದರ್ಯವತಿಯಂತೆ ಪಯೋಧರಸಂರಂಭೋರುಶೋ
ಭಾನ್ವಿತಂ।
ಹರಿಯಂತೆ ಸರದಂತೆ ಕಮಳಾಭಿರಾಮಂ॥
ಸೀತಾರಾಮಹಿತಕರನಾಗಿಯುಂ, ಮಂಡೋದರೀಪ್ರಿಯ
ನುಂ॥
ಅತನುಪ್ರಭಂಜನನಾಗಿಯುಂ, ಶುಭಕರ ಕಾಮಹಿತನುಂ॥
ಕೃಷ್ಣಘನಸಮನ್ವಿತನಾಗಿಯುಂ, ಧನಂಜಯಪ್ರತಾಪ
ನಾಶಕನುಂ॥
ಘನಸುಕೃತಾಮೃತ ಪ್ರದನಾಗಿಯುಂ, ಪಂಕಸಂಕುಲಾಂ
ಕಿತಪದ್ಧತ್ಯನ್ವಿತಂ॥
ವಿಬುಧೇಂದ್ರವರ್ಣನೀಯನಾಗಿಯುಂ, ಮೇಘನಾದಸಂ
ಯುಕ್ತಂ॥
ಸುಜಾತಿಸುಮನೋವರ್ಧಕನಾಗಿಯುಂ, ಕುಜಾತ್ಯುಲ್ಲಾ
ಸಕನುಂ।
ಅನಲಪ್ರಭಾಸ್ತಂಭಕನಾಗಿಯುಂ, ಪುಷ್ಕರಾನ್ವಿತಂ॥
ಕ್ಷೇತ್ರಪ್ರಿಯನಾಗಿಯುಂ, ಯಾತ್ರಿಕೋಪದ್ರವಕರನುಂ॥
ಅಬ್ಜಶೋಭಾರಹಿತನಾಗಿಯುಂ, ಕಾದಂಬರಂಜನಕರನುಂ॥
ಕಾಂತಾ ರಹಿತನಾಗಿಯುಂ, ಬಾಲಾಭಿವೃದ್ಧಿಕಾರಣಂ॥
ಇಂತೆಸೆಯುತ್ತತ್ಯಂತವಿಚಿತ್ರಮಾಗಿರುವದಿಲ್ಲದೆಯುವೀ
ಕಾಲದಲ್ಲಿ.

ಕಂದ॥ ನೆರೆಬರೆತಿರುತಿರುವಾಕಿರು।
ಕೆರೆಸರೆದೊರೆಪಳ್ಳ ಕೊಳ್ಳ ಕಾಲ್ಗಳ್ ಪದ್ಮಾ॥
ಕರಗಳೊರೆದೊರೆದುರೆಪರಿದ।
ಪುರಸಭರಿತಪೂರದಿಂಭರವೆಪರಿಮಿತಿಯಿಂ॥೨೨॥

ಪರಿದಂಬರಮಂ ಪರ್ಚೆ।

ಸ್ವೈರಪೂರ್ಣಾತ್ಮಜಸುರತ್ನಗರ್ಭಿಣಿಧರಣೀ॥

ಸುರಮಣಿಯನುತ್ಪಾದಿಸಿದನೆನೆ।

ಮೆರೆದುದು ಪಸುರಿಂ ಪನಿಂದೆ ಕಲಮಕ್ಷೇತ್ರಂ॥೨೮॥

ಮ.ವೃ॥ ಕೊರೆದೆಷ್ಟಿರ್ದರುಮಂಬುವಂ ಕಡಲೊಳಾಸ್ಯಂಮು

ಷ್ಟಿರುತ್ತ್ರೋಂಪೆಯಾ–

ದರುಮಾಸ್ವಾತ್ಯದಬಿಂದುವಂ ನೆಬ ಯಸುತ್ತಿರ್ದ್ಯದಲಾ

ಯೊಂದುಬಾಯರ್।

ಪೆರದಾ ಮೌಕ್ತಿಕಶುಕ್ತಿಮಾನಿಸುತ್ರದಂತಾಳ್ದತ್ತು ತದ್ಬೀ

ಜದಿಂ–

ವರಮುಕ್ತಾಮಯಗರ್ಭಮಂ ಸ್ವಧವರಿಂದೇ ಸಾಧ್ವಿಯ

ತಾರ್ಗಳ್ವಸಂ॥೨೯॥

ಸುರಿಯಲ್ ವೃಷ್ಟಿ ಪನಾಂತಮೊಳ್ ಬರುವಮಾಂಥಗರ್ತ್ತ

ಮೆತ್ತೀಕ್ಷಿಸಲ್

ಧರೆಯುಲ್ಲಂಜಲರೂಪಮಾಯ್ತು ಪಥವೊಂದಂ ಕಾಣದೇ ಬ

ಟ್ಟೈಗೆ–

ಟ್ಟೈರದೆತ್ತಾದರುಪ್ರೋಗನೀರೊಳೆಡವೃತ್ತಂ ಬಿಳ್ದು ಮೇ

ಳ್ದುಂತ್ರೊಳ–

ಲ್ವರುಮುಂದೋರದಲೇ ಬಳಲ್ವ ಪ್ರೊಲುಸಂಸಾರಾಬ್ಧಿ

ಯೊಳ್ ತದ್ರುತರ್॥೩೦॥

ನಡುಗುತ್ತೈದಿರಪಾರೆಗೊಂಗಟಿ ಪೊರುತ್ತಿರ್ಪನೆಗಂಜಾ

ಕೆರ್ಗಯೋ–

ಳಡಿಯುಂಜಾರೆಯುಮಾಯುವಿಾರಕೆಪದೇಳ್ದೀರುತ್ತಿಕ್ಕೈ

ಯೊಯ್ಯನೇ–

ನಡಿಯುತ್ತಿರ್ಪನ ವೊಂದುಪೇರ್ಮೞೆಸಜ್ಜೆಲಂತೋಯ್ದು
ಬೆಂಡಾದನೇಂ—
ನುಡಿವೆಂಪಾಥನಸೌಖ್ಯವಂ ಸಹಹವರ್ಷಾಕಾಲ ದೋಳ್ಮಾ
ರ್ಗದಾ॥೨೮॥

ಶಾಂವಿ॥ ನೀರಂಪಾರುತೆಭೇಕಗಳ್ ಬಿಸಿಲಿನಿಂದಂ ಬೇಯುತ್ತಂ
ಸಾಯುತ್ತಂ।
ಕಾರಂಕೋರುತಿರಲ್ಕೆ ದೈದಿಸುರಿಯಲ್ಕಾ ವೃಷ್ಟಿಯುಂ ತು
ಷ್ಟಿಯುಂ।
ಸೇರುತ್ತಾರುತೆಬಂದು ಮಿಂದು ಕೆಱೆಯೊಳ್ ಪರ್ಜನ್ಯ
ನೇಂಧನ್ಯನೇಂ॥
ದೋರಂತಾರುತೆಬಂಣಿಸುತ್ತಿರುವನೇಂ? ಸಾಲಾಗಿ ಮೇ
ಲಾಗಿ ಮೇಣ್॥೨೯॥

ಮ.ವೃ॥ ಮಕರಂದಂ ಮಿಗಿಲಾಗಿ ತುಂಬೆಬನವಂಸಾತುಂಬಿವಿಂ
ಜೊಲ್ದು ಬಂ—
ದುಕರಂಝೇಂಕರಿಸುತ್ತೆ ಸುತ್ತಿರಲು ಸುತ್ತಂಬಾರಿಗರ್ಕ
ಣ್ಣೆ ನೋ—
ಡಕಮಾಪತ್ತುರೆಪ್ರೊತುಪೇವ್ರೋರ್ಚೆಗಳಂ ತಾಳ್ದೋಪ್ಪ
ತಂಸರ್ವರ್ಭೋ—
ಗಿಕದಂಬಪ್ರಸುಮೊಂದೆ ನಿಪ್ಪದದುತ್ತಾಂ ಹ್ರೊಂಗೇದಗೇ
ತೋರ್ಟಿವು॥೨೨॥

ಅಕಟಾತಾಂಪದರೂಢಿ ತಪ್ಪಿವಿರಸತ್ವಕ್ಕೈದಿ ದುರ್ಭೋಗ
ಮಾ—
ದಕುಪದ್ಯಂಗಳಸಂಗ್ರಹಂಪುದಿದುಬೇಸಾಕ್ಷ್ಯರ್ವೋ?
ಭಾವಿಸ

ಕ್ರಿ ಕೆರಂಪದ ಘನಯುಕ್ತನೋಳ್ ರಚಿಕನೋಳ್ ಪರ್ಜ
ನ್ಯನೋಳ್ ಕಾಲಕಾ—
ರಕನೆಂಬಾರುನಿವಾರಿಸಲ್ಕರಿದವರ್ ವಿಶ್ವಂಭರಾಚಕ್ರದೋ
ಳ್॥೩೪॥

ಂದರ್ಗ.ವೃ॥ ಹಿಮರ್ಗೆ ಮಾರ್ಗರವಿಬಿಂಬವಿಂದುವಿನೊಲುಂ
ಬೆಳ್ದಾವರೆ ಪೂವೊಲುಂ।
ಸ್ವಮಾರ್ಗನಿಸ್ಯೈರಹಾರದಿಂ ನಟನದಿಂ ಮೊಕ್ಕಂತೆಸುಸ್ಥಾಟ
ಕೋ—
ತ್ಕ ವೆರ್ಗೆನ್ನಿವಿರ್ಗತಹಾರಮುದ್ಯಗಮುಲಂ ಕಾರಂಪೊದ
ಳ್ದಿಪ್ಪಗುಂ।
ವಾಮರ್ಗಕ್ಕ ಪ್ರಯಿನಬ್ಧ ಕಾಲದೊಳವುಂದಪ್ಯೇತಮುಂ
ಬೇರುತಂ॥೩೫॥

ವೃ॥ ಮಳೆಯಿಂ ಪಂಚಳಶೇರ್ಚಲೌಷಧಮೆಕಾಂತಾದತ್ತ
ಸದ್ವೀಟಕಾ—
ವಳಿಯೊಳ್ ಷ್ಠಾಮೃತಪಾನಪದ್ಯಮ ಪುರಕ್ಕ್ ಷ್ಣಪ್ರದಂ
ಲೇಪನಂ॥
ಲಲನಾಸುಸ್ತನಹಾಭಿಜಂಸಮುಪಚಾರಂತದ್ದೃಢಾಲಿಂಗನಂ।
ನಿಳಯಾಂತದ್ವಿಭುಜಾಂತರಂಗಮುದುವಾಸಾರ್ಹಂಸುಭೋ
ಗೀಂದ್ರರಾ॥೩೬॥

ಸುಖಸಾಸ್ಯೇಂದುನಿರೀಕ್ಷಣಂವಿಹರಣಂ ಸ್ತ್ರೀರೋಲ್ಲಸ
ಜ್ಯೋತ್ಸ್ನೆಯೊಳ್।
ಲಭಿಸಲ್ಕ ಪ್ರಚಕೋರಗಳ್ಗೆ ಸಘನಶ್ರೀಖಂಡಭೂಜಸುಬಾ
ಹುಭುಜಂಗಾಸ್ಪದಮಾಗೆತಳ್ಕೆ ಗೊಳೆರಂಭೋರುದ್ವಯಂ
ಗಳ್ ನರ—

ಪ್ರಭರಾಯೋಗಸುಖಂಗೊಳುತ್ತೆ ಕಳೆವಕಿರ್ಗೀಲಾಲದಾ
ನೇಹವು॥೩೭॥

ವಾರ್ಧಿಕಷಟ್ಪದಿ॥ ರಾಜಹಂಸಂಘನಭಯಕ್ಕಂಜೆಪಾಲಿಸು।
ತ್ರಾಜಲಜವನಸದ್ಗತಿಯೊಳಾಶ್ರಯುವನಿತ್ತು।
ಮೂಜಗದಿಹಂಸಸದ್ಗತಿಯುರೆಂಬೀಬಿರುದವಿಬುಧರಿಂದಾಂ
ತರಿಪರು॥

ರಾಜೀವಮುಖಿಯುರಿವರಂಬಿಟ್ಟರುಂಟೆಗತಿ?।
ಯೀಜಲದಕಾಲದೊಳ್ ಶೀತಭೀತಿಯನುಳಯು।
ಯೋಜಿಸುಪ್ರಪಾಯುಮೊಂದವರತ್ರಿಕ್ಕಿ ಸುತ್ರಿದುರ್ಭೋಗಿಗ
ಳದಂಕಳೆಪರು।೩೮॥

ಕಾದೂರ್ಲವೃ॥ ಅಯ್ಯಾತ್ರೋಯುಸಮೃದ್ಧಿ ಯಾಯ್ತುಮಗೆ ಪ
ರ್ಜನ್ಯಾಬಿಡೆಂದಾತನಂ।
ಮಯ್ಯಿಕ್ಕೆಂತಲೆವಾಗಿವಂದಿಸುವಪ್ರೋತ್ರಾವೆಂಬಿಸಂಕಾಲಿ
ಗಳ್॥
ಸುಯ್ಯೆಂದೊಯ್ಯನೆಬಾಗುತಂತೆನೆಗಳಂತೂಗುತ್ತಿಲಪ್ರೊರ್
ಯ್ಯಾಲು॥
ಪಯ್ಯಂಕಗೊಳಿಸಿರ್ಪಾಮಡಿಗಳೊಳ್ ನೀರ್ತುಂಬಿ
ತುಳ್ಕುತ್ತಿರಲ್॥೩೯॥

ಧೊಂಡೋನರಸಿಂಹಮುಳಬಾಗಲ.

NOTICES.

ನೋಟೀಸುಗಳು.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಅಂಟ್ರೇಂಡ ಸ್ಕೂಲಮಾಸ್ತರ ಅಗರ ಅಶಿಷ್ಟಂಟ ಇವರಿಗೆ—

ತಿಳಿಯಪಡಿಸುವದೇನಂದರೆ—

ಅಂಟ್ರೇಂಡ, ಮಾಸ್ತರರು, ಹಾಂಗು ಅಶಿಷ್ಟಂಟರು; ಕಾಲೇಜಕ್ಕೆ ಹೋಗಲಿಕ್ಕೆ ಅಪ್ಪಣೆ ಕೊಟ್ಟನಂತರಾ, ಅಲ್ಲಿಗೆ ನೇಮಿಸಿದ ತಾರೀಖಿಗೆ ಹೋಗಿ ಹಾಜರಾಗುವದಿಲ್ಲ ಯಂದು ಮೆ॥ ಇ. ಇನಸ್ಪೆಕಟರ ಸಾಹೇಬ ಬಹಾದೂರವರ ಕಡಿಂದ ಬರದು ಬಂದಿರುತ್ತದೆ.

ಇನ್ನು ಮೇಲೆ ಮೇಲಿನ ಮಾಸ್ತರ ಆಗರ ಅಶಿಷ್ಟಂಟರಿಗೆ ತಿಳಿಯಪಡಿಸುವದೇನಂದರೆ ಟ್ರೇನಿಂಗಕಾಲೇಜಕ್ಕೆ ಯಾರನ್ನು ಕಳಿಸಲಾಗುವದೋ, ಅವರಿಗೆ ತಾರೀಖ ೧ನೇ ಜ್ಯಾನೆವಾರಿಗೆ ಕಾಲೇಜಕ್ಕೆ ಹಾಜರಾಗುವ ಬಗ್ಗೆ ಯೋಗ್ಯ ಪ್ರೋತ್ಸಾಹನೆ ಕೊಡಲ್ಪಡುವದು ಆ ಪ್ರಕಾರ ಅವರು ತಯಾರಿಯಿಟ್ಟು ನೇಮಿಸಿದ ತಾರೀಖಿಗೆ ಕಾಲೇಜಕ್ಕೆ ಹಾಜರಾಗತಕ್ಕದ್ದು. ಇದರಲ್ಲಿ ತಪ್ಪಿದರೆ ಯೋಗ್ಯ ತಜವಿಜ ಮಾಡಲಾಗುವದು. ತಿಳಿಯುವದು ತಾರೀಖು ೧೭ ಸಪಟೆಂಬರ ಸನ್ನ ೧೮೭೭ ಇಸವಿ.

ಮುಕ್ಕಾಮ ಕಲಾದಗಿ

(Signed) Hanmant Ramchandra.

ಡಿ. ಇ. ಇ. ಜಿಲ್ಲಾ ಕಲಾದಗಿ.

ಸರಕ್ಯುಲರ ನಂಬರ ೪೮೦

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರ ಜನರಿಗೆ—ಡಿ. ಎ. ಇ. ಜಿಲ್ಲಾ ಕಲಾದಗಿ ಇವರ ಕಡಿಂದ ತಿಳಿಯಪಡಿಸುವದೇನಂದರೆ ಗಂಡ ಹುಡುಗರ ಸಾಲಿಯಲ್ಲಿ ೧೦೦ ಹುಡಗರು ಫೀ ಕೊಡತಕ್ಕವರು ಯಿದ್ದರೆ ೨೦ ಜನಕಾ ಮಾಫ

ಹುಡಗರನ್ನು ತೆಗೋಬೇಕೆಂಬ ವೆಳಗಡೆ ಪುಷ್ಕಳಾವರ್ತಿ ಹುಕೂಮುಗಳು ಕೊಟ್ಟಿದ್ದು ಅದರ ಮೇಲೆ ಹೋನಿಕೆ ಮಾಸ್ತರ ಜನರು ಲಕ್ಷಮಾಡದೆ ಮನಸಿಗೆ ಬಂದಂತೆ ತೆಗೆದು ಕೊಳ್ಳುವದಕ್ಕೆ ಹತ್ತ್ಯಾರೆ; ಆದ ಕಾರಣಾ ಇಂನು ಮುಂದೂ ವರ್ತಿ ಅಂಥವರಿಗೆ ಹುಕುಮು ಕೊಡಹೋಗದರಲ್ಲಿ ಬರಾತ್ರದಲ್ಲಿ ಸದರಹು ಮಾನದ ಮೇರಿಂದ ಶಿಹುಡಗರು ಫೀ ಕೊಡದವರು ಖತ್ರೀಆಗಡ ಏನಃ ಒಂದು ಹುಡಗನಿಗೆ ಮಾಫಯಲ್ಲಿ ತೆಗೆದುಕೋಬಾರದು; ಇದಕ್ಕೆ ಯಾರಾದರು ತಪ್ಪಿದರೆ ಅವರಕಡಿಂದ ಸದರ ಫೀ ಹಣಾ ವಸೂಲಮಾಡಿ ಶಿವಾಯಿ ದಂಡ ಮಾಡಲಾದೀತು ತಿಳಿಯೋದು ತಾರೀಖು ೧೯ ಮಾಹೆ ಸನ್ನ ೧೮೭೨ ಇಸವಿ,

(Signed) Hanmant Ramchandra.

ಡಿ. ಎ. ಇ. ಜಿಲ್ಲಾ ಕಲಾದಗಿ

ಸನ್ ೧೮೭೨ ಇಸವೀ ಸಪಟೆಂಬರ ತಿಂಗಳದ ಕಾಲೇಜದ ಪ್ರವೇಶಪರೀಕ್ಷೆಯಲ್ಲಿ ಪಾಸಾದ ಉಮೇದವಾರರ ನಂಬರವಾರ ಹೆಸರುಗಳು.

ನಂಬರ.	ಹೆಸರು.	ಇರ: ವಊರು ತಾಲೂಕು.	ಪಡೆದ ಗುಣಗಳು.
೧	ಮಲ್ಲಿಕಾರ್ಜುನ ಪಟವಾಜಿ.	ಹಾವೇರಿ, ಕರ್ಜಗಿ.	೩೨೧
೨	ಹೇಮಾಜೀ ಸ್ವಾಮಿರಾವ ಹಿರೇಬಿದರಿ.	ಧಾರವಾಡ.	೩೧೭½

೩	ರಾಮಚಂದ್ರ ನರಸೋ ಸಾಲಿ.	ಕರ್ಜಗಿ.	೩೧೦ ೧/೨
೪	ಕೃಷ್ಣಾಜೀ ನಾಗೋನರಸ ರಾಜೀ.	ಬೆಳಗಾಂವಿ.	೩೦೫
೫	ಪಾಂಡುರಂಗ ಬಾಳಕೃಷ್ಣ ಗೆಜ್ಜಿ.	ಬೆಳಗಾಂವಿ.	೩೦೦ ೧/೨
೬	ಧೋಂಡೋ ಗಂಗಾಧರ ಲಿಮಯೆ.	ನೀರಲಗಿ, ಗದಗ.	೨೯೬ ೧/೨
೭	ಭೀಮಾಜೀ ನಾರಾಯಣ ಯಾರದಿ.	ಬೆಳಗಾಂವಿ.	೨೯೧
೮	ರಾಘೋ ಅಪ್ಪಾಭಟ್ಟ ಬೋಂತ.	ಗೋಕಾವಿ.	೨೮೫
೯	ಚನ್ನಬಸಪ್ಪ ತಮ್ಮಣ್ಣಪ್ಪ ಅವಟಗೇರ.	ಐನಾಪುರ ಅಥಣಿ.	೨೮೫
೧೦	ವ್ಯಂಕಾಜೀ ಲಕ್ಷ್ಮಣ ಅಸಗಿ.	ಜಮಖಂಡಿ.	೨೮೪ ೧/೨
೧೧	ದಿವಾಕರ ರಾಮಚಂದ್ರ ಜೋಶಿ.	ವಾಜೇ.	೨೮೩
೧೨	ಗುರಬಸಪ್ಪ ಚೆನಪ್ಪಾ ವಾಲಿ.	ಸಂಪಗಾಂವಿ.	೨೮೩
೧೩	ರಾಮಚಂದ್ರ ಭಾಸ್ಕರ ಚಕ್ಕೇರಿ.	ಅಥಣಿ.	೨೮೦
೧೪	ಗೋಪಾಳ ರಾಮಚಂದ್ರ ಕುಲಕರ್ಣಿ.	ಕುರಂದವಾಡ	೨೭೮ ೧/೨

೧೫	ಜೀವಾಜೀ ಧೋಂಡೋ ಕುಲಕರ್ಣಿ.	ಬೆಳಗಾಂವಿ.	೨೭೮ ೧/೨
೧೬	ಶಿದ್ದಪ್ಪಾ ಸಂಗಪ್ಪಾ ಸಾಣೇಕೊಪ್ಪ.	ಇಟಗಿ ಖಾನಾಪುರ	೨೭೬ ೩/೪
೧೭	ರಾಮಚಂದ್ರ ಭೀಮಾಜೀ ಕಂಚಿ.	ಕಿತ್ತೂರ ಸಂಪಗಾವಿ.	೨೭೩ ೧/೨
೧೮	ಅಪ್ಪಾಜೀ ರಾಮಚಂದ್ರ ಜೋಶಿ.	ಕೊಣ್ಣೂರ ಗೋಕಾಕ.	೨೭೩
೧೯	ಗುರುನಾಥ ವೆಂಕಾಜೀ ಹೂಲಿ.	ಹೂಲಿ ಪರಸಗಡ.	೨೭೨
೨೦	ಭವನಾಸಿಂಗ ಕೃಷ್ಣಶಿಂಗ ರಜಪೂತ.	ಕಿತ್ತೂರ.	೨೭೦
೨೧	ಗಡಗಯ್ಯಾ ಗುರವಯ್ಯಾ ಪತ್ರೀಮಠ.	ಹೊಂಗಲ ಸಂಪಗಂವ.	೨೬೯
೨೨	ಹಣುಮಂತ ಧೋಂಡೋ ಪಾಟೀಲ.	ಪಾರ್ಶವಾಡ ಖಾನಾಪುರ.	೨೬೮ ೧/೨
೨೩	ಮಧ್ವ ಕೃಷ್ಣ ಬಡಸ.	ಸಂಪಗಾಂವ.	೨೬೬ ೧/೨
೨೪	ಅಡಿವೆಪ್ಪಾ ಸಂಗನಬಸಪ್ಪಾ ಧಾರವಾಡ.	ಪಾರಶಿವಾಡ.	೨೬೪
೨೫	ದಾಸೋ ಗೋವಿಂದ ಲಕ್ಷ್ಮೇಶ್ವರ.	ಧಾರವಾಡ.	೨೬೩ ೧/೨
೨೬	ನರಸಪ್ಪಾ ನಂದೆಪ್ಪಾ ಸೋಮಣವರ.	ಧಾರವಾಡ.	೨೬೩ ೧/೨
೨೭	ವಾಸುದೇವ ಭೀಮರಾವ		

	ಪರ್ವತಿ.	ಕಲಾದಗಿ.	೨೬೨ ೧/೪
೨೮	ಚಿಕ್ಕೋ ವಿರುಪಾಕ್ಷ ಕುಲಕರ್ಣಿ.	ಬೈಲಹೊಂಗಲ.	೩೬೨
೨೯	ನಾರಾಯಣ ಕೃಷ್ಣನಾಯಿಕ.	ಬೆಳಗಾಂವ.	೨೬೦ ೧/೨
೩೦	ಕೇಶವ ನರಶಿಂಹ ಧಾರವಾಡ.	ಧಾರವಾಡ.	೨೫೫ ೧/೨
೩೧	ರಾಮಚಂದ್ರ ದೇವರಾಯಾಚಾರ್ಯ.	ಬಾಗೇವಾಡಿ ಬೆಳಗಾಂವ.	೨೫೪ ೧/೨
೩೨	ರಾಮಚಂದ್ರ ಶಾಮರಾವ ರಾಯಬಾಗ.	ಕಲಾದಗಿ.	೨೫೪
೩೩	ಹರಿ ರಘುನಾಥ ಹವಾಲದಾರ.	ತುರಮುರಿ ಸಂಪಗಾವ.	೨೫೪
೩೪	ಪೀರಪ್ಪಾ ಮುರಗೆಪ್ಪಾ ಪುರಕಡಲಿ.	ಸವದತ್ತಿ.	೨೫೩
೩೫	ರಾಮಚಂದ್ರ ಗುಂಡೋ ಬಂಬಳವಾಡ.	ಬೆಳಗಾಂವಿ.	೨೫೩
೩೬	ಶಿವಲಿಂಗಪ್ಪಾ ಬೂದಪ್ಪಾ ಸವದತ್ತಿ.	ಕಿತ್ತೂರ.	೨೪೭ ೧/೨
೩೭	ಸ್ವಾಮಿರಾವ ಶ್ರೀನಿವಾಸ ಪರ್ವತಿ.	ಪರ್ವತಿ. ಕಲಾದಗಿ.	೨೪೫
೩೮	ಭಾಯಪ್ಪಾ ಶಂಕರಪ್ಪಾ ಅರಳಿಕಟ್ಟಿ.	ಬೆಳಗಾಂವಿ.	೨೪೪
೩೯	ಬಸವಂತ ಗೌಡಪ್ಪಾ ಹು	ಹುಣಶೀಕಟ್ಟಿ	

	ಗಾಣೀಕಟ್ಟಿ.	ಸಂಪಗಾಂವ.	೨೪೩
೪೦	ಚನಬಸಪ್ಪಾ ಬಸಪ್ಪಾ ಧಾ		
	ರವಾಡ.	ಧಾರವಾಡ.	೨೪೨
೪೧	ಕೃಷ್ಣಾಜೀ ಗೋವಿಂದ		
	ಬೂದನೂರ.	ಮುರಗೋಡ	೨೪೦½
೪೨	ಸಂಗಪ್ಪಾ ನಿಂಗಪ್ಪಾ ಕ		
	ಡಕೋಳ.	ಬೆಳಗಾಂವಿ.	೨೬೦
೪೩	ದುಂಡಯ್ಯಾ ಗಂಗಯ್ಯಾ	ನೆಗಿನ್ಹಾಳ ಸಂ	೨೩೯
	ಕುಲಕರ್ಣಿ.	ಪಗಾಂವಿ.	
೪೪	ಗಿರಿಮಲ್ಲಪ್ಪಾ ಗುರಪ್ಪಾ		
	ಗೊಟೂರ.	ಸಂಕೇಶ್ವರ.	೨೩೫
೪೫	ಮಾರ್ತಾಂಡ ಕಲ್ಲೋಳೀ		
	ನಾವಲಿ.	ಧಾರವಾಡ.	೨೩೪
೪೬	ರಾಘವೇಂದ್ರ ಶಿಪ್ಪೋದೀ ಕು		
	ಲಕರ್ಣಿ.	ಬೆಳಗಾಂವಿ.	೨೩೩½
೪೭	ನರಸಿಂಹ ಭಾವಾಚಾರ್ಯ		
	ಜೋಶಿ.	ಬೆಳಗಾಂವಿ.	೨೩೦
೪೮	ಬಸಪ್ಪಾ ಬಾಳಪ್ಪಾ ಚೀಲ		
	ದ.	ಬೈಲಹೊಂಗಲ	೨೩೭
೪೯	ಗೋವಿಂದಗುರುಮೂರ್ತಿ		
	ಮಂಗಸೂಳಿ.	ಅಥಣಿ.	೨೨೮
೫೦	ಹಣುಮಂತ ಶ್ರೀಪಾದ		
	ಜೋಶಿ.	ಗೋಕಾಕ.	೨೭೮
೫೧	ಶಿವಬಸಯ್ಯಾ ರಾಚಯ್ಯಾ	ಮೊರಬ, ಸವ	

	ಶಾಲಿ.	ಉಗಾಂವ.	೨೨೮
೫೨	ರುದ್ರ ಬಿಂಗಪ್ಪಾ ರೇವಡಿ.	ಬೀಡಿ.	೨೨೪ ೧/೨
೫೩	ರಾಯಪ್ಪಾ ಸೋಮಪ್ಪಾ ಬಂಟನೂರ.	ಬಂಟನೂರ.	೨೨೩
೫೪	ವಿಠಲ ಗೋವಿಂದ ವಕಕಿ.	ಚಿಂಚಲಿ ಕೊಲ್ಹಾಪುರ.	೨೨೨ ೧/೪
೫೫	ಮಲ್ಲಪ್ಪಾ ಬಸಪ್ಪಾ ಮಳವಂಕಿ.	ನೇಗಿನಾಳ.	೨೨೨ ೧/೪
೫೬	ಗದಗಪ್ಪಾ ರಾಮನಗೌಡ ಗೌಡರ.	ನೇಗಿನಹಾಳ.	೨೧೯ ೧/೨
೫೭	ರಾಮಚಂದ್ರ ಬಾಳಕೃಷ್ಣ ಬೋಕ.	ಮುರಗೋಡ.	೨೧೯
೫೮	ಕುಕ್ಕೋ ಗೋವಿಂದ ಕುಲಕರ್ಣಿ.	ಮಾರ್ಕವಾಡ.	೨೧೬ ೧/೨
೫೯	ಅಪ್ಪಾಜೀ ನಾರಾಯಣ ಕುಲಕರ್ಣಿ.	ಬೆಳಗಾಂವ.	೨೧೨
೬೦	ಬಾಳಪ್ಪಾ ಹೊನ್ನಪ್ಪಾ ಮುತಗಿ.	ಕಡಕೋಳಧಾರವಾಡ.	೨೦೮ ೧/೨
೬೧	ಶಿವಲಿಂಗಪ್ಪಾ ರಾಯಪ್ಪಾ ಬೋರಗಾಂವಿ.	ಕೊಲ್ಹಾಪುರ.	೨೦೭ ೧/೨
೬೨	ಗುರುನಾಥ ದತ್ತೋ ವಾಳವೆಕರ.	ಹುಕ್ಕೇರಿ.	೨೦೭
೬೩	ಅಪ್ಪಣ್ಣಾ ಎಲ್ಲಪ್ಪಾ ಹಳ		

೬೪	ಬೆಳಗಾಂವಿ. ಪಾಂಡುರಂಗ ರಾಮಚಂದ್ರ ನರೇಗಲ್ಲ.	ಸಂಪಗಾಂವ. ಬೆಳಗಾಂವಿ.	೨೦೨¼ ೫೯೬½

ತಾ. ೧೮ ಸಪಟೆಂಬರ ೧೮೭೭ ಇಸವಿ.

Bhaskar B. Limaye. (Signed) B. K. HOOLGOAL.

ಡಿ. ಎ. ಇ. ಬೆಳಗಾವಿ. ಪ್ರಿನಶಿಪಾಲ್. ಟ್ರೇ. ಕಾ. ಬೆಳಗಾವಿ.

ಯಾವತ್ತು ಜನರಿಗೆ ತಿಳಿಯಪಡಿಸುವದೇನೆಂದರೆ—ಸನ್ ೧೮೭೬ ನೇ ಇಸವಿಯ ಅಕ್ಟೋಬರ ತಿಂಗಳ ಶಾಲಾಪತ್ರಿಕೆಯಲ್ಲಿ ಮೋ॥ ಕ್ಯಾಂಡಿ ಸಾ॥ ನೋಟೀಸು ಕೊಟ್ಟ ಪ್ರಕಾರಾ ವರ್ಥ ಸಾಹೇಬರ ಇನಾಮುದ ಪರೀಕ್ಷೆಯು ಬರುವ ನವೆಂಬರ ತಿಂಗಳ ೬ ನೇ ತಾರೀಖಿಗೆ ಬುಧವಾರದಿವಸ ಬೆಳಗಾಂವಿ ಇಂಗ್ರಜಿ ಸಾಲಿಯಲ್ಲಿ ಆಗುವದು.

ಈ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳು ನಡಿಯುವ ತಿಂಗಳ ೨೫ನೇ ತಾರೀಖಿನ ವಳಗಾಗಿ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಇವರಕಡಿಗೆ ಅರ್ಜಿ ಮಾಡತಕ್ಕದ್ದು.

(Signed) J. F. FLEET.

ಆಕ್ಟಿಂಗ ಎ. ಇ. ದಕ್ಷಿಣ ಭಾಗ.

Correspondence.

ಪತ್ರ ವ್ಯವಹಾರವು.

ರಾಜಮಾನ್ಯ ರಾಜಶ್ರೀ ಕನ್ನಡ ಶಾಲಾಪತ್ರ ಕರ್ತೃ ಮುಕ್ಕಾಮ ಬೆಳಗಾವ ಇವರಿಗೆ—

ವಿನಂತಿ—ಈ ಕೆಳಗೆ ಬರದ ನಾಲ್ಕು ಪಂಕ್ತಿಗೆ ಸ್ಥಳಕೊಟ್ಟು,

ನಮ್ಮ ಪ್ರಿಯರಾದ, ಓದುವ ಜನರ ಮನಸ್ಸು, ಆಹ್ಲಾದಪಡಿಸಬೇಕಾಗಿ, ಬೇಡಿಕೊಳ್ಳುತ್ತೇನೆ—

ಶ್ರೀಮಂತರ ಅಂದರೆ (ಪೇಶ್ವೆಯವರ) ಕಾಲಕ್ಕೆ—ಜಾಯಪ್ಪಾ ದೇಸಾಯಿ ಎಂಬವನು ಬಹಳ ಧೂರ್ತವಿದ್ವಾಂಸನಿದ್ದನಂತೆ, ಆತನ ವಿಷಯ ಮನೋಹರವಾದ, ಅನೇಕ ಕಥೆಗಳುಂಟು—ಅವುಗಳಲ್ಲಿ ಒಂದನ್ನು ಈ ಕೆಳಗೆ ಬರೆಯುತ್ತೇನೆ.

ಒಂದು ಕಾಲದಲ್ಲಿ ಒಬ್ಬ ಅರಸನು (ಪೇಶ್ವೆಯವರಲ್ಲಿ ಒಬ್ಬನು) ದಳದೊಡನೆ ಬೇಟೆಯಾಡುವದಕ್ಕೆ ಹೋದಾಗ, ಸಂಗಡ ಜಾಯಪ್ಪಾ ದೇಸಾಯಿಯೂ, ಹೋಗಿದ್ದನು—ಬೇಟೆಯಾಡುತ್ತಾ ಹೋಗುತ್ತಾ ಒಂದು ದೊಡ್ಡ ಅಡವಿಯಲ್ಲಿ ದಣಿದು, ಒಂದು ಕೆರೆಯನ್ನು ಕಂಡು ದಳವನ್ನು, ಇಳಿಸಿಕೊಂಡು, ವಿಶ್ರಾಂತಿಯನ್ನು, ತೆಗೆದುಕೊಳ್ಳುತ್ತಾ ಇರುವಾಗ, ಬಿಸಲಿನಿಂದ ಕಾದಂಥ ಒಂದು ಕಲ್ಲಿನ ಮೇಲೆ ಧನಿಯು ನಿಂತುಕೊಂಡು ಅಲ್ಲಿ ಇದ್ದ ಯಾವತ್ತು ಜನರ ಮುಂದೆ—"ಕಲ್ಲು ಕಾದದೆ" ಯೆಂದನು; ಅವರೆಲ್ಲರು, ಸ್ವಾಮಿ ಬಹಳ ಬಿಸಲು, ಆ ಕಾರಣ ಕಲ್ಲು ಕಾದದೆ; ಎಂದು ಉತ್ತರಕೊಟ್ಟರು. ಆದರೆ ಆ ಉತ್ತರವು ಧನಿಗೆ ಸಮರ್ಪಕವಾಗದ ಮೂಲಕ ಜಾಯಪ್ಪಗೆ—ಜಾಯಪ್ಪಾ ಕಲ್ಲು ಕಾದದೆ ಅನ್ನಲು—ಸ್ವಾಮೀ ಈ ನಾಡೇ ತಮ್ಮ (ಧನಿಯರ) ಪಾದವನ್ನು ಕಾದುಯಿರುವಾಗ್ಗೆ ಈಯಃ ಕಶ್ಚಿತ ಕಲ್ಲು ಕಾಯುವದೇನಾಶ್ಚರ್ಯ ಎಂದು ಉತ್ತರ ಕೊಡಲು, ಧನಿಯು ಬಹಳ ಹಿಗ್ಗಿ—ಸನ್ಮಾನ ಮಾಡಿದನು.

ಅಹಾ! ಇದರಲ್ಲಿ, ಆ ಜಾಯಪ್ಪನ ವಾಕ್ ಚಾಪಲ್ಯವೆಷ್ಟು ನೋಡಿರಿ.

ಇಂಥವೇ ಇನ್ನೂ, ಅನೇಕ ಚಮತ್ಕಾರವಾದ ಮಾತುಗಳುಂಟು—ಅವುಗಳನ್ನು ಸಮಯಾನುಸಾರವಾಗಿ ಬರೆಯುತ್ತೇನೆ. ಬೇಸರ ಮಾಡದೇ ಸ್ಥಳ ದಯಮಾಡೀರಾಗಿ ನಂಬುತ್ತೇನೆ—ವಿನಂತಿ.

ಕಾಳಂಗಿ
೨೭-೫-೨೨
ಇಸವಿ. } ಶ್ರೀನಿವಾಸ ರಾಮಚಂದ್ರ ಬಂಕಾಪುರಕರ ಪಂತೋಜಿ ಕಾಳಂಗಿ.

ಪತ್ರಕರ್ತೆ ರಾಯರೇ—ಒಂದು ಸಮಯದಲ್ಲಿ—ಬೀರಬಲ್ಲನು, ಗಾಯನಮಾಡುತ್ತಾ, ಅಡಿಗೆ ಮಾಡುವದು ಕಂಡು, ಪಾತಶಹನು "ಬಮ್ಮನರಾಂದತಗಾಯ" ಅಂದನು, ಇದರ ಸ್ವಾಭಾವಿಕ ಅರ್ಥ, ಬ್ರಾಹ್ಮಣ ಗಾಯನ ಮಾಡುತ್ತಾ ಅಡುತ್ತಾನೆಯಂತ, ಶ್ಲೇಷಾರ್ಥ, ಬ್ರಾಹ್ಮಣ ಆಕಳನ್ನು ಬೆಯಿಸುತ್ತಾನೆ!!! ಎಂತ ಆಗುವದು; ಅದು ಕೇಳಿ— ಬೀರಬಲ್ಲನು,— "ಅಕಬರಪಾಛ್ಛಾ, ಶೂಕರಖಾಯ" ಅಂದನು— ಇದು ಕೇಳಿದಕೂಡಲೆ ಪಾತಶಹನು, ಸಿಟ್ಟಿಗೆದ್ದು ಹೀಗ್ಯಾಕೆ ಹೇಳಿದಿ? ನಾನು ಹೇಳಿದ್ದೇನು? ಅದಕ್ಕೆ ಇದೇಯೋ? ತಕ್ಕ ಉತ್ತರ ಯನ್ನಲು. ಬೀರಬಲ್ಲನು-ಧೊರೆಗಳೇ—ನಾನೇನು ಗ್ವಾರ ಹೇಳಲಿಲ್ಲ —"ಅಕಬರಪಾಛ್ಛಾ, ಶೂಕ, ರಖಾಯ, ಅಂದರೆ ಗಿಳಿಯನ್ನು ಸಾಕಿದ್ದಾನೆ,—ಯಂತ ಹೇಳಿಷ್ಟೇ ಹೊರತು "ಶೂಕರಖಾಯ" ಅಂದರೆ ಹಂದಿಯನ್ನು—ತಿಂದ" ಯೆಂದು ಹೇಳಲಿಲ್ಲ— ಗಿಳೀ ಸಾಕಿದ್ದಾನೆ— ಇಷ್ಟೇಸರಿ, ಯೇದು ಸಮ್ಮತಿ ಪಡಿಸಿದನು—(ನೋಡ್ರಿ ಇವನ ಚಾತುರ್ಯ ಎಷ್ಟು!

(ಬಂಕಾಪುರದವ)

ಶಾಲಾಪತ್ರಕವು.

———000———

ಪುಸ್ತಕ ೮] [ಸಂಚಿಕೆ V.

ಬೆಳಗಾವಿ, ಮಾಹೆ ನವೆಂಬರ. ೧V೭೨.

SELF HELP.

ತನಗೆ ತಾನೇ ನೆರವಾಗುವದು.

ದೃಢನಿಶ್ಚಯದಿಂದ ಯತ್ನನಡಿಸುವದರ ಬಲದಿಂದಲೂ, ಉದ್ಯೋಗದ ಬಲದಿಂದಲೂ ಅತಿ ನೀಚಾವಸ್ಥೆಯಿಂದ ತಾವಿರುವ ಜನ ಸಮುದಾಯದಲ್ಲಿ ಅಧಿಕಾರವೂ, ಉಪಯೋಗವೂ ಉಳ್ಳ ಉತ್ತಮಪದವಿಗಳಿಗೆ ಯೇರಿದಂಥವರ ಉದಾಹರಣೆಗಳು ಇಂಗ್ಲಂಡದಲ್ಲಿಯೂ, ಅನ್ಯ ದೇಶಗಳಲ್ಲಿಯೂ ಮೇಲೆ ಮೇಲೆ ಅಸಂಖ್ಯವಾಗಿ ಕಂಡು ಬರುವ ಕಾರಣ, ಇಂಥಾ ಉದಾಹರಣೆಗಳು ಅಪರೂಪವೆಂದು ಜನರು ಯೋಚಿಸುವದು ಬಿಟ್ಟು ಬಹು ದಿವಸವಾಯಿತು. ಆದರೂ ಕೆಲವು ವಿಶೇಷ ಲಕ್ಷ್ಯಕೊಡತಕ್ಕಂಥ ಉದಾಹರಣೆಗಳನ್ನು ನೋಡಿ ನಮ್ಮ ಯತ್ನವು ಕೈಗೂಡಬೇಕಾದರೆ ಆರಂಭದಲ್ಲಿ ತೊಂದರೆಗಳೂ, ಪ್ರತಿ ಕೂಲ ಸಂಗತಿಗಳೂ ಅವಶ್ಯವಾಗಿ ಬರತಕ್ಕವುಳೇ ಯೆಂದು ಬಹುಶಃ ಹೇಳಬಹುದು. ಈ ವಿಧವಾಗಿ ಸ್ವಂತ ಪ್ರಯತ್ನದಿಂದ ಘನತಗೆ ಯೇರಿದಂಥವರಾದ ಬಹು ಜನರು ಇಂಗ್ಲಂಡದ ಹೌಸ ಅಫ ಕಾಮನ್ಸ ಯೆಂಬ ಸಭೆಯಲ್ಲಿ ಸರ್ವದಾ ಇದ್ದೇ ಇರುತ್ತಾರೆ. ಇವರು ಉದ್ಯೋಗಿಗಳಾದ ಇಂಗ್ಲಿಷಜನರಿಗೆ ತಕ್ಕ ಪ್ರತಿನಿಧಿಗಳೆಂಬದಕ್ಕೆ ಸಂದೇ

ರುವಿ*ಲ್ಲ. ಇಂಥಾ ಜನರು ಇಂಗ್ಲಂಡದ ಕಾಯ್ದೆಗಳನ್ನು ಮಾಡುವ ಸಭೆಯಲ್ಲಿ ಬರ್ನ್ಸನ ಪಟ್ಟಿದ್ಧಾರೆಂಬ ಸಂಗತಿಯು ಆ ಸಭೆಯ ದೊಡ್ಡಸ್ತಿಕೆಯ ಕುರುಹಾಗಿಧೆ. ಸ್ವಲ್ಪ ದಿವಸಗಳ ಹಿಂದೆ ಸಾಲ್ಫಡರ್ ಪಟ್ಟಣದ ಪ್ರತಿ ನಿಧಿಯಾದ ಜೋಜೆಫಬ್ರದರ್ತನ ಯೆಂಬವನು ಪ್ರಸಂಗೋಪಾತ್ತವಾಗಿ ಸಂಭಾಷಣೆಯ ಕ್ರಮದಲ್ಲಿ, ತಾನು ಚಿಕ್ಕಂದಿನಲ್ಲಿ ಒಂದು ಹತ್ತಿಯ ಕಾರಖಾನೆಯೊಳಗೆ ಕೂಲಿಯ ಕೆಲಸಮಾಡುವಾಗ ತನಗೆ ಆಪತ್ತುಗಳೂ, ದಣಿವೂ ಹ್ಯಾಗೆ ಉಂಟಾದವೆಂಬದನ್ನೂ, ತನ್ನ ಕೈಲಾದರೆ ಮುಂದೆ ಯೆಂದಾದರೂ ಒಮ್ಮೆ ತನ್ನಂಥ ಕೂಲಿಯ ಹುಡುಗರ ಸ್ಥಿತಿಯನ್ನು ತಿದ್ದುವದಕ್ಕೋಸ್ಕರವಾಗಿ ತಾನು ಮಾಡಿಕೊಂಡ ದೃಢ ನಿಶ್ಚಯವನ್ನು ನಿಜವಾದ ಆವೇಶದಿಂದ ವರ್ಣಿಸಲಾಗಿ, ಸರಜೇಮ್ಸ ಗ್ರಹಾಮನೆಂಬ ದೊಡ್ಡ ಮನುಷ್ಯನು ಅವನನಂತರ ಚಟ್ಟನೇ ಯೆದ್ದು ನಿಂತು, ಆ ಸಭೆಯವರ ಆನಂದದ ಧ್ವನಿಯಲ್ಲಿ ಕೂಗಿ ಹೇಳಿದ್ದೇನಂದರೆ,—"ಬ್ರದರ್ತನ್ನನು ಆರಂಭದಲ್ಲಿ ಇಷ್ಟು ಬಡವನಿದ್ದನೆಂಬದು ನನಗೆ ಇದುವರೆಗೂ ತಿಳಿದಿದ್ದಿಲ್ಲ; ಆದರೆ ಇಂಥಾ ನಿಕೃಷ್ಟಾವಸ್ಥೆಯಿಂದ ಉದಯ ಹೊಂದಿದ ಮನುಷ್ಯನು ಈ ದೇಶದಲ್ಲಿ ವಂಶಪರಂಪರೆಯಾಗಿ ದೊಡ್ಡವರೆಂದೆನಿಸಿಕೊಳ್ಳುವವರಿಗೆ ಸರಿಯಾಗಿ ಈ ಸಭೆಯಲ್ಲಿ ಕೂಡ್ರುವದಕ್ಕೆ ಸಮರ್ಥನಾಗಿದ್ಧಾನೆಂದು ನೋಡಿ, ನನಗೆ ಈಗ ಈ ಸಭೆಯನ್ನು ಕುರಿತು ಉಂಟಾದಷ್ಟು ಅಭಿಮಾನವು ಈ ಪೂರ್ವದಲ್ಲಿ ಯೆಂದೂ ಉಂಟಾಗಿದ್ದಿ

*ಬೇರೆ ಬೇರೆ ಸ್ಥಳಗಳಿಂದ ಜನರು ತಮ್ಮ ತಮ್ಮ ಪ್ರತಿನಿಧಿಗಳನ್ನು ತಾವೇ ನೇಮಿಸಿ ಸರಕಾರಕ್ಕೆ ಕಳುಹಿಸುತ್ತಾರೆ. ಆ ಪ್ರತಿನಿಧಿಗಳೇ ಈ ಸಭೆಯ ಸಭಾಸದರು.

ಲ್ಲ.”

ಓಲ್ಡಂ ಪಟ್ಟಣದ ಪ್ರತಿನಿಧಿಯಾದ ಫಾಕ್ಸನೆಂಬವನು
ಪಾತ್ರು ಮಾತಿಗೆ ತನ್ನ ಪೂರ್ವದ ವೃತ್ತಾಂತವನ್ನು ಹೇಳು
ವಾಗ ಆರಂಭದಲ್ಲಿ “ನಾನು ಚಿಕ್ಕಂದಿನಲ್ಲಿ ಸಾರ್ವಿಚ ಪಟ್ಟ.
ಣದಲ್ಲಿ ನೇಕಾರರ ಹುಡುಗನಾಗಿ ಕೆಲಸ ಮಾಡುತ್ತಿರುವಾ
ಗ” ಯೆಂಬ ಶಬ್ದಗಳನ್ನು ನುಡಿಯುತ್ತಿದ್ದನು. ಈ ವಿಧವಾ
ಗಿ ಬೇರೆ ಯೆಷ್ಟೋ ಜನರು ನಿಕೃಷ್ಟಾವಸ್ಥೆಯಿಂದ ಮುಂ
ದಕ್ಕೆ ಬಂದ ಪಾರ್ಲಿಮೆಂಟು ಸಭಾಸದರು ಈಗ ಸದ್ಯಃ ಇ
ದ್ಧಾರೆ. ಹಡಗದ ಒಡಿಯನೆಂದು ಹೆಸರಾದ ಲಿಂಡಸೇಯೆಂ
ಬವನು ಸಂಡರ ಲಂಡ ಪ್ರತಿನಿಧಿಯು ಕೆಲಸ ಬಿಟ್ಟು ಸ್ವಲ್ಪ
ದಿವಸ ಮಾತ್ರವಾಯಿತು. ಒಂದು ದಿವಸವೇ ಮಥಗ್ರಾಮದ
ವರು ತಮ್ಮ ಪ್ರತಿನಿಧಿಯನ್ನು ನೇಮಿಸುವದಕ್ಕೋಸ್ಕರವಾ
ಗಿ ಕೂಡಿದಾಗ ಲಿಂಡಸೆಯ ಪ್ರತಿಪಕ್ಷಿಗಳು ಅವನನ್ನು ನಿಂ
ದಿಸಲಾಗಿ ಅವರಿಗೆ ಪ್ರತ್ಯುತ್ತರವಾಗಿ ಅವನು ತನ್ನ ಪೂರ್ವ
ದ ಕಥೆಯನ್ನು ಹೇಳಿದ್ದು ಹ್ಯಾಗೆಂದರೆ,-“ನಾನು ಹದಿನಾ
ಲ್ಕು ವರ್ಷದವನಾದಾಗ ನಂನ ತಂದೆ ತಾಯಿಗಳು ತೀರಿದ
ರು; ಯೇನಾದರೂ ಹೊಟ್ಟೆಯ ಉದ್ಯೋಗವನ್ನು ನೋಡಿ
ಕೊಳ್ಳುವದರಸಲುವಾಗಿ ಲಿವರ್ಪೂಲಕ್ಕೆ ಹೋಗಬೇಕೆಂಬ
ಹೇತುವಿನಿಂದ ನಾನು ಗ್ಲಾಸಗೋ ಪಟ್ಟಣದಿಂದ ಹೊರಟಾಗ
ನೇಮಕವಾದ ಹಡಗದ ಬಾಡಿಗೆಯನ್ನು ಕೊಡುವದಕ್ಕೆ ನಂ
ನ ಹಣವಿಲ್ಲದ ಕಾರಣ, ಆ ಹಡಗದ ಮುಖ್ಯಸ್ಥನು ಆ ಬಾ
ಡಿಗೆಯೊಳಗೆ ನನ್ನನ್ನು ದುಡಿಸಿ ಕೊಳ್ಳುವದಕ್ಕೆ ಒಪ್ಪಿಕೊಂ
ಡನು; ಆ ಪ್ರಕಾರ ನಾನು ಮಾರ್ಗದಲ್ಲಿ ಆ ಹಡಗದ ಉಗಿ
ಯ ಪಾತ್ರೆಯ ಕೆಳಗಿನ ಒಲೆಯೊಳಗೆ ಇದ್ದಲಿಯನ್ನು ಬಾ

ಚುವ ಕೆಲಸ ನಡಿಸಿದೆನು; ಲಿವರ್ಪೂಲದಲ್ಲಿ ಯೋಳುವಾರಗಳವರೆಗೆ ನಾನು ಕೆಲಸವಿಲ್ಲದೆ ಕಾಲಕಳೆಯ ಬೇಕಾಯಿತು; ಆ ಕಾಲದಲ್ಲಿ ನಾನು ಇರಲಿಕ್ಕೆ ಒಳ್ಳೇ ಮನೆಸಹ ಇಲ್ಲದೆ ಬಹು ತಾಪತ್ರಯ ಪಟ್ಟೆನು; ಕಡೆಯಲ್ಲಿ ನನಗೆ ಪಶ್ಚಿಮ ಹಿಂದೀ ದ್ವೀಪಗಳ ಒಂದು ಹಡಗದಲ್ಲಿ ಆಶ್ರಯವು ಶಿಕ್ಕಿತು; ಅದರಲ್ಲಿ ನಾನು ಕೀಳು ಕೆಲಸಗಳನ್ನು ಮಾಡುವ ಹುಡುಗನಾಗಿ ಕೆಲ ದಿವಸ ಕಾಲಕ್ಷೇಪ ಮಾಡಿದೆನು; ಆದರೆ ಮುಂದೆ ಹತ್ತೊಂಭತ್ತು ವರ್ಷದವನಾಗುವದಕ್ಕೆ ಮುಂಚೆ ಒಂದು ಹಡಗದ ಮುಖ್ಯಾಧಿಕಾರಿಯ ಕೆಲಸ ಪಡೆಕೊಂಡೆನು; ಆ ಮೇಲೆ ನಾನು ಇಪ್ಪತ್ತುಮೂರನೇ ವರ್ಷದಲ್ಲಿ ಸಮುದ್ರವನ್ನು ಬಿಟ್ಟು ಧಡದಲ್ಲಿ ಬಂದು ನಿಂತೆನು; ಆನಂತರ ನಂನ ಸ್ಥಿತಿಯು ಬೇಗ ಬದಲಾಯಿತು; ತಾತ್ಪರ್ಯವೇನಂದರೆ ದೃಢವಾದ ಉದ್ಯೋಗದಿಂದಲೂ, ನಿರಂತರವಾಗಿ ಕೆಲಸ ಮಾಡುವದರಿಂದಲೂ, ನಮ್ಮ ಸಂಗಡ ಪರರು ಹ್ಯಾಗೆ ನಡೆಯ ಬೇಕೆಂದು ನಾವು ಅಪೇಕ್ಷಿಸುತ್ತೇವೋ ಹಾಗೇ ನಾವು ಪರರ ಸಂಗಡ ನಡೆಯ ಬೇಕೆಂಬ ದೊಡ್ಡ ನಿಯಮವನ್ನು ಯಾವಾಗಲೂ ಸ್ಮರಿಸುವದರಿಂದಲೂ ನಾನು ದೊಡ್ಡಸ್ತಿಕೆಯನ್ನು ಹೊಂದಿದೆನು".

ಬರ್ಕನ ಹೆಡ ಪಟ್ಟಣದ ನಿವಾಸಿಯೂ, ಡರ್ಬೀಶಾಯರದ ಪ್ರತಿನಿಧಿಯೂ ಆದ ವ್ರಯಿಲಿಯಂಜಾಕಸನ್ ಯೆಂಬ ಗೃಹಸ್ಥನ ಚರಿತ್ರೆಯು ಹೆಚ್ಚಾಗಿ ಲಿಂಡಸೆಯ ಚರಿತ್ರೆಯನ್ನೇ ಹೋಲುತ್ತದೆ. ಇವನ ತಂದೆಯು ಲಾಂಕಾಸ್ತರದ ಬಹ್ಟ ಶಸ್ತ್ರವೈದ್ಯನಾಗಿದ್ದನು. ಅವನ ಹನ್ನೊಂದು ಮಂದಿ ಮಕ್ಕಳಲ್ಲಿ ಜಾಕಸನ್ನನು ಯೋಳನೇಯವನು. ಇವನ ಆ

ಣ್ಣಂದಿರು ತಂದೆ ಇರುವಾಗ ಚನ್ನಾಗಿ ವಿದ್ಯಾಭ್ಯಾಸ ಮಾಡಿ
ಕೊಂಡಿದ್ದರು; ಆದರೆ ಇವನೂ, ಇವನ ತಮ್ಮಂದಿರೂ ಚಿ
ಕ್ಕವರಿರುವಾಗಲೇ ತಂದೆಯು ತೀರಿದರಿಂದ ಇವರು ತಮ್ಮ
ತಮ್ಮ ವಿಚಾರವನ್ನು ತಾವೇ ನೋಡಿಕೊಳ್ಳಬೇಕಾಯಿತು.
ಜಾಕಸನ್ನನು ಹನ್ನೆರಡು ವರ್ಷದವನಾಗುವದಕ್ಕೆ ಮುಂಚಿ
ತವಾಗಿಯೇ ಅವನನ್ನು ಶಾಲೆಯೊಳಗಿಂದ ತೆಗೆದು ಬೆಳಗಿ
ನ ಆರುಘಂಟೆಯಿಂದ ಸಂಜೆಯ ಒಂಭತ್ತುಘಂಟೆಯ ವರೆ
ಗೂ ಒಂದು ಹಡಗದ ಹತ್ತಿರ ಕಷ್ಟವಾದ ಕೆಲಸ ಮಾಡ
ಬೇಕಾದ ಉದ್ಯೋಗಕ್ಕೆ ಹಚ್ಚಿದರು. ಮುಂದೆ ಇವನ ಒಡೆ
ಯನು ಬೇನೆಬಿದ್ದದರಿಂದ ಈ ಹುಡುಗನನ್ನು ವ್ಯಾಪಾರಸ್ಥರಲೆ
ಕ್ಖ ಬರಿಯುವ ಒಂದು ಅಂಗಡಿಯಲ್ಲಿ ಒಯ್ದಿಟ್ಟರು. ಅಲ್ಲಿ
ಇವನಿಗೆ ಸ್ವಲ್ಪ ಹೆಚ್ಚು ವೇಳೆ ಸಿಕ್ಕುತ್ತಿತ್ತು. ಅದದರಿಂದ
ಅಲ್ಲಿ "ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ"* ಯೆಂಬ
ದೊಡ್ಡ ಪುಸ್ತಕವು ಇವನ ಕೈಗೆ ಬರುವ ಹಾಗಿದ್ದ ಕಾರಣ
ಇವನು ಹಗಲಲ್ಲಿಯೂ, ವಿಶೇಷವಾಗಿ ರಾತ್ರಿಯೂ ಕೂ
ತೂ ಅದನ್ನು ಮೊದಲಿನಿಂದ ಕಡೆತನಕ ಓದಿ ಹಾಕಿದನು.
ಆ ಮೇಲೆ ಇವನನ್ನು ವ್ಯಾಪಾರದಲ್ಲಿ ಸೇರಿಸಲಾಗಿ, ಇವ
ನು ಅದರಲ್ಲಿ ಮನಸಿಟ್ಟು ಜಾಗ್ರತೆಯಿಂದ ಕೆಲಸ ನಡಿಸಿ
ಹೆಸರಿಗೆ ಬಂದನು. ಈಗ ಯೆಲ್ಲ ಸಮುದ್ರಗಳಲ್ಲಿಯೂ ಇ
ವನ ಹಡಗಗಳುಂಟು. ಭೂಮಿಯ ಮೇಲಿನ ಬಹುಶಃ ಯೆ

---

*ಇದು ಅಕ್ಷರ ಕ್ರಮದಿಂದ ಬರೆಯಲ್ಪಟ್ಟ ಶಾಸ್ತ್ರೀಯ ಶಬ್ದಗಳ ಕೋಶದಂತೆ ಇರುತ್ತದೆ. ಆದರೆ ಇದರಲ್ಲಿ ಒಂದೊಂದು ಶಬ್ದದ ಅರ್ಥವು ಬಹು ವಿಸ್ತಾರವಾಗಿ ಬರೆದಿರುವ ಕಾರಣ ಒಂದು ಶಾಸ್ತ್ರದೊಳಗಿನ ಮುಖ್ಯ ಮುಖ್ಯವಾದ ನಾಲ್ಕೆಂಟು ಶಬ್ದಗಳ ಅರ್ಥವನ್ನು ಓದಿಕೊಳ್ಳಲಾಗಿ ಬಹುಶಃ ಆ ಶಾಸ್ತ್ರವೆಲ್ಲ ತಿಳಿದು ಹೋಗುತ್ತದೆ.

ಲ್ಲ ದೇಶಗಳಲ್ಲಿಯೂ ಇವನ ವ್ಯಾಪಾರದ ಸಂಬಂಧವುಂಟು.

ಸ್ವಲ್ಪ ದಿವಸಗಳಹಿಂದೆ ಹೆಸರಾಗಿಹೋಗ ರಿಚರ್ಡ್ ಕಾಬಡನ್ನನೆಂಬ ಗೃಹಸ್ಥನನ್ನು ಇದೇ ವಿಧದ ಮನುಷ್ಯರಲ್ಲಿ ಯೆಣಿಸಬಹುದು; ಇವನಾದರೂ ಮೇಲಿನವರಂತೆಯೇ ನೀಚಾವಸ್ಥೆಯಿಂದ ಮೇಲಕ್ಕೆ ಯೇರಿದವನು. ಇವನು ಸಸೆಕ್ಸ ಪ್ರಾಂತದೊಳಗಿನ ಮಿಢರ್ಷ್ಟವೆಂಬ ಗ್ರಾಮದಲ್ಲಿರುವ ಒಬ್ಬ ಚಿಕ್ಕ ಒಕ್ಕಲಿಗನ ಮಗನು. ಚಿಕ್ಕವನಿರುವಾಗಲೇ ಲಂಡನ್ ಪಟ್ಟಣದಲ್ಲಿ ಒಂದು ವಖಾರಿಯ ಅಂಗಡಿಯಲ್ಲಿ ಇವನನ್ನು ಒಯಿದಿಟ್ಟರು. ಇವನು ಒಳ್ಳೇ ನಡತೆಯುಳ್ಳವನಾಗಿ ಲಕ್ಷ್ಯವಿಟ್ಟು ಕೆಲಸ ಮಾಡುತ್ತಿದ್ದದ್ದಲ್ಲದೆ ಹೆಚ್ಚಿನವನ್ನು ಸಂಪಾದಿಸುವದಕ್ಕೆ ಬಹು ಉತ್ಕಂಠಿತನಾಗಿದ್ದನು. ಇವನ ಒಡೆಯನು ಒಬ್ಬ ಹಳೆತರದ ಮನುಷ್ಯನಿದ್ದದರಿಂದ ಅವನು ಬಹಳ ಓದೋಣರಿಂದ ಕೇಡಾಗುವದೆಂದು ಬೋಧಿಸಿದಾಗ್ಯೂ, ಇವನು ಅದನ್ನು ಲಕ್ಷ್ಯಕ್ಕೆ ತರದೆ ತನ್ನ ಓದುವ ಕ್ರಮವನ್ನು ಯಥಾಪ್ರಕಾರವಾಗಿ ನಡಿಸಿ, ಪುಸ್ತಕಗಳಲ್ಲಿ ಶಿಕ್ಕ ಸಂಪತ್ತಿಯನ್ನು ತನ್ನ ಮನಸೆಂಬ ಭಾಂಡಾರದಲ್ಲಿ ಸಂಗ್ರಹಿಸಿಕೊಂಡನು. ಮುಂದೆ ದಿನದಿನಕ್ಕೆ ಹೆಚ್ಚು ಹೆಚ್ಚು ನಂಬಿಗೆಯ ಕೆಲಸಗಳು ಇವನ ಕೈವಶವಾದವು. ಕೆಲದಿವಸಗಳನಂತರ ಇವನು ಹೊರಗೆ ತಿರುಗಲಿಕ್ಕೆ ಹೊರಟು ತನ್ನ ಅಂಗಡಿಯ ಸಂಬಂಧವನ್ನು ಬಹಳ ವಿಸ್ತರಿಸಿದನು. ಕಡೆಯಲ್ಲಿ ಅವನು ಮಾಂಚೆಸ್ತರ ಪಟ್ಟಣದಲ್ಲಿ ಸ್ವತಂತ್ರವಾಗಿ ಕರಳೆ ಚೀಟುಗಳನ್ನು ಅಚ್ಚುಹಾಕುವ ಒಂದು ಅಂಗಡಿಯನ್ನು ಹಾಕಿದನು. ತರುವಾಯ ಇವನು ಜನರ ಒಳತು ಹೀಸದಸಂಗತಿಗ

ಳಲ್ಲಿ, ವಿಶೇಷವಾಗಿ ಜನರ ವಿದ್ಯಾಭ್ಯಾಸದ ಸಂಗತಿಯಲ್ಲಿ ಮನಸು ಹಾಕುತ್ತಿರಲಾಗಿ, ಉತ್ತರೋತ್ತರವಾಗಿ ಧಾನ್ಯಗಳನ್ನು ಕುರಿತು ಆಗ ನಡೆಯುತ್ತಿದ್ದ ಕಾಯ್ದೆಗಳ ವಿಚಾರಣೆಯಲ್ಲಿ ತೊಡಗಿದನು. ಈ ಕಾಯ್ದೆಗಳನ್ನು ತಿರುಗಿಸುವ ಕೆಲಸಕ್ಕೆ ಇವನು ತನ್ನ ಆಯುಷ್ಯವನ್ನೂ, ಸಂಪತ್ತಿಯನ್ನೂ ಅರ್ಪಿಸಿದನೆಂದು ಹೇಳಬಹುದು. ಆದರೆ ಇವನದೊಂದ ಚಮತ್ಕಾರದ ಸಂಗತಿ ಯೇನಂದರೆ, ಇವನು ಸುಟ್ಟ ಮೊದಲಲ್ಲಿ ಜನಸಮಾಜದಲ್ಲಿ ಯೆದ್ದು ನಿಂತು ಮಾಡಿದ ಸಂಭಾಷಣೆಯು ತೀರ ಅಪ್ರಯೋಜಕ ತರದ್ದಿತ್ತು; ಆದರೆ ದೃಢನಿಶ್ಚಯದ ಯತ್ನದಿಂದಲೂ, ಅಭ್ಯಾಸದಿಂದಲೂ, ಉದ್ಯೋಗದಿಂದಲೂ ಇವನು ಕಡೆಯಲ್ಲಿ ಅತಿಶಯವಾಗಿ ಜನರ ಮನಸ್ಸನ್ನು ಮೆಚ್ಚಿಸಿ ಕೊಳ್ಳುವಂಥ ಪ್ರಯೋಜನಕರವಾದ ವಕ್ತೃತ್ವ ಗುಣವುಳ್ಳವನಾದನು. ಸರ ರಾಬರ್ಟಪೀಲನೆಂಬ ವಿದ್ವಾಂಸನು ಸ್ವತಃ ಇವನ ವಾಕ್‌ಪ್ರೌಢಿಯನ್ನು ನಿಷ್ಪಕ್ಷಪಾತವಾದ ಮನಸ್ಸಿನಿಂದ ಶ್ಲಾಘಿಸಿದನು. ಎಮ್‌ದ್ರೋಯಿನ್‌ದೀಲೂಯಿ ಯೆಂಬ ಫ್ರೇಂಚ ವಕೀಲನು ಸುರಸವಾದ ವಾಣಿಯಿಂದ ನುಡಿದದ್ದೇನಂದರೆ "ಯೋಗ್ಯತೆಯಿಂದಲೂ, ಶ್ರಮದಿಂದಲೂ, ಕುಂದದ ನಿಶ್ಚಯದಿಂದಲೂ ಮನುಷ್ಯನ ಮನೋರಥವು ಹ್ಯಾಗೆ ಕೈಗೂಡುತ್ತದೆಂಬದರ ಪ್ರತ್ಯಕ್ಷ ಪ್ರಮಾಣವು ಕಾಬಡನ್ನನೆಂಬ ಗೃಹಸ್ಥನೇ, ತೀರ ಕಡಿಮೇತರದ ಜನರಲ್ಲಿ ಹುಟ್ಟಿ ತಮ್ಮ ಸ್ವಂತಯೋಗ್ಯತೆಯಿಂದಲೂ, ಕೃತ್ಯಗಳಿಂದಲೂ ಅತ್ಯುನ್ನತವಾದ ಪದವಿಗೆ ಯೇರಿದಂಥವರಲ್ಲಿ ಯೆಷ್ಟು ಮಾತ್ರವೂ ಕುಂದಿಲ್ಲದ ಮಾದರಿಯು ಇವನೇ. ತಾತ್ಪರ್ಯವೇನಂದರೆ, ಇಂಗ್ಲಿಷ ಜನರ ನಡತೆಯಲ್ಲಿ ಸ್ವಾಭಾ

ಏಕವಾಗಿ ವಾಸಿಸುವ ಘನವಾದ ಸದ್ಗುಣಗಳ ಅಪರೂಪವಾದ ಉದಾಹರಣೆಯನ್ನು ಇವರಲ್ಲಿ ನಾವು ನೋಡುತ್ತೇವೆ."

ಈ ಯೆಲ್ಲ ಉದಾಹರಣೆಗಳಲ್ಲಿ ಬಲವಾದ ಸ್ವಂತ ಉದ್ಯೋಗವೇ ದೊಡ್ಡಸ್ತಿಕೆಯೆಂಬ ಒಡವೆಗೆ ಕೊಟ್ಟ ಬೆಲೆಯು. ಯಾವ ವಿಧದ್ದೇ ಆಗಲಿ, ಪೂರ್ಣತ್ವವೆಂಬ ಆಭರಣವು ಆಲಸ್ಯವೆಂಬ ಕಳ್ಳನ ಕೈಗೆ ಯೆಂದಿಗೂ ನಿಲುಕದೆಂಬದೇ ಸಿದ್ಧಾಂತವು. ಮನುಷ್ಯನು ಕಷ್ಟ ಪ್ರಯತ್ನವುಳ್ಳ ಕೈಗಳಿಂದಲೂ, ವಿಚಾರ ಶಕ್ತಿಯಿಂದಲೂ ಮಾತ್ರ ಆತ್ಮ ಸುಧಾರಣೆ, ಜ್ಞಾನ, ವ್ಯವಹಾರಗಳಲ್ಲಿ ಘನತೆಯುಳ್ಳವನಾಗುತ್ತಾನೆ. ಸಂಪತ್ತಿಯೂ, ಬಹುಮಾನವೂ ಉಳ್ಳ ತಾಯಿ ತಂದೆಗಳಿಂದ ಹುಟ್ಟಿದಂಥವರು ಸಹ ತಾವು ಸ್ವತಃ ನಿಜವಾದ ಕೀರ್ತಿಯನ್ನು ಸಂಪಾದಿಸಲಪೇಕ್ಷಿಸಿದರೆ, ಅದು ಅವರ ಸ್ವಂತ ದೃಢವಾದ ಯತ್ನದಿಂದ ಮಾತ್ರ ಕೈಗೂಡುವದು. ಯಾಕಂದರೆ ಭೂಮಿಯೂ, ಧನವೂ ತಂದೆಯಿಂದ ಮಗನಿಗೆ ಬರಬಹುದು; ಆದರೆ ಜ್ಞಾನವೂ, ವ್ಯವಹಾರ ಚಾತುರ್ಯವೂ ಬರಲಾರದು. ಹಣಗಾರನು ತನ್ನ ಕೆಲಸವನ್ನು ಯೆರಡನೇಯವರ ಕೈಯಿಂದ ಮಾಡಿಸಿ ಅವರಿಗೆ ಹಣವನ್ನು ಕೊಡಬಹುದು; ಆದರೆ ತನಗಾಗಿ ಯೆರಡನೇಯವರ ಬುದ್ಧಿಯನ್ನೂ, ಮನಶ್ಶುದ್ಧಿಯನ್ನೂ ಕ್ರಯಕ್ಕೆ ತೆಗೆದುಕೊಳ್ಳುವದು ಅಸಂಭಾವ್ಯವೇ. ಸಾರಾಂಶವೇನಂದರೆ, ಮನುಷ್ಯನಿಗೆ ಯಾವ ಉದ್ಯೋಗದಲ್ಲಿಯೂ ಅತ್ಯುತ್ತಮತ್ವ ವುಂಟಾಗಬೇಕಾದರೆ ಅವನು ಶ್ರಮಪಟ್ಟು ಕೆಲಸ ಮಾಡುವದು ಅವಶ್ಯಕವೆಂಬ ನಿಯಮವು, ಎಲ್ಲರಿಗೂ ಒಂದೇ. ಒಬ್ಬ ಹಳೆ ಜೋಡಗಳನ್ನು ಹೊಲಿದು ಘಟ್ಟಿ ಮಾಡುವವನ ಅಂಗಡಿಯಲ್ಲಿ ಕೂತು ಕಲಿತವರಾ

ದ ದ್ರೊ, ಗಿಫರ್ಡ, ಯೆಂಬವರಿಗೆ, ಅಥವಾ ಕ್ರಾಮರ್ತಿರೀ ಪಟ್ಟಣದ ಬಂದು ಕಲ್ಲಿನ ಖನಿಯಲ್ಲಿ ಕೂತು ಕಲಿತವನಾದ ಹ್ಯೂಮಿಲ್ಲರಯೆಂಬವನಿಗೆ ಈ ನಿಯಮವು ಯೆಷ್ಟು ಸರಿಯಾಗಿ ಸಂಬಂಧಿಸುತ್ತದೆಯೋ, ಅಷ್ಟೇ ಸರಿಯಾಗಿ ಸಂಪತ್ತಿಯುಳ್ಳವರಿಗೂ ಸಂಬಂಧಿಸುತ್ತದೆ.

A new Song.

ಪದ

ಮನಸಿಗೆ ಬೋಧ ಮತ್ತು ದೇವರಸ್ತುತಿ.

(ಧಾಟಿ, ಮಾತಾಡದಾಬಗಿ ಏನುಏನು ಎಂಬತೆ ಇರುತ್ತದೆ.)

ಶ್ರೀಮಾಧವ[೧]ನ ಪದ ನೆನೆಯೊ ನೆನೆಯೊ। ಚಾ[೨]ರು।ಕೋಮಲಪದಗಳಿಗೆ ರಗಿಸೊರ[೩]ಗಿ॥ಪಲ್ಲ॥ಗೊಲ್ಲರಪೊಟ್ಟೆಯುಲೀ।ಪುಟ್ಟಿತಾ। ಖುಲ್ಲ ಮಲ್ಲರಸದೆದಾ। ಈಭೂ॥ನಲ್ಲಗೆಸಮರೆಂಬೊಸೊಲ್ಲುಹೊಲ್ಲ[೪]॥೧॥ ಕಾಮಾದಿಗಳತಾಪಾ।ಜರಿದುನೀ।ಸಾ[೬]ಮಪ್ರಿಯನಭಜಿಪಾ।ಭಕುತರ।ಪ್ರೇಮದಿಂದಲು[೭]ರೆನುತ್ತಿಸಿತುತ್ತಿಸಿ॥೨॥ಸದಯಹೃದಯ[೯]ನೆನಿಸೀ।ಊರ್ವಿಯೊಳ್[೮]।ಮುದದಿಮುದವತ್ತ್ಯಜಿಸಿ। ಶಮದಮ॥ ಸದುಗುಣಂಗಳನೀ ತಾಳಬಾಳ॥೩॥ ನಡುಹಗಲಿನನಂತೇ[೧೦]।ತೊಳಗುವ[೧೧]ಕಡುಸೊಬಗಿನ ಕಾಂತಿ।ಚಲ್ವಕಾ॥ ಕೊಡಲಕಳೆದದ[೧೨]ಯಾಸಿಂಧುಬಂಧು[೧೩]॥೪॥

---

೧ ಜಗನ್ನಿಯಾಮಕನಾದ ದೇವರು ೨ ಸುಂದರ ೩ ಮನಸ್ಸಿನಿಂದ ೪ ದುಷ್ಟ ೫ ವ್ಯರ್ಥ ೬ ಸಾಮವೇದ ೭ ಹೆಚ್ಚಾಗಿ ೮ ಪೂಜಿಸಿ ೯ ದಯೆಯುಳ್ಳ ಜನ ೧೦ ಮಧ್ಯಾಹ್ನದ ಸೂರ್ಯನಂತೆ ೧೧ ಪ್ರಕಾಶಿಸುವ ೧೨ ಕಪ್ಪುಬಣ್ಣಧರಿಸಿದ ೧೩ ಸಾಹ್ಯಕಾರ.

ಇರೇಳು ಲೋಕವನು।ಕುಕ್ಷಿಯೊಳ್। ತಾರಕ್ಷಿಸುತಿಜನು।ಜನುಮೇಶಾ॥ನೀರದಾಭ ಗಂಭೀರಧೀರ॥೫॥

೨ ನೆ ಪದ—(ಥಾಟ; "ಬತ್ರಾದೆಸಾನು ಪಂಚಾಬಕೆತನಾ ಪಾಠ" ಎಂಬಪಂಜಾಬಿತಾಂಬರಿಯಂತೆಇರುತ್ತದೆ).

ನೆನಿಮನವೆ ಶ್ರೀರಂಗಧಾಮನಾ॥ಪಲ್ಲ॥ಸರ್ವೇಶಯಸಕಂ। ದರ್ಪಕನೈಯ್ಯನ ಪಾದ।ಕರ್ಬುಸಿತನುಮುಂನಾ॥೧॥ಮಾರಾಸುಂದರದಧೀ।ಚೋರಜಾರನಾ।ವಾರಣವರದಂನಾ॥೨॥ಜಂಪವಿಕ್ರಮ ಕೋದಂಡಧರಬ್ರಂ। ಮ್ಹಾಂಡಸೊಡ ದಷಂನಾ॥೩॥ನಂದವ್ರಜದವಧು। ವೃಂದಕ್ಕೆ ಸಲೆಸುಖ।ಮಂದಿರದಂದಿಪನಾ॥೪॥ ವಾಸವ ಖತಿಯಿಂ ಘಾಸಿಸೆಹನುಮೇಶಾ।ಪೋಷಿಸಿದಾಪ್ರಗಳನಾ॥೫॥

ತಾ॥ ೯ ಆಗಸ್ಟಂಬರ ೧೮೭೭ನೇ ಇಸವಿ.

ಶ್ರೀನಿವಾಸ ರಾಮಚಂದ್ರ ಸೌದಿ
ವ್ಹಾಯಿಸ ಪ್ರಿನ್ಸಿಪಾಲ ಟ್ರೇನಿಂಗ
ಕಾಲೇಜ ಬೆಳಗಾಂವ.

Hints to Masters.

ಮಾಸ್ತರಜನರ ಪತ್ರಗಳಿಗೆ ಉತ್ತರಗಳೂ, ಅವರಿಗೆ ಸೂಚನೆಗಳೂ.

"ಒಬ್ಬ ಶಾಲಾಪತ್ರಿಕೆಯನ್ನು ನೋಡಿದ ವಿದ್ಯಾರ್ಥಿ,"

---

೧ ಹದಿನಾಲ್ಕು ೨ ಘನಶ್ಯಾಮ ೩ ಶ್ರೀರಂಗಪಟ್ಟಣದ ದೇವರು ೪ ಮನ್ಮಥನತಂದೆ ೫ ಮನ್ಮಥನಷ್ಟು ಸುಂದರ ೬ ಗಜವರದಾ ೭ ಘೋರಪರಾಕ್ರಮಿ ೮ ಪಂಚಪ್ರಕಾರದ ಬಾಣ ೯ ವಾಮನಾವತಾರ ೧೦ ಸಖೀಜನ ೧೧ ಸುಖರೂಪವಾದ ಮನೆ ೧೨ ಇಂದ್ರನು ೧೩ ಶಿಷ್ಟನಿಂದ ೧೪ ಆಕಳುಗಳು.

ಗೋವಿಂದ ಲಕ್ಷ್ಮಣ— ನೀವಿಬ್ಬರೂ ಊರ ಶಾಲೆಗಳಿಗೆ ವಿರುದ್ಧವಾಗಿ ಬರೆದ ಪತ್ರಗಳು ತಕ್ಕ ಮಟ್ಟಿಗೆ ಶುದ್ಧವಾಗಿಯೂ, ನೀವು ವಿಚಾರದೊಳಗೆ ನಿಮ್ಮ ಮನಸ್ಸನ್ನು ತೊಡಗಿಸುವವರಲ್ಲಿ ಮೆಚ್ಚಿಕೆಯುಳ್ಳವರೆಂದು ತೋರಿಸುವದಂಥವುಗಳಾಗಿಯೂ ಇರುತ್ತವೆ. ಆದರೆ ಆ ಪತ್ರಗಳು ಬಹಳ ದೊಡ್ಡವಿದ್ದದ್ದಲ್ಲದೆ, ಅಡ್ಡಮಾರ್ಗವನ್ನು ಪ್ರತಿಪಾದಿಸುತ್ತಿದ್ದ ಕಾರಣ ಅವುಗಳಿಗೆ ಸ್ಥಳ ಕೊಡಲಾರೆವು. ಗ್ರಾಮ್ಯ ಶಾಲೆಗಳ ಮಾಸ್ತರರು ಯೇನೂ ಕಲಿಯದಿದ್ದಾಗ್ಯೂ, ಜನರು ಕೇವಲ ಅಜ್ಞಾನ ಮೂಲವಾಗಿ ಹುಡುಗರನ್ನು ಅವರ ಶಾಲೆಗಳಿಗೆ ಕಳುಹುತ್ತಾರೆಂದು ನೀವು ಹೇಳುವದು ನಿಜವು. ಆದರೆ ಇದೇ ಕಾರಣದ ಸಲುವಾಗಿ, ಜನರ ಅಜ್ಞಾನವಳಿದು, ಅವರಲ್ಲಿ ವಿದ್ಯೆಯ ರುಚಿ ಯುಂಟಾಗಬೇಕೆಂದು ಸರಕಾರದವರು ನಿಮ್ಮನ್ನು ನೇಮಿಸಿದ್ದಾದರೂ ನಿಜವು. ಅಂದ ಬಳಿಕ ಗ್ರಾಮ್ಯ ಶಾಲೆಗಳನ್ನು ನೀವೇ ನಿಮ್ಮ ಪರಾಕ್ರಮದಿಂದ ಮುರಿಯುವದು ತಕ್ಕದ್ದೋ, ಅವುಗಳನ್ನು ಮುರಿಯಿರೆಂದು ಸರಕಾರದವರನ್ನು ಬೇಡಿಕೊಳ್ಳುವದು ತಕ್ಕದ್ದೋ, ನೀವೇ ನೋಡಿರಿ. ನೀವಿರುವಲ್ಲಿ ಗ್ರಾಮ್ಯ ಶಾಲೆಗಳಿರುತ್ತವೆಂಬು ಹೇಳುವದರಿಂದಲೇ ನಿಮಗೆ ಕುಂದು ಬರುವದಿಲ್ಲವೋ? ಇದು ಹೊರ್ತಾಗಿ, ಸರಕಾರೀ ಶಾಲೆಗಳ ಹಿತಕ್ಕೋಸ್ಕರವಾಗಿ ಗ್ರಾಮ್ಯ ಶಾಲೆಗಳನ್ನು ಸರಕಾರದವರು ಮುರಿಯುವದು ವಿಹಿತವಾದರೆ, ಸರಕಾರೀ ವೈದ್ಯಶಾಲೆಗಳ ಸಲುವಾಗಿ ಈ ದೇಶದ ವೈದ್ಯರನ್ನೂ, ಬ್ಯಾಂಕುಗಳ ಸಲುವಾಗಿ ಹುಂಡಿಯ ವ್ಯಾಪಾರಸ್ಥರನ್ನೂ, ಮುರಿಯುವದು ವಿಹಿತವಾಗಲಿಕ್ಕಿಲ್ಲವೇ? ಹಾಗಾದ ಬಳಿಕ ಯೇನು ಪರಿಣಾ

ಮವಾಗುವದು ನೋಡಿರಿ.

ಅಣ್ಣಾಜೀ ನಾರಾಯಣ— ನಿಮ್ಮೂರಲ್ಲಿ ನೀರಿನ ದುರ್ಭಿಕ್ಷದ ಬಗ್ಗೆ ನೀವು ಬರೆದದ್ದರ ಮಹತ್ವವು ತೀರಿಹೋಯಿತು.

ವಿಷ್ಣು ಪರಶುರಾಮ— ಅಕ್ಷರ ಸಂದಿಗ್ಧ, ರಚನೆಯಲ್ಲಿ ಅಶುದ್ಧ ಬಹಳ.

ಶಿವಾಜೀ ಕೃಷ್ಣ— ನೀವು ಬರೆದ ಪತ್ರದಿಂದ ಅನ್‌ಟ್ರೇನ್ಡ ಮಾಸ್ತರ ಜನರಿಗೆ ಹಾನಿಯಾಗಬೇಕೆಂಬ ಉದ್ದೇಶವು ತೋರಿ ಬರುತ್ತದೆ.

ಭೀಮಾಜೀ ವಿರುಪಾಕ್ಷ— ಹೆಚ್ಚಿನ ಯೋಗ್ಯತೆಯು ಸರಟೀಫಿಕೇಟುಳ್ಳ ಟ್ರೇನ್ಡ ಮಾಸ್ತರರು ಕೆಲಸಗಳು ತೆರವಿಲ್ಲದಾಗ ಕಡಿಮೆ ಕೆಲಸಕ್ಕೆ ನೇಮಿಸಲ್ಪಟ್ಟವರು ಅಲ್ಲಿಯೇ ಉಳಿದು, ಇತ್ತಲಾಗಿ ತೆರವಾಗುವ ಹೆಚ್ಚಿನ ಸ್ಥಳಗಳನ್ನು ಹೊಸ ಜನರಿಗೆ ಕೊಡುವದು ಅನ್ಯಾಯವೆಂದು ನೀವು ಬರೆದದ್ದು ಸಯುಕ್ತಿಕವಾಗಿ ತೋರುತ್ತದೆ. ಅಧಿಕಾರಿಗಳು ಈ ಬಗ್ಗೆ ಲಕ್ಷ್ಯಕೊಡುವರೆಂದು ಕೋರುತ್ತೇನೆ.

ಶ್ರೀನಿವಾಸ ರಾಮಚಂದ್ರ— ನೀವು ಎರಡು ಮೂರು ಪತ್ರಗಳನ್ನು ಬರೆದಾಗ್ಯೂ, ಅವುಗಳನ್ನೆಲ್ಲ ಓದ ಕೂಡದಹಾಗೆ ಬರೆದದ್ದು ನೋಡಿ ನಮಗೆ ಸ್ವಲ್ಪ ಆಶ್ಚರ್ಯವಾಗುತ್ತದೆ. ಶಿಲಾಲೇಖವನ್ನು ಸ್ಪಷ್ಟವಾಗಿ ಬರೆದು ಕಳುಹಿದರೆ, ಸಂತೋಷದಿಂದ ಪ್ರಸಿದ್ಧ ಮಾಡುವೆವು.

ಜಗನ್ನಾಥ ಶ್ರೀಧರ— ಪತ್ರದ ವಿಸ್ತಾರವಿದ್ದಷ್ಟು ವಿಷಯದ ಮಹತ್ವವಿಲ್ಲ.

ಇವುಗಳಲ್ಲದೆ ಹಿಂದಿನ ಅಗಸ್ಟ ತಿಂಗಳಲ್ಲಿ ಪ್ರಸಿದ್ಧಿಸ

ಲ್ಪಟ್ಟ ಸಮೀಕರಣದ ಉತ್ತರಗಳು ಇತರಕ್ಕಿಂತ ಹೆಚ್ಚು ಬಂದಿರುತ್ತವೆ. ಆದರೆ ಅವುಗಳ ಪದ್ಧತಿಯೆಲ್ಲ ಬಹುತರವಾಗಿ ಒಂದೇ. ಅಂಥಾ ಕಪಟದಯುಕ್ತಿಯಿಂದ ಮಾಡಿದ ಸ್ಪ್ರ-
ಕ್ಕರಣಗಳನ್ನು ಪುನಃ ಪುನಃ ಪ್ರಸಿದ್ಧಿಸುವದರಲ್ಲಿ ಹುರುಳಿಲ್ಲ. ಮಾರ್ಮಿಕ ರೀತಿಯಿಂದ, ಅಂದರೆ ಶುದ್ಧ ವರ್ಗಸಮೀಕರಣದ ರೀತಿಯಿಂದ ಯಾರಾದರೂ ಉತ್ತರ ಕಳುಹಿದರೆ ಸಂತೋಷದಿಂದ ಸ್ಥಳಕೊಡುವೆವು.

ಇನ್ನು ನಮ್ಮ ಪ್ರಿಯ ಮಾಸ್ತರ ಜನರಿಗೆ ನಾವು ಸೂಚಿಸುವ ಸಂಗತಿಗಳು ಕೆಲವುಂಟು. ಅವರು ಬಹು ಶ್ರಮಪಟ್ಟು ಉದ್ದುದ್ದ ಪತ್ರಗಳನ್ನು ಕಳುಹುತ್ತಾರೆ. ಆದರೆ ಅವು ಹಲವು ಕಾರಣಗಳಿಂದ ನಮ್ಮ ಕೆಲಸಕ್ಕೆ ಬಾರದೆ ಅವರ ಶ್ರಮವು ವ್ಯರ್ಥವಾಗುತ್ತದೆ. ಆದದರಿಂದ ಈ ಕೆಳಗಿನ ಸೂಚನೆಗಳನ್ನು ಚೆನ್ನಾಗಿ ನೆನಪಿನಲ್ಲಿಟ್ಟು ಪತ್ರಗಳನ್ನು ಬರೆದರೆ, ಅವು ಬಹುತರವಾಗಿ ವ್ಯರ್ಥವಾಗಲಿಕ್ಕಿಲ್ಲ. ಸೂಚನೆಗಳು—

೧ ಪತ್ರ ಛಾಪಿ ಒಂದು ಪುಟಕ್ಕಿಂತ ಹೆಚ್ಚು ದೊಡ್ಡದಿರಬಾರದು. ದೊಡ್ಡ ಪತ್ರಗಳ ವಿಷಯವು ಅಷ್ಟು ಗೌರವವುಳ್ಳದ್ದಿದ್ದರೆ ಮಾತ್ರ ಅವು ಪ್ರಸಿದ್ಧಿಸಲ್ಪಡುವವು.

೨ ಕಾಗದದ ಒಂದೇ ಮೈಯಲ್ಲಿ ಮಾತ್ರ ಬರೆಯತಕ್ಕದ್ದು.

೩ ಶಕ್ಯವಾದ ಮಟ್ಟಿಗೆ ಯತ್ನಮಾಡಿ ಶುದ್ಧ ಭಾಷೆಯನ್ನು ಬರೆಯಬೇಕು.

೪ ಹ್ರಸ್ವ ದೀರ್ಘಗಳಿಗೂ, ವಿರಾಮಚಿಹ್ನಗಳಿಗೂ ದುರ್ಲಕ್ಷ್ಯವು ಯೆಷ್ಟುಮಾತ್ರವೂ ಆಗಬಾರದು.

ಅಕ್ಷರವು ಸುವಾಚ್ಯವಾಗಿಯೂ ಪೂರ್ಣವಾಗಿಯೂ ಇರಬೇಕು.

ಅರ್ಧಾಕ್ಷರದ ಕಚೇರಿಯ ಬರಹವು ಅಚ್ಚು ಹಾಕುವವರಿಗೆ ಯೇನೂ ಕೆಲಸದ್ದಲ್ಲ.

ಸಂಕ್ಷೇಪದ ಸಲುವಾಗಿ ಅನುಸ್ವಾರದ ಹಾಗೆ ಶೂನ್ಯ ಬರೆಯಬಾರದು. ಅಂದರೆ, "ತಾರೀಖು" ಯೆಂಬದರ ಸಂಕ್ಷೇಪವನ್ನು "ತಾಂ" ಯೆಂದು ಬರೆಯದೆ "ತಾ." ಯೆಂದು ಬರೆಯಬೇಕು.

ಬರೆಯತಕ್ಕ ವಿಷಯವು ಸಾರ್ವಜನಿಕವೂ, ಬಹುಜನರಿಗೆ ಸಂಬಂಧವಾದಂಥಾದೂ ಇರಬೇಕು.

Correspondence.

ಪತ್ರವ್ಯವಹಾರವು.

ಮಹಾರಾಜರಾ॥ರಾವಸಾಹೇಬ ಕನ್ನಡ ಮಠಪತ್ರಕರ್ತರಾದ ಪ್ರಿನ್ಸಲೇಟರ ಎಡೀಟರ ಜಿಲ್ಲಾ ಬೆಳಗಾಂವಿ ಇವರಸನ್ನಿಧಿಗೆ—

ವಿದ್ಯಾಸುಧಾರಣೇವಿಷಯವಾಗಿ ಕೆಳಗೆ ಬರೆದ ಸಂಗತಿಗಳು ತಮ್ಮ ಸುಂದರವಾದ ಮಠಪತ್ರಕದಲ್ಲಿ ಛಾಪಿಸಿ ಪ್ರಸಿದ್ಧಮಾಡುವಿರೆಂದು ಕೋರುತ್ತೇನೆ ಆಶ್ರಯವನ್ನು ಕೊಡಬೇಕು.

ನಾನು ಈ ಜಿಲ್ಲೆಯ ಕೆಲವು ತಾಲೂಕಗಳಲ್ಲಿ ನೋಡಿ ತಿರುಗುತ್ತೇನೆ, ಆದರೆ ಅಲ್ಲಲ್ಲೀ ಸಾಲಿಗಳ ಹುಡುಗರನ್ನು ಪಂತರನ್ನು ಪರೀಕ್ಷಿಸುವ ಅಭಿಲಾಷೆ ನನಗೆ ಬಹಳ, ಅವುಗಳಲ್ಲಿ ಸರಕಾರ ಸಾಲಿಗಳ ಅಭ್ಯಾಸ ವ್ಯವಸ್ಥೆಯು ಪ್ರಕಾರ ನಡದಿರುತ್ತದೆ, ಆದರೆ ಊರಸಾಲಿಗಳಲ್ಲಿರುವ ಕೊಂ

ದರೆಗಳು ಎಷ್ಟೋ ಕಂಡೆ, ಅವುಗಳ ಪೈಕಿ ಕೆಲವು ಚಮ
ತ್ಕಾರ ಮಾತುಗಳು ಇಲ್ಲಿ ತೋರಿಸುವೆನು

ಸರ್ವ ಕಾಲಕ್ಕೂ ಹಿಡೋಣ, ಬರಿಯೋಣ, ಲೆಕ್ಕ ಈ
ಮೂರು ವಿಷಯಗಳು ಬೇಕೇ ಬೇಕು, ಇವುಗಳಲ್ಲಿ ಒಂ
ದಾದರೂ ವಿಷಯ ಈ ಸಾಲಿಗಳಲ್ಲಿ ನಾನು ಕಾಣಲಿಲ್ಲ,
ಮೂಲಾಕ್ಷರ ಕಲಿಸುವ ಪದ್ಧತಿ ಯೆಂದರೆ (ಸಿರಿಗಂಣಾದಿ
ಪ್ಪತ್ತಿ, ಯನಂಮಾ), ಹಿಹಿ, ನಾನಾ, ಮಾಮಾ, ಸಿಸಿ, ಧಂಧಂ,
ಹೀಗೆ ಅನರ್ಥಕರವಾದ ದ್ವಿರುಕ್ತಿಗಳ ಹೊರ್ತು ಉಚ್ಚಾರ
ವೇ ಇಲ್ಲ, ಮಧ್ಯಮ ಪ್ರತಿಯವರ ಹಿಡೋಣ, (ರಾಜಸಿರಿ
ಯಾವೀರಾಜಿಶರಾಜಮಂನ್ಯರಾಜಸಿರಿ) ಈ ಪ್ರಕಾರ ಚಿತ್ರ ಚ
ಲಿಸದೆ ಘೋಕಿಸಿ ಕೀ ಸರಿಡುತ್ತಿರಬೇಕು. ಅಂದರೆ ಆ ಪಂತ
ರು ಮೋಹನತಿಗಳು, ಪುಷ್ಪಾರರೂ ಎನಿಸುವರು, ಆ ಹುಡಗ
ರಲ್ಲಿ ಒಬ್ಬನ ಬಾಯಿ ಸುಮ್ಮಗಾದರೆ ಅವನ ಬೆನ್ನ ಮೇಲೆ
ಪಂತರ(ದಾದಾಗಳ) ಛಡಿಯು ಮೂಡಿತು, ಅವ್ವಲ ಪ್ರತಿ
ಯವರು ಕಲಿತ ಚೀಟುಗಳೂ ಬಾಯಿಲೆಕ್ಕಗಳೂ, ಆರಂಭ
ದಿಂದ ಕೊನೆಯತನಕ ಅಭ್ಯಾಸದಿಂದ ಹಿಡಿದರಾಯಿತು ಆ
ವನು ತೀರಗೆಲಿತನು. ಹೇಳದ್ದು ಬರಿಯೋಣ ಹಾಗೂ ಸಾ
ಧಾರಣ ತ್ರೈರಾಶಿಕ ಪ್ರಶ್ನಗಳೂ ಅವರಿಗೆ ಸ್ವಪ್ನದಲ್ಲಾದ
ರೂ ಗೊತ್ತಿರುವದಿಲ್ಲ.

ಈ ಗರ್ಜನೆಗೆ ಮೋಹಿಸಿ ಅಶಿಕ್ಷಿತ ಜನರು ಸರಕಾರ
ಸಾಲಿಯಲ್ಲಿ ಈ ಕ್ರಮ ನಡಿಯುವದಿಲ್ಲ. ಹುಡುಗರು ತ
ಯಾರಾಗುವದಿಲ್ಲವೆಂದು ತಮ್ಮ ಹುಡುಗರನ್ನು ಅದೇ ಸಾ
ಲಿಯಲ್ಲಿಯೇ ಕಳುಹಿಸುವರು. ಸರಕಾರ ಮಾಸ್ತರರು ಏ
ನು ಮಾಡಬೇಕು (ನರಪತಿ ಹಿತಕರ್ತಾ ದ್ವೇಷಿತಾಂ ಯಾತಿ

ಲೋಕೇ, ಜನಪದಹಿತಕರ್ತಾರ್ತ್ಯ್ಯ ತೇಪಾರ್ಥಿವೇನ)ಎಂಬ
ಹಾಗೆ ಅವರು ಕಾಲೇಜದಲ್ಲಿದ್ದ ಶಿಕ್ಷಣ ಪದ್ಧತಿ ಮೊದಲಾ
ದ ಎಷ್ಟೋ ವಿಷಯಗಳು ಬಹುದಿವಸ ಕಲಿತು ಅದರಲ್ಲಿ
ಪಾಸಾಗಿ ಕೆಲಸಕ್ಕೆ ಬರುವರು. ಅವರೆಷ್ಟು ವಿದ್ವಾಂಸರೂ
ಸರ್ವಜ್ಞರೂ ಇದ್ದಾಗ್ಯೂ ಪರದೇಶಿಗಳು, ಅವರನ್ನು ಯಾರು
ಕೇಳಬೇಕು(ನಿರಾತ್ರ್ಯಯಾನಶೋಘಂತೇ, ಪಂಡಿತಾ, ವನಿತಾ
ಲತಾಃ)ಅಂದಹಾಗೆ ಸರಕಾರ ಅಧಿಕಾರಿಗಳು (ಮಾಮಲೇದಾ
ರ, ಮಹಾಲಕರೀರು ಫೌಜದಾರ ರಜಿಷ್ಟರ ಮೊದಲಾದ
ಊರ ಮುಖ್ಯಜನರು) ಸಹಾಯಮಾಡಿ, ಜನರಿಗೆ ಸಮಜಾ
ತ ಕೊಟ್ಟು, ಕಮೇಟಿ ನೇಮಿಸಿ, ಮೇಲೆ ಮೇಲೆ ಪರೀ
ಕ್ಷಾ ತೆಗೆದು ಕೊಂಡು ಮಾಸ್ತರರಿಂದ ತಪ್ಪಾದರೆ ನಿರಿಷ್ಟರಿ
ಗೆ ತಿಳಿಸಿ ವಿದ್ಯಾವೃದ್ಧಿಗೆ ಮಾಡತಕ್ಕದ್ದು ಈ ಕ್ರಮ ಕೆಲ
ವು ಕಡೆಮಾತ್ರ ಉಂಟು, ಸರ್ವಕಡೆಗೆ ಇಲ್ಲ.

ಇದರ ಕಾರಣವು ನಮಗೆ ತಿಳಿದಿರುವದು, ಹ್ಯಾಗಂದರೆ
ನಮ್ಮ ಸರಕಾರ ಸಾಲಿಯಲ್ಲಿ ಕಲಿತು ಪಾಸಾಗಿ ಈಗ ಅಧಿ
ಕಾರಕ್ಕೆ ಬಂದ ಧೊರೆಗಳು, ಅನುಭವಿಕರು ಅವರು ಮಾತ್ರ
ಪೂರ್ಣದೃಷ್ಟಿ ಯಿಟ್ಟು ಅಭಿವೃದ್ಧಿ ಹೊಂದಿಸುವರು, ಯಾ
ವ ಅಧಿಕಾರಿಗಳು ಊರಸಾಲಿಯಲ್ಲಿಯೇ ಕಲಿತು ಇರು
ವರೋ ಅವರು ವಿಪರೀತ ಕೃತಿ ನಡಿಸುವರು.

ಆದ್ದರಿಂದ ಆ ಯಾವತ್ತು ಜನರಿಗೆ ಅವರವರ ಹಿತಕ್ಕೋ
ಸ್ಕರ ನಂಪ ಪ್ರಾರ್ಥನೆ ಯೇನಂದರೆ ಅವರ ಕಾಲದಲ್ಲಿ ವಿದ್ಯ
ಯು ಸುಧಾರಣೆ ಇಲ್ಲದ್ದರಿಂದ, ಆ ವೃದ್ಧಾಚಾರ ಶೋಭಿಸಿ
ತು, ಮುಂದೆ ಅವರವರ ಮಕ್ಕಳನ್ನು ಈ ಸುಧಾರಣೆಯಿಂ
ಬ ವಿಶ್ವತ್ತ್ಯ ಪೀಯೂಷವು ಪಾನಮಾಡಿಸುವರಿಂದ.

ಈ ತೊಂದರೆಗಳ ಬೋಂಬಾಟವು, ಮೋಹರಬಾನ ಎಜ್ಯುಕೇಶನಲ್ ಇನಸ್ಪೆಕ್ಟರ ಧೊರೆಗಳ ಕಿವಿಗೆ ಬಿದ್ದು ಮಾಸ್ತರಜನರ ಕಷ್ಟವು ಪರಿಹರಿಸುವರೆಂದು ಬಹಳ ನಂಬಿಕೊಂಡಿದ್ದೇನೆ.

ತಾರೀಖು ೨೨ ಮಾಹೆ ಜೂನ ೧೮೭೨ ನೇ ಇಸವಿ.

ಲೋಕಹಿತಕರ್ತನಾದ ಒಬ್ಬ ಧೀರಸ್ಥನು.

ಮಹಾರಾಜ ರಾ॥ ರಾ॥ ದಕ್ಷಿಣಭಾಗ ಶಾಲಾಪತ್ರಕರ್ತರಿಗೆ.

ಡಂಬಳ ತಾಲೂಕ ಕಸಬಾ ಹಮ್ಮಿಗಿ ಮಾಸ್ತರನ ವಿನಯಪೂರ್ವಕ, ವಿನಂತಿ ಏನಂದರೆ ಈ ಕೆಳಗೆ ಬರೆದಿರುವ ಮಾಸಲೆಯು ನಾಲ್ಕು ಪಂಕ್ತಿಗಳದೊಂದು, ಪತ್ರದ ವೃತ್ತಾಂತವನ್ನು, ತಂಮ ಅಂದವಾದ ಪತ್ರಿಕದ ದ್ವಾರದಿಂದ, ಪ್ರಸಿದ್ಧ ಮಾಡಿಸಬೇಕೆಂಬುವ ಅಪೇಕ್ಷೆಯಿಂದ, ಕಸಬಾ ಮುಜಕೂರಿನಲ್ಲಿರುವ, ಒಬ್ಬ ಗೃಹಸ್ಥನು, ನಮಗೆ ಕೊಟ್ಟಿದ್ದರಿಂದ, ಅದಂನು ಇಲ್ಲಿ ಕೆಳಗೆ ವಿಸ್ತರಿಸಿದ್ದೇನೆ. ತರುವಾಯ—ಈಗ ನೀವು ಕಳಿಸಿದ ಉತ್ತರಗಳಂನು, ನಿರೀಕ್ಷಿಸಿದಲ್ಲಿ ಸಕಲವು ತಿಳಿಯಿತು. ವಾದೋತ್ತರ ಪ್ರಶ್ನೆಗಳಿಗೆ ಪ್ರತ್ಯುತ್ತರ ಪ್ರಶ್ನೆಗಳು ಇವು ಬಹಳ ಚಂನಾಗಿ ಇದ್ದಾವೆ. ಆದಾಗ್ಯೂ ಮೈಸೂರ ಇಲಾಖಾ, ಬೆಂಗಳೂರು ಮೊದಲುಮಾಡಿ, ಸುತ್ತ ಪ್ರಾಂತಿನಲ್ಲಿ ಇದ್ದ ತ್ರಿನಾಮಿಗಳಾದ ವೈಷ್ಣವ, ಪ್ರಾಜ್ಞರು ನಾಲ್ಕಾರು ನೂರು ಜನರೊಳಗೆ, ಮುಖ್ಯವಾಗಿ ವಿಜಯರಾಘವನೆಂಬುವನು, ದಿಗ್ದಂತಿಪಂಡಿತನೆಂದು, ಹೇಳುತ್ತಾರೆ. ಇಂತಿಪ್ಪ ಜನರು ಕೂಡಿ, ಜುಡಿಸಿಯಲ್ ಕಮಿಷನ್ ಸಾ

ಹೇಬರಲ್ಲಿ, ಮುಖ್ಯವಾಗಿ, ವಾದನಡಸತಕ್ಕ ಸಂಗತಿ ಏನಂ
ದರೆ, ಲಿಂಗವಂತಮತ ಶೂದ್ರಮತಕ್ಕೆ ಸೇರಿದ್ದು ಹ್ಯಾಂಗಂದರೆ
ಹಿಂದಕ್ಕೆ ಕಲಿಗಣನಾಥನಿಂದೆ ಶಿವನಿಗೆ ಲಿಂಗಧಾರಣವಾಯಿ
ತೆಂದು ಹೇಳುತ್ತೀರಾದ್ದರಿಂದ ತಾನೇ ಲಿಂಗವಾದಬಳಿಕ ತನ್ನ
ಲ್ಲಿಯು ಲಿಂಗತನಸ್ಯಾಕೆ, ಈ ಲಿಂಗಪೂಜಾ ಪ್ರಸಂಗ ಹಾ
ಗಲ್ಲದೆ, ಶೈವಪುರಾಣ, ಶೈವಮತ ಶೈವಕರ್ಮ ಶೈವಮು
ದ್ರೆ ಶೈವದಿಕ್ಷೆ, ಶೈವಾನುಗ್ರಹವೆಂದು ನೀವು ಪ್ರಬಂಧಾ
ಲಾಪವುಂಟು. ಕಾರಣಾ ನೀವು ಶಿವನೆಬದ್ಧ ಶೈವನಾದ್ದರಿಂ
ದ ನೀವು ಮಹಾಶೈವರಲ್ಲದೆ ತಸ್ಮಾದ್ವೀರಶೈವರಲ್ಲ ಹಾಂ
ಗು ನೀವು ಧರಿಸಿರುವ ಇಷ್ಟಲಿಂಗವೆಂದು ಹೇಳುತ್ತೀರಲ್ಲ
ಹೀಂಗಾದಬಳಿಕ, ಆ ಲಿಂಗಶೈವವು; ಅದಕ್ಕೆ ನೇವೇದ್ಯನಮಾ
ಡಿದ ಭುಕ್ತಸ್ವೀಕರಿಸುವರು ಅತ್ಯಂತ ಶೈವರು, ಹಾಂಗು
ನೀವುಲ್ಲಿ ವಿಭೂತಿ, ರುದ್ರಾಕ್ಷಿ, ಮಂತ್ರ, ಪುರಾಣಾದಿಗಳಂ
ನು ಶಿವಸಮಾನ ನೋಡಬೇಕೆಂದು ಹೇಳುತ್ತೀರಿ. ಕಾರಣಾ
ಶಿವಲಿಂಗಾರ್ಪಿತ ಭುಂಜಿಸಬೇಕ್ಯಾಕೆ; ತದ್ವಿಭೂತ್ಯಾದಿಗಳ
ನೇವೇಧ್ಯಾ ನಭುಂಜಿಸಬಾರದ್ಯಾಕೆ, ಆದಕಾರಣ ಯಿವರು
ಶೈವರಾದ್ದರಿಂದ ಶೂದ್ರರೊಳಗೆ ಸೇರ್ಪಡಿಯಾದವರೆಂದುಸ
ದರ ಕಮಿಷನ್‌ಸಾಹೇಬರರಿಕಾರ್ಡಿಗೆ ೧೨000 ಹನ್ನೆರ
ಡುಸಾವಿರ ಗ್ರಂಥಗಳನ್ನು ಹಾಜರಮಾಡಿದ್ಧಾರಂತೆ. ಇವಲ್ಲ
ದೆ, ಒಂದಸಹಸ್ರಮುಖದಿಂದೆ ಮಹಾಬದ್ಧ, ವಾದದಿಂದ
ಮೇಲೆ ಬರದಿರುವ, ಅಷ್ಟು ಪಂಡಿತಜನರನ್ನೈಕೆ, ಸದರ ವಿ
ಜಯರಾಘವನಸಂಗಡವಾದ ನಡಸತಕ್ಕ ಪ್ರಾಜ್ಞರ ದಾರದಾರೇ
ನು ಕಾಣೆವೆಂದು ಹಾಂಗು ಇವನು ಸಹಸ್ರಮುಖದಿಂದ ವಿ
ವಾದ ಮಾಡುತ್ತಾನಂತೆ ಕೆಲವು ಜನರು ಹೇಳುತ್ತಾರೆ.

ಕಾರಣಾ ಸದರ ಕಮಿಷನ್ ಸಾಹೇಬರು ಅಂಬುವದೇನಂದ ರೆ ಶಿವನು ಶೈವಶಿವನ ಭಕ್ತರು ಶೈವರು, ಯೆಂದು ಈ ವಿಪ್ರರು ಹನ್ನೆರಡುಸಾವಿರ ಗ್ರಂಥೋಕ್ತ ಕೊಟ್ಟ ಬಳಿಕ, ಈ ಲಿಂಗಾಯತ ಮತದವರು ೨೪೦೦೦ ಯಿಪ್ಪತ್ತನಾಲ್ಕು ಸಹಸ್ರ ಗ್ರಂಥಗಳಂನು ಹಾಜರಮಾಡಿದರೆ ಬಹು ಶ್ರೇಷ್ಟವಾಗುತ್ತದೆ. ಅಲ್ಲಾದರೆ ಅವರಷ್ಟೇ ಕೊಡದಿದ್ದರೆ ದ್ವಿತಿಯಾಂಕವೆಂದರೆ ೬೦೦೦ ಆರುಸಾವಿರ ಗ್ರಂಥಕೊಟ್ಟದ್ದಾದರೆ ಅದರ ಮೇಲೆ ಹೊಡದಾಡಿ ಯಿವರು ವೀರಶೈವರೆಂದು ತೀರ್ಪುಮಾಡೇನಾದ್ದರಿಂದ ಯಿವನ ಮುಂದೆ ಪ್ರತ್ಯುತ್ತರಮಾಡತಕ್ಕ ಪಂಡಿತರೇಯಿಲ್ಲ ಅಂತ ಈ ವಿವಾದಕ್ಕೆ ೮ ಯೆಂಟು ತಿಂಗಳು ಅವಧಿ ಹುಕುಂಕೊಟ್ಟಿರುತ್ತೇನೆ. ಯಿದರೊಳಗೆ ಬಂದು ಈ ವಾದನಡಿಸಿದರೆ ಆದಂತೆ ಹುಕುಂ ಕೊಡುತ್ತೇನೆ. ಯಾರು ಬಾರದಪಕ್ಷಕ್ಕೆ ಲಿಂಗಾಯತರು ಶೂದ್ರಮತಕ್ಕೆ ಸೇರಿದ್ದೆಂದು ಗ್ರಾಮ ಗ್ರಾಮಗಳಿಗೆ ನೋಟೀಸು ರವಾನಾಮಾಡುತ್ತೇನೆ ಅಂತಾ ಹುಕುಂಕೊಟ್ಟನಂತೆ. ಆದ್ದರಿಂದ ಈಗ ಸುಮಾರು ಎರಡು ಮೂರು ತಿಂಗಳಾದ ಹಾಂಗೆ ಕಾಣಿಸುತ್ತದೆ. ಅಷ್ಟರೊಳಗೆ ಶಿವಭಕ್ತರಾದ ವೀರ ಪಂಡಿತರು ಬಹಳವಾಗಿ ನೆರೆದು ಪೂರ್ವದಲ್ಲಿ ಸಾಕ್ಷಾಚ್ಛ್ರೀಮದ್ಬಸವೇಶ್ವರ ದೇವರು ವೀರಶೈವ ಮತಸ್ಥಾಪನಮಾಡಿದಂತೆ ಸದರ ಸಾಹೇಬರಲ್ಲಿಗೆ ಹೋಗಿ ತದ್ವಿವಾದ ತಂಗ್ಯೆದು ಶಿವಭಕ್ತರು ವೀರಶೈವರೆಂದು ಸ್ಥಾಪ್ಯಮಾಡಿದಲ್ಲಿ ಶಿವಮತನಲಿಯುತ್ತದೆ.

ಹಾಂಗಲ್ಲದೆ ಆ ವಿಪ್ರರು ಅಂಬುವದೇನಂದರೆ ಹಲವು ದೇವಾರ್ಚಕರು ನಾಪ್ರಶ್ನವರು ಹಾಂಗು ಚತುರ್ವರ್ಣದೊ

ಳಗೆ ಕೇವರ್ಣಿಯಾವಕಾರಣ ನೀವು ಏನು ಅಂದಾಗ್ಯೂ ನಮ್ಮಗೆ ಸಂಮತವೇ ಸರಿ— ನೀವು ನಂಮಂತೆ ಅಂದರೆ ನಾವು ರಾಜಿನಾಮೆ ಕೊಡುತ್ತೇವೆ ಇಲ್ಲವೆ ನೀವು ವೀರಶೈವರೆಂದು ನಾವು ಸಹನಮಾಡದೆ ಮತ್ತು ಕೆಲವು ಮುಖದಿಂದೆ ತಕರಾರಿ ಅರ್ಜಿಮಾಡಿ ಘಳಘಳಗ್ಗೆ ಖಿಟ್ಲೆಬಾಲು ಮಾಡೇವು ಹಾಂಗು ಶಿವನು ಶಿವಭಕ್ತರು ನಿಗಮಾಗಮ ವಿಭೂತ್ಯಾದಿಗಳು ಶೈವ ಅಂಬುವಂಥಾ ದುರ್ಮಾರ್ಗರ್ಗಮನರಾದ ಬಹಳವಾದ ಈಶ್ವರಂಗಿಗಳೆ ಮಂಡಳ ಯೊಳಗಣವಿಜಯರಾಘವಗೆ ಕಂನಡಮಾತು ಯಿಲ್ಲ. ಯಿವನು ಮಾತನಾಡತಕ್ಕಷ್ಟೇನಂದರೆ ತೆಲಗು ಹಾಂಗು ಅರವು ಹಾಂಗು ಗೀರ್ವಾಣ ಈ ಭಾಷಾಂತರದಲ್ಲಿ ಮಹಾಪ್ರವೀಣನಂತೆ ಯಾರಾದರು ಸಂಸ್ಕೃತಮಾತನಾಡಿದರೆ ಷಣೆ ಷಣೆ ಹಿಂಗಲ್ಲ ಇಲ್ಲಿ ಶಬ್ದಸಮಾಸಧಾತು ಕೆಟ್ಟಿತೆಂದು ಅನುತ್ತಾನಂತೆ. ಕಾರಣ ನಾವು ನೀವು ಈ ಪ್ರಕಾರಕ್ಕೆ ಮತಗ್ರಂಥ ಬರದು ಪುಟವಂನು ಕಳುಹಿದರೆ ಲಾಗು ಆಗುತ್ತದೊ, ಇಲ್ಲೊ, ಯಾಕೆ ಅಂದರೆ ಅವರ ಸಂಮುಖಕ್ಕೆ ಕುಳಿತುವಾದ ಮಾಡುವವರೆ ಇಲ್ಲ. ಅಂದಬಳಿಕ ಇದಂನು ಲಕ್ಷ್ಯಕ್ಕಾದರು ತಾರರೆಂಬೋಹಾಂಗೆ ಕಾಣಿಸುತ್ತದೆ. ಆದ್ದರಿಂದೆ ದಾವ ದಾವ ಮಹಾವೀರಶೈವ ಬುಧಜನರು ಕೂಡಿಹೋಗಿ ಈ ವಾದ ಎಂದಿಗೆ ಸಂಗಮಾಡ್ಯಾರೆಂದು ಅಹೋರಾತ್ರಿ ಶ್ರೀಮನ್ಮಹಾದೇವಧ್ಯಾನಾನುರಕ್ತರಾಗಿ ಇದ್ದೇವೆ.— ನಿಮಗೆ ಅರಿಕೆಯಾಗಲೆಂದು ಈ ಪತ್ರಲಿಖಿಸಿ ಕಳಸಿದ್ದೇವೆ.— ಇದಂನು ನಾವು ಸಂಕ್ಷೇಪಬರದು ಇದ್ದೇವೆ. ಅವರ ವಾದ ಇನ್ನು ಬಹಳ ಅಂತ ಕೆಲವರು ಅನ್ನುತ್ತಾರೆ.

ಈ ವೀರಶೈವಮತವು ಶೂದ್ರಮತಕ್ಕೆ ಸೇರಿದ್ದು ಎಂಬುವದಾಗಿ ಬೆಂಗಳೂರ ಜೋತಿಷಾನೇಕ ಕವಿಪಾಷಂಡರು ಪ್ರಸಲುಮಾಡಿರುತ್ತಾರೆ. ಯಿದಕ್ಕೆ ಲಿಂಗಾಯಿತರು ತಕರಾರು ಅರ್ಜಿ ಹಾಜರುಮಾಡಿದರಿಂದ ಈ ಲಿಂಗಾಯಿತರನ್ನೇ ಕೇಳೋ ಪ್ರಶ್ನೆಗಳಿಗೆ ಸರಿಯಾಗಿ ಜವಾಬು ಕೊಟ್ಟರೆ, ನಿಂಮಂತೆ ನೈಸಲು ದೊರಕೀತೆಂದು ಹುಕುಂ ಕೊಟ್ಟಿರುತ್ತಾರೆ.

೧ ನೇ ಕಲ್ಮು—ಲಿಂಗಾಯಿತರ ಮತಸ್ಥರಲ್ಲಿ ಧರ್ಮಶಾಸ್ತ್ರ ದಾರದು.

೨ ನೇ ಕಲ್ಮು—ಲಿಂಗಾಯಿತರಲ್ಲಿ ಧರ್ಮಶಾಸ್ತ್ರಯಿಲ್ಲದಪಕ್ಷದಲ್ಲಿ ಮನುಧರ್ಮಶಾಸ್ತ್ರಲಗತ ಆಗುತ್ತದೊ, ಇಲ್ಲವೊ.

೩ ನೇ ಕಲ್ಮು—ಲಿಂಗಾಯಿತಜನರಿಗೆ ಮನುಧರ್ಮಶಾಸ್ತ್ರಲಗತಾದ ಪಕ್ಷದಲ್ಲಿ ಮನುಗಳು ಹೇಳಿರುವ ನಾಲ್ಕು ವರ್ಣ ಬ್ರಾಹ್ಮಣ ಕ್ಷತ್ರಿ ವೈಶ್ಯ ಶೂದ್ರ ಈ ಪೈಕಿ ಲಿಂಗಾಯಿತರು ದಾವವರ್ಣಕ್ಕೆ ಸೇರಿದವರು—

೪ ನೇ ಕಲ್ಮು—ಲಿಂಗಾಯಿತ ಜನರು ಬ್ರಾಹ್ಮಣವರ್ಣಕ್ಕೆ ಸೇರಿದ ಪಕ್ಷದಲ್ಲಿ ದಾವಪುರಾಣ, ದಾವತಮ್ಮ ಮತಶಾಸ್ತ್ರದಲ್ಲಿ ಬರದದೆ.

೫ ನೇ ಕಲ್ಮು—ಕುರಬರಿಗೆ ಲಿಂಗಧಾರಣಮಾಡಿ ಲಿಂಗಮತ ವೆಂಬುವದು ದಾವಶಾಸ್ತ್ರದಲ್ಲಿ ಹೇಳಿಯದೆ.

೬ ನೇ ಕಲ್ಮು—ಲಿಂಗವಂತರು ಬ್ರಾಹ್ಮಣವರ್ಣಕ್ಕೆ ಸೇರಿದ್ದಾದರೆ ಮೇಲೆ ವುದಹರಿಸಿ ಬ್ರಾಹ್ಮಣವರ್ಣಕ್ಕೆ ವಿರೋಧರಾದಂತೆ ಹೇಳಬಲ್ಲಿರಿ.

೭ ನೇ ಕಲ್ಮು—ಲಿಂಗಾಯಿತಮತ ಈಚೆಗೆ ಹುಟ್ಟಿ ಅದೆ,

ಅಂತಾ ಕೆಲವರು ಹೇಳುತ್ತಾರೆ ಇದು ಸುಳ್ಳೇ ನಿಶ್ಚಯವೋ.

೮ ನೇ ಕಲ್ಮ—ಲಿಂಗಾಯತಮತವೇ ಅನಾದಿಯೆಂದು ದಾವಗ್ರಂಥದಿಂದ ಸಾಧಿಸುತ್ತೀರಿ.

೯ ನೇ ಕಲ್ಮ—ಲಿಂಗಾಯತರು ಬ್ರಾಹ್ಮಣ ವರ್ಣವಾದರೆ ಅವರುಗಳ ಆಚಾರಕ್ಕು ನಿಂಮಾಚಾರಕ್ಕೂ ವಿರೋಧವಾದದ್ದು ದಾವಶಾಸ್ತ್ರದಲ್ಲಿ ಹೇಳಿಯದೆ.

ಈ ಪ್ರಕಾರ ಒಂಭತ್ತು ಕಲ್ಮಗಳನು ಬರಸಿಕಳುಹಿಸಿದ್ದಾರೆ. ಯಿವಕ್ಕೆ ಉತ್ತರಬರಸಿ ಕಳುಹಿಸಬೇಕೆಂದು ಬಂದಿರುತ್ತದೆ.

NOTICE.

ನೋಟೀಸು.

ಒಳ್ಳೇ ಸಹಾಯ.

ಸಟೀಕರಾಜಶೇಖರದ ತೃತೀಯಾಶ್ವಾಸದ ನೋಟೀಸು.

ಕೆಳಗೆ ಸಹಿಮಾಡಿದವರು ಸರ್ವಜನರಿಗೂ ತಿಳಿಯಪಡಿಸುವದೇನಂದರೆ ಕನ್ನಡದಲ್ಲಿ ಅತಿ ವಿಖ್ಯಾತವಾದ ರಾಜಶೇಖರ ಪುಸ್ತಕವನ್ನು ಓದಮನಸುಳ್ಳವರು ಬಹಳಮಂದಿ ಇದ್ದು ಅದಕ್ಕೆ ಟಿಪ್ಪಣಿಯು ಇಲ್ಲದ್ದರಿಂದ ಬಹಳ ತೊಂದರೆಯಾಗುತ್ತದೆಂಬದನ್ನು ಕುರಿತು ಸರ್ವತ್ರರಿಗೂ ಅದರೊಳಗಿನ ರಸಾಮೃತವು ತಿಳಿಯಬೇಕೆಂಬದಾಗಿ ಟಿಪ್ಪಣಿಸಹಿತವಾಗಿ ೧।೨ ಈ ಅಧ್ಯಾಯಗಳು ತಯಾರ ಆದವು. ಆದರೆ ಮುಂದಿನ ಮೂರನೇ ಅಧ್ಯಾಯವನ್ನು ಸುಲಭವಾದ ಕನ್ನಡ ಭಾಷೆಯೊಳು ಪರಿಶೋಧಿಸಿ ರಮ್ಯವಾಗಿ ವಿಸ್ತಾರಪೂರ್ವಕ ಟೀ

ಶಿಸಿ ಬೆಳಗಾವಿ ಸಮಾಚಾರ ಅಚ್ಚು ಕೂಟದಲ್ಲಿ ಸುಂದರವಾದ ಮೊಳೆಗಳಿಂದ ಮುದ್ರಿಸುವೆವು ಇದಕ್ಕೆ ಬಹುಜನರು ಆಶ್ರಯಕೊಡುವರೆಂದು ಕೋರುತ್ತೇವೆ. ಸದರಿ ಪ್ರಕರಣವನ್ನು ಕೆಳಗೆ ಬರೆದಂತೆ ಟೀಕಿಸುವೆವು.

೧ ಕ. ಮೂಲ ಶ್ಲೋಕವಲ್ಲಿ ವಿವರಿಸಿದ ಚರಣಗಳು.

೨ ಕ. ಶಬ್ದಾರ್ಥವಲ್ಲಿ ಪದಖಂಡಣ ಮತ್ತು ಪ್ರತ್ಯೇಕ ಶಬ್ದ ಬಿಡಿಸಿ ಅವರ ಅರ್ಥವು ಮತ್ತು ವ್ಯಾಕರಣ ಪ್ರಯೋಗವು.

೩ ಕ. ಶ್ಲೋಕದ ಭಾವಾರ್ಥ "ಅನ್ವಯದ ಮೇಲಿನಿಂದ"

೪ ಕ. ನೋಟು. ಇದರಲ್ಲಿ ವ್ಯಾಕರಣ ಸಂಧಿಗಳು ಮತ್ತು ಸಮಾಸವು ಇವುಗಳ ಸ್ಪಷ್ಟೀಕರಣವು ಮಾಡಲ್ಪಡುವದು. ಮತ್ತು ಇತಿಹಾಸಸಂಬಂಧವಾದ ಪುರಾಣಾಂತರ ಕಥೆಗಳು. ಮತ್ತು ವೃತ್ತಗಳ ಲಕ್ಷಣವು.

ಈ ಪ್ರಕಾರವಾಗಿ ಟೀಕಿಸುವದಕ್ಕೆ ಪ್ರಾರಂಭ ಮಾಡಿದ್ದೇವೆ ಸದರಹೂ ಪುಸ್ತಕವು ಫೆಬ್ರುಅರಿ ೧೮೭೩ ಇಸವಿ ತಿಂಗಳ ಒಳಗಾಗಿ ಅಚ್ಚು ಹಾಕಿಸುವೆವು ಇದರ ಕ್ರಯ ಜನವರಿ ತಿಂಗಳ ಒಳಗಾಗಿ ಕೊಟ್ಟವರಿಗೆ (೧) ರೂಪಾಯಿ, ಸದರಿ ತಿಂಗಳ ಒಳಗಾಗಿ ಖಾತ್ರಿ ಲಾಯಖ ಸಹಿಯನ್ನು ಕೊಡುವವರಿಗೆ (೧-೨) ವೆಂದು ರೂಪಾಯಿ ಯರಡು ಅಣೆ, ಈ ಕಟ್ಟಳೆಯನ್ನು ಮೀರಿದವರಿಗೆ (೧-೮) ವೆಂದುವರೆ ರೂಪಾಯಿ ಪ್ರಕಾರ ಇದರ ಹೊರ್ತು ಯಾವತ್ತರು ಟಪಾಲ್ ಪಸ್ತೂರಿ ಕೊಡಬೇಕಾಗುವದು ಕ್ರಯದ ಸಂಬಂಧ ಪ್ರೊಂ

ಯನ್ನು ಅಗರ ಟಪಾಲ್ ಟಿಕೀಟು ರು. ೧ ಕ್ಕೆ ೧ ಅಣೆ ವತ್ರಾಗಳಸಹಿತ ಮುಂಡರಗಿಯಲ್ಲಿ ನಮ್ಮ ಕಡೆಗೆ ಕಳುಹಿಸಬೇಕು ಅಂದರೆ ಪುಸ್ತಕ ತಯಾರಾದಕೂಡಲೆ ರವಾನಿಸುವೆವು. ತಾ|| ೧೫ ನೇ ಮಾಹೆ ಅಗಟೆಂಬರ ೧೮೭೨ ಇ.

ಸಹಿ ಅಂಸದಾಸಿ ಬಸವಲಿಂಗಾರ್ಯ ಮಂಗಳೂರ ಸಾ||

ಮುಂಡರಗಿ ತಾ|| ಗದಗ ಜಿಲ್ಲಾ ಧಾರವಾಡ.

ಶಾಲಾಪತ್ರ ಕನ್ನ.

———000———

ಪುಸ್ತಕ V] [ಸಂಚಿಕೆ ೯.

ಬೆಳಗಾವಿ, ಮಾಹೆ ಡಿಸೆಂಬರ. ೧೮೭೨.

SELF HELP.

ತನಗೆ ತಾನೇ ನೆರವಾಗುವದು.

ಮನುಷ್ಯನು ಅತ್ಯುತ್ತಮತರದ ಮನಸ್ಸುಧಾರಣೆಯನ್ನು ಪಡೆಕೊಳ್ಳಬೇಕಾದರೆ ಸಂಪತ್ತಿಯೂ, ಅನುಕೂಲ್ಯವು ಯೆಷ್ಟುಮಾತ್ರವು ಆವಶ್ಯಕವಲ್ಲೆಂಬದು ಸ್ಪಷ್ಟವೇ. ಹಾಗಿದ್ದರೆ ನಿಕೃಷ್ಟಾವಸ್ಥೆಯಲ್ಲಿ ಹುಟ್ಟಿದವರಿಂದ ಈ ಭೂಮಿಯ ನಿವಾಸಿಗಳು ಸರ್ವದಾ ಇಷ್ಟು ಉಪಕಾರ ಪಟ್ಟವರಾಗುತ್ತಿದ್ದಿಲ್ಲ. ಸುಖಿಗಳಾಗಿಯೂ, ಭೋಗಿಗಳಾಗಿಯೂ ಬೆಳೆದವರು ಉದ್ಯೋಗಕ್ಕೆ ಮೊಗ್ಗಲಾರರು, ಅಥವಾ ತಮ್ಮ ಉದ್ಯೋಗದಲ್ಲಿ ಬಂದತೊಂದರೆಯನ್ನು ನೀಗಲಾರರು. ಇಷ್ಟಲ್ಲದೆ ವ್ಯವಹಾರದಲ್ಲಿ ನಾವು ಅತಿಜಾಗ್ರತೆಯುಳ್ಳವರಾಗಿ ನಮ್ಮ ಯತ್ನವನ್ನು ಸಫಲಮಾಡಿಕೊಳ್ಳುವದಕ್ಕೆ ಅತ್ಯವಶ್ಯಕವಾದ ನಮ್ಮ ಸ್ವಂತ ಶಕ್ತಿಯು ಜ್ಞಾನವು, ಇಂಥಾಸ್ಥಿತಿಯಲ್ಲಿದ್ದರೆ, ನಮಗಾಗದು. ಬಲವಾದ ಯತ್ನದಿಂದ ಆತ್ಮಸಹಾಯವನ್ನು ಮಾಡಿಕೊಳ್ಳಲಿಚ್ಛಿಸುವವನಿಗೆ ಬಡತನವು ದುರ್ಭಾಗ್ಯದ ಫಲವೆಂಬುವದಕ್ಕಿಂತ ದೇವರು ಅವನಿಗೆ ಕೊಟ್ಟ ವರವೆಂಬದೇ ತಕ್ಕದ್ದೆಂಬದಕ್ಕೆ ಸಂದೇಹವಿಲ್ಲ. ಯಾಕೆಂದರೆ ಬಡತನವುಳ್ಳವನೇ ಈಪ್ರಪಂಚದ ಬಾಧೆಗಳನ್ನು ಸಹಿಸು

ವದಕ್ಕೆ ತಕ್ಕವನಾಗುತ್ತಾನೆ. ಈ ಬಾಧೆಗಳಲ್ಲಿ ಕೆಲಜನರು ತಮ್ಮ ಯೋಗ್ಯತೆಯು ಕಡಿಮೆಯಾದರೂ ಚಿಂತಿಲ್ಲ, ಸೌಖ್ಯವಿರಲಿ ಯೆಂದು ಅಪೇಕ್ಷಿಸುತ್ತಾರೆ. ಆದಾಗ್ಯೂ, ತಕ್ಕ ವಿಚಾರವುಳ್ಳವರಾಗಿ ಪ್ರಮಾಣಿಕರೆಂದೆನಿಸಿ ಕೊಳ್ಳುವವರಿಗೆ ಅವುಗಳಲ್ಲಿ ತ್ರಾಣೆಯೂ, ನಂಬಿಗೆಯೂ, ಜಯವೂ ಉಂಟಾಗುವದು. ಬೇಕನ್ನನು ನುಡಿದದ್ದೇನಂದರೆ, "ಮನುಷ್ಯರು ತಮ್ಮ ಸ್ವಂತಸಂಪತ್ತಿಯನ್ನೂ, ಶಕ್ತಿಯನ್ನು ಚನ್ನಾಗಿ ತಿಳಿದುಕೊಳ್ಳುತ್ತಾರೆಂದು ತೋರುವದಿಲ್ಲ; ಸಂಪತ್ತಿಯು ತಕ್ಕಷ್ಟಕ್ಕಿಂತ ಹೇಚ್ಚು ದೊಡ್ಡದೆಂತಲೂ, ಶಕ್ತಿಯು ಬಹುಚಿಕ್ಕದೆಂತಲೂ ಯೆಣಿಸುತ್ತಾರೆ. ತನ್ನಲ್ಲಿ ಇರತಕ್ಕ ಸಂಬಿಗೆಯಿಂದಲೂ, ಆತ್ಮಸಂಯಮನದಿಂದಲೂ ಮನುಷ್ಯನು ತನ್ನ ಸ್ವಂತಸವಿಯಾದ ಅನ್ನಪಾನಗಳನ್ನು ಸೇವಿಸುವದಕ್ಕೂ ತನ್ನ ಉದರಪೋಷಣೆಗಾಗಿ ನಿಜವಾದ ಅಂತಃಕರಣದಿಂದ ವಿದ್ಯಾಭ್ಯಾಸವನ್ನು, ಕಷ್ಟವನ್ನು ಮಾಡುವದಕ್ಕೂ, ತನ್ನವಶದಲ್ಲಿರುವ ಒಳ್ಳೇಒಡವೆಗಳನ್ನು ಬಹು ಜಾಗ್ರತೆಯಿಂದ ವೆಚ್ಚಮಾಡುವದಕ್ಕೂ ಕಲಿಯುತ್ತಾನೆ".

ಸಂಪತ್ತಿಯಿಂದ ಮನುಷ್ಯರಿಗೆ ಸುಖಸಂತೋಷಗಳಲ್ಲಿ ಮನಸೋ ಇಚ್ಛೆಯಾಗಿ ವರ್ತಿಸಬೇಕೆಂಬ ಮೋಹ ಹುಟ್ಟುಗುತ್ತದೆ; ಈ ಮೋಹವು ಮನುಷ್ಯಜಾತಿಯಲ್ಲಿ ಅತಿಸಾಧಾರಣವಾಗಿರುವಕಾರಣ, ಸಂಪತ್ತಿಯುಳ್ಳವರಾದಾಗ್ಯೂ, ತಮ್ಮ ಕಾಲದಲ್ಲಿ ನಡೆಯುವ ದೊಡ್ಡದೊಡ್ಡ ಕೃತ್ಯಗಳಲ್ಲಿ ಮನಃಪೂರ್ವಕವಾಗಿ ತೊಡಗುವಂಥವರ, ಅಂದರೆ ದುಂದುಗಾರಿಕೆಯನ್ನು ತಿರಸ್ಕರಿಸಿ ಉದ್ಯೋಗದಲ್ಲಿ ಕಾಲಕಳೆಯುವಂಥವರ, ಕೀರ್ತಿಯು ಯಲ್ಲಕ್ಕೂ ಹೆಚ್ಚಿನದೆಂದು ಯೆಣಿಸಲ್ಪಡುತ್ತ

ದೆ. ಇಂಗ್ಲಿಷದೇಶದ ನಿವಾಸಿಗಳಲ್ಲಿ ಧನವಂತರೆಂದೆನಿಸಿಕೊಳ್ಳುವವರು ಸೋಮಾರಿಗಳಲ್ಲೆಂಬ ಸಂಗತಿಯು ಅವರಿಗೆ ಬಹು ಮಾನವುಳ್ಳದ್ದಾಗಿರುತ್ತದೆ; ಯಾಕೆಂದರೆ ಅವರು ರಾಜ್ಯದಾಡಳಿತೆಯಲ್ಲಿ ತಾವು ಮನಸು ಹಾಕತಕ್ಕಷ್ಟು ಹಾಕುವದಲ್ಲದೆ, ಅದರಿಂದ ಉಂಟಾಗುವ ಮೋಸಕ್ಕೆ ಪಾಡಿಕೆಯಾಗಿ ತಕ್ಕಷ್ಟಕ್ಕಿಂತ ಹೆಚ್ಚು ಧೈರ್ಯದಿಂದ ಯೆದುರಾಗುತ್ತಾರೆ. ಸಿಬಾಸ್ತಪೋಲದ ಕಾಳಗವು ನಡೆಯುತ್ತಿರುವಾಗ ಒಬ್ಬ ಕಿರಿಮೆತರದ ದಂಡುದ್ಯೋಗಸ್ಥನು (ಐಶ್ವರ್ಯವಂತನಾದಾಗ್ಯೂ) ತನ್ನ ದಂಡಿನ ಸಂಗಡ ಹುದಿಲು ಕೆಸರುಗಳಲ್ಲಿ ಕಷ್ಟದಿಂದ ನಡೆಯುವದನ್ನು ನೋಡಿ ಬೇರೊಬ್ಬನು ನುಡಿದದ್ದೇನಂದರೆ, “ನೋಡಿರಿ, ವರ್ಷಕ್ಕೆ ೧೫೦೦೦೦ ರೂಪಾಯಿಗಳ ಆದಾಯವುಳ್ಳವನು ಹ್ಯಾಗೆ ಹೋಗುತ್ತಾನೆ!”. ನಮ್ಮ ಸ್ವಂತ ಕಾಲದಲ್ಲಿ ಸಹ ಸಿಬಾಸ್ತಪೋಲದ ಉದಾಸೀನವಾದ ಛಳಿಯುಳ್ಳ ಇಳುಕಲುಗಳಲ್ಲಿಯೂ, ಶೆಖೆಯುಳ್ಳ ಹಿಂದುದೇಶದ ಭೂಮಿಯಲ್ಲಿಯೂ ನಮ್ಮ ದೇಶದ (ಇಂಗ್ಲಂಡದ) ಉತ್ತಮ ವರ್ಗದವರ ಗೌರವವುಳ್ಳ ಆತ್ಮಸಂಯಮನವೂ, ದೇಶಾಭಿಮಾನವೂ ಯೆಷ್ಟೋಸಾರಿ ಪರೀಕ್ಷಿಸಲ್ಪಟ್ಟದೆ. ಈ ದೇಶಗಳ ಕಾಳಗಗಳಲ್ಲಿ ಐಶ್ವರ್ಯವೂ, ಬಹುಮಾನವೂ ಉಳ್ಳ ಶೂರರಾದ ಯೆಷ್ಟೋ ದೊಡ್ಡಮನುಷ್ಯರು ತಮ್ಮ ದೇಶದ ಅಭಿಮಾನಕ್ಕೋಸ್ಕರವಾಗಿ ಪ್ರಾಣಹಾನಿಯು ಪಟ್ಟರು, ಅಥವಾ ದೊಡ್ಡ ಅಪಾಯಹೊಂದಿದರು.

ತತ್ವಜ್ಞಾನ, ಶಾಸ್ತ್ರಗಳ ಅಭ್ಯಾಸವೆಂಬ ಹೆಚ್ಚು ಶಾಂತಿಯುಳ್ಳ ಉದ್ಯೋಗದಲ್ಲಿ ಧನವಂತರು ಅಪ್ರಸಿದ್ಧರೇ ಉಳಿದರೆಂಬ ಹಾಗಿಲ್ಲ. ಉದಾಹರಣಾರ್ಥವಾಗಿ, ಅರ್ವಾಚೀನ

ತತ್ವಜ್ಞಾನದ ತಂದೆಯೆಂದೆನಿಸಿ ಕೊಂಡ ಬೇಕನ್ನನೂ, ವರ್ಸ್ಟರನೂ, ಬಾಯಿಲ್ಲನೂ, ಕಾವೆಂದಿಶನೂ, ತಾಲ್ಬತ್ತನೂ, ಇವರೆಲ್ಲರು ರಾಸನೂ ಶಾಸ್ತ್ರಜ್ಞಾನದಲ್ಲಿ ಹೆಸರಾದವರು. ಕಡೆಯವನು ಈ ದೇಶದ ಘನವಂತರಲ್ಲಿ ದೊಡ್ಡ ಯಾಂತ್ರಿಕನೆಂದು ಎಣಿಸಬಹುದು. ಇವನು ಆಸ್ತಿವಂತರ ಮನೆಯಲ್ಲಿ ಹುಟ್ಟಿದ್ದರೆ ಹೊಸ ಶೋಧಗಳನ್ನು ಮಾಡುವವರಲ್ಲಿ ಬಹುಶಃ ಉತ್ತಮಪ್ರತಿಯವನೆಂದೆನಿಸಿ ಕೊಳ್ಳುತ್ತಿದ್ದನು. ಕಂಪೂರಿಕೆಯ ಕೆಲಸದ ಜ್ಞಾನವು ಇವನಿಗೆ ಬಹು ಸರಸಾಗಿರುವ ಕಾರಣ ಒಂದು ಪ್ರಸಂಗದಲ್ಲಿ ಇವನ ಪದವಿಯನ್ನು ಅರೆಯದಂಥ ಒಬ್ಬ ಗೃಹಸ್ಥನು ತನ್ನ ದೊಡ್ಡ ಕೈಗಾರಿಕೆಯ ಸಾಲೆಯಲ್ಲಿ ಹೊಡೆಗಲ್ಲಿನಹತ್ತರ ಕೂತು ಕೆಲಸಮಾಡುವ ಕಮ್ಮಾರಿಕೆಯ ಉದ್ಯೋಗವನ್ನು ಸ್ವೀಕರಿಸೆಂದು ಬಹಳ ಅಗ್ರಹ ಮಾಡಿದನು. ಇವನಿಂದ ರಚಿಸಲ್ಪಟ್ಟ ಕಾರಣ ರಾಸ್ ಯೆಂಬ ಹೆಸರಿನಿಂದಲೇ ಪ್ರಸಿದ್ಧವಾದ ದೂರದರ್ಶಕಯಂತ್ರವು (ದುರ್ಬಿನ್ನಿಯು) ಈ ವರೆಗೆ ರಚಿಸಲ್ಪಟ್ಟ ಆಜಾತಿಯಯಂತ್ರಗಳಲ್ಲಿ ಅತಿವಿಲಕ್ಷಣವಾದದ್ದೆಂಬದಕ್ಕೆ ಸಂದೇಹವಿಲ್ಲ.

ಆದರೆ ಘನವಂತರಲ್ಲಿ ಅತಿಪ್ರಖರವಾದ ಕಷ್ಟಪ್ರಯತ್ನವುಳ್ಳವರನ್ನು ನಾವು ಮುಖ್ಯವಾಗಿ ರಾಜ್ಯದಾಡಳಿತೆಯಲ್ಲಿಯೂ, ಕವಿತಾಜ್ಞಾನದಲ್ಲಿಯೂ ನೋಡುತ್ತೇವೆ. ಬೇರೆಯೆಲ್ಲ ಉದ್ಯೋಗಗಳಂತೆ ಈ ಉದ್ಯೋಗಗಳಲ್ಲಿ ಸಹ ಯತ್ನದಿಂದಲೂ, ಅಭ್ಯಾಸದಿಂದಲೂ, ರೂಢಿಯಿಂದಲೂ ಮಾತ್ರ ಮನೋರಥವು ಕೈಗೂಡುತ್ತದೆ. ಆದದರಿಂದ ದೊಡ್ಡವನೆಂದೆನಿಸಿಕೊಳ್ಳುವ ಪ್ರಧಾನನು, ಅಥವಾ ಪಾರ್ಲಿಮೆಂಟ ಸಭೆಯಲ್ಲಿ ಹೆಸರಾದವನು ಅತಿಶ್ರಮಪಟ್ಟು ಕೆಲಸಮಾಡು

ವವನು ಇರುವದುಅವಶ್ಯಕವೇ. ಪಾಲ್ಮರಸ್ತನ್ನನೆಂಬವನು ಇಂಥವನೇ; ಡರ್ಬಿ, ರಸೆಲ, ಡಿಸರಾಯುಲೀ, ಗ್ಲಾಡಸ್ಟನ್, ಇವರೆಲ್ಲರು ಇದೇವಿಧದ ವ್ಯಕ್ತಿಗಳುಂಟು. ಒಂದುದಿವಸದಲ್ಲಿ ಪಾಲಿಮೆಂಟುಸಭೆಯಕೆಲಸವು ಬಹಳವಾದರೆ ೧೦ ತಾಸಗಳವರೆಗೆಮಾತ್ರ ನಡೆಯಬಹುದೆಂಬು ಈಗ ಹ್ಯಾಗೆ ಕಟ್ಟಳೆಯುಂಟೋ, ಹಾಗೆ ಇವರವೇಳೆಯಲ್ಲಿ ಇದ್ದಿಲ್ಲ. ಆದವರಿಂದ ಆ ಸಭೆಯಕೆಲಸವು ಒತ್ತರದಿಂದನಡೆಯುವಾಗ ಇವರು ಇಮ್ಮಡಿಯಾಗಿ ಕೆಲಸಮಾಡುತ್ತಿದ್ದರು; ಹಗಲೂ, ರಾತ್ರಿಯೂ ಇವರಿಗೆ ಬಹುಶಃ ವಿಶ್ರಾಂತಿಯಿದ್ದಿಲ್ಲ. ಇತ್ತಲಾಗಿ ಈವಿಧವಾಗಿ ಶ್ರಮಪಟ್ಟು ಕೆಲಸಮಾಡಿ ಹೆಸರಾದವರಲ್ಲಿಯೇ ಸರ್‌ರಾಬರ್ಟಪೀಲನೆಂಬವನು ಯೆಣಿಸತಕ್ಕವನು. ಏಕಪ್ರಕಾರನಾಗಿ ಕುಂದದೆ ಬಹುಕಾಲದವರೆಗೆ ವಿಚಾರನಡಿಸುವಶಕ್ತಿಯು ಇವನಲ್ಲಿ ಅತಿಶಯವಿತ್ತು; ಅವೋರಿಗೆ ವಿಚಾರದಲ್ಲಿ ತೊಡಗುವದಕ್ಕೂ ಇವನು ಹಿಂಜರಿಯುತ್ತಿದ್ದಿಲ್ಲ. ಇವನು ಮಾಡಿದ ದೊಡ್ಡ ದೊಡ್ಡ ಕೃತ್ಯಗಳಿಂದ, ಸಾಧಾರಣತರವಾದ ವಿಚಾರಶಕ್ತಿಯುಳ್ಳ ಮನುಷ್ಯನು ತನ್ನದಣುವಿಲ್ಲದ ಉದ್ಯೋಗದಿಂದಲೂ, ಉದ್ರೇಕದಯತ್ನದಿಂದಲೂ, ಯೆಷ್ಟುವರೆಗೆ ತನ್ನ ಮನೋರಥವನ್ನು ಸಾಧಿಸಿಕೊಳ್ಳುವನೆಂಬದರದೊಂದು ಅತ್ಯುತ್ತಮ ಉದಾಹರಣೆ ಯುಂಟಾಗಿಧೆ ಯೆಂಬದಕ್ಕೆ ಸಂದೇಹವಿಲ್ಲ. ಇವನು ಪಾರ್ಲಿಮೆಂಟ ಸಭೆಯ ಸಭಾಸದನಾಗಿದ್ದ ನಾಲ್ವತ್ತು ವರ್ಷಗಳಲ್ಲಿ ಇವನು ಕೈಕೊಂಡಶ್ರಮವು ಇಷ್ಟೆಂದು ವರ್ಣಿಸುವದು ಅಸಾಧ್ಯವು. ಇವನು ತನ್ನ ಮನಸ್ಸಿಗೇ ಹೆದರಿಕೊಂಡು ನಡಿಯುತ್ತಿದ್ದದ್ದಲ್ಲದೆ ತಾನು ಕೈಕೊಂಡಕೆಲಸವನ್ನು ಪರ

ಉದ್ರೇಕಿಸದಂತೆ ಕಡೆಗಾಣಿಸುತ್ತಿದ್ದನು. ಇವನ ಯಾವ ತ್ತು ಸಂಭಾಷಣೆಗಳಲ್ಲಿಯೂ ತೋರುವದೇನಂದರೆ, ಇವನು ತಾನು ಆಲೋಚಿಸುತ್ತಿದ್ದ ವಿಷಯವನ್ನು ಬಹುಪ್ರಯಾಸಪಟ್ಟು ಪೂರ್ಣವಾಗಿ ತಿಳಿದುಕೊಳ್ಳುತ್ತಿದ್ದನು. ಇವನು ಒಂದುಕೆಲಸಕ್ಕೆ ಕೈಹಚ್ಚಿದಮೇಲೆ ಅದರಲ್ಲಿ ಬಹುಕಾಲ ತಕ್ಕಷ್ಟಕ್ಕಿಂತ ಹೆಚ್ಚು ದುಡಿಯುತ್ತಿದ್ದನು. ತಾನು ಸಂಭಾಷಣೆಯ ಮಾಡುವ ಪ್ರಸಂಗಗಳಲ್ಲಿ ಅದನ್ನು ಕೇಳುವದಕ್ಕೆ ಕೂತಿರುವ ಇತರಸಭಾಸದರ ಬೇರೆ ಬೇರೆ ವಿಚಾರಗಳಿಗೂ, ಮತಗಳಿಗೂ ತನ್ನಅಭಿಪ್ರಾಯವು ಅನುಕೂಲವಾಗುವಂತೆ ಕೈಲಾದಮಟ್ಟಿಗೂ ಯತ್ನಿಸುತ್ತಿದ್ದನು. ತಾತ್ಪರ್ಯವೇನಂದರೆ, ಇವನಲ್ಲಿ ಪ್ರಬಲವಾದ ವ್ಯವಹಾರಚಾತುರ್ಯವೂ, ಬಲವಾದ ಧೋರಣೆಯೂ ಇದ್ದದ್ದಲ್ಲದೆ, ಇವನು ಸ್ಥಿರವಾದ ಉದ್ಯೋಗದಿಂದಲೂ, ಲಕ್ಷ್ಯದಿಂದಲೂ ತಾನು ಹಿಡಿದ ಕೆಲಸದ ಪರಿಣಾಮವನ್ನು ತನ್ನಮನಸ್ಸಿನಂತೆ ಮಾಡಿಕೊಳ್ಳುವ ಸಾಮರ್ಥ್ಯವುಳ್ಳವನಿದ್ದನು. ಒಂದುಬಗೆಯಿಂದ ನೋಡಲಾಗಿ ಇವನು ಯೆಲ್ಲರಿಗಿಂತ ಹೆಚ್ಚಿನವನೆಂದು ಹೇಳಬಹುದು; ಹೆಚ್ಚು ಹೆಚ್ಚು ಕಾಲಹೋದಂತೆ ಇವನ ಮತಗಳು ಹೆಚ್ಚು ಹೆಚ್ಚು ವಿಸ್ತಾರವಾಗುತ್ತಿದ್ದವು; ವಾರ್ಧಕ್ಯವು ಪ್ರಬಲವಾಗುತ್ತ ಹೋದಹಾಗೆ ಇವನ ಸ್ವಭಾವವು ಆಕುಂಚಿತವಾಗುವದಕ್ಕೆ ಬದಲಾಗಿ ಪಕ್ವವಾಗುತ್ತ ಹೋಯಿತು; ಕಡೆತನಕ ಇವನು ಹೊಸವಿಚಾರಗಳನ್ನು ಒಪ್ಪಿಕೊಳ್ಳುವದಕ್ಕೆ ಸಿದ್ಧನಾಗಿದ್ದನು; ಇವನು ತಕ್ಕಮಟ್ಟಿಗಿಂತ ಹೆಚ್ಚು ಸಂಶಯವುಳ್ಳವನೆಂದು ಯೆಷ್ಟೋಜನರು ಯೆಣಿಸಿದಾಗ್ಯೂ, ಹಳೆನಡತೆ, ರೀತಿಮುಂತಾದವುಗಳಲ್ಲಿ ತಾನು ಭೇ

ದಾಭೇದವಿಲ್ಲದೆ ಪ್ರೀತಿಯುಳ್ಳವನಾಗಬೂರದೆಂಬದಾಗಿ ಯುಕ್ತ್ಯಸುತ್ತಿದ್ದನು. ಈಪ್ರೀತಿಯು ಇವನಂತೆ ಅನುಭವವುಳ್ಳವರ ಮನಸ್ಸಿಗೆ ಕೇವಲ ಅಮೃತತುಲ್ಯವಾಗಿರುವದಲ್ಲದೆ ಇದರಿಂದ ವಾರ್ಧಕ್ಯದಲ್ಲಿ ಮನಸ್ಸಿಗೆ ಬಹು ಕ್ಲೇಶವಾಗುತ್ತದೆ.

Champu Ramayen and Champu Bharata with commentaries in Canarese by Mr. Shantaviraya.

ಶಾಂತವೀರ ರಾಜದೇವ ಕೃತಕರ್ನಾಟಕ ವ್ಯಾಖ್ಯಾನಗಳು.

॥ಚಂಪೂಭಾರತೆಸವ್ಯಾಖ್ಯಾನೆಪ್ರಥಮಸ್ತಬಕಃ॥

॥ವಸಂತತಿಲಕಾವೃತ್ತಂ॥

ಯತ್ರಾಂಗನಾವದನಯಾಮವತೀಶಹೃಷ್ಯ।
ಚ್ಚಂದ್ರಾಶ್ಮಸೌಧಗಳಿತಸ್ಸಲಿಲಪ್ರವಾಹಃ।
ಬೃಂದಾರಕೇಂದ್ರನಗರೀಬೃಹದುತ್ಸವಾಯ।
ಮಂದಾಕಿನೀತಿಲಭತೇಮಹತೀಮಭಿಖ್ಯಾಂ॥೬॥

॥ಅನ್ವಯಃ॥

ಯತ್ರ=ಯಾವಹಸ್ತಿನಾವತಿಯಲ್ಲಿ, ಅಂಗನಾವದನಯಾಮವತೀಶಹೃಷ್ಯಚ್ಚಂದ್ರಾಶ್ಮಸೌಧಗಲಿತಃ, ಅಂಗನಾ=ಸ್ತ್ರೀಯರ, ವದನ=ಮುಖವೆಂಬ, ಯಾಮವತೀಶ=ಚಂದ್ರನಿಂದ ಹೃಷ್ಯತ್=ದ್ರವಿಸುವ, ಚಂದ್ರಾಶ್ಮ=ಚಂದ್ರಕಾಂತ ಶಿಲೆಗಳ, ಸೌಧ=ಅರಮನೆಗಳಿಂದ ಗಲಿತಃ=ಸೋರಿದಂಥ, ಸಲಿಲಪ್ರವಾಹಃ, ಸಲಿಲ=ಉದಕದ, ಪ್ರವಾಹಃ=ಹರಿವಿಕೆಯು ವೃಂದಾರಕೇಂದ್ರನಗರೀಬೃಹದುತ್ಸವಾಯ, ವೃಂದಾರಕ=

ದೇವತೆಗಳಿಗೆ, ಇಂದ್ರ=ಶ್ರೇಷ್ಠನಾದ ದೇವೇಂದ್ರನ, ನಗರೀ=ಪಟ್ಟಣದ, ಬೃಹತ್‌ಉತ್ಸವಾಯ=ಘನೋತ್ಸವದಗೋಸ್ಕರ, ಮಂದಾಕಿನೀ ಇತಿ=ಮಂದಾಕಿನೀ ಎಂದು। ಭಾಗಿರಥಿ ಮಹತೀಂ=ಶ್ಲಾಘ್ಯವಾದಂಥ। ಅಭಿಖ್ಯಾಂ=ನಾಮವನ್ನು। ಲಭತೇ=ಪಡೆಯುತ್ತದೆ.

॥ಶಾಸ್ತ್ರವಿಷಯಃ॥

ಪ್ರವಾಹಃ ಕರ್ತೃ, ಅಭಿಖ್ಯಾಂ ಕರ್ಮ, ಲಭತೇ ಕ್ರಿಯಾಪದ, ಸಕರ್ಮಕ, ಕ್ರ, ಪ್ರ.; ಮಂದಾಕಿನೀ=(ಮಂದ=ಮೆಲ್ಲನೆ ÷ ಧಾ, ಅಕ್=ಗಮಿಸೋಣ + ಪ್ರ, ಇನೀ) ಲಭತೇ=(ಧಾಡು. ಲಭ್‌ಆ. ಷ್=ಪ್ರಾಪ್ತವಾಗೋಣ + ತೇ) ಲಟ್, ಆತ್ಮನೇ ಪದ, ಪ್ರಥಮಪುರುಷ, ಏಕವಚನ.

ಅಪಹ್ನವಾಲಂಕಾರದಿಂದಲೂ ರೂಪಕಾಲಂಕಾರದಿಂದಲೂ ಸಂಕರವಾಯಿತು. ಅದ್ಭುತರಸ.

॥ಭಾವಾರ್ಥಃ॥

ಹಸ್ತಿನಾವತೀ ಪಟ್ಟಣದಲ್ಲಿರುವ ಯವ್ವನ ಸ್ತ್ರೀಯರ ಮುಖಚಂದ್ರಮಂಡಲದಿಂದ ಸೋರಲ್ಪಟ್ಟ ಚಂದ್ರಶಿಲೆಯ ಉಪ್ಪರಿಗೆಗಳ ನೀರಿನ ಪ್ರವಾಹವು ಅಮರಾವತೀ ಪಟ್ಟಣದ ಉತ್ಸವದಗೋಸ್ಕರ ಮಂದಾಕಿನೀ ಎಂಬ ಯೋಗ್ಯವಾದ ನಾಮವನ್ನು ಪಡೆದ ಹಾಂಗೆ ಶೋಭಿಸಿತು.

॥ಚಂಪೂರಾಮಾಯಣೇಸ ವ್ಯಾಖ್ಯಾನೆ ಬಾಲಕಾಂಡಃ॥

ವಸಂತತಿಲಕಾವೃತ್ತಂ॥

ವಾಚಂನಿಶಮ್ಯ ಭಗವಾನಥನಾರದಸ್ಯ।
ಪ್ರಾಚೇತಸಃ ಪ್ರವಚಸಾಂಪ್ರಥಮಃ ಕವೀನಾಂ॥
ಮಾಧ್ಯಂದಿನಾಯನಿಯಮಾಯಮಹರ್ಷಿಸೇವ್ಯಾಂ।

ಪುಣ್ಯಾಮವಾಪತ್ರಮಸಾಂತಮಸಾಂನಿಹಂತ್ರೀಂ॥೬॥

॥ಅನ್ವಯಃ॥

ಅಥ=ಅನಂತರದಲ್ಲಿ। ಪ್ರವಚಸಾಂ=ಕುಶಲವಾಕ್ಯಗಳುಳ್ಳಂಥ। ಕವೀನಾಂ=ವ್ಯಾಸಾದಿಕವಿಗಳಿಗೆ। ಪ್ರಥಮಃ=ಮೊದಲಿಗನಾದಂಥ।ಭಗವಾನ್=ಪೂಜ್ಯನಾದಂಥ। ಪ್ರಾಚೇತಸಃ=ವಾಲ್ಮೀಕಮುನಿಯು। ನಾರದಸ್ಯ=ನಾರದಮುನಿಯ। ವಾಚಂ=ವಾಕ್ಯವನ್ನು। ನಿಶಮ್ಯ=ಕೇಳಿ। ಮಾಧ್ಯಂದಿನಾಯ=ಮಧ್ಯಾಹ್ನದ। ನಿಯಮಾಯ=ಕ್ರಿಯದಗೋಸ್ಕರ। ಮಹರ್ಷಿಸೇವ್ಯಾಂ, ಮಹರ್ಷಿ=ಮಹಾಮುನಿಗಳಿಂದ। ಸೇವ್ಯಾಂ=ಸೇವಿಸಿಕೊಳತಕ್ಕಂಥ। ಪುಣ್ಯಾಂ=ಪವಿತ್ರವಾದಂಥ। ತಮಸಾಂ=ಅಜ್ಞಾನವೊದಲಾದವುಗಳನ್ನು। ನಿಹಂತ್ರೀಂ=ನಾಶಮಾಡುವಂಥ। ತಮಸಾಂ=ತಮಸಾಎಂಬ ಹೊಳೆಯನ್ನು। ಆವಾಪ=ಹೊಂದಿದನು.

॥ಶಾಸ್ತ್ರವಿಷಯಃ॥

ಪ್ರಾಚೇತಸಃ=(ಪ್ರಚೇತಸೋಽ ಪತ್ಯಂಪುಮಾನ್=ಪ್ರಾಚೇತಸಃ)ಈಸಮಾಸದ ಅರ್ಥಪ್ರಚೇತಸನಮಗನಾದ ವಾಲ್ಮೀಕಿ, ಅಪತ್ಯಾರ್ಥದಲ್ಲಿ ಅಣ್‌ಪ್ರತ್ಯಯವು; ಮಾಧ್ಯಂ=ಮಧ್ಯೇಭವಃ; ಅನುಪ್ರಾಶ್ಯಬ್ದಾಲಂಕಾರಃ; ಪ್ರಾಚೇತಸಃಕರ್ತೃ, ತಮಸಾಂಕರ್ಮ, ಆವಾಪಕ್ರಿಯಾಪದ, ಸ, ಕ, ಪ್ರ.; ಆವಾಪ=(ಅವ+ಆಪ್+ಅ) ಭೂತಕಾಲ, ಲಿಟ್, ಪ್ರಥಮಪುರುಷಏಕವಚನ,

॥ಭಾವಾರ್ಥಃ॥

ಆದಿಕವಿಯಾದಂಥ ವಾಲ್ಮೀಕಮುನಿಯು ನಾರದಮುನಿಯವಾಕ್ಯವನ್ನು (ಬಾಲರಾಮಾಯಣೋಕ್ತಂ) ಕೇಳಿ ಮಹಾ

ಮುನಿಗಳಿಂದ ಸೇವಿಸಿಕೊಂಬುವಂಥ, ಪವಿತ್ರವಾದಂಥ, ಅಜ್ಞಾನವನ್ನು ನಾಶಮಾಡುವಂಥ, ತಮಸಾಎಂಬ ಹೆಸರುಳ್ಳ ನದಿಯನ್ನು ಮಧ್ಯಾಹ್ನಿಕದ ನೇಮದ ಗೋಸ್ಕರವಾಗಿ ಹೊಂದಿದನು.

(New Poetry).

ವಿನಾಯಕನ ಸ್ತುತಿ.

ಪದ॥ (ಧಾಟಿ—ದಯಮಾಡಾಲೊಲ್ಲ್ಯ ದಯಾನಿಧೆ
ಎಂಬಂತೆ.)

ಗಜಮು[೧]ಖೋ ಏಕದಂ[೨]ತಾ ಭಜಿಪೆ ನಿರ್ಮಲ ನಿಶ್ಚಿಂತಾ॥
ತ್ರಿಜಗಾದೊಳಿಹ ಸುಜನರ ವಿಘ್ನಗಳನೂ[೩]ಕಿ।
ಭಜಕಜನರಕಲ್ಪಕು[೪]ಜದೊಲ್ರಾಜಿಸುತಿ[೫]ಪ್ಪ॥ಪಲ್ಲ॥
ಶಂಭುನಂದನನೆ। ನಂಬಿದೆಕಾಯೋ। ಲಂಬೋದರ[೬]ನೆ॥
ಡಂಬಲಬಿಡಿಸಿಭವಾಂಬುಧಿದಾಟಿ[೭]ಸೊ। ಕಂಬುಕಂಧ[೮]ರಜಗದಂ
ಬಾ। ಸಂಭವನೆ॥೧॥ ಪುರಾಣಶಾಸ್ತ್ರ॥ ನಿಗ[೯]ಮವೊದಲಾದ
ಚರಿತ್ರ॥ ಪ್ರಾರಂಭದಲಿನಿಂ। ನಾರಂಭಪೂಜೆಯು। ಶಾರದೆವ
ಡಗೊಂಡು। ದೂರಡ[೧೦]ರೊಡಿಸು॥೨॥ ಹನುಮೋಕ್ಷಾಪ್ರಿಯಾ।
ಕಾಯುವದೆಂದಾವಲಿದುನಿಜೇಯಾ॥ ಸನುಮತದಲಿಸು।ದ್ಗುಣ
ವಿದ್ಯೆವಿನಯಗಳನಗಿತ್ತುಸಲಹೈ।ಮುನಿಕುಲವರ್ಯಾ[೧೧]॥೩॥

ವೈಷ್ಣವ ಮತಸ್ಥಾಪಕನಾದ ಮಧ್ವಮುನೀ ವರ್ಣನೆ.

॥ಪದ॥ (ಧಾಟಿ—"ಸಕಲಗ್ರಹಬಲನೀನೆ ಸರಸಿಜಾಕ್ಷಾ")

---

೧ ಆನೆಮೊಗ ೨ ಏಕ+ದಂತಾ=ಏಕದಂತಾ ೩ ನಿವಾರಿಸಿ ೪ ಕಲ್ಪವೃಕ್ಷ ೫ ಶೋಭಿಸುತಿರುವಂಥ ೬ ಇಳಿ ಹೊಟ್ಟೆಯುಳ್ಳವ ೭ ಅಭ್ಯಾಸ. ೮ ಶಂಖದೊಲೆಗ್ಗೊರಳುಳ್ಳವ ೯ ವೇದ ೧೦ ಆತಂಕಗಳು, ವಿಘ್ನಗಳು. ೧೧ ಶ್ರೇಷ್ಠ.

ಎಂಬದತೆ॥

ಮಧ್ವಮುನಿವರಿಯಾ। ಅನುಪಮಚಾರುಚರಿಯಾ[೧]॥
ಸದ್ವೈಷ್ಣವಾಗ್ರಣಿ[೨]। ಪ್ರಸಿದ್ಧಗುರುಖರಿಯಾ॥ಪಲ್ಲ॥
ದಶಶಿರನು[೩] ಶಶಿವದನೆ। ಸೀತೆಯನ್ನಪಹರಿಸಿ। ಅಸುರಬಲವಂ
ಕೊಂಡು ರಣಕೆಬರಲು॥ ಮಕಕ[೪]ದೊಳ್ಯೆಮರಾಯ। ನೊಕಕೆ
ಸಂನ್ಯವ ಕಳುಹಿ[೫]। ಅಸುರಾರಿ ರಾಘವಗೆ ತೋಷಿಸಿದೆ ಹನು
ಮಾ॥೧॥ ಪಂಡುಸುತಭೀಮ ನಿಶ್ಶೀಮದ್ವಾಪರದಿಬರ್‍ತು। ಭಂ
ಡು[೬]ಕುರುಕುಲದ ಶಿರಚಂಡನಾಡ್ದೀ[೭]॥ ಹಿಂಡಿದುಶ್ಶಾಸನನರ
ಕ್ಷತದಿಂ[೮] ದ್ರೌಪದಿಯ। ಮಂ[೯]ಡೆಬಾಚಿದೆ[೧೦] ಭಳಿರೆ[೧೧] ಕಲಿ[೧೨]
ಭೀಮಶೈನಾ॥೨॥ ಅದ್ವೈತಮತತಿಮಿರ[೧೩]ಖದ್ಯೋ[೧೪]ತನೆನಿ
ಸಿಳೆಯಾ। ಸುದ್ಧರಿಸೊಲವಕ[೧೫]ಯಿಂ ಮಧ್ವಗೆಹಾಖ್ಯಾ[೧೬]॥ ಸಿ
ದ್ಧಪುರುಷನಬಸುರಿ[೧೭]। ಉದ್ಧರಿಸಿಹನುವೆಂಕಟ। ನುದ್ದಾಮ[೧೮]
ಗುಣದಿಭಜಿಸಿದೆ ಪೂರ್ಣಮಧ್ವಾ॥೩॥

ತಾರೀಖು ೧೫ ನವಂಬರ ೧೮೭೨.

ಶ್ರೀನಿವಾಸ ರಾಮಚಂದ್ರ ವ್ಹಾಯಿಸ ಪ್ರಿನ್ಸಿ
ಪಾಲ ಟ್ರೇನಿಂಗಕಾಲೇಜ ಬೆಳಗಾಂವ.

NOTICES.

ನೋಟೀಸುಗಳು.

ಯಾವತ್ತು ಜನರಿಗೂ, ಸ್ಕೂಲ ಮಾಸ್ತರರಿಗೂ ತಿಳಿಯು

---

೧ ಸರಿ ಇಲ್ಲದ ಪಳ್ಳ ಕೀರ್ತಿಯನ್ನು ಪಡೆದ ೨ ಮುಖ್ಯ ಶಿರೋಮಣಿ ೩ ರಾವಣನು ೪ ಸೇನಾ ೫ ಕೊಂಡು. ೬ ದುಷ್ಟ ೭ ಸಂಹರಿಸಿದ ೮ ರಕ್ತದಿಂದ ೯ ತಲೆಹೆರಳು ೧೦ ಹಿಕ್ಕಿದೆ ೧೧ ಭಲೆಭಲೆ ೧೨ ಪರಾಕ್ರಮಿ ೧೩ ಕತ್ತಲೆ ೧೪ ಸೂರ್ಯ (ಅದ್ವೈತ ಮತವೆಂಬ ಕತ್ತಲೆಗೆ ಸೂರ್ಯನೋಪಾದಿಯಲ್ಲಿರುವ) ೧೫ ಇಚ್ಛೆ ೧೬ ಮಧ್ವಮುನೀತಂದೇ ಹೆಸರು ೧೭ ಹೊಟ್ಟೆ ೧೮ ಘನವಾದ.

ನಡಿಸುವದೇನೆಂದರೆ, ಮುಂದಿನ ವರುಷ “ವರ್ಣಪ್ರಾಯಿಝ್” ಪರೀಕ್ಷೆಯು ಅಕಟಂಬರ ಅಥವಾ ನವಂಬರ ತಿಂಗಳಲ್ಲಿ ಆಗುವದು. ಆದರೆ ಆ ಪರೀಕ್ಷೆಗೆ ಬರಬೇಕೆಂಬ ಅಪೇಕ್ಷೆಯುಳ್ಳವರಿಗೆ, ಒಂದು ತಿಂಗಳ ಪೂರ್ವದಲ್ಲಿ ಕನ್ನಡ ಶಾಲಾಪತ್ರಿಕೆಯಿಂದ ಇಂಥಾ ತಾರೀಖಿಗೆ, ಇಂಥಾ ಸ್ಥಳದಲ್ಲಿ ಪರೀಕ್ಷೆಗೆ ಬರಬೇಕೆಂದು ತಿಳಿಸೋಣ ವಾದೀತು. ಈ ಪರೀಕ್ಷೆಯ ನೇಮುಗಳನ್ನು ಅಕ್ಟೋಬರ ೧೮೭೧ ತಿಂಗಳ ಮಠಪತ್ರಿಕೆಯಲ್ಲಿ ನೋಡಬೇಕು. ತಾ|| ೯ನೇ ನವಂಬರ ಸಂನ್ ೧೮೭೨ ಇಸವಿ.

(Signed] J. F. FLEET.
ಅ. ಇ. ಇ. ದ. ಭಾಗ.

ಧಾರವಾಡ ಜಿಲ್ಹೇದಲ್ಲಿರುವ ಯಾವತ್ತು ಸ್ಕೂಲ ಮಾಸ್ತರರಿಗೆ—ಧಾರವಾಡ ಜಿಲ್ಹೇದ ಡಿಪ್ಯೂಟಿ ಇಜ್ಯೂಕೇಶನಲ್ ಇನಸ್ಪೆಕ್ಟರವರ ಕಡಿಂದ ಬರೆದು ತಿಳುಹಿಸುವದೇನಂದರೆ—ನಾವು ಸಾಲಿಗಳ ಪರೀಕ್ಷೆಕ್ಕೆ ಹೋದ ಸಮಯದಲ್ಲಿ ಸಾಲಿಯು ಸ್ಥಾಪನವಾದ ತಾರೀಖು, ಹೋದವರ್ಷ ಪರೀಕ್ಷೆಯಾದ ತಾರೀಖು ಇತ್ಯಾದಿ ಮಾಹಿತಿಯನ್ನು ಮಾಸ್ತರರಿಗೆ ಕೇಳಿದರೆ—ಅವರಿಗೆ ಗೊತ್ತಿಲ್ಲದೇ ಇರುವದರಿಂದ—ಅದೇ ಕಾಲಕ್ಕೆ ಹಿಂದಿನ ಕಾಗದ ಪತ್ರಗಳನ್ನು ಹುಡುಕುತ್ತಾ ಕೂಡ್ರುತ್ತಾರೆ—ಇದರಿಂದ ನಂಮ ವೇಳೆ ವ್ಯರ್ಥವಾಗಿ ಖರ್ಚ ಆಗುತ್ತದೆ—ಆದರೆ ಎಲ್ಲಾ ಮಾಸ್ತರರು ತಂಮ ತಂಮ ಸಾಲಿಗಳಎಲ್ಲ ಇತಿಹಾಸವನ್ನು ಗೊತ್ತು ಮಾಡಿಕೊಂಡು ಇರಬೇಕು—ಸಾಲಿಯು ಸ್ಥಾಪನವಾದ ತಾರೀಖು, ಹೋದವರ್ಷ ಪ

ರೀತ್ಯೆಯಾದ ತಾರೀಖು—ಸಾಲಿಯು ಸ್ಥಾಪನವಾದಂದಿನಿಂದ ಎಷ್ಟು ಮಂದಿ ಮಾಸ್ತರರಾಗಿ ಹೋದರು. ಯಾವ್ಯಾವ ಮಾಸ್ತರರ ಕಾಲದಲ್ಲಿ ಸಾಲಿಯ ಸ್ಥಿತಿಯು ಹ್ಯಾಗ್ಹ್ಯಾಗ ಇತ್ತು ಈ ಬಗ್ಯೆ ಎಲ್ಲ ಮಾಹಿತಿಯನ್ನು ಪಾಠ ಮಾಡಿ ಇಟ್ಟಿದ್ದರೆ ಬಹಳ ಉಪಯೋಗವಾಗುತ್ತದೆ— ತಾ॥೧೪ ನವಂಬರ ೧೮೭೨ ಮುಕ್ಕಾಮ ನರೇಂದ್ರ.

(Signed) Chanbussappa B. Dharwar,
ಡೆಪ್ಯೂಟಿ ಇ. ಇ. ಜಿಲ್ಹಾ ಧಾರವಾಡ.

ಸರಕ್ಯುಲರನಂಬರ ೭೭೭.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು (ಮುಖ್ಯವಾಗಿ ತಾಲೂಕ ಮತ್ತು ಅಂಗ್ಲೋಹ್ವರನ್ಯಾಕ್ಯುಲರ) ಮಾಸ್ತರಜನರಿಗೆ—

ತಿಳಿಯಪಡಿಸುವದೇನಂದರೆ—ಪಳಗಡೆ ಇತ್ತಕಡಿಂದ ತಾರೀಖು ೫ ಅಗಷ್ಟ ಸನ ೧೮೬೮ ಇಸವಿಗೆ ವಂದು ಮತ್ತು ತಾರೀಖು ೩೦ ಮಾಹೆ ಜೂನ ಸಂನ ೧೮೬೯ ಇಸವಿಗೆನಂಬರ ೨೪೮ ನೇದ್ದು ವಂದು ಈ ಪ್ರಕಾರಾ ಯೆರಡು ಪ್ರೋಪೋರಿಗೆ ಕಲಾದಗಿ ಇಂಗ್ರೇಜಿಸಾಲಿಗೆ ಇಂಗ್ರೇಜಿ ಅಭ್ಯಾಸ ಮಾಡುವದಕ್ಕೆ ಹುಡುಗರು ಬರುವದಿಲ್ಲಾ, ಹೀಗೆ ತಿಳಿಯ ಬರುತ್ತದೆ. ಜಿಲ್ಹೇದ ಇಂಗ್ರೇಜಿಸಾಲಿಯು, ಜಿಲ್ಹೆಯ ಯಾವತ್ತು ಜನರಬಗ್ಗೆ ಇದ್ದು, ನಿಮ್ಮಕಡಿಂದ ವಿದ್ಯಾರ್ಥಿಗಳು ಕಲಿಯಲಿಕ್ಕೆ ಬಾರದೆ ಇರುವದರಿಂದ, ಇಂಗ್ರೇಜಿ ಸಾಲಿಯಲ್ಲಿ ಕಲಿಯುವ ಹುಡುಗರ ಸಂಖೆಯು ಕಡಿಮೆಯಾಗಿ ಸಾಲಿಯು ಸುಧಾರಣೂಕ ಆಗುವದಿಲ್ಲಾ; ಸದರ ಸಾಲಿಗೆ ಹ್ಯಾಂಗ್ಹ್ಯಾಂಗೆ

ನಿಂಮ ಸಾಲಿಗಳೊಳಗಿಂದ ಹುಡುಗರು ಕಲಿಯುವದಕ್ಕೆ ಬರುವರೋ ಹಾಂಗ್ಯಾಂಗೆ ನಿಂಮ ಲಾಯಖಿ ಮತ್ತು ಹುಷಾರಿ ಕಂಡುಬರುವದು ದೇಶಭಾಷೆಯ ನಾಲ್ಕನೇ ಯತ್ತೇ ಪ್ರಕಾರಾ ಅಭ್ಯಾಸ ಮಾಡಿದ ವಿದ್ಯಾರ್ಥಿಗಳಿಗೆ ಇಂಗ್ರಜಿ ಕಲಿಯಲಿಕ್ಕೆ ಇಂಗ್ರಜಿ ಸಾಲಿಗೆ ಕಳುಹಿಸುವದರಲ್ಲಿ ನೀವು ಚನ್ನಾಗಿ ಮೆಹನತ್ತು ತೆಗದುಕೋಬೇಕು ಯಾವಾಗ್ಗೆ ಹುಡುಗರಿಗೆ ಆ ಸಾಲಿಗೆ ಕಳುಹಿಸುವಿರಿ, ಆಗ್ಯೆ ನಮ್ಮಗೂ ಇಂಗ್ರಜಿ ಸಾಲಿಯ ಹೆಡ್ಡ ಮಾಸ್ತರರಿಗೂ ಪತ್ರ ಬರದು ತಿಳುಹಿಸಬೇಕು ಅದರಲ್ಲಿ ಆ ಹುಡುಗರ ಹೆಸರು ಮತ್ತು ಅವರ ಅಭ್ಯಾಸವಗ್ಯೆರೆ ಬರಿಯುತ್ತಿರಬೇಕು ಹೀಗೆ ಮಾಡುವದರಲ್ಲಿ ತಪ್ಪಬಾರದು ತಿಳಿಯುವದು ತಾರೀಖು ೬ ಮಾಹೆ ನವಂಬರ ಸನ್ನ ೧೮೭೨ ಇಸವಿ.

(Signed) Hanmant Ramchandra.
ಡೆ. ಇ. ಇ. ಜಿಲ್ಲಾ ಕಲಾದಗಿ.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ.

ತಿಳಿಯಪಡಿಸುವದೇನಂದರೆ—ಸಾಲಿಯ ಫೀ ಭರಣಾಮಾಡು ವಬಾಬತಿಯಲ್ಲಿ ಬಹಳಾವೇಳೆ ಸರಕ್ಯೂಲರಗಳು ಕೊಟ್ಟಿವು; ವ ಶಾಲಾಪತ್ರಿಕೆಯಲ್ಲಿ ಛಾಪಿಸಲ್ಪಟ್ಟಿತು—ಹೊತರ್ ಜಾನ ಕ, ಆವಕ ಹುಕುಂಗಳು ಕೊಟ್ಟಿವು; ಇಷ್ಟಾದರೂ ಇನ್ನು ಕೆ ಲವು ಮಾಸ್ತರರು ವಂದೊಂದು ವೇಳೆ ಹತ್ತು ತಾರೀಖು ಮೀರಿ ಫೀ ಭರಣಾ ಮಾಡುತ್ತಾರೆ—ಸುಸ್ತಿ ಆದಕಾರಣಾ ಕೇ ಳದರೆ ಯೇನಾರು ವಂದು ಸಬಬ ಬರೆಯುತ್ತಾರೆ, ಇದರಿ

ದ ನಮ್ಮಲ್ಲಿ ಜಾಬ ಜವಾಬಿನ ಕೆಲಸಾ ಬೆಳಯುತ್ತದೆ—ಇನ್ನಮೇಲೆ ಈ ಸೂಚನೆಯು ಮೇರಿಗೆ ಯಾರು ನಡಿಯಲಿಕ್ಕಿಲ್ಲವೋ ಅವರಿಗೆ ದರವಂದು ತಪ್ಪಿನ ವಹಿವಾಟಿ ಬಗ್ಗೆ ನಜರಿನ ಪ್ರಕಾರ ದಂಡ ಮಾಡಲ್ಪಡುವದು.

ಹತ್ತನೆ ತಾರೀಖಿನ ವಳಗೆ ಯಾವತ್ತು ಹುಡುಗರ ಫೀ ವಸೂಲ ಮಾಡಲಿಕ್ಕೆ ಬೇಕು ಫೀ ಶಿಲ್ಕು ೧೦ ರುಪಾಯಿದ ಮೇಲೆ ಆದರೆ ೧೦ ನೇ ತಾರೀಖಿನ ವಳಗೆ ತಿಜೋರಿಗೆ ಜಮಾ ಮಾಡಲಿಕ್ಕೆ ಬೇಕು—ಭರಣಾಮಾಡಿ ಪಾವತಿ ಬರುವದು; ಅದನ್ನು ಇತ್ತಕಡಿಗೆ ಅದೇಕ್ಷಣವೇ ಕಳಸಬೇಕು.

ಕದಾಚಿತ ವಾಜಬಿ ವ ಅಕಸ್ಮಾತ ಕಾರಣದಿಂದ ೧೦ ತಾರೀಖು ಮೀರಿ ಭರಣಾ ಲದರೆ ಪಾವತಿಯು ಹಿಂದೆ ತಡವಾದ ಕಾರಣಾ ಸ್ಪಷ್ಟವಾಗಿ ಬರಿಯಬೇಕು.

ಈಗಿನ ಹೊಸಾ ವಹಿವಾಟ ಪ್ರಕಾರ ಚಲನಿನ ಕೂಡಾ ಫೀ ಭರಣಾ ಆಗುತ್ತಿದ್ದು— ಕೆಲವರು ಚಲನಿನ ಮೇಲೆ ಭರಣಾ ಮಾಡುವ ತಾರೀಖು ಬರಿಯುವದಿಲ್ಲಾ—ಅದರಿಂದ ಲೆಖ್ಖಕ್ಕೆ ಬಹಳೇ ತೊಂದರೆ ಆಗುತ್ತದೆ ಕಾರಣಾ ತಾರೀಖು ಬರಿಯುವಲ್ಲಿ ಬಹಳ ಜಾಗ್ರತೆ ಇಡಬೇಕು.

ತಿಳಿಯುವದು—ತಾ॥ ೬ ನವಂಬರ ೧೮೭೨ ಇಸವಿ.

[Signed] Hanmant Ramchandra.
ಡಿ. ಇ. ಇ. ಜಿಲ್ಹಾ ಕಲಾದಗಿ.

Correspondence.

ಪತ್ರವ್ಯವಹಾರವು.

ಮಹಾರಾಜ ರಾಜಮಾನ್ಯ ರಾಜೇಶ್ರೀ ಕಂನಡಶಾಲಾಪತ್ರಕ

ಕರ್ತರಿಗೇ.

ವಿನಯಪೂರ್ವಕವಿಜ್ಞಾಪನ್ನಃ ನಾನು ಬರದುಕಳುಹಿಸಿದ ನಾಲ್ಕು ಪಂಗ್ತಿಗಳಂನು ತಂವು ಅಂದವಾದ ಪತ್ರ್ರದಲ್ಲಿ ಮುದ್ರಿಸುವರಿಯೆಂದು ಪೂರ್ಣಆಶೆಪಡುತ್ತೇನೆ, ಮೋಹಬಾರ್ನ್ ಡಿ. ಇ. ಇ, ಬಾಹದ್ದೂರ, ಧಾರವಾಡ, ಬೆಳಗಾವ, ಕಲಾದಗಿ, ಕಾರವಾಡ, ಇವರು ಬಹಳಸಾರಿ ಪ್ರತಿತಿಂಗಳಲೆಕ್ಕವು ೩ ನೇ ತಾರೀಖಿನ ಒಳಗಾಗಿ ಟಪಾಲಿಗೆ ಹಾಕಬೇಕೆಂದು ಅನೇಕಸರಕ್ಯುಲರುಗಳು ಕೊಟ್ಟಿರುತ್ತಾರೆ ಮತ್ತು ಫೀಯುಹಣವು ೧೦ನೇ ತಾರೀಖಿನ ಒಳಗಾಗಿ ತಿಜೋರಿಗೆ ಶೇರಿಸಬೇಕೆಂದು ಕೆಲವು ನೋಟಿಸುಗಳು ಕೊಟ್ಟಿರುತ್ತಾರೆ ಈ ಯರಡುನೇಮುಗಳಿಗೆ ದಾವಮಾಸ್ತರರು ಅನಾದರಮಾಡ್ಯಾರು ಅವರಿಗೆ ಯೋಗ್ಯತಜವೀಜ ಆದೀತೆಂದು ಕೊಟ್ಟಿದ್ದನ್ನೋಡಿ ಅದರಂತೆ ನಡಕೊಳ್ಳುವದು ಮಾಸ್ತರಜನರಿಗೆ ತಕ್ಕದ್ದೇಸರಿ ಪರಂತು ನಂವು ಹಳ್ಳಿವೂರಮಾಸ್ತರಜನರುಈ ಹುಕುಮುಗಳುನೋಡಿ ಬಹಳಖೇದಪಡುತ್ತಾರೆ. ಕಾರಣಾ ವೇನಂದರೆ ಹಳ್ಳಿವೂರಲ್ಲಿ ಟಪಾಲಹಾಖೀಸ ಇರುವದಿಲ್ಲಾ ತಿಂಗಳಲೆಕ್ಕವು ಟಪಾಲಿಗೆ ಬೀಳುವಬಗ್ಗೆ ಹಾಗೂ ಫೀಯುಹಣವು ಹತ್ತುರೂಪಾಯಿ ಆದಫಳಿಗ್ಯೆ ೧೦ ನೇ ತಾರೀಖಿನ ಒಳಗಾಗಿ ತಿಜೋರಿಗೆ ಶೇರಿಸುವದರ ಸಲುವಾಗಿ ದಾರಕಡಿಂದಾ ಕಳಸತಕ್ಕದ್ದು ಇದರಬಗ್ಗೆ ಒಂದಾದರೂ ಸರಕ್ಯುಲರು ನಮ್ಮ ಸ್ಕೂಲನೇಪರಿನಲ್ಲಿ V ಪುಸ್ತಕವಾದರೂ ಉಂಟಾಗಿಲ್ಲ. ಈಗ ನಡಿಯುವ ವಹಿವಾಟು ಗ್ರಾಮಸ್ತರ ಮಾರಿಫತ ಕಳುಹಿಸುವದದೆ ಪರಂತು ಅವರು ಮುದ್ದತಶೀರ್ ಮನುಷ್ಯನನ್ನು ಕೊಡುವದಿಲ್ಲಾ. ಮನಸ್ಸಿಗೆ ಬಂದರೆ

ಕೊಡುತ್ತಾರೆ ಇಲ್ಲದಿದ್ದರೆ ನಂಮಮನುಷ್ಯನು ಕಚೇರಿಗೆ ಹೋಗುವ ದಿವಸ ಕೊಟ್ಟರೆ ವೈಯ್ಯುವನೆಂದು ಹೇಳುತ್ತಾರೆ. ಸದರಮನುಷ್ಯನುಹೋಗುವದು ನಮಗೆ ಗೊತ್ತಾಗುವದಿಲ್ಲಾ, ಕೇಳದರೆ ಆಗಲೇ ಹೋದನೆಂದು ಹೇಳುತ್ತಾರೆ. ಫೀಯುಹಣವು ಮುಟ್ಟಿದಬಗ್ಗೆ ಪಾವತಿಬುಕ್ಕಿನಲ್ಲಿ ಸಹಿಕೊಡುವದಿಲ್ಲಾ, ಫೀಯುಹಣವು ಗಲ್ಲತವಾದರೆ ಅಥವಾ ಮುದ್ದತಿಗೆ ಭರಣಾಆಗದೆ ಇದ್ದರೆ ಅದರ ಜವಾಬದಾರಿ ನಿಮ್ಮಮೇಸರಿ, ನಂಮದೇನುಅಲ್ಲವೆಂದು ಹೇಳುತ್ತಾರೆ. ಹೀಗಾದಬಳಿಕ ನಂಮಮಾಸ್ತರಜನರು ಯೇನುಮಾಡಬೇಕು. ಈ ವಿಷಯವಾಗಿ ನಂಮ ಧೊರೆಗಳವರ ಕಡೆಗೆ ಬರಕೊಂಡರೆ ನಿಕಾಲೇ ಹುಕುಂದೊರಿಯುವದಿಲ್ಲಾ. ಕಾರಣಾ ನಾನು ಮೊಹಬಾರ್ನ್ ಕಲ್ಲೇಕ್ಟರಸಾಹೇಬ ಬಾಹದ್ದೂರಜಿಲ್ಲಾಧಾರವಾಡ ಇವರಕಡೆಗೆ ಅರ್ಜಮಾಡಿದ್ದಕ್ಕೆ ಸಾಹೇಬರವರ ಹುಕುಂ ನೋಡಿ ರಾಣೇಬೆಂನೂರ ತಾಲೂಕಮಾಮಲೇದಾರಸಾಹೇಬರವರು ಈವಿಷಯ ಇತ್ತಕಡಿಂದೇನು ತಜವೀಜ ಆಗಲಾರದು, ನಿಮ್ಮಮರ್ಜಿ ಇದ್ದರೆ ನಿಂಮಖಾತೇದ ಅಧಿಕಾರಿಗಳವರಿಗೆ ಕೇಳಕೊಳ್ಳ ತಕ್ಕದ್ದು ಯಂದು ಬರದಯಾದಿ ರಿಪ್ಪೋರ್ಟಿಗೆ ಲಗತಇಟ್ಟು ಹುಜೂರಿಗೆ ಕಳುಹಿಸಿದ್ದೇನೆ. ಅದಕ್ಕೆ ಯಾವತಜವೀಜ ಆದಿತೋ ತಿಳಿಯದು ಮೇಲಿನ ಹಕಿಕತು ನಂಮ ಹಳ್ಳಿಪೂರಮಾಸ್ತರಜನರಿಗೆ ಕೇಳದರೆ ಇಂಥಾ ಬಹುತೇಕಉದಾಹರಣೆಗಳು ದ್ರಿಷ್ಟಿಗೋಚರವಾಗುವವು ಈವಿಷರಾಸರಕಾರಕ್ಕೆ ಯಾರೂ ತಿಳಸಲಿಲ್ಲೇದುನೋಡಿ ಖೇದಪಡುತ್ತೇನೆ. ಈಯಾವತ್ತುಮಜಕೂರು ನಂಮ ದಯಾನಿಧಿಗಳಾದ ಎಜ್ಯುಕೇಶನಲ್ ಇನಸ್ಪೇಕ್ಟರ ಬಾಹದ್ದೂರ ದಕ್ಷಿ

ಣಭಾಗದ ಧೊರೆಗಳವರು ನೋಡಿ ಈ ಆಪತ್ತು ದೂರಮಾಡುವರು ಎಂಗು ನಂಬಿ ಈ ಪತ್ರವನ್ನು ತಂಮುಕಡಿಗೆ ಕಳುಹಿಸಿದ್ಧೇನೆ ತಂಮು ಕರದ್ವಯುದಲ್ಲಿ ಪ್ರಟ್ಟು ಪಶಾಲಾಪತ್ರಕದಲ್ಲಿ ಅಕ್ಷ್ಣ ಹಾಕುವದಕ್ಕೆ ಸ್ಥಳದೊರಿಯುಬೇಕೆಂದು ವಿನಯುಪೂರ್ವಕ ಪ್ರಾರ್ಥನವದೆ. ವಿದ್ಯಾ ಅಭಿವೃದ್ಧಿಗಳಾದ ತಾವು ಹಸ್ತದೋಷದಕಡಿಗೆ ಲಕ್ಷ್ಯಕೊಡದೆ ಬರೆದವಿಷಯುದಕಡಿಗೆ ಲಕ್ಷಕೊಟ್ಟು ಸ್ಥಳದೊರಿಯುವಬಗ್ಗೆ ಮೋಹಬಾನಗಿಆಗಬೇಕು ಎಂದು ಬಿಂನ್ಯೈಸುತ್ತೇನೆ ಇಂತಿಬಿಂನಹಃ ತಾರೀಖು ೩ ಸಪ್ಟೆಂಬರ ಸಂನ ೧೮೭೨ ನೇ ಇಸ್ವೀ.

ಸಹಿ ಜಗಂನಾಥ ಶ್ರೀಧರ ಗೋಖಲೆ
ಹೆಡ್ಡಮಾಸ್ತರ ಪೊಚೆಬಿಂನೂರ

ಸರಕ್ಯುಲರ ನಂಬರ ೮೦೦

ಕಲಾದಿಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ ತಿಳಯುಪಡಿಸುವದೇನಂದರೆ ವಬ್ಬರಹೆಸರ್ಲ ವಂದುದಿವಸದಲ್ಲಿ ಕಳಸತಕ್ಕ ಯುಲ್ಲಾ ಕಾಗದಪತ್ರಗಳು ವಂದೇಲಖೋಟಿಯುಲ್ಲಿ ಹಾಕಿ ಕಳಸುತ್ತಿರಬೇಕು—ಬೇರೆ ಬೇರೆ ಲಖೋಟಿಯುಲ್ಲಿ ಬೇರೆ ಬೇರೆ ಪ್ರಕರ್ಣದ ಕಾಗದಪತ್ರಗಳು ಹಾಕಿಕಳಸಿದರೆ ಟಪಾಲಿನ ಹಾಸಲು ದುಬಾರಾಗುವದು. ಯಿಬಗ್ಗೆ ಲಕ್ಷ್ಯಯಿಡಬೇಕು. ತಿಳಯುವದು. ತಾರೀಖು ೩೦ ಮಾಹೆ ನವಂಬರ ೧೮೭೨ ಇಸವಿ.

[Signed] Hanmant Ramchandra.
ಡಿ. ಯಿ. ಯಿ. ಜಿಲ್ಹಾ ಕಲಾದಗಿ.

ಮೋಹರಬಾನ ದಕ್ಷಿಣಭಾಗ ಶಾಲಾಪತ್ರಿಕೆಯ ಎಡಿಟ
ರಮುಕ್ಕಾಮ ಬೆಳಗಾವ ಇವರಿಗೆ—

ಕಸಬಾ ತಡಕೋಡ ತಾಲೂಕಧಾರವಾಡ ಜಿಲ್ಲಾಮಜಕೂರ ಇಲ್ಲಿಯ ಮಾಸ್ತರನ ವಿನಂತಿ ಏನಂದರೆ ಕೆಳಗಬರೆದ ನಾಲ್ಕು ಪಂಗ್ತಿಗಳನ್ನು ತಮ್ಮ ಪತ್ರದಲ್ಲಿ ಪ್ರಕಟಸುವರಿಎಂದು ಕೋರುತ್ತೇನೆ ತಾರೀಖು೮ನೇ ನೂಹೆ ನವಂಬರದಿವಸ ಮೋಹರಬಾನ ಕನಿಂಗಹಾಮ ಸಾಹೇಬ ಆಶಿಷ್ಟಾಂಟ ಕಲೆಕಟರ ಜಿಲ್ಲಾ ಧಾರವಾಡ ಇವರು ಸಾಲಿಯಲ್ಲಿ ಬಂದು ಮೊದಲನೇ ವರ್ಗದ ಪರೀಕ್ಷೆ ತೆಗೆದುಕೊಂಡು ಅದರಲ್ಲಿ ಉತ್ತಮಪ್ರತಿ ಹುಡುಗರಿಗೆ ಒಬ್ಬೊಬ್ಬನಿಗೆ ಎಂಟು ಆಣೆಗಳಂತೆ ಬಕ್ಷೀಸು ಕೊಟ್ಟರು ಹಾಂಗು ರಜಿಷ್ಟರದಲ್ಲಿ ಸಾಲಿಸ್ಥಿತಿ ಬಹಳ ಉತ್ತಮ ಅದೆ ಎಂದು ಷರಾಸಹಬರೆದು ಇದ್ಧಾರೆ ಈ ಧೊರೆಗಳವರ ಲಕ್ಷವು ವಿದ್ಯಾವೃದ್ಧಿಯ ಕಡಿಗೆ ಬಹಳ ಇದ್ದು ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡುವಲ್ಲಿ ತುಂಬಾ ಆಶೆಯುಳ್ಳವರಾಗಿದ್ಧಾರೆ ಎಂದು ನೆರೆನೆಂಬಿರುತ್ತೇನೆ.

ಮುಕ್ಕಾಮತಡಕೋಡ } ಸಹಿಗುರುಶಿದ್ಧಯ್ಯಾ ಸಂಗಯ್ಯಾಹೆ
೮।೧೧।೭೨ಇಸವಿ. } ಡ್ಡಮಾಸ್ತರತಡಕೊಡ

ಮೋಹರ್ಬಾನ ಬೆಳಗಾವಿಯಲ್ಲಿರುವ ಶಾಲಾಪತ್ರದಕರ್ತರಿಗೆ—

ವಿನಂತಿ ವಿಶೇಷ ತಂಮ ಪತ್ರಿಕೆಯು ಯಾವತ್ತು ಪುರಾಧಿಕಾರಸ್ಥರಿಗೆ ಕೇವಲ ಆಶ್ರಯಭೂತವಾದಂಥಾದ್ದು ಆಗಿ ಸ್ಥಳ ದೊರಿಯುತ್ತದೆಂತ ನಿಶ್ಚಯುವಾದ ಕಾರಣ ನನಗೂ ಯಕಿಂಚಿತ ಜಾಗಾದೊರದೀತು ಯಂಬ ಅಭಿಲಾಷೆಯಿಂದ ಹಿಂ

ದಕ್ಕೆ ವಂದೆರಡು ಪತ್ರಗಳನ್ನು ಬರದು ತಮ್ಮಕಡಿಗೆ ಛಾಪಿಸಿ ಪ್ರಶಿದ್ಧವಾಗುವದಕ್ಕೆ ಕಳುಹಿಸಿದೆ ಛಾಪಿಸಿ ಪ್ರಶಿದ್ಧವಾದಂತೆ ತೋರಲಿಲ್ಲಾ ಆದರೆ ಯೀಪತ್ರವು ಅನಾದರ ಮಾಡದತೆ ಕೆಳಗೆ ಬರದ ನಾಲ್ಕುವಳಿಗಳನ್ನು ತಮ್ಮಕರದ್ವಯಂಗಳಲ್ಲಿ ಹುಟ್ಟಲ್ಪಡುವ ಸುಂದರವಾದ ಪತ್ರಿಕೆಯಲ್ಲಿ ಅಚ್ಚಾಹಾಕಿಸಿ ಪ್ರಶಿದ್ಧಿಸಬೇಕೆಂದು ಶೇವಕನ ವಿನಯ ಪೂರ್ವಕ ಪ್ರಾರ್ಥನೆಯುಂಟು.—

ಬಾಡಗಿಯೆಂಬ ಗ್ರಾಮದವರ್ಣನೆ.

ಕಲಾದಗಿ ಜಿಲ್ಲೆಯೊಳಗಿನ ಬಾಗಲಕೋಟೆ ತಾಲೂಕಿನಲ್ಲಿ ಕೃಷ್ಣಾನದಿ ತೀರಕದಲ್ಲಿ ಬಾಡಗಿಯೆಂಬ ಒಂದು ಚಿಕ್ಕ ಕ್ಷೇತ್ರವುಂಟು. ಈ ವೂರುಚಿಕ್ಕದಿದ್ದಾಗ್ಯೂ ವೃತ್ತರಾಯನ ಕ್ಷೇತ್ರಸ್ಥಳವಿದೆಯಾಗ್ರಾಮಕ್ಕೆ ಯೆಷ್ಟೋ ಪರಸ್ಥಳದವರು ಸ್ನಾನವುದ್ದೇಶವಾಗಿ ಬರುತ್ತಾರೆ—ಬರಿಯಲಿಕ್ಕೆ ಸಂತೋಷವಾಗುತ್ತದಲ್ಲಾ ಯೀಪುರದಲ್ಲಿ ಹರಗುರಭಕ್ತಿ ಪರಾಯಣರಾದಂಥರಾಜಮಾನ್ಯರಾಜಶ್ರೀ ಪರಿಪೂರ್ಣರಾದ ಲಿಂಗಾಯತ ಜನರಿಗೆ ಗುರುಗಳಾದರಾಚಪ್ಪಯ್ಯಾಸ್ವಾಮಿಯವರೆಂಬ ಪಸರಿನವರೊಬ್ಬರು ಕೇವಲ ಪ್ರಶಿದ್ಧಮನುಷ್ಯರಿದ್ದರು. ಅವರು ದಯಾದಾಕ್ಷಿಣ್ಯವುಳ್ಳವರು ಜನರಿಗೆ ಮೆಚ್ಚುವುಳ್ಳವರು ಪರೋಪಕಾರಿಗಳು ಸದ್ಗುಣಗಳುಳ್ಳವರು ಯಿದ್ದರು ಅವರು ಅತಿಪ್ರಶಿದ್ಧರೆಂಬದರ ಬಗ್ಗೆ ವಂದೆರಡು ನನಗ ಗೊತ್ತಿದ್ದ ಮಾತಿಗೆ ದೃಷ್ಟಾಂತವನ್ನು ಕೊಡುತ್ತೇನೆ. ಸುಮಾರು ವಂದೆರಡು ವರ್ಷಗಳ ಕೆಳಗೆ ತಮ್ಮ ಶಿಷ್ಯಜನರನ್ನು ಕರಕೊಂಡು ದೇಶಸಂಚಾರಾರ್ಥವಾಗಿ ಹೋಗಿದ್ದರು ಅಷ್ಟರಲ್ಲಿ ಆಶಿಷ್ಯ ಮಂಡಳಿಕೈಕಿ ವಬ್ಬ ಶಿಷ್ಯನ ಹೆಂಡತಿಯು ಯ

ರಡು ಹುಡುಗರನ್ನು ಹೆತ್ತಳು ಆದರೆ ಯೀಮಾತು ಯಾರಿಗೆ
ಗೊತ್ತಿಲ್ಲಾ ಅಷ್ಟರಲ್ಲಿ ಗುರುಗಳಾದ ಸ್ವಾಮಿಯವರು ಯ
ಲಾ ಬಸವಾ ನಿಂನೆ ರಾತ್ರಿ ಯರಡು ತಾಸು ಹೊತ್ತಿನಲ್ಲಿ ನಿಂನ
ಹೆಂಡತಿಯು ಯರಡು ಗಂಡು ಹುಡುಗರನ್ನು ಹಡದಿರುತ್ತಾಳೆ ಅಂ
ತ ಹೇಳಿದರು ಯೀ ಮಾತನ್ನು ಕೇಳಿ ಆ ಊರಲ್ಲಿದ್ದ ಯಾ
ವತ್ತು ಶಿಷ್ಯಜನರಿಗೆ ಬಹಳ ಕೌತುಕವಾಯಿತು ಯಿದನ್ನು
ಪರೀಕ್ಷೆ ಮಾಡಬೇಕೆಂದು ತಿರುಗಿ ಊರಿಗೆ ಬಂದು ನೋಡಲಾ
ಗಿ ಸ್ವಾಮಿಯವರ ವಚನವು (ಸತ್ಯವೆ) ಯೆಂಬ ಅರ್ಥಕಿ
ರೇವೆ ಈ ಅಗಾಧ ಮಹಿಮೆಯನ್ನು ಅಲ್ಲಿದ್ದ ಜನರು ಕೇಳಿ
ಬಹಳ ಆನಂದ ಪಟ್ಟರು.

ಗುರುಗಳಾದ ಸ್ವಾಮಿಯವರು ತಾವು ದೇಹವು ಯಿಡೊ
ದು ಇನ್ನು ಹದಿನೈದು ದಿವ್ಸದ ಅವಕಾಶ ಇರಲಿಕ್ಕಾಗಿ ತಮ್ಮ
ಆಪ್ತಯಿಷ್ಟರನ್ನು ಬೀಗಬಿಜ್ಜರನ್ನು ಕರಿಸಿ ನಾವು ಇನ್ನು
ಮೇಲೆ ಪರಲೋಕಕ್ಕೆ ಹೋಗುತ್ತೇವೆ ಅಂತ ಹೇಳಿ ಮತ್ತು ತ
ಮ್ಮ ತಾಯಿಯನ್ನು ಕರದು ಚರಣಕ್ಕೆರಗಿ ತಾಯಿಯೇ ವು
ತ್ತಮ ಲೋಕವು ಶಿಗುವಂತೆ ಆಶಿರ್ವಾದವನ್ನು ಮಾಡು ಅಂತ
ಬೇಡಿಕೊಂಡು ತನ್ನ ಚಿರಂಜೀವನಾದ ಬಕ್ಕಪ್ಪ ಸ್ವಾಮಿಯನ್ನು
ಕರಿದು ಪಟ್ಟಕ್ಕೆ ಕೂಡಿಸಿ ನನ್ನ ಹಿಂದೆ ಚನ್ನಾಗಿಯಿರು ಯಂತ
ಆಶಿರ್ವಾದವನ್ನು ಕೊಟ್ಟು ವೂರಯಾವತ್ತು ದೈವಜನರ
ನ್ನು ಕರಿಸಿ ನನಗೆ ಈ ಲೋಕವನ್ನು ಬಿಟ್ಟು ಪರಲೋಕಕ್ಕೆ
ಬಾಯೆಂತ ಅಪ್ಪಣೆ ಆಗಿರುತ್ತದೆ ಅಂತ ಹೇಳಿದರು ಮತ್ತು ತಾ
ವು ಅಲ್ಲಿಂದ ಸ್ನೇಹಿತಜನರಿಗೆ ಭೆಟ್ಟಿ ನಿಮಿತ್ತವಾಗಿ ಹೋಗಿ
ಭೆಟ್ಟಿಯನ್ನು ತೆಗೆದುಕೊಂಡು ಅವರಿಗಾದರು ಇದೇ ಪರಿಯಾ
ಗಿ ಹೇಳಿ ತಿರಿಗಿ ವೂರಿಗೆ ಬಂದು ತಾರೀಖು ೨೨ ಮಾಹೆ ಅಗಷ್ಟ

ಸಂನ ೧೮೭೦ ಯಿಸವೀ ಶ್ರಾವಣವದಿ ೧೧ ಏಕಾದಶಿ ಸೋಮ
ವಾರದಿವ್ಸ ರಾತ್ರಿ ಮಲಗಿದವರು ಗುಪ್ತರಾದರು ಈ ದೊಡ್ಡ
ವರ ಚರಿತ್ರೆಯನ್ನು ಕೇಳದವರಿಗೆ ಪರಮಆಶ್ಚರ್ಯವಾಗ
ದೆ ಯಿರಲರಿಯದು. ತಾತ್ಪರ್ಯವೇನಂದ್ರೆ ಈಗ ನಾನು
ವಿವರಿಸಿದ ಯರಡುಮಾತುಗಳಹೊರ್ತು ಇನ್ನು ಎಷ್ಟೋ ದೃ
ಷ್ಟಾಂತಗಳುಂಟು ಆದರೆ ಅವುಗಳಲ್ಲಿ ಕೆಲಮುಖ್ಯವಾದವು
ಗಳನ್ನು ಮುಂದಿನಪತ್ರಕದಿಂದ ಬರದು ತಿಳ್ಸಬಹುದು.

(ಮುಂದಕ್ಕೆ ಸಾಗುವದು)

ಮುಕ್ಕಾಂ ಬಾಡಗಿ } ಕೃಷ್ಣಾಜಿ ಮಹಾದೇವ ಸೊಲಾಪುರಕ
೨। ೧೧। ೭೨ } ರ ಸ್ಕೂಲಮಾಸ್ತರ ಬಾಡಗಿ.

ರಾಜಮಾನ್ಯರಾಜೇಶ್ರೀ ಬೇಳಗಾವಿಯಲ್ಲಿರುವ ಶಾಲಾ
ಪತ್ರಕದ ಮಾಲಿಕರಿಗೆ—

ವಿಂವಿಂ ತಮ್ಮ ಪತ್ರಕೆಯು ಯಾವತ್ತು ಮಾಹಾಧಿಕಾರ
ಸ್ಥರಿಗೆ ಕೇವಲ ಆಶ್ರಯಭೂತವಾದಂಥಾದ್ದು ಆಗಿಸ್ಥಳ
ದೊರಿಯುತ್ತದೆಂತ ನಿಶ್ಚಯವಾದಕಾರಣ ನನಗು ಯಕ್ತಿಂ
ಚಿತು ಜಾಗಾ ದೊರದೀತು ಯಂಬೋ ಅಭಿಲಾಷೆಯಿಂದ
ಕೆಳಗೆ ಬರದ ನಾಲ್ಕು ಸಾಲು ಮಜಕೂರವನ್ನು ತಂಮ ಕ
ರದ್ವಯಂಗಳಲ್ಲಿ ಹಟ್ಟಲ್ಪಡುವ ಸುಂದರವಾದ ಪತ್ರಕೆಯೊ
ಳಗೆ ಅಚ್ಚುಹಾಕಿಸಿ ಪ್ರಸಿದ್ಧಿಸ ಬೇಕೆಂದು ವಿನಯ ಪೂರ್ವ
ಕ ಪ್ರಾರ್ಥನೆಯುಂಟು.

ಮೋಜಿಮಜಕೂರಲ್ಲಿ ಇರುವಾ ಐಯಪ್ಪಾ ಅವ್ವಾ ಅ
ರಕೇರಿ ಇವರು ಬಹಳ ದೊಡ್ಡ ಮನುಷ್ಯರುಯಿದ್ದು ಬಂ
ಧು ಯಳ್ಳುಕಾಳಷ್ಟು ಗರ್ವ ಇರೋದಿಲ್ಲ. ಈ ಐಯ

ಪ್ಪಾಅಪ್ಪಾ ಯಿವರು ಹಗಲೆಲ್ಲ ಬಡಜನರು ಯಾವರೀತಿ
ಯಿಂದ ಸಂವರಕ್ಷಣೆಯಾಗುವರು ಯಂಬೋದರ ಕಡಿಗೆ ನಿ
ರಂತರ ಇವರ ಮನಸ್ಸು ಇರುತ್ತದೆ ಯಂಬೋಬಗ್ಗೆ ಏನೂ
ಅನಮಾನವಿಲ್ಲ. ಈ ಊರಲ್ಲಿ ಮತ್ತು ಯರ್ಡನೇ ಊರ
ಗಳಲ್ಲಿ ಸರಕಾರ ನೌಕರರಹಾಂಗುಸಣ್ಣದೊಡ್ಡವರ ಬಾಯಿ
ಯಿಂದ ಐಯಪ್ಪಾಅಪ್ಪಾ ಯಿವರು ಒಳ್ಳೇಯವರು ಯಂ
ಬೋದರ ಪ್ರೊತರ್ಗ ಹೀನರೆಂಬುವವರು ಒಬ್ಬರೂ ಇಲ್ಲ.
ಮತ್ತು ಊರಲ್ಲಿ ಯಾರಾದರು ಹೊಸಮನುಷ್ಯರು ಬಂದರೆ
ಅವರ ಪರಾಮರಿಕೆ ಬಹಳ ನೆಟ್ಟಗೆ ಮಾಡುತ್ತಾರೆ ಇಷ್ಟೇಂ
ಡು ಇವರ ಗುಣದ ವರ್ಣನೆ ಮಾಡ ಕೂಡದು ಇವರು ನಿ
ರಂತರ ನಮ್ಮಸಾಲಿಗೆ ಬಂದು ಹುಡುಗರ ಪರೀಕ್ಷೆ ತಕ್ಕೊಂ
ಡು ಈ ಹುಡುಗನು ಇಂದ ಏನು ಕಲಿತನುನಿಂನೆ ಏನು ಕಲಿ
ತ್ತಿದ್ದನುಇಂದಯಾವ ಹುಡುಗನು ಸಾಲಿಗೆ ಬರಲಿಲ್ಲ ಬಾರದ
ಕ್ಕೆ ಕಾರಣಯೇನು ಯಂಬೋದರದಶೆಯಿಂದ ಆ ಹುಡಗನ
ತಂದೆಯನ್ನು ಕರೆಕಳುಹಿಸಿ ವಿಚಾರ ಮಾಡಿ ಸಾಲಿಯಲ್ಲಿ
ಯಿದ್ದ ಹುಡುಗರು ವಿದ್ಯಾಕಲಿತರೆ ಬಹಳ ನೆಟ್ಟಗೆ ಆಗುತ್ತ
ದೆ ಯಂಬೋದರದಶಿಂದಾ ವಂದೆರಡು ಉದಾಹರಣೆಗಳ
ನ್ನು ಹೇಳಿ ಸಮಜಾತಕೊಟ್ಟು ನಮಗೆ ಈ ಪ್ರಕಾರ ಕೆಲಸ
ನಡಿಸಿರಿ ಯಂದು ಹೇಳಿ ಹೋಗುತ್ತಾರೆ ಮತ್ತು ಸಾಲಿಯ
ಲ್ಲಿ ಹುಡುಗರ ಸಂಖ್ಯಾಬಹಳ ಕಡಿಮಾಇದ್ದದರಿಂದ ಹುಡು
ಗರನ್ನು ಕೂಡಿಸಿ ಕೊಡೋ ಮದತ ಮಾಡರೆಂದು ನಾನು
ಹೇಳಿಕೊಂಡದ್ದರಿಂದ ಐಯಪ್ಪಾ ಅಪ್ಪಾ ಇವರು ಹುಡುಗ
ರನ್ನು ಕೂಡಿಸೋ ಉದ್ಯೋಗ ನಡಿಸಿದ್ಧಾರೆ ಸ್ವಲ್ಪದಿವ
ಸದೊಳಗೆ ಬಾಲಕರ ಸಂಖ್ಯಾ ಹೆಚ್ಚಿಗೆ ಬೆಳದು ನಂಮ ಕೆಲ

ಸ ಬಹಳ ನೆಟ್ಟಗೆ ನಡಿಯುವದು ಯೆಂದು ನಿಶ್ಚಯ ತೋ
ರುತ್ತದೆ ಇವರು ನಮ್ಮ ಕೆಲಸಕ್ಕೆ ಪುಷ್ಕಳ ಸುದತ ಮಾ
ಡುತ್ತಾರೆ ಇದರಕಿಂತಲೂ ಹೆಚ್ಚಿಗೆ ಇವರ ಕಲ್ಯಾಣವಾಗ
ಬೇಕೆಂದು ನಿರಂತರ ದೇವರ ಬಳಿಯಲ್ಲಿ ಬೇಡಿಕೊಳ್ಳು
ತ್ತೇನೆ ಆದ ಕಾರಣ ಇವರ ನಾಮಾಂಕಿತವು ತಂಮ ಸುಂದ
ರವಾದ ಸಮಾಚ್ಯಾರ ಪತ್ರದಲ್ಲಿ ಮುದ್ರಿಸಿ ಪ್ರಸಿದ್ಧಮಾ
ಡಬೇಕೆಂಬೋಯಿರಾದೆಯುಳ್ಳವನಾಗಿ ಈ ಬಿನ್ನಹಾಪತ್ರ
ಬರಕೊಂಡು ಇದ್ಧೇನೆ ಖಾವಂದರವರು ಬಡವನ ಪ್ರಾರ್ಥನೆ
ಚಿತ್ತಕ್ಕೆ ತಂದು ಯಾವಕಡೆಗಾದರೂ ಹಸ್ತದೋಷದಿಂದಾ
ಗಲಿ ಅಲ್ಪಮತಿಯಿಂದೆ ಆಗಲಿ ಅಶುದ್ಧ ಬಿದ್ದಿದ್ದರೆ ದುರಸ್ತು
ಮಾಡಿ ಛಾಪಿಸಬೇಕೆಂದು ನನ್ನ ವಿನಯಪೂರ್ವಕ ಬಿನ್ನಹಾಃ
ಸಲಾಂ.

ತಾರೀಖು ೧೫ ಮಾಹೆ ನಂವಬರ ಸನ್ ೧೮೨೨ ಇಸವಿ.

ಮೊಹದೀನವಲ್ಲದ ಹುಶೇನಸಾಹೇಬ ಕಲಾದಗಿ
ಸ್ಕೂಲಮಾಸ್ತರ ನಾಗಠಾಣ ತಾ॥ ವಿಜ್ಯಾಪೂರ.

ಸ್ಥಾಪನೆ : ೧೮೭೩

1873

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೯೮

ಡೆ. ಚೆನ್ನಬಸಪ್ಪನವರು

(೧೮೩೩–೧೮೮೧)

ಶತಮಾನೋತ್ತರ ಬೆಳ್ಳಿ ಹಬ್ಬ

(ಏಪ್ರಿಲ್ ೧೯೯೮ ರಿಂದ)

ವರ್ಷ 1873

[illegible]ನೆಯ ಸಂಪುಟ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚೆನ್ನಬಸಪ್ಪ ವೃತ್ತ, ರೊದ್ದರಸ್ತೆ, ಧಾರವಾಡ – ೧

REGISTERED NO. 24/1872

ಕನ್ನಡ ಶಾಲಾಪತ್ರಕವು

CANARESE SCHOOL PAPER.

ಪುಸ್ತಕ ೮] [ಸಂಚಿಕೆ ೧೦.

ಬೆಳಗಾವಿ, ಮಾಹೆ ಜಾನೇವಾರಿ ೧೮೭೩.

ಅನುಕ್ರಮಣಿಕೆಯು .... ಪುಟ.

ತನಗೆ ತಾನೇ ನೆರವಾಗುವದು ೨೧೭
ಶರತ್ಕಾಲ ವರ್ಣನೆವು ೨೨೧
ನೋಟಿಸುಗಳು ೨೨೪
ಪತ್ರವ್ಯವಹಾರ ೨೩೨

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

CONTENTS .... Page.

Self Help 217
New Poetry 221
Notices 224
Correspondence 232

BELGAUM.

Printed at the Belgaum Samachar Press.

17 JA 73

ಶಾಲಾಪತ್ರಕವು.

---000---

ಪುಸ್ತಕ V] [ಸಂಚಿಕೆ ೧೦.

ಬೆಳಗಾವಿ, ಮಾಹೆ ಜಾನೇವಾರಿ. ೧೮೭೩.

SELF HELP.

ತನಗೆ ತಾನೇ ನೆರವಾಗುವದು.

ಆರ್ಥರಯೋಂಗನೆಂಬುವ ದಣುವಿಲ್ಲದ ಉದ್ಯೋಗವಂತನ ನಾದೆಯು ಮಾತ್ರಾಗಿದೆ. ಅವನು ಅರವತ್ತು ವರ್ಷಗಳಿಗಿಂತ ಹೆಚ್ಚು ವ್ಯವಹಾರದ ಉದ್ಯೋಗಗಳನ್ನು ನಡಿಸಿದನು; ಈ ಕಾಲದಲ್ಲಿ ಅವನು ನ್ಯಾಯಶಾಸ್ತ್ರ (ಕಾಯದೆಗಳು), ಕವಿತೆ, ರಾಜ್ಯನೀತಿ, ಸೃಷ್ಟಿಶಾಸ್ತ್ರ, ಇವುಗಳಲ್ಲಿ ಕೀರ್ತಿಯು ಪಡೆದನು. ಇಷ್ಟು ಸಾಹಸವನ್ನು ಅವನು ಹ್ಯಾಗೆ ಮಾಡಿದನೆಂಬುದು ಬಹುಷ್ಟೋ ಜನರಿಗೆ ಇನ್ನೂ ತಿಳಿದಿಲ್ಲ. ಒಮ್ಮೆ ಒಬ್ಬ ಗೃಹಸ್ಥನು ಸರ್ ಸಾಮುಅಲ್ ರೋಮಿಲೀ ಯೆಂಬವನಿಗೆ ಒಂದು ಹೊಸಕೆಲಸವನ್ನು ಆರಂಭಿಸೆಂದು ಬೇಡಿಕೊಳ್ಳಲಾಗಿ ಅವನು ನನಗೆ ಕೂಡದೆಂದು ಹೇಳಿ, ನುಡಿದದ್ದೇನಂದರೆ "ಬ್ರೋಗ್ಹ್ಯಾಮನ ಕಡೆಗೆ ನಿನ್ನ ಕೆಲಸವನ್ನು ಒಯ್ಯಿ, ಅವನಿಗ ಬೇಕಾದ ಕೆಲಸದಲ್ಲಿ ಕೈ ಹಾಕುವದಕ್ಕೆ ವ್ಯಾಳ್ಯ ವುಂಟೆಂದು ತೋರುತ್ತದೆ" ಇದರ ಗುಟ್ಟು ಯೇನಂದರೆ, ಅವನು ಒಂದು ಮಿನಿಟನ್ನು ಸಹ ವ್ಯರ್ಥವಾಗಿ ಕಳೆಯುತ್ತಿದ್ದಿಲ್ಲ. ತಾತ್ಪರ್ಯ ವೇನಂದರೆ ಅವನ ಶರೀರವು ಕೇವಲ ಕಬ್ಬಿಣದ್ದಾಗಿತ್ತು. ಸಾಧಾರಣವಾಗಿ ಸರ್ವ ಜನರು ಯಾವ

ವಯಸ್ಸಿನಲ್ಲಿ ಯೆಲ್ಲ ತರದ ಉದ್ಯೋಗಗಳನ್ನು ಬಿಟ್ಟು, ತಾವು ಶ್ರಮದಿಂದ ಸಂಪಾದಿಸಿದ ಸುಖವನ್ನು ತೂಗಮಣೆಯ ಮೇಲೆ ಕೂತು ಅನುಭೋಗಿಸುತ್ತಾರೋ, ಆ ವಯಸ್ಸಿನಲ್ಲಿ ಲಾರ್ಡಬ್ರೋಗಂಮನು ಅತಿ ಶ್ರಮ ಸಾಧ್ಯವಾದ ಪ್ರಕಾಶದ ನಿಯಮಗಳ ಶೋಧವನ್ನು ಆರಂಭಿಸಿ, ಆ ಶೋಧದ ಪರಿಣಾಮವನ್ನು ಲಂಡನ್, ಪಾರಿಸ, ಪಟ್ಟಣಗಳಲ್ಲಿ ಹೆಸರಾದ ಯೆಲ್ಲ ವಿದ್ವಾಂಸರಿಗೆ ಪ್ರಕಟಿಸಿದನು. ಸುಮಾರು ಅದೇ ಕಾಲದಲ್ಲಿ ಇವನು ತಾನು ಬರೆದ ಅತ್ಯಾಶ್ಚರ್ಯಕರವಾದ 'ಮೂರನೇ ಜಾರ್ಜನ ಆಳಿಕೆಯಲ್ಲಿ ಆದ ಶಾಸ್ತ್ರಜ್ಞರೂ, ಕವಿಗಳೂ', ಯೆಂಬ ಪುಸ್ತಕವನ್ನು ಅಚ್ಚು ಹಾಕಿಸುವ ಉದ್ಯೋಗದಲ್ಲಿ ಇದ್ದದ್ದಲ್ಲದೆ, ಪಾರ್ಲಿಮೆಂಟಿನ ಹೌಸಆಫ ಲಾರ್ಡ್ಸ್ ಯೆಂಬ ಸಭೆಯಲ್ಲಿ ಕಾರ್ಯಗಳನ್ನು ಮಾಡುವದರಲ್ಲಿಯೂ, ರಾಜ್ಯದಾಡಳಿತೆಯವಾದ ವಿವಾದಗಳಲ್ಲಿಯೂ ತನ್ನ ಕೆಲಸದ ಭಾಗವನ್ನು ಮಾಡೇ ಮಾಡುತ್ತಿದ್ದನು. ಒಂದು ಸಮಯದಲ್ಲಿ ಸಿಡನೀಸ್ಮಿಥನೆಂಬವನು ಇವನಿಗೆ, ಮೂವರು ಬಲಿಷ್ಟರಾದ ಮನುಷ್ಯರು ಮಾಡತಕ್ಕಷ್ಟು ಕೆಲಸವನ್ನು ಮಾಡಿದರೆ ಸಾಕು, ಹೆಚ್ಚಿಗೆ ಮಾಡಬೇಡೆಂದು ಹೇಳಿದನು. ಆದರೆ ಕೆಲಸ ಮಾಡುವದಕ್ಕೆ ಲಾರ್ಡಬ್ರೋಗಂಮನು ಯೆಷ್ಟು ಮೆಚ್ಚಿಕೊಂಡಿದ್ದನೆಂದರೆ, ಬಹು ದಿವಸದ ಅಭ್ಯಾಸದಿಂದ ಅದು ಅವನ ಸ್ವಭಾವವೇ ಆಗಿತ್ತು; ಕೆಲಸದೊಳಗೆ ಯೆಷ್ಟು ವೇಳೆಯನ್ನು ಹಾಕಿದರೂ ಅದು ಅವನಿಗೆ ಮಿತಿಮೀರಿತೆಂದು ತೋರುತ್ತಿದ್ದೇ ಯಿಲ್ಲ. ಇದೇ ಮೇರೆಗೆ ಇವನಿಗೆ ತಾನು ಮಾಡಿದ ಕೆಲಸವು ಅತ್ಯುತ್ತಮವಾಗಬೇಕೆಂಬ ಅಭಿಮಾನವಾದರೂ ಅತಿಶಯವಿತ್ತು.

ಕೆಲವರು ಇವನ ವಿಷಯವಾಗಿ ಅನ್ನುವದೇನಂದರೆ, ಇವನು ಹೆಚ್ಚಿನ ಯಾವ ಪದವಿಯಿಲ್ಲದೆ ಕೇವಲ ಜೋಡುಗಳಿಗೆ ಬಣ್ಣ ಕೊಡುವವನಾಗಿದ್ದಾಗ್ಯೂ, ಇಂಗ್ಲಂಡದಲ್ಲಿ ತಾನು ಅತ್ಯುತ್ತಮ ಬಣ್ಣ ಕೊಡುವವನೆಂದೆನಿಸಿಕೊಳ್ಳುವವರೆಗೂ, ಇವನು ಯೆಂದಿಗೂ ಸಮಾಧಾನ ಪಡುತ್ತಿದ್ದಿಲ್ಲ.

ಇದೇ ವರ್ಗದವನಾದ ಶ್ರಮಪಟ್ಟು ಕೆಲಸ ಮಾಡುವವನು ಇನ್ನೊಬ್ಬನು ಯಾರಂದರೆ, ಸರ್ ಇಂಬುಲ್ವಾರ ಲೈಟನ್ನನೆಂಬವನು. ಕಲ್ಪಿತ ಕಥೆಗಳನ್ನು ಬರೆಯುವದರಲ್ಲಿಯೂ, ಕವಿತೆಯಲ್ಲಿಯೂ, ನಾಟಕಗಳಲ್ಲಿಯೂ, ಇತಿಹಾಸ ಬರೆಯುವದರಲ್ಲಿಯೂ, ನಿಬಂಧ ಬರೆಯುವದರಲ್ಲಿಯೂ, ವಕ್ತೃತ್ವದಲ್ಲಿಯೂ, ರಾಜ್ಯನೀತಿಯಲ್ಲಿಯೂ ಇವನಷ್ಟು ಕೀರ್ತಿಯನ್ನು ಸಂಪಾದಿಸಿದ ಗ್ರಂಥ ಕರ್ತರು ಶಿಕ್ಕುವದು ಅಪರೂಪವು. ಇವನು ವಿಶ್ರಾಂತಿಯನ್ನು ತಿರಸ್ಕರಿಸಿ, ಆರಂಭದಿಂದ ಕಡೆವರೆಗೂ ತಾನು ಮಾಡುವ ಕೆಲಸಗಳಲ್ಲಿ ಅತ್ಯುತ್ತಮತ್ವವನ್ನು ಸಂಪಾದಿಸುವ ಉದ್ರೇಕದಿಂದ ಕ್ರಮಕ್ರಮವಾಗಿ ಮುಂದರಿದನು. ಕೇವಲ ಉದ್ಯೋಗದ ಸಂಬಂಧದಿಂದಲೇ ನೋಡಲಾಗಿ ಇವನಷ್ಟು ಗ್ರಂಥಗಳನ್ನು ಬರೆದವರು ಇಂಗ್ಲಂಡದಲ್ಲಿ ಬಹು ಸ್ವಲ್ಪ ಜನರುಂಟೆಂತಲೂ, ಇವನ ಹಾಗೆ ಉತ್ತಮ ಬಿಡಿವೆಗಳನ್ನು ಉಂಟುಮಾಡಿದವರು ಯಾರೂ ಇಲ್ಲೆಂತಲೂ ತಿಳಿಯಬರುತ್ತದೆ. ಇವನ ಉದ್ಯೋಗವು ಕೇವಲ ಇವನಸ್ವಂತ ಇಚ್ಛೆಯಿಂದಲೇ ಬೆಳೆದಕಾರಣ ಅದಕ್ಕೆ ಯೆಲ್ಲಕ್ಕೂ ಹೆಚ್ಚು ಮಾನವು ತಕ್ಕದ್ದಾಗಿರುತ್ತದೆ. ಬೇಟೆಯಾಡುವದೂ, ವಿಶ್ರಾಂತಿಯಲ್ಲಿ ಕಾಲ ಕಳೆಯುವದೂ, ಸಭೆಗಳಿಗೆ ನೋಡಲಿಕ್ಕೆ ಹೋಗುವ

ದೂ, ಗಾಯನ ಕೇಳುವದೂ, ವಸಂತಕಾಲದಲ್ಲಿ ಲಂಡನ ಪಟ್ಟಣಗಳಲ್ಲಿ ನಿಂತು ವಿಧವಿಧ ದರ್ಶನ ಚಮತ್ಕಾರಗಳನ್ನು ನೋಡುವದೂ, ತರುವಾಯ ತಮ್ಮ ವತನದ ಮನೆಯಲ್ಲಿ ಹೋಗಿ ನಿಂತು ಅಲ್ಲಿ ಅನೇಕ ವಿಧದ ಸುರಸ ಪದಾರ್ಥಗಳನ್ನು ಭಕ್ಷಿಸುತ್ತ ಬೈಲಲ್ಲಿ ಆಟನೋಟಗಳನ್ನು ನಡಿಸುವದೂ, ಪಾರಿಸ, ವೀನಾ, ಅಥವಾ ರೋಮ ಪಟ್ಟಣಗಳಿಗೆ ಹೋಗಿ ತಿರುಗಾಡುವದೂ, ಇದೆಲ್ಲ ಆಸ್ತಿಯುಳ್ಳವನಾಗಿ ಸುಖವನ್ನು ಅಪೇಕ್ಷಿಸುವಂಥ ಮನುಷ್ಯನಿಗೆ ಅತಿಪ್ರಿಯವಾಗಿ ಇರುತ್ತದೆ; ಇದಲ್ಲದೆ ಈ ವಿಧವಾಗಿ ಕಾಲಹರಣ ಮಾಡುವವನು ಸ್ವಸಂತೋಷದಿಂದ ಯೆಡೆಬಿಡದೆ ಶ್ರಮಪಟ್ಟು ಕೆಲಸ ಮಾಡಲಾರನು. ಆದರೆ ಈ ಸುಖಗಳೆಲ್ಲ ಬುಲ್ವರನಿಗೆ ಅಸಾಧ್ಯವಿಲ್ಲದಿದ್ದಾಗ್ಯೂ, ಇವನಂತೆ ಆಸ್ತಿಯುಳ್ಳವರ ಸ್ಥಿತಿಯನ್ನು ನೋಡಲಾಗಿ, ಇವನು ಅವುಗಳನ್ನೆಲ್ಲ ಸ್ವಸಂತೋಷದಿಂದ ಬಿಟ್ಟುಕೊಟ್ಟು, ವಿದ್ಯಾವಂತರ ಪದವಿಯನ್ನು ಧರಿಸಿ, ಅವರ ಮಾರ್ಗವನ್ನೇ ಅನುಸರಿಸಿದನು. ಬಾಯರನ್ನನಂತೆ ಇವನಾದರೂ ಮೊದಲು ಕವಿತೆಯನ್ನು ('ಕಸಗಿಡಗಳೂ, ಅಡಿವೆಯ ಹೂವುಗಳೂ,' ಯೆಂಬ ಹೆಸರಿನ ಗ್ರಂಥವನ್ನು) ಮಾಡಿ ಉಪಹಾಸ ಪಟ್ಟನು. ಇವನ ಯೆರಡನೇ ಗ್ರಂಥವು 'ಫಾಕ್ಲಂಡ' ಯೆಂಬ ಕಲ್ಪಿತಕಥೆಯು; ಇದರಲ್ಲಿ ಸಹ ಇವನ ಉಪಹಾಸವೇ ಆಯಿತು. ಇಷ್ಟರಿಂದ ಯೆರಡನೇಯವನಾಗಿದ್ದರೆ ಗ್ರಂಥ ಮಾಡುವದನ್ನು ಬಿಟ್ಟುಬಿಡುತ್ತಿದ್ದನು. ಆದರೆ ಬುಲ್ವರನು ತುಂಬಾ ಮನಸ್ಸಿನ ಬಲವೂ ದೃಢನಿಶ್ಚಯವೂ ಉಳ್ಳವನಿದ್ದನು; ಆದದರಿಂದ ಎದೆಗುಂದದೆ ತನ್ನ ಕೆಲಸವನ್ನು ಕಡೆಗಾಣಿಸುವ ನಿಶ್ಚಯದಿಂದ ಅದನ್ನು ಹಾಗೇ

ನಡಿಸಿದನು. ಇವನು ಯೆಷ್ಟು ಮಾತ್ರವೂ ವಿಶ್ರಾಂತಿ ಯಿಲ್ಲದೆ ಉದ್ಯೋಗ ನಡಿಸಿ, ಬಹಳ ಗ್ರಂಥಗಳನ್ನು ಓದಿ, ಮೊದಲು ಅಪಜಯಪಟ್ಟಾಗ್ಯೂ, ಧೈರ್ಯದಿಂದ ಅದೇ ಮಾರ್ಗದಲ್ಲಿ ಮುಂದಕ್ಕೆ ಸಾಗಿ ಜಯಹೊಂದಿದನು. 'ಫಾಕಲಂಡ' ಯೆಂಬ ಗ್ರಂಥದ ನಂತರ ಒಂದು ವರ್ಷದೊಳಗೆ 'ಪೆಲ್ಲಂ' ಯೆಂಬ ಅತ್ಯುತ್ತಮ ಗ್ರಂಥವನ್ನು ರಚಿಸಿದನು. ಆ ಮೇಲೆ ಮೂವತ್ತು ವರ್ಷಗಳವರೆಗೆ ಅವನು ಮಾಡಿದ ಗ್ರಂಥಗಳೆಲ್ಲ ಜನರಿಗೆ ಅತಿ ಪ್ರಿಯವಾಗಿವೆ.

(New Poetry).

ಶರತ್ಕಾಲ ವರ್ಣನೆಯು.

॥ವಸಂತತಿಲಕವೃತ್ತಂ॥ ಶ್ರೀಶಾರದೇ ಮಧುಪಾಳೀ, ಘನ
ಕಾಂಬುಜಾಕ್ಷೀ,।
॥ಶ್ರೀಶಸ್ನುಷೇ, ವರದೆ, ಸರ್ವಕಲಾವಿದೇ, ಬ್ರ॥
॥ಹ್ಮೇಶಾದಿಸನ್ನುತೆ, ಮಹೀಸುರವಂದ್ಯ ಪಾದೇ,।
॥ಶ್ರೀಶಾರದೇ, ಸುಮತಿಯಂ ಕುಡುಬುದ್ಧಿದಾತೇ॥೧॥

॥ಶಿಖರಿಣೀ॥ ನಮೋ ವಿದ್ಯಾಧೀಶ, ಪ್ರಣತಜನಚಿಂತೋ
ದ್ಧರಣ, ಹೃತ್।
॥ತಮೋಧ್ವಂಸಿನ್, ದೇವಾಸುರನರಮಹರ್ಷ್ಯಾದಿವಿನುತ,॥
॥ಪ್ರಮೋದಶ್ರೀಯುಃ ಶ್ರೀವರದ, ಹರಸಂಪ್ರೀತಿಕರ, ತೇ,।
॥ಮನೋದ್ಯೋಗಂ ಪೂರ್ಣಂ ನಯ, ಭಯಹರ, ಶ್ರೀಗ
ಣಪತೇ॥೨॥

॥ಮತ್ತೇಭ॥ ಇದನೆಷ್ಟೆಂಟರ ಲೆಂಟೆಸೆಂಟೆ ನಿಸಿತಿಂಸಾಂ
ತಾಳೆತಾಳೆಂ!!ವಿಷ।
॥ಪ್ರದಕಾಲಂ ಮಮಕಾಂತಸೇವಿಷವಂ ನೆಂದರ್ಕಜಾ

ರೂಪದಿಂ॥

॥ಮುದಿಸಲ್ ಭಂಗರವಾಳಿ-ವಾಂತಿನಿನದಂ ಭೂಕಾಂತೆ

ತ್ರಾಂ ಕಾರಿಪ್ರಾ।

॥ವರ್ದಿಶಾಮಾರುತನೆಂಬುಸುರ್ ಗೆಲ್ದುತ್ರಾಸತ್ತಾ ತ

ನೋಳ್ನೊಂದಿರಲ್॥೩॥

॥**ಮಾಲಿನೀವೃತ್ತವು**॥ ಅರಿದಿದನುಶರತ್ಕಾಲಂ ಕರಂ, ಬಂ

ಧು, ಧಾತ್ರೀ।

॥ತರುಣಿಗೆ ವಿಷಮಂ ನೀವಾತನಂ ನಟ್ಟ, ತಾ ನೊ॥

॥ಪ್ಪಿರೆ; ಧರತ್ತೊರೆದಾ ಪೂರ್ವಪ್ರಿಯಂಸೀತನೋಳ್ಕೂ।

॥ರ್ತರರೆ!! ನೆರೆದಳಲ್ಲೆ! ಸ್ತ್ರೀಪ್ರಕಾರಂ ವಿಕಾರಂ॥೪॥

॥**ಇಂದ್ರವಜ್ರ**॥ ಎಂಬಂದದಿಂಭೂವಲಯಂಶರತ್ತಾ।

॥ಸಂಬಂಧದಿಂಪೊಪ್ಪಿತುಜಾರಿದತ್ತಾ।

॥ಗಂಭೀರದಕಾಲಂ.ಬೆಳ್ವಣ್ತದಿತ್ತಾ।

॥ದಂಬಂದುದಾಮೂಡಲರಾರಿಸುತ್ತಾ॥೫॥

॥**ಮಾಲಿನೀವೃತ್ತ**॥ ಘನದಿಸೆರೆಯಿಡಲ್ ಪರ್ಜನ್ಯರಾಜಂ;

ಸಹಾಯಂ।

॥ಕ್ಕನುತೆ ಕರಿಸಲಾ ಸ್ಮೃತಂದು ಗೆಲ್ದೀಶರತ್ಕಾ॥

॥ಲ*ನವನ ಫಲದಿಂದಂ, ಕಾಂತಿಯಂನಿತ್ತನೆಂಬಂ,

ತ್ರಿನಕಳಿಗಳತಿ ಸ್ವಚ್ಛಾಂಶುಸಂಘೋಜ್ವಲಾಂಗರ್॥೬॥

॥**ಮತ್ತೇಭ**॥ ಬೆಳ್ಯಿಂಬಾಳ್ವೆಳ್ಯಿಂ, ಗತಾಬ್ದರವಜಾತಾ

ನಂದದಿಂದಂಗುಹಾ।

॥ವಳಯಿಂದೊಬ್ಬಳಿಯಿಂದವೋಳ್ದು ಕಮಳಂಗಳ್ಗೆ

ದಿದಾಹಂಸಮಂ॥

---

*ಅವನ=ನಘಾಕಾಲರಾಜನನು

||ಡಳಿಯಿಂಪಾಡ್ವಳಿಯಿಂದಮೊಪ್ಪುವಸರಸ್ಸಿಂ, ದಟ್ಟನೀ
ರಂಗಳೊಳ್||
||ಸೊಳಯಿಂದಂ, ಚಳಿಯಿಂದೆ, ಬೆಳ್ಮುಗಿಲಿ ಮುಂದಂತಾಂ
ಶರತ್ಕಾಲವಿಾ||೭||

||ಶಾ|ವಿ|| ಎತ್ತಂ ನೋಡಿದೊಡತ್ತ ಪೊಂಬೆಳೆ ನ್ರೊಲಂಗಳ್, ಪ
ಕ್ಕಿ ವಿಂಡಲ್ಲಿ, ಸೋ|
||ವೃತ್ತಂ ನಿಂದಿಹ ಪಾಮರರ್, ಕವಣೆ ಗಲ್, "ಹ್ರುಯರ್,
ಕೇಹ್ರು, ರಾೞ, ರಪ್ಪೆ"ನಿ||
ಪ್ಪೆತ್ತಂ "ಘುರ್ರ್"ಸಿ ಪೀಸರಂಗಳೆರಡುಂ ಕರ್ಣಂಗಳೋ
ಳ್, ದಿಟ್ಟಗಾ|
ಯುತ್ತಂ ಪ್ಸರುಗಳಂ ಪಡುಂಪು ದಿದುದೀ ಗೀಪಾಗಿ ಪೈ
ದೋಡುವೇಂ?||೮||

||ಮತ್ತೇಭ|| ನೆಲಪೆಂಣಂ ಸಲವಿಂದ ಪಿಾಶರದದಾಜಂಗಿತ್ತು
ವೈವಾಹಮಂ|
||ಸಲೆಮಾಡಲ್ ಪೆಸೆವೆಗ್ಗಳಾಕೆಗೆ ಹರಿದ್ರಾಲೇಪನಂ ಗೈ
ದರೋ,?||
||ಚಲುವಿಂ ಪಾಸಿದನೋ ನವಾಗತ-ಶರತ್ಕಾಲಂಗೆ ಪೊಂ
ಬಟ್ಟೆಯಂ|
||ನೊಲವಿಂ ಕೂಡಲುತತ್ಸಖಂ ಪವನನೆಂಬೋಲ್ ಸ್ಪೈರು
ಪೊಂಬಂಣದಿಂ||೯||

	ಇಂದ್ರವಜ್ರ		ಪೊಂಬಂಣದಿಂ ತುಂಬಿದ ಕಾಳ್ಗಳಿಂದಂ
	ದಂಬೆತ್ತ ಪೊಂಬತ್ತದ ಗೊಂಚಲೆಂಬಂ	
	ದಂಬೀರಲುಂ; ಬಲ್ ಪೆನೆಬಂಬಲೇಂಕ
	ಗ್ಗಂಬಾದುಪೋ! ನೆಲ್ವಲಪೊಂಬೊಲಂಬೊಲ್		೧೦	

॥ಮಾಲಿನೀವೃತ್ತ॥ ಅರೆಯುಮೆಲರಮೊಯ್ಲಿಂ ಸಾಳಿಗಳ್ಸು
ಯ್ಯೆನಲ್ಕಾ।
॥ಗುಲಿಗೆ ತೆನೆಗಳಲ್ಲೀ ಪಕ್ಕಿಗಳ್ ಹಾರೆ; ಮೇಲ॥
॥ಕ್ಕೆಲರದು ನಿಲೆಮಾತ್ರಂ ಸಾರೆ; ತಾನೂರ್ವರಾತ್ರೀ।
॥ಲಲನೆಯು ತಿರಿಕಲ್ಲಾದ್ವಂತಿಕೆಣ್ಗೊಪ್ಪಿ ತೋರ್ಕುಗಂ
॥೧೮॥

ತಾ॥ ೨೧ ನವಂಬರ ೧೮೭೨ ಇಳಿವಿ ಮುಕ್ಕಾಮು ಬೆಳಗಾಂವ } ಧೊಂಡೋ ನರಸಿಂಹ ಮುಳಬಾಗಲ.

(ಮುಂದಕ್ಕೆ ಸಾಗಿರುತ್ತದೆ.)

NOTICES.
ನೋಟೀಸುಗಳು.

ಸನ್ನ ೧೮೭೩ನೇ ಇಸವಿಯ ನೊವ್ಹೆಂಬರ ತಿಂಗಳಿನ ೬ನೇ ೭ನೇ ತಾರೀಖುಗಳಲ್ಲಿ ಮೊಹೆರಬಾನ ಫ್ಲೀಟ ಸಾಹೇಬ ಆ. ಎ. ಇನ್ಸಪೆಕ್ಟರ ದಕ್ಷಿಣಭಾಗ ಇವರೂ, ರೆವ್ಹ. ಜೆ.ಜಿ.ಹಾಕರ ಸಾಹೇಬರೂ ಕೂಡಿ ಮರ್ಥಸ್ಪ್ರಾಯಿಜ ಯೆಂಬ ಹೆಸರಿನ ಇನಾಮು ಕೊಡುವದಕ್ಕೋಸ್ಕರ ತಕ್ಕೊಂಡ ಪರೀಕ್ಷೆಯಲ್ಲಿ ಹಾಜರಾದ ಉಮೇದವಾರರ ಹೆಸರುಗಳ ಪಟ್ಟಿಯು, ಅವರವರ ಗುಣಗಳು ಸಹಿತ. (ಮುಂದಿನ ಪುಟ ನೋಡು)

೧ನೇ ಕಾಗದ—ಹಳೆಗನ್ನಡ ಗದ್ಯರಚನೆಯು, ಹಳೆಗನ್ನಡವಾಕ್ಯ ಮುಂತಾದವುಗಳ ಅರ್ಥಬರಿಸು ಟೀಕಿಸುವದು.

೨ನೇ ಕಾಗದ—ವ್ಯಾಕರಣ, ವಾಕ್ಯರಚನೆಯ ನಿಯಮಗಳು, ಪದ್ಯರಚನೆಯ ನಿಯಮಗಳು.

೩ನೇ ಕಾಗದ—ಹಳೆಗನ್ನಡ ಕವಿತಾರಚನೆ.

ನಂಬರು.	ಹೆಸರು.	ವಯ.	ಜಾತಿ.	ಊರು ವಸ್ಥಳ.	ಉದ್ಯೋಗ.	ಪಡೆದ ಗುಣಗಳು.			
						ಕ್ರಮ ೧ ಪ. ಕ.	ಕ್ರಮ ೨	ಕ್ರಮ ೩	ಒಟ್ಟು.
						೫೦	೮೦	೫೦	೧೮೦
೧	ವೀರಪ್ಪಾ ಕೊಟ್ರಪ್ಪಾ ಧಟ್ಟಿ.	೩೩	ಜಾಡರವ.	ನರೆಗಲ್ಲ, (ಧಾರವಾಡ)	ನರೆಗಲ್ಲ ಕನ್ನಡ ಶಾಲೆಯ ಹೆ. ಮಾ. ಸಂಬಳ ೧೫ರೂ.	೨೨	೨೨ ೧/೪	೧೦	೫೪ ೧/೪
೨	ರಾಜೀವಪ್ಪಾ ಸ್ವಾಂತಣ್ಣಾ ಡಂಬಳ.	೩೧	ಕೋಷ್ಟಗೇರವ.	ಬೆಟ್ಟಗೇರಿ (ಧಾರವಾಡ)	ಬೆಟ್ಟಗೇರಿ ಮಾದ್ರಿ ಶಾಲೆಯ ಹೆ. ಮಾ. ಸಂಬಳ ೧೨ರೂ.	೨೬ ೩/೪	೫೧ ೧/೨	೧೦	೮೮ ೧/೪
೩	ಗುರುಶಾಂತಚನಬಸ್ಸಯ್ಯಾ ಅಥಣಿ.	೧೯	ಲಿಂಗವಂತ.	ಧಾರವಾಡ.	ಧಾರವಾಡ ಡಿ. ಯೆ. ಇ. ೨ನೇ ಕಾರಕೂನ ಸ. ೨೫ರೂ.	೨೦ ೩/೪	೨೯ ೧/೪	೧೨	೬೨
೪	ಧೊಂಡೋ ನರಸಿಂಹ ಮುಳಬಾಗಲ.	೨೨	ಬ್ರಾಹ್ಮಣ.	ಬೆಳಗಾವ.	ಟ್ರೇನಿಂಗ ಕಾಲೇಜದೊಳಗಿನ ವಿದ್ಯಾರ್ಥಿ. ※	೨೮ ೩/೪	೪೪	೨೫	೯೭ ೩/೪

(Signed] J. F. FLEET.

ಅ. ಎ. ಇ. ದಕ್ಷಿಣ ಭಾಗ.

※ ಇವರು ಪರೀಕ್ಷೆಯಲ್ಲಿ ಮಾಸೂದಕಾರಣ ಇನಾಮು ಪಡೆದರು.

ಟ್ರೇನಿಂಗಕಾಲೇಜದ ಸರಟಿಪಿಕೇಟದ ಪರೀಕ್ಷೆ.

ಬೆಳಗಾವಿ ಟ್ರೇನಿಂಗ ಕಾಲೇಜದಲ್ಲಿ ಕಳೆದ ಅಕ್ಟೋಬರ ತಿಂಗಳಲ್ಲಿ ಆದ ಸರಟಿಫಿಕೇಟ ಪರೀಕ್ಷೆಯಲ್ಲಿ ಪಡೆದಗುಣಗಳ ಕ್ರಮವನ್ನು ಅನುಸರಿಸಿ ಪಾಸಾದವರ ಹೆಸರುಗಳ ಪಟ್ಟಿ.

ನಂಬರ	ಹೆಸರುಗಳು.	೮೦೦ ರಲ್ಲಿ ಹೊಂದಿದ ಗುಣಗಳು.	೧೦೦ ಕ್ಕೆ ಬೀಳುವ ಗುಣಗಳು.	ಎಷ್ಟು ರೂಪಾಯಿ ಸ್ಕಾಲರಶಿಪ್ಪ ದೊರೆಯಿತು.
	ಎರಡನೇ ವರುಷದ ಅಭ್ಯಾಸದವರು ಫಸ್ಟ್ ಕ್ಲಾಸ ಸರಟಿಫಿಕೇಟವನ್ನು ಪಡಕೊಂಡವರು.			
೧	ಅಡಿವೆಪ್ಪ ವಿರುಪಾಕ್ಷಪ್ಪ ಕತ್ರಿ.	೫೬೫¾	೭೦ $\frac{೨೩}{೩೨}$	೭೫
೨	ಗೋವಿಂದ ಮಹಾದೇವ ಜೋಶಿ.	೫೬೨¾	೭೦ $\frac{೧೧}{೩೨}$	,,
೩	ಧೋಂಡೊ ನರಸಿಂಹ ಮುಳಬಾಗಲ.	೫೬೦	೭೦	,,
೪	ಅನ್ನಪ್ಪಯ್ಯಾ ರಾಚಯ್ಯಾ ಸ್ವಾಮಿ.	೫೫೪¾	೬೯ $\frac{೧೧}{೩೨}$	೭೦
೫	ಶಿರೋಜಿ ಆನಂದಪ್ಪಾ ಸಾಮದೇವ.	೫೪೮½	೬೮ $\frac{೧೮}{೩೨}$	,,
೬	ಮಹಾದೇವ ಸದಾಶಿವ			

ಜೋಶಿ.	೫೪೭ ೧/೪	೬೮ ೧೩/೩೨	,,
೭ ಗಂಗಾಧರ ಧೊಂಡದೇವ ಮಾಯಿಣಕರ.	೫೧೮	೬೪ ೩/೪	,,
೮ ಹನುಮಂತ ವಿರುಪಾಕ್ಷ ಕಾಲಕರ್ಣಿ.	೫೧೬ ೧/೨	೬೪ ೯/೧೬	,,
೯ ಗುರಪ್ಪಾ ವೈಜಪ್ಪಾ ಶಹಾಪೂರ.	೫೦೪ ೧/೨	೬೩ ೧/೧೬	,,
೧೦ ವೀರಪ್ಪಾ ಬಸೆಟ್ಟೆಪ್ಪಾ ಮಾಲಿ.	೪೩೫ ೧/೪	೫೪ ೧೩/೩೨	,,
೧೧ ಪುರ್ಟಾಜಿ ಅನಂತ ಮನಸಾಲಿ.	೪೦೦ ೩/೪	೫೦ ೩/೩೨	,,

ಮೊದಲನೇ ವರುಷದ ಅಭ್ಯಾಸದವರು.

೧ ರಾಮಚಂದ್ರ ದಾದಾಚಾರ್ಯ ಜೋಶಿ.	೫೬೯ ೧/೪	೭೫ ೧/೩೦	೧೫
೨ ಶ್ರೀನಿವಾಸ ಗಣೇಶ ಕವಲಗುಡ್ಡ.	೫೪೫ ೧/೨	೭೨ ೧೧/೧೫	,,
೩ ದಿವಾಕರ ಸದಾಶಿವ ಜೋಶಿ.	೫೪೧	೭೨ ೨/೧೫	,,
೪ ಕಲ್ಲೋ ನಾರಾಯಣ ಕಡಲಗಿ.	೫೩೧ ೧/೨	೭೦ ೧೩/೧೫	,,
೫ ವಿಠಲ ರಂಗೋ ಕವಲಗುಡ್ಡ.	೫೧೪ ೧/೪	೬೮ ೧೩/೩೦	೧೨

೬ ನರಸಿಂಹ ಶೇಷೋ ಪೂ

ಜ್ಯಾರಿ. ೪೯೮ ೧/೪ ೬೬ ೧೩/೨೦ ,,

೭ ಅಣ್ಣಾಜಿ ಆನಂದರಾವ
ಬಾಗೆವಾಡಿ. ೪೯೪ ೧/೪ ೬೫ ೯/೧೦ ,,

೮ ಸ್ವಾಮಿ ಸಂಜೀವ ದೇಶ
ಪಾಂಡೆ. ೪೯೦ ೧/೩ ೬೫ ೭/೫ ,,

೯ ಗುಡ್ಡೋ ತಿಪ್ಪಾಜಿ ಕು
ಲಕರ್ಣಿ. ೪೭೬ ೬೩ ೭/೧೫ ,,

೧೦ ರಾಚಪ್ಪಾ ಗುರಪ್ಪಾ ಶೆ
ಟ್ಟಿ. ೪೭೨ ೩/೪ ೬೩ ೧/೨೦ ,,

೧೧ ರಾಮಚಂದ್ರ ಗೋಪಿನ್ನೆ
ಯ್ಯಾ ಸಸಿಹಿತ್ತಲ. ೪೬೭ ೧/೪ ೬೨ ೩/೧೦ ,,

೧೨ ಶಿವಲಿಂಗಪ್ಪಾ ಗುರಬಸ
ಪ್ಪಾ ಜವಳಿ. ೪೬೭ ೬೨ ೪/೧೫ ,,

೧೩ ಮರಿಯಪ್ಪಾ ಹನುಮ
ಪ್ಪಾ ಬರದೂರ. ೪೬೬ ೧/೩ ೬೨ ೧/೫ ,,

೧೪ ಮಹಮ್ಮದ ಶಾರಜೀಬ
ಶಾ ಜಮಖಂಡಿ. ೪೬೨ ೧/೪ ೬೧ ೧೯/೨೦ ,,

೧೫ ನಾರಾಯಣ ಅಚ್ಯುತ
ಗೋಕರ್ಣ. ೪೬೨ ೬೧ ೩/೫ ,,

೧೬ ವೀರಪ್ಪಾ ಹನುಮಪ್ಪಾ
ಲೋಕಾಪೂರ. ೪೬೧ ೩/೪ ೬೧ ೧೭/೨೦ ,,

೧೭ ಬಾಳಕೃಷ್ಣ ಜನಾರ್ದ
ನ ಭಿಡೆ. ೪೫೯ ೧/೩ ೬೧ ೪/೧೫ ,,

೧೮ ಚನ್ನವೀರಯ್ಯಾ ಶಿವರು

ದ್ರಯ್ಯಾ ಬಾಗಲೇರಿ. ೪೫೬ ೧/೨ ೬೦ ೧೩/೧೫ ೧೨

೧೯ ಕೃಷ್ಣೋ ಅಪ್ಪಾಚಾ
ರ್ಯ ಹುಬ್ಬಳ್ಳಿ. ೪೫೫ ೧/೪ ೬೦ ೩/೧೦ ,,

೨೦ ಕೂಸೋ ಮುದ್ಗಗಿರಿ
ಕುಲಕರ್ಣಿ. ೪೪೬ ೧/೪ ೫೯ ೧/೨ ,,

೨೧ ವಾಸುದೇವ ಗೋಪಾಳ
ಕಿತ್ತೂರ. ೪೪೬ ೫೯ ೩/೧೫ ,,

೨೨ ಜೀವಾಜಿ ವೆಂಕಾಜಿ ಕ
ಲಘಟಗಿ. ೪೪೧ ೧/೨ ೫೮ ೧೩/೧೫ ,,

೨೩ ವೇಣುವಾಸುದೇವ ತಡ
ಕೋಡ. ೪೪೦ ೧/೨ ೫೮ ೧೧/೧೫ ,,

೨೪ ಚನವೀರಯ್ಯಾ ರುದ್ರ
ಯ್ಯಾ ಮೂಲಿಮಠ. ೪೨೯ ೧/೪ ೫೮ ೧೩/೨೦ ,,

೨೫ ಬಾಳಾಜಿ ಗೋವಿಂದ ಬೆ
ಟಗೇರಿ. ೪೨೯ ೩/೪ ೫೭ ೯/೨೦ ,,

೨೬ ಚನಬಸವ್ವಾ ಉಳವಪ್ಪಾ
ಕೋಟೂರ. ೪೨೯ ೧/೨ ೫೭ ೪/೧೫ ,,

೨೭ ಮಧ್ವ ಕೃಷ್ಣ ಕಮ
ತಗಿ. ೪೧೪ ೫೫ ೧/೫ ,,

೨೮ ನಾರಾಯಣ ಶಂಕರ ಪು
ರಂಧರೆ. ೪೧೨ ೩/೪ ೫೫ ೧/೬ ,,

೨೯ ರಾಮಚಂದ್ರ ಅಣ್ಣಾಜಿ
ಕಕಮರಿ. ೪೦೬ ೫೪ ೨/೧೫ ,,

೩೦ ಗುರನಾಥ ಅಪ್ಪಾಜಿ ಕು

ಲಕರ್ಣಿ.	೪೦೬ ೩/೪	೫೩ ೧೩/೨೦	೬೨
೩೧ ಮಂಗೇಶ ಗಣಪ್ಪಯ್ಯಾ ಸಸಿಹಿತ್ತಲ.	೩೮೬ ೩/೪	೫೬ ೧೩/೨೦	,,
೩೨ ಮಹಾದೇವ ವಿನಾಯಕ ಜೋಗಳೇಕರ.	೩೮೪ ೩/೪	೫೬ ೯/೨೦	,,
೩೩ ಗಣೇಶ ಈಶಪ್ಪಾ ನಾಮದೇವ.	೩೮೪ ೩/೪	೫೬ ೯/೨೦	,,
೩೪ ಕೃಷ್ಣಾಜಿ ಬಾಳಾಜಿ ಕಿತ್ತೂರ.	೩೮೬ ೧/೪	೫೦ ೫/೬	,,

ಹೊರಗಿಂದ ಬಂದವರು.

೧ ಸ್ವಾಮಿ ಶ್ರೀನಿವಾಸ ಸೇಗಿನಹಾಳ.	೫೭೫ ೧/೪	೭೦ ೧/೨೦	೭೫
೨ ವೆಂಕಾಜಿ ಗಣೇಶ ಕವಲಗುಡ್ಡ.	೫೭೬	೭೬ ೨/೫	೬೫
೩ ಶಾಂತೋ ನರಶಿಂಹ್ವ ರಟ್ಟಿಹಳ್ಳಿ.	೩೯೩	೫೭ ೨/೫	೬೭

(Signed) B. K. HOOLGOAL.
ಪ್ರಿನಸಿಪಾಲ್. ಟ್ರೇ. ಕಾ. ಬೆಳಗಾವಿ.

ಕಂನಡಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ

೭. ಎಜ್ಯುಕೇಶನಲ್ ಇನಸ್ಪೇಕ್ಟರ ಜಿಲ್ಹಾ ಕಾನಡಾ ಇವರ ಕಡಿಯಿಂದ ಕೊಡೋಣದರಲ್ಲಿ ಬರುತ್ತದಲ್ಲ. ಕುಮಟಾ ತಾಲೂಕ ಅಂಕೋಲಾ ಸ್ಕೂಲಮಾಸ್ತರರಾದ ಪರಮೇಶ್ವರ

ಶಂಕರ ಇವರು ಒಂದು ಪ್ರಕರ್ಣದಲ್ಲಿ ನಮ್ಮ ಕಡೆಯಿಂದ ಹೋದ ಹುಕುಮು ಅಮಾನ್ಯಮಾಡಿ ನಡಿಸಿದ ಜಿಕೀರಿದೆಸೆಯಿಂದ ಅವರಿಗೆ ಒಂದು ರೂಪಾಯಿ ಮತ್ತು ಸದರ ಅಂಕೋಲಾ ಹಿಂದುಸ್ಥಾನಿ ಬ್ರೇಂಚಸ್ಕೂಲ ಮಾಸ್ತರರಾದ ಶೇಖ ಅಬದುಲ್‌ಕಾದರ ಇವರು ಒಂದು ರಿಪೋರ್ಟಿನಲ್ಲಿ ಕೆಲವು ಸುಳ್ಳು ಸಂಗತಿಗಳು ಬರೆದದರಿಂದ ಅವರಿಗೆ ಅರ್ಧರೂಪಾಯಿ ಈಪ್ರಕಾರ ಮೇಹರಬಾನ ಯೆಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬ ಬಹಾದೂರವರ ಮಂಜೂರಿಯಿಂದದಂಡಮಾಡಲ್ಪಟ್ಟಿದೆ. ಈ ಮಜಕೂರು ನೀವು ಚೆನ್ನಾಗಿಗ್ರಹಿಸಿಕೊಂಡು ತಂಮತಂಮ ಕೆಲಸದಲ್ಲಿ ಜಾಗ್ರತೆಇಡುವಿರೆಂದು ನಂಬುತ್ತೇವೆ ತಿಳಿಯೋದು. ತಾರೀಖು ೧೮ನೇ ದಿಶೆಂಬರ ಸನ್ ೧೮೭೬ನೇ ಇಸ್ವಿ ಮುಕಾಮುಯಲ್ಲಾಪುರ.

(Signed) R. W. Bhanap.

ಡಿ. ಯೆಜ್ಯುಕೇಶನಲ್ ಇನಸ್ಪೇಕ್ಟರ ಜಿಲ್ಲಾ ಕಾನಡಾ.

ಕೆಳಗೆ ಸಹೀ ಮಾಡುವವರು ತಿಳಿಯಪಡಿಸುವದೇನಂದರೆ, ಸರಕಾರದವರ ಹೊಸ ಠರಾವಿನ ಮೇರೆಗೆ ಸನ್ ೧೮೭೩ನೇ ವರ್ಷದಲ್ಲಿಯೂ ಅದರ ನಂತರವೂ ಆಗುವ ಮುಲಕೀ ಪರೀಕ್ಷೆಗಳಲ್ಲಿ ಕೆಳಗೆ ಬರದಂತೆ, ಪರೀಕ್ಷೇಗೆ ಬರಲಿಚ್ಛಿಸುವ ಉಮೇದವಾರರ ಕಡೆಯಿಂದ, ಫೀ ತಕ್ಕೊಳ್ಳದಾದೀತು.—

ಮೊದಲನೇ ಕ್ಲಾಸ ಅಥವಾ, ಇಂಗ್ರಜಿ ೫ನೇ ಯೆತ್ತೆಯ ಮೇರೆಗೆ ಪರೀಕ್ಷೆ ಕೊಡಲಿಚ್ಛಿಸುವವರಿಂದ-ರೂ. ೩

ಯೆರಡನೇ ಕ್ಲಾಸ ಅಥವಾ ದೇಶ ಭಾಷೆಯ ೬ನೇ ಯೆತ್ತೆ

ಯು ಮೋರೆಗೆ ಪರೀಕ್ಷೆ ಕೊಡಲಿಚ್ಛಿಸುವವರಿಂದ—ರೂ.೧
ಮೇಲೆ ಬರೆದ ಪ್ರಕಾರ ಫೀ ಕೊಟ್ಟ ಹೊರ್ತು ಉಮೇದವಾರರ ಹೆಸರುಗಳು ಬರಕೊಳ್ಳಲ್ಪಡಲಿಕ್ಕಿಲ್ಲ—ತಾ॥೧೫ ದಿಜಂಬರ ಸನ್೧೮೭೨ ಇಸವಿ.

(Signed) J. F. Fleet,
ಅ. ಎ. ಇನಸ್ಪೆಕ್ಟರ ದ. ಭಾ.

Correspondence.
ಪತ್ರವ್ಯವಹಾರವು.

ಮಹಾರಾಜರಾಜಶ್ರೀ ಬೆಳಗಾವಿ ಕನ್ನಡ ಮಾಸಪತ್ರಕರ್ತರ ಚರಣಸನ್ನಿಧಿಗೆ.

ಕೆಳಗೆ ಸಹಿಮಾಡುವವನು ಕರದ್ವಯಮುಗಿದು ಬಿನ್ನಹ ಮಾಡುವದೇನಂದರೆ ಕೆಳಗೆ ಬರೆದ ಶ್ಲೋಕವು ಬಹುಮನೋಹರ ವಾದ್ದರಿಂದ ತಮ್ಮ ಕಡೆಗೆ ಕಳುಹಿಸಿದ್ದೇನೆ.

(ಶಾರ್ದೂಲವಿಕ್ರೀಡಿತವೃತ್ತ).

ಏಕಾಂತೇಸಹಸಾಯಯೌಕನಕಮುಲಾ,ರಂತುಂಪ್ರವೃತ್ತಾಮುದಾ। ದೃಷ್ಟ್ವಾವಸ್ತ್ರಂಸ್ವರುಷಂಪ್ರಿಯಸ್ಯನಯನಂವಾಮೇತರಂರುಂಧತೀ॥ ಏಣಾಂಕಂರಮಣಸ್ಯವೀಕ್ಷ್ಯಚಕಿತಾಪದ್ಮಾಕ್ಷಿಪದ್ಮದ್ವಯಂ। ಪಾಣಿಭ್ಯಾಂಸಮರುಂಧಯತ್ಸಭವಚ್ಛ್ರೇಂಕಿಮೇತದ್ವದ॥೧॥

ಈ ಶ್ಲೋಕದಲ್ಲಿ ಅರ್ಥಗೌರವ ಹೊರವುವದು ತಿಳಿಯುವಅಪೇಕ್ಷೆಯಿಂದ ತಮ್ಮ ಕಡೆಗೆ ಕಳುಹಿಸಿದ್ದೇನೆ. ತಮ್ಮ ಮುಂದಿನ ಪತ್ರದಲ್ಲಿ ಅನ್ವಯ ಅರ್ಥಸಹಿತ ಚಮತ್ಕಾರವನ್ನು ಮುದ್ರಿಸಿ ತಿಳುಹಿಸಿದರೆ ಬಹುಸಂತೋಷ ಹೊಂದುವೆನು.

ಇಂತಿ ಬಿನ್ನಹ.

ಶಿವಾಜಿ ಅಪ್ಪಾಜಿ ಶಿರಸಂಗಿಕರ.

ವಂಕ್ರೋಜಿ ಘೋಜ.

ನಾನು ಕೆಳಗೆ ಸಹಿಮಾಡಿದವನು ಧಾರವಾಡಜಿಲ್ಲೆಯ ಸಂಕ್ಷಿಪ್ತವರ್ಣನೆ ಎಂಬ ಸಣ್ಣ ಪುಸ್ತಕವನ್ನು ಎರಡನೇ ಮರ್ಯಾದೆಯಂತೆ ಕಲಿಯುವ ಹುಡುಗರಿಗೋಸ್ಕರ ಕನ್ನಡನ ನಲ್ಲಿ ಸುಲಭ ಭಾಷೆಯಿಂದ ರಚಿಸಿ ಬೆಳಗಾವೀ ಸಮಾಚಾರ ಛಾಪಖಾನೆಯಲ್ಲಿ ಮೊಳೆಗಳಿಂದ ಛಾಪಿಸಿ ೨ ಆಣೆ ಕಿಮ್ಮತ್ತು ಇಟ್ಟಿರುತ್ತೇನೆ; ಆದರೆ ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಮಾಸ್ತರರು ತಮ್ಮ ತಮ್ಮ ಸಾಲಿಗಳಲ್ಲಿ ಖರ್ಚ ಆಗುವಷ್ಟು ಪ್ರತಿಗಳನ್ನು ದಯಮಾಡಿ ಮುಂಗಡಹಣ ಕಳುಹಿಸಿ, ಬೇಡಿದರೆ ಶೀಘ್ರ ಕಳುಹಿಸುವೆನು. ಮನುಷ್ಯನನ್ನು ಕಳುಹಿಸಿ, ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ, ೧೦೦ಕ್ಕೆ ೧೦ ಪ್ರತಿಗಳಂತೆ ಹೆಚ್ಚು ಕೊಡುವೆನು. ೧೦ ಪ್ರತಿಗಳನ್ನಾಗಲಿ ಹೆಚ್ಚು ಪ್ರತಿಗಳನ್ನಾಗಲಿ ತೆಗದುಕೊಳ್ಳುವವರಿಗೆ ಟಪಾಲಖರ್ಚ ಹತ್ತಲಿಕ್ಕೆ ಇಲ್ಲ. ನಾಟಪೇಡ ಪತ್ರಗಳನ್ನು ಕಳುಹಿಸ ಬಾರದು.

ತಾ॥ ೩೧ನೇ ಅಗಟೋಬರ.

ತ್ರ್ಯಂಬಕಸದಾಶಿವ ಗೋಖಲೆ.

ಅಸಿಸ್ಟಂಟ ಮಾಸ್ತರ ಇ. ಸ್ಕೂಲ ಹುಬ್ಬಳ್ಳಿ.

ಮಹಾರಾಜ ರಾಜಪೂಜಿತ ರಾಜಮಾನ್ಯರಾಜಶ್ರೀ ಕನ್ನಡ ಮಾಸಪತ್ರಿಕೆ ಕರ್ತರ ಪಾದಪದ್ಮಂಗಳಿಗೆ.

ಜಿಲ್ಲಾ ಧಾರವಾಡಕೋಡ ತಾಲೂಕ ಮುದಗಮಾಸೂರ ಪಂತ್ರೋಜಿ ಮಾನಾಜಿ ಶ್ರೇಜೋ ಶಿರಸಂಗಿ ಇವನ ವಿಜ್ಞಾಪನೆ. ತಾರೀಖು ೧೬ನೇ ಮಾಹೆ ದಶಂಬರ ಸನ್ನ ೧೮೭೨ ಇಸವಿ ತರುವಾಯ—ಭೂಗೋಲ ಶಾಸ್ತ್ರದಲ್ಲಿ ಭೂಮಿಯ ಮೇಲಿರುವ ಸಮುದ್ರ ಮೊದಲ್ಗೊಂಡು ಯಾವತ್ತು ನೀರು ಉಗಿಯ ರೂಪವಾಗಿ ಆಕಾಶಕ್ಕೆ ಹೋಗಿ ಘಟ್ಟಿಯಾಗಿ ಮಳೆಯಾಗುತ್ತದೆ. ಎಂಬದಾಗಿ ಬರೆದದೆ. ಆದರೆ ಇದರಲ್ಲಿ ಸಂಶಯವು ಏನಂದರೆ—ಮಳೆ ಆಗುವಾಗ್ಗೆ ಭೂಮಿಯ ಮೇಲೆ ಕಪ್ಪೆ ಏಡಿ ಇತ್ಯಾದಿ ಪ್ರಾಣಿಗಳು ಕೋಟ್ಯಾನು ಕೋಟಿ ಬೀಳುತ್ತವೆ. ಅವು ಹ್ಯಾಗೆ ಆಕಾಶಕ್ಕೆ ಹೋದವು. ಉಗಿಯಾಗಿ ಹೋದವೋ? ಹಾಗೆಯೇ ಜೀವದಿಂದ ಹೋದವೋ?

ಈ ಹಿಂದುದೇಶದ ಗ್ರಂಥದ ಮೇಲಿಂದ ಮೋಡವೆಂಬುವದು ಸಮುದ್ರದಲ್ಲಿರುವ ಪ್ರಾಣಿಗಳನ್ನೂ, ನೀರನ್ನೂ ಸೈದು ಸುರಿಯುತ್ತದೆ. ಎಂಬದಾಗಿ ತಿಳಿಯುತ್ತದೆ ಇವು ಖರೇವೋ!!!ಸುಳ್ಳೋ!!! ಈ ಎರಡರಲ್ಲಿ ಯಾರಾದರೂ ಸ್ಕೂಲಮಾಸ್ತರರು ಮುಂದಿನ ತಿಂಗಳ ಪತ್ರಿಕೆಯಲ್ಲಿ ಸಂಶಯವನ್ನು ಪರಿಹರಿಸತಕ್ಕದ್ದು ಎಂದು ಬೇಡಿಕೊಳ್ಳುತ್ತೇನೆ. ಇದನ್ನು ಮೇಹರಬಾನರವರು ದಯಮಾಡಿ ಛಾಪಿಸಬೇಕು ಇಂತಿ ವಿಜ್ಞಾಪನಃ

ಮಾನಾಜಿ ಶ್ರೇಜೋ ಸ್ಕೂಲಮಾಸ್ತರ ಮಾಸುರ.

ರಾ|| ರಾ|| ಕನ್ನಡ ಶಾಲಾಪತ್ರಕರ್ತೃ ಮುಕ್ಕಾಮ ಬೆಳಗಾವ ಇವರಿಗೆ—

ವಿನಂತಿ ವಿ|| — ಐಯಾ ಕೆಲವರು ಶೀಘ್ರಕೋಪಿಗಳು ಅಂದರೆ ಯಾವದೊಂದು ಮಾತು ತಮ್ಮ ಕಿವಿಗೆ ಬಿದ್ದ ಕೂಡ್ಲೆ

ತಕ್ಷಣವೆ ಶಿಟ್ಟಿಗೆದ್ದು ಬಹಳ ಅನರ್ಥ ಮಾಡುತ್ತಾರೆ. ಹೀಗೆ ಇದ್ದು ತಾವು ದೊಡ್ಡವರೂ ವಿದ್ವಾಂಸರೂ ಎನಿಸಿಕೊಳ್ಳುತ್ತಾರೆ. ಆದರೆ ಈ ಶಿಟ್ಟಿನಿಂದ ಅಂಥವರ ಮಹತ್ವಕ್ಕೆ ಕುಂದು ಬರಲಾರದೇ? ಬಂದೀತು. ತಾವು ಹೆಚ್ಚಿನವರು ಎನಿಸಿಕೊಳ್ಳುವ ಮನಸ್ಸುಳ್ಳವರು ಶಿಟ್ಟು ಬಿಟ್ಟು ವಿಚಾರದಿಂದಲೂ ಧೂರ್ತದೃಷ್ಟಿಯಿಂದಲೂ ನಡೆಯಬೇಕು ಅಂದರೆ ಅವರ ಮಹತ್ವವು ಪ್ರಕಟಕ್ಕೆ ಬರುವದು ಅವಿಚಾರದಿಂದ ಶಿಟ್ಟಿನ ಸ್ವಾಧೀನವಾದಲ್ಲಿ ತನ್ನ ಕೆಲಸ ಕೆಡುವದಲ್ಲದೆ ಬಳಿಕ ಪಶ್ಚಾತ್ತಾಪಕ್ಕೆ ಒಳಗಾಗುವನು. ಈ ವಿಷಯ ಕುರಿತು ಒಂದು ಕಥೆಯೊಂದು ಕೆಳಗೆ ಬರೆಯುತ್ತೇನೆ.

ಒಬ್ಬ ಪಾತಶಹಾನು ಸಭೆಯಲ್ಲಿ ಕೂತಿರುವಾಗ ನೆರೆದಿರುವ ವಿದ್ವಾಂಸರುಗಳಿಗೆಲ್ಲ "ಬಡಾ ಜನ್ ಕ್ಯಾ ಖಾತೆ" ಅಂದರೆ ದೊಡ್ಡ ಮನುಷ್ಯರು ಏನು ತಿನ್ನುತ್ತಾರೆ ಎಂದು ಪ್ರಶ್ನೆ ಮಾಡಿದನು ಆಗ ಅಲ್ಲಿ ಕೂಡಿದವರಲ್ಲಿ ಕೆಲವರು—ಸಕ್ಕರಿ, ಕೆಲವರು—ಮಿಠಾಯಿ, ಕೆಲವರು—ಹಣ್ಣು, ತಿನ್ನುತ್ತಾರೆಂದು ತಮ್ಮ ಮನಸ್ಸಿಗೆ ತಿಳಿದಂತೆ ಉತ್ತರಕೊಟ್ಟರು ಆದರೆ ಈ ಉತ್ತರವು ಪಾತಶಹಾನ ಮನಸ್ಸಿಗೆ ಬರದ ಕಾರಣ ಬೀರಬಲ್ಲನನ್ನು ನೋಡಿ ಅದೇ ಪ್ರಶ್ನೆವನ್ನು ಅವನಿಗೆ ಕೇಳಿದಾಕ್ಷಣವೇ "ಖಾವಂದ್ ದಮ್ ಖಾತೆ" ಅಂದರೆ ಧೊರೆಗಳೇ ದಮ್ಮು ತಿನ್ನುತ್ತಾರೆಂದು ಉತ್ತರಕೊಡಲು ಪಾತಶಹಾನು ಅದು ಹ್ಯಾಗೆಂದು ಕೇಳಿದಾಗ— ಧೊರೆಗಳೇ ಅದರ ಅನುಭವವನ್ನು ತಮ್ಮ ದೃಷ್ಟಿಗೋಚರಕ್ಕೆ ತರುವೆನೆಂದು ಬಿನ್ನೈಸಿ ಅಪ್ಪಣೆಹೊಂದಿ ಮನೆಗೆ ನಡೆದನು. ಕೆಲವು ದಿವಸಗಳು ಆದಮೇಲೆ ಒಂದು ಸಮಯದಲ್ಲಿ ಧೊರೆಯು ಬೇಟೆಸಿವಿಕ್ಷ್ಯ ಹೊರ

ಟು ಹೋದನು ಆಗಬೀರಬಲ್ಲನು ತಾನೊಬ್ಬನೆ ಊರಿಗೆಬಂದು ಪಾತಶಾನ ರಾಣಿಗೆ—ಘೋರೆಗಳು ಈಗ ಬರುವರೆಂದು ಸೂಚಿಸಿದನು ರಾತ್ರಿಯಾದಬಳಿಕ ಘೋರೆಗಳ ಹಾಸಿಗಿಹಾಸುವ ಫರಾಸನು ಬಂದು ಎಂದಿನಂತೆ ಹಾಸಿಕೆಯನ್ನು ಹಾಸುತ್ತಿರಲು ಬೀರಬಲ್ಲನು ಅಲ್ಲಿಗೆಹೋಗಿ ಆ ಫರಾಸನೊಡನೆ ಏನೋದ ಮಾತಾಡುತ್ತಾ ಹಾಸಿಕೆಯಮೇಲೆ ಕೂತಿರಲು ಅಷ್ಟರಲ್ಲಿ ಫರಾಸನು ಹಗಲೆಲ್ಲ ಬಹಳ ದಣಿದಿದ್ದನಾದಕಾರಣ ಆ ಮೃದುವಾದ ಹಾಸಿಕೆಯಮೇಲೆ ಕೂತಕ್ಷಣಕ್ಕೆ ಸ್ವಲ್ಪ ವೇಳೆಯಲ್ಲಿ ಗಾಢನಿದ್ರೆಗೈದನು ಬೀರಬಲ್ಲನು ಅವನ ಮೇಲೆ ಅರಸಿನ ಶಕಲಾತಿಯನ್ನು ಹೊಚ್ಚಿ ತಾನು ಅಲ್ಲಿ ಮಂಚದ ಕೆಳಗೆ ಅಡಗಿಕೊಂಡನು. ರಾಣಿಯು ಊಟವ್ಯಾಪಾರವನ್ನು ನೆರವೇರಿಸಿ ಅಂತಃಪುರಕ್ಕೆ ಹೋಗಿನೋಡಲು; ಮಂಚದಮೇಲೆ ಮಲಗಿದ್ದ ಫರಾಸನನ್ನು ಕಂಡು ರಾಜನೆಂದುಅರಿತು ಪ್ರೀತಿಯಿಂದ ಮೆಲ್ಲಗೆಹೋಗಿ ಅವನ ಮುಸುಕಿನಲ್ಲಿ ಮಲಗಿಕೊಂಡು ನಿದ್ರೆಹೊಂದಿದಳು. ಬಳಿಕಾ ಮಧ್ಯರಾತ್ರಿ ಸುಮಾರಕ್ಕೆ ಪಾತಶಾಹನು ಮನೆಗೆಬಂದು ಶೈಯಾಮಂದಿರ ಹೊಕ್ಕುನೋಡಲು ಫರಾಸನೂ, ರಾಣಿಯೂ, ಒಂದೇ ಹಾಸಿಕೆಯಲ್ಲಿ ಮಲಗಿದ್ದನ್ನು ಕಂಡು ಬಹಳ ಸಂತಪ್ತನಾಗಿ ಖಡ್ಗವನ್ನು ತೆಗೆದುಕೊಂಡು ಉಭಯತರ ಶಿರವರಿಯಬೇಕೆಂದು ಯೋಚಿಸಿ ಖಡ್ಗವೆತ್ತಿದನು. ಅಷ್ಟರಲ್ಲಿ ಅವನು ವಿಚಾರ ಮಾಡಿದ್ದೇನೆಂದರೆ ಇದರಲ್ಲಿ ಪಾಪಪುಣ್ಯ ತಿಳಿಯದೆ ಇವರನ್ನು ಘಾತಿಸುವದು ಸಮನಲ್ಲ ಎಂದು ವಿಚಾರಿಸಿ ಆ ಯುಧವನ್ನು ನೆಲಕಿಟ್ಟು ಸುಮ್ಮನೆಕೂತನು ಅಷ್ಟರಲ್ಲಿ ಫರಾಸನು ಎಚ್ಚತ್ತುನೋಡಿ ಬಹಳ ಘಾಬರಿಗೊಂಡು ರಾಣಿಗೆ— ಅಂಮಾ ತಾಯಿ ತಪ್ಪಾಯಿ

ಳು ನಿನ್ನ ಮಗನಾದ ನನ್ನ ಅಪರಾಧ ಕ್ಷಮಿಸಬೇಕು.

ಶ್ರೀನಿವಾಸ ರಾಮಚಂದ್ರ.

(ಮುಂದಕ್ಕೆ ಸಾಗುವದು.)

ನರಜೀವಿಗಳ ಬಾಳುವಿಕೆಯೂ, ಹವಣಿಕೆಯೂ.

ಮ॥ ಕನ್ನಡಶಾಲಾಪತ್ರಿಕದ ಎಡೀಟರ ಇವರಿಗೆ—

ವಿ॥ ವಿ॥ ಕೆಳಗೆಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಸುಂದರವಾದ ಪತ್ರಿಕದಲ್ಲಿ ಛಾಪಿಸಿ ಪ್ರಕಟಿಸುವಿರೆಂದು ಪೂರ್ಣ ಆಶಿಸುತ್ತೇನೆ.

೧ ನರಜೀವಿಗಳಾದ ನಾವು ಯಷ್ಟು ಕಾಲ ಈ ಭೂಮಿಯಲ್ಲಿ ಬದುಕಿರುವೆವೆಂಬದರ ಬಗ್ಗೆ ನಮಗೆ ಕಿಂಚಿತ್ತಾದರು ಗೊತ್ತುಂಟೋ?

೨ ಯಾರಾದರೂ ನಮಗೆ ಯಾವದಾದರೊಂದು ಮಾತಿನ ವಿಷಯಕ್ಕಾಗಲಿ, ಮತ್ಯಾವವಿಷಯಕ್ಕಾಗಲಿ, ಏನಾದರು ಕೇಳಿದ್ದಕ್ಕೆ ಮುಂದಿನ ಮುದ್ದತವನ್ನಿಟ್ಟು ಅವರಿಗೆ ವಚನ ಕೊಡುವದು ಕೇವಲ ಮೂರ್ಖತನವಲ್ಲವೆ?

೩ ನಮ್ಮನ್ನು ದೇವರು ಯಂದ, ಯಾವಾಗ್ಯೆ, ಯಾವಗಳಿಗ್ಯೆ ತನ್ನಕಡೆ ಕರದೊಯ್ಯುವನೆಂಬುದರಬಗ್ಗೆ ವಿಚಾರಶಕ್ತಿ ಯಾರಲ್ಲಿ ಯುಂಟು; ಹೀಗಿದ್ದು ನಮ್ಮ ಹವಣಿಕೆ ಎಷ್ಟ ನೋಡಿರಿ; ಇದು ನಮ್ಮ ಪೂರ್ಣ ಅಜ್ಞಾನವಲ್ಲವೆ?

೪ ಇವರು ನಮ್ಮವರು, ಅವರು ನಮ್ಮವರು, ನಮ್ಮ ತಂದೆತಾಯಿ, ಅಕ್ಕತಂಗಿ, ಅಣ್ಣತಮ್ಮಂದಿರು, ಈ ಸ್ಥಲವೂ, ಮನೆಯೂ, ನಮ್ಮದು, ಎಂದು ತಿಳಿಯುವದು, ಮಾಯಾ (ಮೋಹ) ಪ್ರಪಂಚಕ್ಕೊಳಗಾದ "ಮರಳುಘಾಶಿ" ಎಂದೆಣಿಸತಕ್ಕದ್ದು ಸರಿಯಹುದಷ್ಟೇ?

ಮೇಲಿನ ನಾಲ್ಕು ಪ್ರಶ್ನೆಗಳಿಗೆ ತಕ್ಕ ಉತ್ತರ, ಬಲ್ಲವರು ಇದೇ ಪತ್ರದಲ್ಲಿ ಕೊಡರಿ; ದುಷ್ಟೋತ್ತರವು ನಿಷ್ಪ್ರಯೋಜನವು.

ತಾರೀಖು ೧೦-೧೨-೨೨. ಗೋ. ಕೇ. ಜೋ. ಶೇ.

ರಾ॥ ರಾ॥ ಬೆಳಗಾಂವಿಯಲ್ಲಿರುವ ಕನ್ನಡ ಮಠಪತ್ರಕ ಕರ್ತರಿಗೆ.

ವಿನಂತಿ ವಿಶೇಷ. ನವೆಂಬರ ತಿಂಗಳ ಮಠಪತ್ರಿಕೆಯ ೧೭ನೇ ಪತ್ರದಲ್ಲಿ ಗೋವಿಂದ ಲಕ್ಷ್ಮಣ ಇವನಿಗೆ ತಾವು ಉತ್ತರ ಬರೆದ ಪ್ರಕಾರಾ ಗಾವಠಿ ಶಾಲೆಯನ್ನು ನಾವೇ ನಮ್ಮ ಪರಾಕ್ರಮದಿಂದ ಮುರಿಯುವದು ತಕ್ಕದಾಗಿಯೂ ನಮ್ಮ ಕರ್ತವ್ಯ ಕರ್ಮಕ್ಕೆ ಯೋಗ್ಯ ಲಕ್ಷಣವಾಗಿಯೂ ಅದೆ. ಪರಂತು ಗಾವಠಿ ಶಾಲೆಯ ಹುಡುಗರೆಲ್ಲ ನಮ್ಮ ಶಾಲೆಯಲ್ಲಿ ಬಂದಬಳಿಕ ಊರಮುಖ್ಯಸ್ಥರೆ "ನೀವು ಸರಕಾರಿ ರೀತಿಪ್ರಕಾರ ಕಲಿಸದೆ ಫಕ್ತ ಗಾವಠಿ ರೀತಿಯ ಅಭ್ಯಾಸವನ್ನೇ ಮಾಡಿಸರಿ" ಎಂದು ಲೇಖಿ ದಾಖಲಾ ಕೊಟ್ಟಬಳಿಕ ಯಾವ ರೀತಿ ಕಲಿಸಬೇಕು. ಇದರ ವಿಷಯಕ್ಕೆ ನಾನು ಕಳೆದ ಅಗಸ್ಟ ತಿಂಗಳದ ೧೧ನೇ ತಾರೀಖಿಗೆ ಬರೆದ ಪತ್ರವು ತಮ್ಮಿಂದ ಸಪ್ಟೆಂಬರ ತಿಂಗಳದ ಮಠಪತ್ರಿಕೆಯ ೧೪೦ನೇ ಪತ್ರದಲ್ಲಿ ಛಾಪಿಸಲ್ಪಟ್ಟಿದೆ. ಅದರ ವಿಷಯಕ್ಕೆ ಉತ್ತರವನ್ನು ಇದೇ ಪತ್ರದ್ವಾರದಿಂದ ತಿಳಿಸಿದರೆ ಬಡವರಾದ ನಾವು ಅದರಂತೆ ನಡೆಯುವೆವು. ಮತ್ತು ಟ್ರೇಂಡ ಮಾಸ್ತರರ ಲುಕಸಾನಿಯ ವಿಷಯಕ್ಕೆ ಬರೆದ ಪತ್ರವನ್ನು ಅಚ್ಚುಹಾಕಿ ಪ್ರಸಿದ್ಧಿಸಬೇಕೆಂತಲೂ, ಅದನ್ನು ಮೇಲಾಧಿಕಾರಿಗಳ ನಜರಿಗೆ ಹಾಕಿ ಅದರಂತೆ ವ್ಯವಸ್ಥೆ ಇಟ್ಟು ಬಡವರಾದ ನಮ್ಮಂ

ಥ ಟ್ರೇಂಡರಾಗಿರುವ ಹಳ್ಳಿಯ ಮಾಸ್ತರರನ್ನು ಸಂರಕ್ಷಿಸುವರೆಂತಲೂ, ವಿನಯ ಪೂರ್ವಕವಾಗಿ ಬೇಡಿಕೊಳ್ಳುವದಲ್ಲದೆ ಕಳೆದ ಅಗಸ್ಟಂಬರ ೧೮೬೭ ಇಸವಿಯಲ್ಲಿ ಪಾಸಾಗಿರುವ ವಿದ್ಯಾರ್ಥಿಗಳಿಗೆ ಆಯಾಯ ಜಿಲ್ಲೆಗಳಿಂದ ಬಂದಂಥಾ ಜಾಗೆ ಕೊಡುವದನ್ನು ಈಗ ತುರ್ತಕ್ಕೆ ನಿಲ್ಲಿಸಿ ಪಾಯರೀ ಪ್ರಕಾರಾ ಜಾಗೆಯು ಸ್ಪೈನಸ್ಥಯಾಗೋ ವಿಷಯಕ್ಕೆ ತಾವೇ ಕೂವರ್ ದೃಷ್ಟಿಯನ್ನಿಟ್ಟು, ದಕ್ಷಿಣ ಭಾಗದಲ್ಲಿ ತುಂಬಿರುವ ಟ್ರೇಂಡರಾಗಿರುವ ಹಳ್ಳಿಯ ಮಾಸ್ತರರನ್ನು ಸಂರಕ್ಷಿಸುವವರು ತಮ್ಮ ಪೂರ್ತಿ ಯಾರನ್ನು ಕಾಣೆಂದು ಬೇಡಿಕೊಳ್ಳುತ್ತೇನೆ. ಚಿಕ್ಕಿಸಿ ಬಡವರ ಮನೋರಥವನ್ನು ಕೊನೆಗಾಣಿಸಬೇಕು. ಇಂತಿ ಬಿನ್ನಹ.

ಮುಕ್ಕಾಮ ಮುತ್ತಿಗೆ
ತಾ॥ ೨೫ನೇ ನವಂಬರ ೧೮೬೭ } ಭೀಮಾಜೀ ವಿರೂಪಾಕ್ಷ
ಹೊ. ಸ್ಕೂ. ಮುತ್ತಿಗೆ.

ರಾ॥ ರಾ॥ ಕನ್ನಡ ಶಾಲಾಪತ್ರಕರ್ತ ಬೆಳಗಾವ ಇವರಿಗೆ—

ವಿನಂತಿ ವಿ॥ ಈ ಕೆಳಗೆ ಬರೆದ ಶ್ಲೋಕವು, ತಮ್ಮಿಂದ ಹೊರಡಿಸಲ್ಪಡುವ, ಶಾಲಾಪತ್ರಿಕೆಯಲ್ಲಿ, ಮುದ್ರಿತವಾದಲ್ಲಿ; ಯಾರಾದರು, ವಿದ್ವಾಂಸರಿದ್ದವರು, ಅರ್ಥಕ್ಕನುಸಾರವಾದಂಥಾ; ವರ್ಣಗಳನ್ನು, ಕೂಡಿಸಿ, ಉತ್ತರ ಮುಖದಿಂದ, ಮನಸ್ಸು ಸಂತೋಷವಾದರೆ, ಎಂದಿಗೂ ನಿಲ್ಲಲಾರರು, ಕೃಪೆಮಾಡಿ ಇದೇ ತಿಂಗಳ ಶಾಲಾಪತ್ರಿಕೆಯಲ್ಲೇ ಸ್ಥಳದೊರಿಯಬೇಕು.

ಶ್ಲೋಕ.

ಮೂರ್ವರ್ಣಂಪದ ಮುಂದಕೆ ಕೂರ್ದಹಿನಾಮಂ ಮಧ್ಯಲೋ
ಹಂಸ್ಕ್ರತಂ।
ಆಮಾಕ್ಯಾರ್ಥವಿಷಾಖ್ಯ ಮಂತ್ರ್ಯ ಮುಖನಾಮುಂಖೇದಮಾದ್ಯ

ಕ್ಕರಂ||

ಆವರ್ಣಾದಿಯುವರ್ಜಿಸಲ್ ನಟನನಾಮಂ ವ್ಯಕ್ತಸುಕ್ಷೇತ್ರಮೋ|
ಆವರ್ಣೋಚ್ಚಸರಾಯಣಂ ಗೊಳುವರಾ ಧನ್ಯರ್ಗೆ ಮೊಂ ಮೊ
ಳ್ಗವೆ||೧||

ಇದರಲ್ಲಿ ಆಶಯವೇನಂದರೆ, ಮೂರು ವರ್ಣವುಳ್ಳ ಒಂದು ಪದ(ವಾಕ್ಯ)ಉಂಟು. ಅದನ್ನು ಒಂದೇಗೆ ಕೂಡಿ ಉಚ್ಚರಿಸಿದರೆ, ಹಾವಿನ ಹೆಸರು ಆಗುವದು; ಅದೇ ಮೂರು ವರ್ಣಗಳಲ್ಲಿ, ಮಧ್ಯದ ವರ್ಣವನ್ನು ಲೋಪಿಸಲು; ಅದರ ಅರ್ಥವು ಸಗೋಣದರಲ್ಲಿ ತೋರುವದು. ಅದೇ ವಾಕ್ಯದ ಪದಚ್ಛೇದಮಾಡಿ, ನುಡಿಯಲು; ಪೂರ್ವಪದದ ಅರ್ಥವು, ವಿಷದಲ್ಲಿಯೂ, ಪರ ಪದದರ್ಥವು ಮುಖದಲ್ಲಿಯೂ ಪ್ರಯೋಗಿಸುವದು; ಆ ವಾಕ್ಯದ ಆದಿವರ್ಣವು ಖೇದಸೂಚಕವಾದದ್ದು; ಅದೇ ಮೊದಲನೇ ವರ್ಣವನ್ನು, ಲೋಪಮಾಡಿ, ಉಳಿದ ಎರಡು ವರ್ಣವ ಉಚ್ಚರಿಸಲು; ನಟನ (ನಾಟ್ಯಮಾಡುವವನ)ಹೆಸರು ಆಗುವದು.—ವಿಚ್ಛ್ಯಾ ಇದರಲ್ಲಿ ಅಪೇಕ್ಷಿಸುವ ಆ ಮೂರು ವರ್ಣವುಳ್ಳ ವಾಕ್ಯ ಯಾವದು? ಎಂಬ ಬಗ್ಗೆ ವಿದ್ವಾಂಸರಿದ್ದವರು ಬರುವ ತಿಂಗಳ ಶಾಲಾ ಪತ್ರಿಕೆಯಲ್ಲಿ ಸ್ಪಷ್ಟವಾಗಿ ತಿಳಿಯುವಂತೆ ಉತ್ತರಮುಖದಿಂದ ಸೂಚಿಸಬೇಕಾಗಿ ಕೋರುತ್ತೇನೆ. ಪತ್ರವಿಸ್ತಾರದ ಮಾಫಿಯಿರಲಿ ಇಂತಿ ವಿನಂತಿ.

ಮುಕ್ಕಾಮ ಬದನಗೋಡ ತಾ|| ⎫ ಶ್ರೀನಿವಾಸ ರಾಮಚಂದ್ರ
೧ಮಾಹೆ ದಶಂಬರ ೧೮೭೫|| ⎬ ಬಂಕಾಪೂರಕರ ಮಂತ್ರೀ
ಜೆ ಶಾಳಾ ಬದನಗೋಡ.

ಶಾಲಾಪತ್ರಕವು.

---000---

ಸ್ತಕ V] [ಸಂಚಿಕೆ ೧೧.

ಬೆಳಗಾವಿ, ಮಾಹೆ ಫೇಬ್ರುವಾರಿ ೧೮೭೨.

ENCOURAGEMENT TO THE CANARESE LANGUAGE.

ಕನ್ನಡ ಭಾಷೆಯ ಉತ್ಕರ್ಷವು.

ನಾವು ಕೆಳಗೆ ಯೆರಡು ಹೊಸ ಜಾಹೀರಾತುಗಳನ್ನು ಕಟಿಸಿರುತ್ತೀವೆ. ಅವೆರಡೂ ಕನ್ನಡ ಭಾಷೆಯ ಂಬಂಧದಿಂದ ಬಹು ಬೆಲೆಯುಳ್ಳವುಗಳಿರುತ್ತವೆಂಬದಕ್ಕೆ ಂದೇಹವಿಲ್ಲ.

ಈಗ ನಾಲ್ಕಾರು ವರ್ಷಗಳ ಹಿಂದಿನ ಸ್ಥಿತಿಯು ನೋಡ ಾಗಿ ಆಗ್ಯೂ ಈಗ್ಯೂ ಬಹಳ ಅಂತರವುಂಟೆಂದು ಕಂಡು ಬ ುತ್ತದೆ. ಆಗ ತಕ್ಕ ಮುಟ್ಟಿಗೆ ಶುದ್ಧವಾಗಿ ಕನ್ನಡ ಭಾ ಯಲ್ಲಿ ನಾಲ್ಕು ಪಂಗ್ತಿಗಳ ಬರೆಯು ಬಲ್ಲವರನ್ನು ಕಾ ುವದು ಅಪರೂಪವಾಗಿತ್ತು; ಅರ್ಧ ಮಹಾರಾಷ್ಟ್ರ ಮಿಶ್ರ ಾದ ಕನ್ನಡ ಭಾಷೆಯು ಈ ಪ್ರಾಂತದಲ್ಲಿ ವಾಡಿಕೆಯಾಗಿ ಡೆಯುತ್ತಿದ್ದಂತೆಯೇ ಯೆಲ್ಲ ಬಗೆಯ ಕಾಗದ ಪತ್ರಗಳ , ದೃಷ್ಟಿಗೆ ಬೀಳುತ್ತಿತ್ತು; ಈ ಪತ್ರಕದಲ್ಲಿ ಪ್ರಸಿದ್ಧ ಸ ಾಡುವದಕ್ಕೆ ನಮ್ಮ ಬಳಗೆ ೧೦ ಪತ್ರಗಳು ಬಂದರೆ ಅವು ಳಲ್ಲಿ ಸ್ಥಳ ಕೊಡುವಷ್ಟು ಶುದ್ಧವಾದ ಭಾಷೆಯುಳ್ಳ ಪ

ತ್ರ ವೊಂದು ಸಹ ದುರ್ಲಭವಾಗಿತ್ತು.

ಆದರೆ ಈಗಿನ ಸ್ಥಿಯು ಹಾಗಿಲ್ಲ. ನಮಗೆ ಬಂದ ಪತ್ರಗಳಲ್ಲಿ ಅರ್ಧಕ್ಕಿಂತ ಹೆಚ್ಚು ಪತ್ರಗಳು ಸ್ವೀಕರಿಸ ಶಕ್ಯಂಥವಿರುತ್ತವೆಂದು ನೋಡಿ ನಮಗೆ ಬಹಳ ಸಂತೋಷವಾಗುತ್ತದೆ. ಇದಲ್ಲದೆ ಇತ್ತಲಾಗಿ ಬೆಳಗಾವಿಯಲ್ಲಿ ಹೊಸದಾಗಿ ಕನ್ನಡ ಅಚ್ಚುಕೂಟವುಂಟಾದದರಿಂದ ಕಳೆದ ವರ್ಷವೊಂದು ವರೆ ವರ್ಷದೊಳಗೆ ಹತ್ತೆಂಟು ಹೊಸ ಕನ್ನಡ ಪುಸ್ತಕಗಳು ಜನರಿಂದ ಪ್ರಸಿದ್ಧಿಸಲ್ಪಟ್ಟವೆಂಬದು ಅತ್ಯಾನಂದಕರವಾದ ಸಂಗತಿಯು. ಆದರೆ ಇದುವರೆಗೆ ಜನರಿಗೆ ತಾವು ಬರೆಯುವ ಭಾಷೆಯನ್ನು ತಿದ್ದಿಕೊಳ್ಳುವದಕ್ಕೆ ಪುಸ್ತಕಗಳನ್ನು ಓದುವದೇ ಹೊರ್ತಾಗಿ ಬೇರೆ ಯಾವದೂ ಮಾರ್ಗವಿದ್ದಿಲ್ಲ. ಆ ಮಾರ್ಗವನ್ನುಂಟು ಮಾಡುವದೇ ಈಯೆರಡೂ ಜಾಹೀರಾತುಗಳ ಮುಖ್ಯ ಉದ್ದೇಶವೆಂದು ನಾವು ಹೇಳಬೇಕಾಗಿಲ್ಲ. ಸುದ್ದಿಯ ಸೊಬಗಿನಿಂದಲೂ, ವಸ್ತ್ರೋತ್ತೇಜಕ ಸಭೆಯಿಂದಲೂ ಈ ನಮ್ಮ ವ್ಯವಹಾರದ ಕನ್ನಡ ಭಾಷೆಗೆ ಅಪರಿಮಿತ ಸಹಾಯವಾಗಿ ಈ ಭಾಷೆಯ ಗೌರವವು ಬೆಳೆಯುವದೆಂದು ನಾವು ಮನಮುಟ್ಟಿ ಹರಿಸುತ್ತೇವೆ. ಆ ಕಾರಣ ನಮ್ಮ ಮಾಸ್ತರ ಜನರೂ ಇತರರೂ ಇವೆರಡುಗಳಿಗೂ ತಮ್ಮ ಕೈಲಾದ ಮಟ್ಟಿಗೆ ತಮ್ಮ ವಿದ್ಯಾದಿಂದಲೂ, ಶ್ರಮದಿಂದಲೂ, ಹಣದಿಂದಲೂ, ಸಹಾಯ ಮಾಡುವರೆಂದು ಕೋರುತ್ತೇವೆ.

ಪ್ರಕಟನೆಯು.

ಸುದ್ದಿಯ ಸೊಬಗು

ಎಂಬ

ಕನ್ನಡ ಹೊಸ ವರ್ತಮಾನ ಪತ್ರವು.

ವಾರ ವಾರಕ್ಕೆ ಅಂದರೆ ಪ್ರತಿ ಗುರುವಾರ ದಿವಸ "ಸುದ್ದಿಯ ಸೊಬಗು" ಎಂಬ ಹೆಸರಿನದೊಂದು ವರ್ತಮಾನ ಪತ್ರವನ್ನು ಸುಬೋಧವಾದ ಕನ್ನಡ ಭಾಷೆಯಲ್ಲಿ ಸುಂದರವಾದ ಮೊಳೆಗಳಿಂದ ಬೆಳಗಾವಸಮಾಚಾರದ ಅಚ್ಚುಕೂಟದಲ್ಲಿ ಮುದ್ರಿಸಿ ಪ್ರಸಿದ್ಧ ಮಾಡುವವರಿದ್ದೇವೆ. ಈ ವರ್ತಮಾನಪತ್ರವು ರತ್ನಾಗಿರಿಯಲ್ಲಿ ಹುಟ್ಟುವ "ಜಗನ್ಮಿತ್ರ"ನೆಂಬ ಪತ್ರದಷ್ಟು ಆಗುವದು. (ಅಂದರೆ ಬೆಳಗಾಂವಸಮಾಚಾರದ ಎರಡೂ ತಾಂವು ಕೂಡಿ ಆಗುವಷ್ಟು ಒಂದೇ ತಾಂವು). ಕಾಗದ ಈ ಪ್ರಕಟನೆಯ ಕಾಗದದಂಥಾದು. ಇದರ ಕ್ರಯ ವರ್ಷಕ್ಕೆ ಮುಂಗಡ ೪ರೂಪಾಯಿ ೬ಆಣೆ, ಅಂಚೆಯ ವೆಚ್ಚ (ಟಪಾಲ ಹಾಸಲು) ೧ರೂಪಾಯಿ ೧೦ಆಣೆ, ಅಂತೂ ೬ರೂಪಾಯಿ. ಮಾರ್ಚ ತಿಂಗಳಲ್ಲಿ ಈ ವರ್ತಮಾನ ಪತ್ರವನ್ನು ಮುದ್ರಿಸಲಾರಂಭಿಸುವೆವು, ಇದನ್ನು ತಕ್ಕೊಳ್ಳಲಿಚ್ಛಿಸುವವರು ಕೆಳಗೆ ಇದ್ದ ಪತ್ರಿಕೆಯಲ್ಲಿ ತಮ್ಮ ರುಜು ಹಾಕಿ ಅದನ್ನು ಬೆಳಗಾವಸಮಾಚಾರದ ಮ್ಯಾನೇಜರರಿಗೆ ಕಳುಹಬೇಕು.

ಈ ಕನ್ನಡ ವರ್ತಮಾನ ಪತ್ರವನ್ನು ತೆಗೆಯುವ ಉದ್ದೇಶವೇನಂದರೆ ಮಹಾರಾಷ್ಟ್ರ ದೇಶದಲ್ಲಿ ಸುಮಾರು ೨೦

ಕ್ಕಿಂತ ಹೆಚ್ಚು ಮಹಾರಾಷ್ಟ್ರ ಭಾಷೆಯ ವರ್ತಮಾನ ಪತ್ರಗಳು, ಗುಜರಾಥ ದೇಶದಲ್ಲಿ ಗುಜರಾಥೀ ಭಾಷೆಯ ಹಲವು ಪತ್ರಗಳು, ಬಂಗಾಲ ದೇಶದಲ್ಲಿ ಎಷ್ಟೋ ಬಂಗಾಲೀ ಭಾಷೆಯ ಪತ್ರಗಳು, ಕಾಶೀ ಪ್ರಾಂತದಲ್ಲಿ ಹಿಂದುಸ್ಥಾನೀ ಭಾಷೆಯ ವರ್ತಮಾನಪತ್ರಗಳು ಹೊರಡುತ್ತವೆ. ಆ ಆ ನಾಡುಗಳೊಳಗಿನ ಜನರು ತಮ್ಮ ತಮ್ಮ ಭಾಷೆಯ ವರ್ತಮಾನ ಪತ್ರಗಳನ್ನು ತರಿಸಿಕೊಂಡು ವೋದುತ್ತಾರೆ. ನಮ್ಮ ಕರ್ನಾಟಕ ದೇಶವು ಇಷ್ಟು ದೊಡ್ಡದಿದ್ದಾಗ್ಯೂ ವೊಂದು ಸಹಾ ಕನ್ನಡ ಭಾಷೆಯ ವರ್ತಮಾನ ಪತ್ರವು ಹೊರಡುವದಿಲ್ಲ. ಇದೊಂದು ನಮ್ಮ ಕರ್ನಾಟಕ ದೇಶಕ್ಕೆ ದೊಡ್ಡ ಕುಂದವೇ ಸರಿ. ಈ ಮಾತು ನೆನಪಾದ ಕೂಡ್ಲೆ ನಮಗೆ ನಾಚಿಕೆ ಬರುವದು. ಮಹಾರಾಷ್ಟ್ರ ಭಾಷೆಯ ವರ್ತಮಾನ ಪತ್ರಗಳನ್ನು ಈ ಕರ್ನಾಟಕ ಪ್ರಾಂತದೊಳಗಿನ ಎಷ್ಟೋ ಜನರು ತರಿಸಿಕೊಂಡು ವೋದುತ್ತಾರೆ. ಇಷ್ಟರಿಂದ ಸಾಲದೇನು? ಎಂದು ಹಲ ಕೆಲವರು ಅಂದಾರು. ಆದರೆ ಕನ್ನಡ ಭಾಷೆಯ ಪತ್ರವು ಮೂಲತಃ ಇಲ್ಲದ ಕಾರಣವೇ ಕನ್ನಡ ದೇಶದವರು ಮಹಾರಾಷ್ಟ್ರ ದೇಶದ ಪತ್ರಗಳನ್ನು ಬಯಿಸ ಬೇಕಾಯಿತು. ಆದರೂ ಮಹಾರಾಷ್ಟ್ರ ಭಾಷೆಯನ್ನು ಬಲ್ಲವರಲ್ಲಿ ಕೆಲವರು ಮಹಾರಾಷ್ಟ್ರ ಪತ್ರಗಳನ್ನು ತರಿಸುತ್ತಾರೆ, ಅರಿಯದವರಿಗಂತೂ ಯಾವದೂ ಯಿಲ್ಲದ ಹಾಗಾಗಿದೆ. ಇದಲ್ಲದೆ ಮಹಾರಾಷ್ಟ್ರ ವರ್ತಮಾನ ಪತ್ರಗಳಿಂದ ಶುದ್ಧ ಕರ್ನಾಟಕ ದೇಶದ ವರ್ತಮಾನಗಳು ಯೇನೂ ತಿಳಿಯುವದಿಲ್ಲ.

ಇನ್ನು ಮಹಾರಾಷ್ಟ್ರ ವರ್ತಮಾನ ಪತ್ರಗಳನ್ನು ವೋ

ದುವವರು ಸಹಾ ಕನ್ನಡ ವರ್ತಮಾನ ಪತ್ರವನ್ನೇ ಬಯಿಸುವದು ಉಚಿತವು. ಹ್ಯಾಗೆಂದರೆ ತಮ್ಮ ತಮ್ಮ ದೇಶದ ಭಾಷೆಯನ್ನು ಮುಂದಕ್ಕೆ ತರುವದು ಆ ಆ ನಾಡುಗಳ ಜನರ ಕರ್ತವ್ಯ ಕರ್ಮವು. ಇದೇ ಕಾರಣದಿಂದಲೇ ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಲಕ್ಷ್ಮೀಶ ಮುಂತಾದ ಪ್ರಸಿದ್ಧವಾದ ಪ್ರಾಚೀನ ಕವಿಗಳು ಕನ್ನಡ ಭಾಷೆಯಲ್ಲಿ ಭಾರತ, ರಾಮಾಯಣ, ಜಯಿಮಿನಿ ಮುಂತಾದ ಗ್ರಂಥಗಳನ್ನು ರಚಿಸಿದರು, ಈ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿಯೂ, ಮಹಾರಾಷ್ಟ್ರ ಭಾಷೆಯಲ್ಲಿಯೂ ಯಿದ್ದಿದ್ದಿಲ್ಲವೇನು? ಇದ್ದಾಗ್ಯೂ, ತಮ್ಮ ಕನ್ನಡ ಭಾಷೆಯನ್ನು ಸುಧಾರಿಸುವ ಕಾರಣದಿಂದಲೇ ಶ್ರಮ ಪಟ್ಟರು. ಇದೇ ಮೇರಿಗೆ ಈಗಿನ ಕಾಲದಲ್ಲಿ ನಾವು ನಮ್ಮ ಕನ್ನಡ ಭಾಷೆಯನ್ನು ಸುಧಾರಿಸ ತಕ್ಕದ್ದು. ಭಾಷೆಯು ಸುಧಾರಿಸ ಬೇಕಾದರೆ ಆ ಭಾಷೆಯ ವರ್ತಮಾನ ಪತ್ರಗಳು ಅತ್ಯಾವಶ್ಯಕವು. ಕಚೇರಿಗಳಲ್ಲೆಲ್ಲ ಕನ್ನಡ ಭಾಷೆಯಲ್ಲಿಯೇ ಕಾಗದ ಪತ್ರಗಳು ನಡೆಯುವದಿಲ್ಲೇನು? ಯೆಂದು ಯಾರಾದರೂ ಅಂದರೆ, ಆ ಭಾಷೆಯೊಳಗೆ ಎಷ್ಟೋ ಮಹಾರಾಷ್ಟ್ರ ಶಬ್ದಗಳು ಕಲಿತು ಶುದ್ಧ ಮರಾಠಿಯೂ ಅಲ್ಲ, ಶುದ್ಧ ಕನ್ನಡವೂ ಅಲ್ಲ, ಹೀಗಾಗಿದೆ.

ಈ ಯಾವತ್ತು ಕಾರಣಗಳಂದ ಕನ್ನಡ ವರ್ತಮಾನ ಪತ್ರವು ಯೆಷ್ಟು ಅವಶ್ಯವಾಗಿ ಬೇಕೆಂಬುವದು ಸ್ಪಷ್ಟವದೆ.

ನಾವು ಮುದ್ರಿಸುವ “ಸುದ್ದಿಯ ಸೊಬಗು” ಯೆಂಬ ವರ್ತಮಾನ ಪತ್ರದಲ್ಲಿ ದೇಶಗಳ ಮೇಲಿನ ವರ್ತಮಾನಗಳೂ, ಪೇಟಪಾಡ ಧಾರಣೆಗಳೂ, ಬರುವದಂತು ಸರಿಯೇ,

ಯವುಗಳ ಹೊರ್ತು ಸದುಪದೇಶಪರವಾದ ನಿಬಂಧಗಳೂ ಶಾಸ್ತ್ರೀಯ ವಿಷಯಗಳೂ, ಧರ್ಮಸಂಬಂಧವಾದ ಸಂಗ ಗಳೂ, ಪ್ರಾಚೀನ ಕಾಲದ ಪ್ರಸಿದ್ಧ ಪುರುಷರ ಚರಿತ್ರೆಗಳೂ ಲೋಕವ್ಯವಹಾರಗಳೂ, ರಾಜ್ಯವ್ಯವಹಾರಗಳೂ, ಮನೋರಂಜಕ ವಿಷಯಗಳೂ, ವೈದ್ಯವಿಷಯಗಳೂ ಬರುವವು.

ಕರ್ನಾಟಕ ದೇಶದೊಳಗಿನ ದೊಡ್ಡ ದೊಡ್ಡ ಸರಕಾರಿ ಕಾಮದಾರರೂ, ವಕೀಲರೂ, ವಿದ್ಯಾಖಾತೆಯೊಳಗಿನ ಅಧಿಕಾರಿಗಳೂ, ಮಾಸ್ತರರೂ, ಶೆಟ್ಟಿ ಸಾವಕಾರರೂ, ಗೌಡ ಕುಲಕರ್ಣಿಯವರೂ ಈ ವರ್ತಮಾನ ಪತ್ರಕ್ಕೆ ಆಶ್ರಯ ಕೊಟ್ಟು ಕನ್ನಡ ದೇಶದಲ್ಲಿ ವರ್ತಮಾನಪತ್ರವಿಲ್ಲೆಂಬ ಲಾಂಛನವ ದೂರಮಾಡಿ ತಮ್ಮ ಪಾಲಿಗೆ ಭೂಷಣವ ತೆಗೆದುಕೊಳ್ಳುವರೆಂದು ಆಶಿಸುತ್ತೇವೆ. ತಾ. ೨೦ ಜಾನೆವಾರಿ ೧೮೭೭ ಇ.

ಜಾಹಿರಾತ.

ಬೆಳಗಾವ ವಕ್ತೃತ್ವೋತ್ತೇಜಕ ಸಭೆಯವರ ಕ ಯಿಂದ—

ಪ್ರಕಟಿಸಲ್ಪಡುವದೇನಂದರೆ—ಈ ವರ್ಷ ಆಗುವ ವಕ್ತೃತ್ವದ ಪರೀಕ್ಷೆ ಜುಲೈ ೧೮೭೭ ಇಸವಿ ತಿಂಗಳಲ್ಲಿ ಪ್ರಾರಂಭವಾಗುವದು. ಆವಾಗ್ಯೆ "ವ್ಯಾಪಾರ ತತ್ಸಂಬಂಧದಿಂದ ಹಿಂದುಸ್ಥಾನದ ಸಾಂಪ್ರತ ಸ್ಥಿತಿ, ಆ ಸ್ಥಿತಿಯನ್ನು ತಿದ್ದುಪಾಟುಳ್ಳದ್ದಾಗಿ ಮಾಡತಕ್ಕ ಉಪಾಯಗಳು" ಎಂಬ ವಿಷಯವನ್ನು ಕುರಿತು, ಕನ್ನಡ ಭಾಷೆಯಲ್ಲಿ ಉತ್ತಮ ಸಂಭಾಷಣೆ ಮಾಡುವವನಿಗೆ, ಅಂದರೆ ಯಾವನು [illegible]ಕ್ಕಿಂತ ಹೆಚ್ಚು ಗುಣಗಳನ್ನು ಪಡೆದು ಪರಿಕ್ಷಕರ ಅಭಿಪ್ರಾಯಕ್ಕನುಸಾರವಾಗಿ ಅ

ತ್ಯುತ್ತಮನೆಂದು ನಿಷ್ಕರಿಸಲ್ಪಡುವನೋ ಅವನಿಗೆ ಇಪ್ಪತ್ತು ರೂಪಾಯಿಯ ಒಂದು ಇನಾಮು, ಹಾಗೆಯೇ, ಮಹಾರಾಷ್ಟ್ರ ಭಾಷೆಯಲ್ಲಿ ಮೇಲೆ ಬರೆದ ಪ್ರಕಾರ ಸಂಭಾಷಣೆ ಮಾಡುವವನಿಗೆ ಇಪ್ಪತ್ತು ರೂಪಾಯಿಯ ಒಂದು ಇನಾಮು, ಈ ಪ್ರಕಾರ ಎರಡು ಇನಾಮುಗಳು ಕೊಡಲ್ಪಡುವವು. ಸಂಭಾಷಣೆ ಮಾಡಲಿಚ್ಛಿಸುವ ಉಮೇದವಾರರು ತಮ್ಮ ಹೆಸರುಗಳನ್ನು, ಇರುವ ಸ್ಥಳಗಳ ಹೆಸರುಗಳನ್ನು, ಯಾವ ಭಾಷೆಯಲ್ಲಿ ಮಾತಾಡತಕ್ಕವರೋ, ಆ ಭಾಷೆಯ ಹೆಸರಂನೂ, ಬರೆದು ಕೆಳಗೆ ಸಹಿ ಮಾಡುವವರ ಹೆಸರಿಲೆ ಪೋಸ್ಟಪೇಡ ಪತ್ರದ್ವಾರ, "ಬೆಳಗಾವ ಟ್ರೇನಿಂಗಕಾಲೇಜ," ಎಂಬ ಗೊತ್ತಿನಿಂದ ಜುಲೈ ೧೮೭೪ ತಿಂಗಳು ಪ್ರಾರಂಭದೊಳಗಾಗಿಯೇ ಸಭೆಯವರಿಗೆ ಮುಟ್ಟುವಂತೆ ಬರೆದು ಕಳುಹಿಸಬೇಕು.

ಉಮೇದವಾರರ ತಿಳುವಳಿಕೆಯ ಬಗ್ಗೆ ಪ್ರಕಟಿಸಲ್ಪಡುವ ಕಲಮುಗಳು—

೧ ಪ್ರತ್ಯೇಕ ಉಮೇದವಾರನು ಅರ್ಧತಾಸಿಗಿಂತ ಹೆಚ್ಚು ವ್ಯಾಖ್ಯ ಮಾತಾಡ ಕೂಡದು. ಯೋಗ್ಯ ಕಂಡರೆ ಅರ್ಧತಾಸಿನೊಳಗಾಗಿಯೇ ಉಮೇದವಾರನಿಗೆ ಅಪ್ಪಣೆ ಕೊಡುವ ಅಧಿಕಾರವು ಪರೀಕ್ಷಕರಿಗುಂಟು.

೨ ಪ್ರತ್ಯೇಕ ಉಮೇದವಾರನು ನಿಂತು ಸಂಭಾಷಣೆಯನ್ನು ಮಾಡಬೇಕು. ಹತ್ತಿರ ಲೇಖೀ ಟಿಪ್ಪಣಿಗಳನ್ನು ಇರಿಸ ಕೂಡದು.

೩ ಸಂಭಾಷಿಸಲಿಚ್ಛಿಸುವ ಉಮೇದವಾರನ ವಯಸ್ಸು ಹದಿನಾರು ವರುಷಕ್ಕಿಂತ ಕಡಿಮೆ ಇರಕೂಡದು.

ಸಂಭಾಷಣೆಯ ವಿಷಯದ ಭಾಗಗಳನ್ನು ಮಾಡಿ, ಆ
ಯಾ ಭಾಗಕ್ಕೆ ನೇಮಿಸಲ್ಪಟ್ಟ ಗುಣಗಳು—

೧ ಅಸ್ಖಲಿತ, ಹಾಗು ಶುದ್ಧ ಭಾಷಣ——೨೫

೨ ಭಾಷೆಯ ಚಿತ್ತವೇಧಕತೆ, ಹಾಗು ರಸಿಕತೆ——೨೫

೩ ವಿಷಯವನ್ನು ಎಡೆಬಿಡದೆ ಪ್ರತಿಪಾದನ ಮಾಡುವದು. ೫೦

ಬೆಳಗಾವ ತಾರೀಖ ೧೭ ಜ್ಯಾನೆವಾರಿ ೧೮೭೩.

ಶ್ರೀನಿವಾಸ ರಾಮಚಂದ್ರ ಸವದಿ ಚಿಟಣೀಸ.

Champu Ramayen and Champu Bharata with commentaries in Canarese by Mr. Shantaviraya.

ಶಾಂತವೀರ ರಾಚದೇವ ಕೃತಕರ್ನಾಟಕ ವ್ಯಾಖ್ಯಾನಗಳು.

॥ಚಂಪು ರಾಮಾಯಣ ಸವ್ಯಾಖ್ಯಾನ ಬಾಲಕಾಂಡಃ॥

॥ಗದ್ಯಂ॥

ತತ್ರ ಕಾಂಚನಕ್ರೌಂಚಮಿಥುನಾದೇಕಂ ಪಂಚಶರಶರವಿದ್ಧಮಪಿವ್ಯಾಧೇನಾನುವಿದ್ಧಂನಿಧ್ಯಾಯತಃ ಬದ್ಧಾನುಕಂಪಸ್ಯ ಭಗವತೋವಾಲ್ಮೀಕೇರ್ವದನಾರವಿಂದಾಚ್ಛಂದೋಮಯೀ ಕಾಚಿದೇವಂನಿಸ್ಸಸಾರಸರಸ್ವತೀ॥

॥ಅನ್ವಯಃ॥

ತತ್ರ=ಆ ತಮಸಾನದಿಯ ತೀರದಲ್ಲಿ। ಪಂಚಶರಶರವಿದ್ಧಂ, ಪಂಚಶರ=ಐದು ಬಾಣಗಳುಳ್ಳ ಕಾಮನ, ಶರ=ಬಾಣಗಳಿಂದ, ವಿದ್ಧಂ=ಹತವಾದಂಥ (ಕಾಮಮೋಹಿತವೆಂಬ ತಾತ್ಪರ್ಯಂ) ಅಪಿ=ಮತ್ತು। ವ್ಯಾಧೇನ=ಕಿರಾತನಿಂದ।ಅನು

ವಿದ್ಧಂ=ಹತವಾದಂಥ। ಕ್ರೌಂಚಮಿಥುನಾತ್, ಕ್ರೌಂಚ=ಚಕ್ರವಾಕಪಕ್ಷಿಗಳ, ಮಿಥುನಾತ್=ಹೆಣ್ಣು ಗಂಡುಗಳೆರಡರದೆಸೆಯಿಂದ। ಕಂಚನ ಏಕಂ=ಯಾವದಾನೊಂದು ಗಂಡ ಹಕ್ಕಿಯನ್ನು। ನಿಧ್ಯಾಯತಃ=ನೋಡುವಂಥ। ಬದ್ಧಾನುಕಂಪಸ್ಯ, ಬದ್ಧ=ಬಂಧಿಸಿದ, ಅನುಕಂಪಸ್ಯ=ದಯವುಳ್ಳಂಥ। ಭಗವತಃ=ಷಡ್ಗುಣಸಂಪನ್ನನಾದಂಥ। ವಾಲ್ಮೀಕೇಃ=ವಾಲ್ಮೀಕಮುನಿಯ ವದನಾರವಿಂದಾತ್। ವದನ=ಮುಖವೆಂಬ, ಅರವಿಂದಾತ್=ಕಮಲದದೆಸೆಯಿಂದ। ಛಂದೋಮಯೀ=ಕವಿತಾರೂಪಳಾದಂಥ। ಸರಸ್ವತೀ=ಸರಸ್ವತಿಯು। ಏವಂ=ಈಪ್ರಕಾರವಾಗಿ। ನಿಸ್ಸಸಾರ=ಹೊರಟಳು.

॥ಶಾಸ್ತ್ರವಿಷಯಃ॥

ವಾಲ್ಮೀಕೇರ್ವದನ= (ವಾಲ್ಮೀಕೇಃ+ವದನ) ಮೃದುವ್ಯಂಜನವು ಮುಂದೆಯಿರಲು ವಿಸರ್ಗವು ರಕಾರವಾಗುವದು (ರೇಫ). ನಿಸ್ಸಸಾರ= (ನಿರ್+ಸ+ಸೃ=ಸ್+ಆರ್+ಅ) ನಿರ್-ಉಪಸರ್ಗ, ಸ-ವಿಶೇಷಾಕ್ಷರ, ಸೃಧ, ೩ ಗಣದಧಾತು, ಆರ್-ಆದೇಶ, ಅ-ಲಿಟ್ ಲಕಾರ, ಭೂತಕಾಲ, ಪರಸ್ಮೈಪದ, ಪ್ರಥಮ ಪುರುಷ, ಏಕವಚನ. ಸರಸ್ವತೀ ಕರ್ತೃ, ನಿಸ್ಸಸಾರ ಕ್ರಿಯಾಪದ, ಅಕರ್ಮಕ, ಕ, ಪ್ರ.

॥ಭಾವಾರ್ಥಂ॥

ಕಾಮಕ್ರೀಡೆಯ ಸಮಯದಲ್ಲಿ ಬೇಡನಿಂದ ಹತವಾದ ಗಂಡ ಚಕ್ಕವಕ್ಕಿಯನ್ನು ನೋಡಿದಕೂಡಲೆ ಕರುಣಾಭರಿತನಾದ ವಾಲ್ಮೀಕಿಯ ಮುಖಕಮಲದಿಂದ ಶ್ಲೋಕರೂಪಳಾಗಿ ಸರಸ್ವತಿಯು ಹೊರಟಳು.

॥ಚಂಪೂಭಾರತೇ ಸವ್ಯಾಖ್ಯಾನೇ ಪ್ರಥಮಸ್ತಬಕಃ॥

॥ವಸಂತತಿಲಕಾವೃತ್ತಂ॥

ದೀಪ್ತೈರ ಗಾರಮ ಣಿಭಿ, ರ್ದಿ ವಸಾಯ ಮಾನಾಂ।
ನಿಶ್ಚಿನ್ವ ತೇಮನ ಸಿಯ, ತ್ರ ನಿಶಾಂಯು ವಾನಃ॥
ಕಾರ್ತಾಂತಿ ಕೈರಖಿ ಲಕಾ, ಲ, ನಿವೇದ ನಾಯ।
ಘಂಟಾಮ ಣೇರಭಿ ಹಿತ, ಸ್ಯ ಘನಾರ ವೇಣ॥೬॥
— — ᴗ, — ᴗ ᴗ, ᴗ — ᴗ, ᴗ — ᴗ, — —
ತ ಭ ರ ರ

॥ಅನ್ವಯಃ॥

ಯತ್ರ=ಪಟ್ಟಣದಲ್ಲಿ। ಯುವಾನಃ=ತರುಣರು। ದೀಪ್ತೈಃ=ಪ್ರಕಾಶಿತವಾದಂಥ। ಅಗಾರಮಣಿಭಿಃ, ಅಗಾರ=ಮನೆಗಳ, ಮಣಿಭಿಃ=ರತ್ನಗಳಿಂದ। ದಿವಸಾಯಮಾನಾಂ=ತಮೋರಹಿತವಾದಂಥ। ನಿಶಾಂ=ರಾತ್ರಿಯನ್ನು। ಅಖಿಲ ಕಾಲನಿವೇದನಾಯ, ಅಖಿಲ=ಸಮಸ್ತವಾದ, ಕಾಲ=ವೇಳೆಗಳನ್ನು, ನಿವೇದನಾಯ=ವಿವರಿಸುವಗೋಸ್ಕರ (ಜ್ಞಾಪಕದಗೋಸ್ಕರ) (ತಿಳಿಪುದಕ್ಕೋಸ್ಕರ) ಕಾರ್ತಾಂತಿಕೈಃ=ಜ್ಯೋತಿಷ್ಯ ಬಲ್ಲವರಿಂದ। ಅಭಿಹಿತಸ್ಯ=ಪ್ರಮಾಣೀಕೃತವಾದಂಥ। ಘಂಟಾಮಣೇಃ=ಗಡಿಯಾರದ। ಘನಾರವೇಣ, ಘನ=ಅಧಿಕವಾದ, ಆರವೇಣ=ಧ್ವನಿಯಿಂದ। ಮನಸಿ=ಮನಸಿನಲ್ಲಿ। ನಿಶ್ಚಿನ್ವತೇ=ಗ್ರಹಿಸುತ್ತಿರುವರು.

॥ಶಾಸ್ತ್ರ ವಿಷಯಃ॥

ಕಾರ್ತಾಂತಿಕೈಃ=ಕೃತಾಂತಂ ಈ ಶಬ್ದಕ್ಕೆ ಜ್ಞಾನಾರ್ಥದಲ್ಲಿ ಠಕ್ ಪ್ರತ್ಯಯವು,—ಮೂಹೂರ್ತ ಜ್ಞಾನಿಕಾರ್ತಾಂತಿಕವೆಂದು ಅಮರಕೋಶವು. ನಿಶ್ಚಿನ್ವತೇ=(ನಿರ್+ಶ್+ಚಿಞ್+ನು+ವ್+ಅತೆ) ನಿರ್—ಉಪಸರ್ಗ, ಶ್—ರೆಫಕ್ಕೆ ಶಕಾರ,

ಚಿಞ್-೫ ಗಣದ ಧಾತು, ನು-ವಿಕರಣ, ವ್=ಯಣ್ಣ ಸಂಧಿ, +ಅತೆ-ಲಟ್‌ಲಕಾರ, ವರ್ತಮಾನಕಾಲ, ಆತ್ಮನೇಪದ, ಪ್ರಥಮ ಪುರುಷ, ಬಹುವಚನ. ಯುವಾನಃ ಕರ್ತೃ, ನಿಶಾಂ ಕರ್ಮ, ನಿಶ್ಚಿನ್ವತೆ ಕ್ರಿಯಾಪದ, ಇಂತು ಸಕರ್ಮಕ, ಕ, ಪ್ರ.

॥ಭಾವಾರ್ಥಃ॥

ಮನೆಗಳ್ಗ ಕೆತ್ತಿಸಿದ ರತ್ನಗಳ ಪ್ರಕಾಶದಿಂದ ವೇಳೆಗಳು ತಿಳಿಯು ಬರಲಿಲ್ಲವು, ಆಗ ಜ್ಯೋತಿಷ್ಯ ಬಲ್ಲವರಿಂದ ಹೊಡೆವ ಗಡಿಯಾರದ ಶಬ್ದದಿಂದ ಆ ಹಸ್ತಿನಾವತೀ ಪಟ್ಟಣದ ತರುಣ ಜನರು ರಾತ್ರಿಯನ್ನು ನಿಶ್ಚಯಿಸುವರು.

ಶಾಂತವೀರ ರಾಚಯ್ಯ ಕಿತ್ತೂರ ಟ್ರೇನಿಂಗಕಾಲೇಜ.

NOTICES.
ನೋಟಿಸುಗಳು.

ಕಲಾದಿಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರ ವ ಅಶಿಸ್ಟಂಟರಿಗೆ ತಿಳಿಯಪಡಿಸುವದೇನಂದರೆ—ಕೆಲವು ಮಾಸ್ತರರ ವ ಆಶಿಸ್ಟಂಟರು ರಜಾ ತಕ್ಕೊಂಡು ಹೋಗಿ ಮುದತ್ತಶಿರ ತಿರಿಗಿ ಹಾಜರಾಗದೆ ಹೆಚ್ಚಿಗೆ ರಜಾ ಬೇಕೆಂದು ಅರ್ಜ ಮಾಡಿ ಮುದತ ಪೂರಿದಾಗ್ಯೂ ಹುಕುಮಿನ ಹಾದಿ ನೋಡುತ್ತಾ ಕೂಡ್ರುತ್ತಾರೆ. ರಜಾ ಮಂಜೂರಾಗದೆ ಹುಕುಂ ಹೋದ ಮೇಲೆ, ಕೆಲಸದ ಮೇಲೆ ಹಾಜರಾಗುತ್ತಾರೆ. ಕೆಲವರು ಮತ್ತು ಜಾಬ ಜವಾಬ ನಡಿಸುತ್ತಾ ಕೂಡುತ್ತಾರೆ. ಇದರಿಂದ ಕೆಲಸಕ್ಕೆ ಹರಕತು ಆದದ್ದಲ್ಲದೆ ಅಭಿಸ್ತ್ರಾಕಟನ

ಲ್ಲಿ ಸಂಬಳದ ಆಕಾರ ಮಾಡುವದಕ್ಕೆ ಬಹಳ ತೊಂದರೆವುಂಟಾಗುತ್ತದೆ. ಕಾರಣಾ ಹೆಚ್ಚಿನ ರಜೇದ ಬಗ್ಗೆ ಹುಕುಂ ಮುಪತ್ರಿನೊಳಗೆ ಮುಟ್ಟಿದರೆ ಆ ಪ್ರಕಾರ ನಡೆದುಕೊಳ್ಳಬೇಕು. ಕದಾಚಿತ ಯಾವದೊಂದು ಕಾರಣದಿಂದ ಮುಟ್ಟದಿದ್ದರೆ ಮಾಸ್ತರರು ಅದರ ಹಾದಿನೋಡದೆ ಯೋಕದಮ್ಮ ಮುದತಶಿರ ಕೆಲಸದ ಮೇಲೆ ಹಾಜರಾಗಿ ಅರ್ಜ ಮಾಡತಕ್ಕದ್ದಿದ್ದರೆ ಮಾಡಬೇಕು. ಹೀಗೆ ಮಾಡದೆ ಯೆಷ್ಟು ದಿವಸಾ (ರಜೇದಕಿಂತ) ಹೆಚ್ಚು ನಿಂತರೆ ಅಷ್ಟು ದಿವಸದ ಸಂಬಳ ಕೊಯ್ಯಲಾದೀತು. ಮತ್ತು ವಂದು ಅಟವಡೆದಕಿಂತ ಹೆಚ್ಚು ನಿಂತರೆ ರೂಳಿನ ಪ್ರಕಾರ ಅವರ ಹಕ್ಕು ಕೆಲಸದ ಮೇಲಿಂದ ಹೋಯಿತೆಂದು ತಿಳದು ತೆಗದು ಹಾಕಲಾದೀತು. ತಿಳಿಯುವದು ತಾರೀಖು ೩೦ ದಿಜಂಬರ ಸನ್ನ ೧೮೭೨ ಮುಕ್ಕಾಮ ಜ್ಯಾಲಿಹಾಳ.

Ramchandra. A. Sawanoor-
ಡಿ. ಇ. ಇ. ಜಿಲ್ಲಾ ಕಲಾದಗಿ.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ ತಿಳಿಯಪಡಿಸುವದೇನಂದರೆ—ನಾವು ಮೋಳವಾಡ ಸಾಲಿಯ ಪರಿಕ್ಷೆಗೆ ಹೋದಾಗ್ಗೆ ಸಾಲಿಯಲ್ಲಿ ವೇಳಾಪತ್ರಿಕೆ ಇದ್ದಿಲ್ಲ ಮತ್ತು ಅಭ್ಯಾಸವು ನೆಟ್ಟಗೆ ಇದ್ದಿಲ್ಲಾದ್ದರಿಂದ ಅಲ್ಲಿಯ ಮಾಸ್ತರರಾದ ವ್ಯಂಕಾಜಿ ಕಾಶಿನಾಥ ಇವರಿಗೆ ನಾಲ್ಕು ಆಣೆ ದಂಡ ಮಾಡಿರುತ್ತದೆ. ಆದರೆ ಇದರ ಕಡಿಗೆ ಎಲ್ಲರೂ ಲಕ್ಷ ಕೊಟ್ಟು ತಮ್ಮ ತಮ್ಮ ಸಾಲಿಯಲ್ಲಿ ಅಭ್ಯಾಸದ ವೇ

ಳಾಪತ್ರಿಕೆಯನ್ನಿಟ್ಟು ಆಪ್ರಕಾರ ಅಭ್ಯಾಸವನ್ನು ನಡಿಸಬೇಕು. ತಾರೀಖು ೨೦ ನೇ ಜ್ಯಾನುವರಿ ೧೮೭೩ ನೇ ಇಸವಿ.

Ramchandra. A. Sawanoor.
ಡಿ. ಇ. ಇ. ಜಿಲ್ಹಾ ಕಲಾದಗಿ.

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೂ ಅಸಿಸ್ಟಂಟ ಮಾಸ್ತರರಿಗೂ ತಿಳಿಯಪಡಿಸುವದೇನಂದರೆ— ಈ ಜಿಲ್ಹೆಯಲ್ಲಿ ವಿಶೇಷವಾಗಿ ಯಾವತ್ತು ಸಾಲಿಗಳು ಕನ್ನಡಿದ್ದು ಎಲ್ಲಾ ಗಣಿತ ಅಂದರೆ ಸಂಖ್ಯೆಹೇಳೋಣ ಬರಿಯೋಣ ಮುಂತಾದ್ದೆಲ್ಲ ಮರಾಠಿಯಿಂದ ನಡಿಯುತ್ತದೆ. ಮತ್ತು ಇದೇ ಮೇರಿಗೆ ಓದೋಣ ಮುಂತಾದವುಗಳಲ್ಲಿ ಸಂಖ್ಯೆ ಹೇಳುವಾಗ ಮರಾಠಿ ಶಬ್ದಗಳನ್ನು ಉಪಯೋಗಿಸಿದ್ದು ಮೋಹರಬಾನ ಏ. ಇನಸ್ಪೇಕ್ಟರ ಸಾಹೇಬ ಬಹದೂರ ದಕ್ಷಿಣ ಭಾಗ ಇವರ ನಜರಿಗೂ ನಮ್ಮ ನಜರಿಗೂ ಬಂದದ್ದರಿಂದ ತಿಳಿಸುವದೇನಂದರೆ ಈ ಪ್ರಕಾರ ಮರಾಠಿ ಶಬ್ದಗಳನ್ನು ಉಪಯೋಗಿಸಿದ್ದರಿಂದ ಕನ್ನಡ ಭಾಷೆಯು ಚನ್ನಾಗಿ ಬಾರದೆ ಮಹಾರಾಷ್ಟ್ರವಾದರೂ ಬರುವದಿಲ್ಲಾದಕಾರಣ ಮುಂದೆ ಹೀಗೆ ಮಾಡದೆ ಎಲ್ಲಾ ಗಣಿತ ಸಂಖ್ಯೆ ಹೇಳೋಣ ಬರಿಯೋಣ ಕೋಷ್ಟಕಗಳನ್ನು ಮತ್ತು ಯಾವಾಗಲು ಸಂಖ್ಯೆಗಳ ಉಪಯೋಗ ಮಾಡುವದಿದ್ದೀತು ಅವೆಲ್ಲವನ್ನು ಕನ್ನಡ ಬರಹದಲ್ಲಿ ಬರೆದು ಕನ್ನಡ ಭಾಷೆಯಲ್ಲಿಯೇ ಉಚ್ಚಾರ ಮಾಡುವ ಪರಿಪಾಟ ಇಡಿರಿ ಇದಕ್ಕೆ ಸ್ವಲ್ಪವಾದರೂ ಅಲಕ್ಷ ವಾಗಬಾರದೆಂದು ಇಚ್ಛಿಸುತ್ತೇವೆ.

ತಾರೀಖು ೨೦ನೇ ಜ್ಯಾನುವಾರಿ ೧೮೭೫ನೇ ಇಸ್ವಿ ಮುಕ್ಕಾಮ ವಿಜ್ಯಾಪೂರ.

Ramchandra A. Sawnoor.
ಡಿ. ಇ. ಇ. ಜಿಲ್ಲಾ ಕಲಾದಗಿ.

Correspondence.

ಪತ್ರ ವ್ಯವಹಾರವು.

ರಾ॥ ರಾ॥ ಕನ್ನಡ ಶಾಲಾಪತ್ರ ಕರ್ತೃ ಇವರಿಗೆ–

ವಿ॥ ವಿ॥—ಒಬ್ಬ ಅಷಾಣಿಸಾವ್ರಕಾರನು ಕೆಲವು ಕುದುರೆಗಳನ್ನು ತೆಗೆದುಕೊಂಡು ಇನ್ನೊಂದು ಸ್ಥಳಕ್ಕೆ ಹೋಗೋನಿಮಿತ್ಯ ಹೊರಟಾಗ ದಾರಿಯಲ್ಲಿ ಒಂದು ಠಿಕಾಣೆಯಲ್ಲಿ ವಸ್ತಿಗೆ ಉಳಕೊಂಡನು. ತಾನು ಉಳದಳ ಭಾವಣೀಸುತ್ತಲು ಈ ಮೋರಿಗೆ ಯಂಟು ಗೂಟ ನಡಿಸಿ, ದರವಂಪಕ್ಕೆ ನಾಲ್ಕರಂತೆ ಕುದುರೆಗಳನ್ನು ಕಟ್ಟಿ ಮಲಗಿದ್ದನು.



ಅಷ್ಟರಲ್ಲಿ ಒಬ್ಬ ಸೋದ್ಯಾಮನುಷ್ಯನು ಸಂಗಡ ೪ ಕುದುರೆಗಳನ್ನು ತಕ್ಕೊಂಡು ಬಂದು ಸಾವಕಾರನಿಗೆ—ಅಯ್ಯಾ ನನಗೊಂದಿಷ್ಟು ಸ್ಥಳ ಕೊಡೆಂದು ಕೇಳಲು ಧನಿಕನು ಅಪ್ಪಾ ನಾನು ನನ್ನ ಕುದುರೆಗಳನ್ನು ಯುಣಿಕೆಯಿಂದಾ ಕಟ್ಟಿದ್ದೇನೆ. ಹ್ಯಾಗಂದರೆ ಯಾವ ನಾಲ್ಕು ಬಾಜುಗಳ ಬೇರೀಜು ೧೨ ಬರುವದು. ಆದ್ದರಿಂದಾ ನನ್ನ ಕುದುರೆ ಕಟ್ಟಿರುವದರಿಂದ ನನ್ನ ಲೆಖ್ಖಕ್ಕೆ ತಪ್ಪು ಬರುವದೆನಲು, ಸೋದ್ಯಾನು—ನನ್ನ ೪ ಕುದುರೆಗಳನ್ನು ಕಟ್ಟದಾಗ್ಯೂ ನಿಮ್ಮ ಲೆಖ್ಖ ಸರಿಬರುವಂತೆ ಮಾಡುವೆನೆಂದ್ಹೇಳ ತನ್ನ ೪ ಕು

ಸಿದ್ಧನಾಥ ವಾಚನ ಮಂದಿರ.
ಮೊತ್ತಿ ಜಿ. ಧಾರವಾಡ.

ದುರೆಗಳನ್ನು ಕಟ್ಟಿದನು. ಸಾವಕಾರನು ಅದನ್ನು ನೋಡಿ ತನ್ನ ಲೆಖ್ಖಕ್ಕೆ ಸರಿ ಅಂದರೆ—ಯಾವ ನಾಲ್ಕು ಬಾಜುಗಳ ಬೇರಿಜು ೧೨ ಇದ್ದದರಿಂದ, ಸುಮ್ಮನಾದನು. ಬೆಳಗಾದ ತರುವಾಯು, ಆ ಠಕ್ಕನು ಮೊದಲೇ ಎದ್ದು, ತನ್ನ ೪ ಕುದುರೆಗಳನ್ನೂ, ಮತ್ತು ಆ ಸಾವಕಾರನ ೬ ಕುದುರೆಗಳನ್ನೂ, ಕೂಡಾ, ಅಂತು ೧೦ ಕುದುರೆಗಳನ್ನು, ತಕ್ಕೊಂಡು ಹೋದನು; ಆಗ ಹೋಗುವಾಗ್ಯ ಸಹಾ ಆ ಸಾವಕಾರನ, ಗಣಿತಕ್ಕೆ ಸರಿ ಬೀಳುವಂತೆ ಮಾಡಿ, ಅವನ ಅಪ್ಪಣೆ ಹೊಂದಿ ನಡೆದನು. ಆದರೆ ಇದರಲ್ಲಿ, ಆಶಾ ಯೋನಂದರೆ ಮೊದಲು ಹಚ್ಚಿಗೆ ನಾಲ್ಕು ಕುದುರೆಗಳನ್ನು ಹ್ಯಾಗೆ ಕಟ್ಟಿದನು. ಮತ್ತು ಹಿಂದಗಡೆ ೧೦ ಕುದುರೆಗಳು ಹೋದಾಗ್ಯೂ, ಸಾವಕಾರನು ತನ್ನ ಲೆಖ್ಖಕ್ಕೆ ಸಮ ಉಂಟೆಂದು ಹ್ಯಾಗೆ ಮಡಂಬಟ್ಟನು. ಅಂದರೆ ಮೊದಲು ಹ್ಯಾಗೆ ಕಟ್ಟಿದ್ದನು. ಹಿಂದಗಡೆ ಹ್ಯಾಗೆ ಕಟ್ಟಿದನು. ಇದರ ರೀತಿವಾರ ಸಮಜೂತಿಯನ್ನು ಬಲ್ಲಂಥ ಜನರು ಸೂಚಕರಾಗಿ ನಂಬುತ್ತೇನೆ. ಪ್ರೀತಿವಿರಬೇಕು. ಇಂತಿ ವಿನಂತಿ

ಬದನಗೋಡ } ಶ್ರೀನಿವಾಸ ರಾಗುಚಂದ, ಬಂ
೧—೧೨—೨೨ } ಕಾಪೂರ.

ಗೊತ್ತಿಗಿಯ ಹೆಂಣುಮಕ್ಕಳ ಶಾಲೆಯ ಮಾಸ್ತರರು ತಮ್ಮ ಶಾಲೆಯ ಉತ್ಕರ್ಷದ ಸಲುವಾಗಿ ಆ (ಹುನಗುಂದ) ತಾಲೂಕಿನ ಮಾಮಲೇದಾರರು ಬಹಳ ಯತ್ನಿಸುತ್ತಾರೆಂದು ಬರೆಯುತ್ತಾರೆ. ಇದಲ್ಲದೆ ರಾ. ಬಾ. ಅನಂದರಾವ ಭಾಸ್ಕರಜೀ ಡಿ. ಡಿ. ಕೆ. ಇವರು ಸದರೀ ಶಾಲೆಯ ಪರೀಕ್ಷೆ ತಕ್ಕೊಂಡು ಒಬ್ಬ ಹುಡುಗಿಗೆ ನಾಲ್ಕು ರೂಪಾಯಿಯ

ಡೊಂದು ಶಿರಗಣಿಯನ್ನು ಕೊಟ್ಟು, ಐದುರೂಪಾಯಿಯ ಮಿಠಾಯಿಯು ತರಿಸಿ ಯೆಲ್ಲರಿಗೂ ಹಂಚಿದರೆಂತಲೂ ಸದರೀ ಮಾಸ್ತರರು ಬರೆಯುತ್ತಾರೆ. ಮಾಸ್ತರರ ಪತ್ರವು ಬಹಳ ಅಶುದ್ಧವಿದ್ದದರಿಂದ ಅದು ಸೇರಿಸಲ್ಪಡಲಿಲ್ಲ.

ಗ್ರ. ಕ.

ಶರತ್ಕಾಲದ ವರ್ಣನೆಯು.

॥ಮ॥ವೃ॥ ಘನಕಾಲಪ್ರಭು ಪತ್ರಯೋಜಕನವಂ ಮೋಕ್ಷ್
ಮೈರಿ ನಂಮೊಳ್ಳು ತಾ-
ಯ್ತು. ನುಸುಳ್ದಂ. ಕುಜವಿಪ್ರತೋಷಕಕರದ್ವೃತ್ತ್ಯೇಕ್ಷ್ಯ
ರಂಬಂದನಂ-
॥ತನಿತಂ ಪದ್ಮನಿಧಿಪ್ರದಾನಿ ನಿಜಮಂತ್ರ್ಯೆ? ಬಂನಿರಂಧ್ರಾ
ರುಥೋ-
॥ಯ್ತ್ನನಲತ್ತಂ ದ್ವಿಜರಾಜರಾಜಿ ಪರಿದತ್ತಾಸದ್ಮನಿಧ್ಯಾಕೆ
ಯೋಳ್॥೩೨॥

॥ಶಾ॥ವೃ॥ಶರತ್ತೊಯ್ಸನೆ ಪಕ್ಷಯಂ ಸರಿಪಡುತ್ತೊಂದೊಂ
ದನೆಯ್ಸ್ಯಾರದಿಂ-
॥ದಾರಾಯಂಚೆಗಳತ್ತ ಮತ್ತೆ ಸುಳಿದಾಡುತ್ತಂ ಮುಳಲ್ದಾ
ಣದೋಳ್॥
॥ಪಾರುತ್ತ್ರೀಮುಳಿಲೊಟ್ಟು ಲಿಂಪೆ ಪೆರತಕ್ಕ್ಯೋವೋರ್ವರ್
ಪೆಣ್ಣಂಚೆಯಂ_
॥ನಾಕೈಯುತ್ತರಕೂವರ್ಯಿಂದೆ ಕಪಿಗಂಣನೋಡು
ತಂಕೂಡುತಂ॥೩೩॥

ಭುಜಂಗಪ್ರಯಾತ॥ನದೀತೀರದಿಂ ಪಾರುತಂಭೋಜಿನೀ

ಸಂ—

	ನಿಧಾನಕ್ಕೆ ಮೆಲ್ಲಿಂ ಮೃಣಾಳಾಳಿಯಂ ಕೀ	
	ೞ್ತುದಂ ಭುಂಜಿಸುತ್ತುಂ, ಕರಂ ರಂಜಿಸುತ್ತುಂ
	ಮುದಂದಾಳ್ದುದಂದಂವಿಹಾರಂಗಳಿಂದಂ		೮೪	

||ಮತ್ತೇಭ|| ಇರೆಮುಯ್ಯಾರ್ಗೆದೆಯುಬಿಟ್ಟು ಸಾಗದಿವನೇಂ ಪ
ರ್ಘನ್ಯನೋಳ್ ಪಂಕಸಂ—
ಕರನೇ? ಪೋಗ್ ಜಡದಾತ್ಮವೇ? ಕುಚಿಘನಂ, ಸೂರ್ಯ
ಸ್ವ- ಯೆಂದಳ್ಕಿ ನಿ—
||ರ್ಘರಿಣೀಸ್ತ್ರೀಯುಕುವಾರಿಪೂರವಮದವುಂ ಬಿಟ್ಟಾಗಿ
ಮಾನಸ್ಥ ಯಾಲ್|
||ಪರಿಶುದ್ಧೋತ್ತಮಜೀವನಾನ್ವಿತೆಯು ರಿರ್ದರ್ಸಿರ್ಪ್ರವಾ
ಹಾಂಗಿಯರ್||೮೫||

||ಸತಿಯಿಂ ದಷ್ಟತಿಯಿಂ ಶಿಲಾ—ಸಮಿತಿಯಿಂ ಘೋರಂಬ
ಸಂಘೋಷಿತ—
||ಸ್ಥಿತಿಯಿಂ ಶುಭ್ರತೆಯಿಂ ತಟಪ್ರತತಿಯಿಂ ಪ್ರೋಣ್ಣೆ ವರ್
ಫೇನೌಘಸಂ—
||ಗತಿಯಿಂ ದುಂನತಿಯಿಂ ತರಂಗತತಿಯಿಂ ಪೂರ್ವಚ್ಛ ವಾ
ಬಿಂದುಸಂ—
||ಹತಿಯಿಂ ಚಾರುತೆಯಿಂ ಪ್ರವಾಹ,—ವಿತಿಯಿಂ ದೀಗಂ
ದ ಪೆಬ್ಬಾಗಿಳಿಯಾ||೮೬||

||ನವಸಂಪ್ರಾಪ್ತ ಕರದ್ಯುತುಪ್ರಭುವಿ ಗೊಧ್ಯಾರ್ಕಾವಧು
ವ್ಯೋಮಮಾ
||ತ್ರವಕೊಂಡಲ್ಲಿ ಸದಭ,—ಶುಭ್ರಕರದಭಾಳ್ವೃತ್ತಿಕಾ
ಭ್ರಾಘಮಾ—

॥ಟ್ಟು ವಿವಸ್ವ ದ್ವಿಲಸ ದ್ವಿಧಾಮ ವಿಹಿತಜ್ವಾಲಾಸ್ತ್ರಮಂ
ಮಾಡಿಕೊಂ
॥ಡುವಿರಾಜಜ್ಞಯಮಂಗಳಾರತಿಯಮಾಳ್ಪಂತಿರ್ಪ್ಪಗುಂ
ವಾಸರಂ॥೧೭॥

॥ತರಳವೃತ್ತ॥ಪ್ರತಿದಿನಂ ಸುತವಾಣಿ ಮಜ್ಜನಮಾಡಿ, ಧೌ
ತದೂಕೂಲಮಂ
॥ನತಿವಿಲಾಸದೊಳುಟ್ಟು ಬಿಟ್ಟ-ಸಿತಾಂಬರಂಗಳು ಸತ್ಯ
ಲೋ
॥ಕತಳದಿಂ ಬರೆ; ವಾಯುವಿಂ, ಗಗನಸ್ಥಲೀರವೆ ಕೊಂ
ಚೆಡಳು ಲ್
॥ಕುತುಕದಿಂ ನಿಜವೆಂಬೊಲಾದದು ಶಾರದಾಂಬರ ಸಂ
ಯುಂ॥೧೮॥

॥ಮತ್ತೇಭ॥ನಡೆಮಾಡಲ್ಬಿಡುಗಣ್ಣ ರೋಲ್ದಡರೆ, ಬಾನೋ
ಳ್ಕೂಡಿ ಕಂಗೊಳ್ಪ ಬೆಳ್
ನಡೆಮಾಡ್ಪಿಂಡೊ, ಬಿಸಿಲ್ಗೆ ಕಾಯ್ಬಸುಟ ಬಾಂಬಿಂಜಾ
ರನೊಳ್ಳಳ್ಗೆಯಾ
॥ಗಡಣಂ ತೋರ್ವದೊ, ತನ್ನ ಬಾಂಮನೆಗೆ ನೇಸರ್ ತಂ
ಮಹೀದುರ್ಗಂವಿಗಲ್
॥ತೊಡೆದಲ್ಲಲ್ಲಿಗೆ ನಲ್ಮೆಯಿಂದಿರುವಮದೋರ್ ಬೆಳ್ಮು
ಗಿಲ್ದಂಡವೋ॥೧೯॥

॥ಮಹಾಸ್ರಗ್ಧರ॥ದಶದಿಗ್ಯೋಷಿಜ್ಜನಾವಾಸವಿಹಿತಶುಚಿ ಸೌ
ಧೋತ್ಕರಾಗ್ರಂಗಳೋ, ತ್ರಿ॥
ದಶಗಂಗಾತುಂಗ ಭಂಗೋದ್ಧತಸಿತತತವಾಶ್ಮೀಕರಾನೀ
ಕಮೋ, ದ್ಯಾ॥

।ದಶಕಾತ್ಮ ಧ್ಯಾನಮೌನಸ್ಥ ಭಸಿತವಿಶದಾಂಗಪ್ರಮಿಾಂದಾ್ರ
ಘವೋ, ತದ್।
।।ದಶಮಿಾಸ್ಥ ಸಂಪಸಾಧ್ವೀಶ್ವರಧವಲಜಟಾಶ್ಮ ಶ್ರು ರೋ
ಮಾಳಯೋ, ಮೇಣ್।।೨೦।।
।।ಮಾತ್ರೇಭ।। ಖತಳೇಶಾವಿತಪ್ರಷ್ಟ ತುಷ್ಟ ತದಭೀಷ್ಟ ಶ್ವೇತ
ಮಾತಂಗಸಂ।
।। ಹತ್ರಿಯೋ, ಖೇಚರದಂಗನಾಕಬರಿಯಿಂದೊಕ್ಕ ಲ್ಲಸ
ತ್ಕಂದಸ್ರ।।
।।ಕ್ತ್ರಿಯೋ, ವ್ಯೋಮಗಶೋಧಿತ್ರೋದ್ರ ಜಿತಖಾನಿವಾ್ರ
ತಪೋ, ಯಿಾಶರ।
।।ದ್ರು ತುರಾಜಾಚ್ಛ ಯುಶಸ್ಸಮೂಹಪೊ, ಸುಶುಭ್ರ ಭಾ್ರ
ಚದಭ್ರಾಳಯೋ।।೨೧।।
।।ನಿಜಸಂದರ್ಶನಮಾತ್ರ ದಿಂಶಠದನನಹಸ್ವಾವಿ ಮೋಕ್ಷಂ
ಗಳ।
।।ತ್ರ್ತಿ, ಜಗಸ್ಥಾವರಜಂಗಮಂಗಳಗೆ ದಿವ್ಯಾಂಗಂಗಳತ್ರಾ
ಪರ।।
।।ಕ್ಕೆ ಜನಂಕಾಣೆ ನಭೋಧ್ವವಿಂಕಳುಪ್ರ ವಂಶಾನೆಂಬಿನಂ
ಪಾಂಡುರಾ–
।।ಭ್ರ ಜನಾನಾಕೃತಿಗಳ್ ವಿನೋದಕರಗಳ್ ಕಂಗಂಳ್ಗ
ಮಾಕಾಶದೋಳ್।।೨।।
।।ಉತ್ಸಾಹವೃತ್ತ।। ಶಾರದೋದ್ಭವಂ ಶುಚಿತ್ವಮಾಂಪ್ರದೇನಂ
ಚಿತ್ತಾರಂ।
ಬೀರನೇಶಿತಾಭ್ರನಾಮನರ್ಜುನತ್ವನುಂಕರಂ।।
ಗೌರವರ್ಣನಾಗದಿರ್ದನಂತಭೂಗನಾಗಿರಂ।

ತ್ರೋಟಿತಶರದ್ ಘನಂ ಸುಧಾಂಶುರಂ ಮನೋಹರಂ
॥೨೩॥
॥ಮತ್ತೇಭ॥ ಸರೆದಂದಿಟ್ಟಣಿಸಿ ರಿಗೋ ಬರಿದು ನಲ್ಲಾ ಸುಂ
ದರಾ ಚಂದಿರಾ।
ನಿಶುಶಂಸಂಮರಿಯಾದಬಾಂಮಣಿಗದಿರ್ಗಂಡಂನೆನ್ನುತ್ತಂ
ನಿಜೇ॥
॥ಶ್ವರನಿಂಗಾರಚನೀವಧೂಟಿಗಣಗ್ಗಯಿಂದೆತ್ತಿ, ಮೋ
ರೆದ್ದೀರವಂ—।
॥ತಿರಲೊಪ್ಪವರ್ಪ್ರಬಾಂಚೊಡರ್ಗಳವ್ರಬಾನೋಳ್ಕಂಗ।
ಳಂಗಿಂಬಿನಿಂ॥೨೪।
॥ಪೃಥ್ವೀವೃತ್ತ॥ ನಿಶಾಲಸಿತಕಾಂತಿತಾಳಶುವರಂನವೃಕ್ಷಂಗ
ಳೊ,।
॥ದಿಶಾಲಲನೆಯರ್ಪ್ರದೀಪಗಳರಾತ್ರಿಯಲ್ಲೀವಿಹಾ—॥,
॥ಯಸಾಲಯದೊಳಲ್ಲಿಗಲ್ಲಿಗಿರಿಸಿರ್ದರೇನೆಂಬಿನಂ।
ವಿಶಾಲತರದಲ್ಲಿ ಬಾಜೊಡರ್ಗಳರ್ದವೆಂಬಂತೆಸೆಂ॥೨೫॥
॥ಭುಜಂಗಪ್ರಯಾತ॥ ನುತಪ್ರಾಪ್ತನೊತ್ಕರ್ಷಸುಸ್ವಾತ್ರಭೂ
ದೇ—
॥ವಿತಾಂಪ್ರೀತಿಯಿಂಕಾರದಾತ್ರೀಶ್ವರಂಗಾ—
॥ರತೀಮಾಳ್ಪಳೀಕಾಂತಕೃತಂದೆನತ್ರೋ
ರುತ್ರೊಪ್ಪಸ್ತ್ರರ್ದಾಕಾರ್ತಿಕೋದ್ದೀಪರಾಜಿ॥೨೬॥
॥ಚಂಪಕಮಾಲಾ॥ ಪೊಳೆಯೊಳಬಂದುಮೂಡದಿರನೇಸರದಾ
ಗಳನಿಲ್ಲದೊತ್ಕ್ರಿಯಿಂ।
॥ಘಳಲನೇವಿಂದುಕಟ್ಟಳೆಗಳಂಸಲೆತೀರ್ಚಸಮಂತುಗಂ
ಗೆಯಿಂ।

ನೊಳಿದುವಿಧಾನದಿಂದವಿರಚರ್ಚಿಸಿ, ಶಿಲ್ಪಗಳೊಳ್ನಡ
ಗರ್ಳಂ॥
ನಿಲಿಸಿನದೀಪ್ರವಾಹದೊಳವಂಪರಿವಿಟ್ಟು ಸುಶೀಲರೀಕ್ಷಿ
ಪರ್॥೨೭॥

॥ಇಂದ್ರವಜ್ರ॥ ಅಂಬುಪ್ರವಾಹಾನುಗದೀಪಿಕಾಕಾ।
ದಂಬಾತಿಶೃಂಗಾರಸಮೃದ್ಧಿಯಿಂನಾ।
ನೇಂಬಂಣಿಪೆಂತೀರದಿನಿಂತುನೋಳ್ಪಾ।
ಸಂಭಾವಿತಸ್ವಾಂತಜಹರ್ಷವಂನುಂ॥೨೮॥

॥ಮತ್ತೇಭ॥ ಬೆಳಗಲ್ವಾರಿಧಿಜೇವನೇತಗೆನದೀಸ್ತ್ರೀಪಾತ್ರದ
ಲ್ಲಿಟ್ಟು ಕೊಂ।
ಡೊಲವಿಂತಂ ನಿಕಟಕ್ಕಮಾರುತಿಯನೊಯ್ಯುತ್ತಿರ್ಪ
ಳೋ, ಜ್ವಾಲೆಗ।
ಳ್ಜಲವಂಕೊಲ್ಲದಿರೆಂಮನಿಂದಿನಿನದಲ್ಲೆ? ನಿಂನಕಾಂತತ್ವ
ಕ್ಕೆ।
ದೆಲಘಾತ್ವಂ ಬಿಡುವೈರವಂನೆನುತ್ತಬಂದೇಂಪ್ರಾರ್ಥಿಸುತ್ತಿ
ರ್ಪವೋ॥೨೯॥

ಪೊಳೆಯೋಳುತ್ತದಿನೀಸುತಂಬುನಿಧಿಯಂತಭಾಗಮಂ
ಚರ್ಚಿಸ್ರೋ।
ಪ-ಲಸದ್ಬ್ರಡಬಹವ್ಯವಾಹನಶಿಖಾಸಂದೋಹವೋ, ರ
ಕ್ತರ।
ತ್ನಲಲಾಮಾಭರಣಂಗಳಂತಳದಳೋವಾಗಾವಧು, ಕ್ರೀ
ಡೆಗಾ॥
ಜ್ವಲನಜ್ವಾಲೆಗಳಪ್ರವಾಹದೊಡನೀಸುತ್ತಿರ್ಪವೋ ಚಿ
ತ್ರದಿಂ॥೩೦॥

ಸ್ರಗ್ಧರಾವೃತ್ತ॥ಎಂಬಂತಿಂಬಾದದೀಪಾವಳಿಯ ಸಮುಪ
ಬಿಂಬಂಗಳಾನೀರೊಳತ್ತಂ।
ತಾಂಬಲ್ತಲೊಪ್ಪೀಜ್ವಲಪ್ರಾಂಶುಗಳ ಖಿಲಜಲಸ್ಥಾನ
ಮಂತೀವೆ, ಕಣ್ಗಂ।
ದಂಬೆತ್ತುತ್ತಪ್ರತ್ಯಹಮುಪ್ರವಹವೋ, ಹವಿಭುಕ್ಕೀಲಮಾಲಾ
ಬ್ಜಗಳೋ, ತಾ।
ನೆಂಬೋಲೊಪ್ಪಿರ್ದಾ ಗಲ್ಲೆನಿಸುತಿರ್ದುಸುಗಂಗಾಂಬು
ಗಾಂಬುಪ್ರವಾಹಂ॥೨೮॥

॥ಸ್ರಗ್ಧರಾವೃತ್ತಂ॥

॥ಇಂತಪ್ಪಂದಂಗಳಂನಪ್ರತಿಮಕೌತುಕಸಾಶ್ಚರ್ಯಸಂ
ತೋಷಪೂರ್ಣ।
॥ಸ್ವಾಂತಕಾರ್ಂಬನೆಗಂಪುತ್ತ್ರಶುಣ್ಣಕರಸಮುಲ್ಲಾಸಮಂ
ಕಂಡಮಂಗೋ॥
ರಂತಿತ್ತರ್ಘ್ಯಂಗಳಂ, ಪೂಜಿಸಿಹರಿಹರರಂಭಕ್ತಿಯಿಂ
ತುಷ್ಟರಾಗ।
॥ಪ್ಪಂತಾರಾಮಂಗಳೊಳ್ ಭೋಜನವನೆಸಗುವರ್ ಸ
ರ್ವರೀಗೋತ್ರಿಯಿಂದಂ॥೨೯॥

॥ಶಾರ್ದೂಲವಿಕ್ರೀಡಿತವೃತ್ತಂ॥

ಆಜಿಸ್ವೀಕೃತಜೀಯಭೂಭುಜಮದಾಂಧಃಕಾರವಂನೋ
ಡಿಸಲ್।
॥ನೃಜಾಜವ್ರಜದಿಂದೆಪೋಷರು. ಯಶಶ್ರೀಚಂದ್ರಿಕಾಕ್ಷಿ
ಪ್ತವಿ।
॥ಭ್ರಾಜದ್ಘೂರ್ಣಿರಜಸ್ಸದಾರುಣಮಹಾಮಿತ್ರಾಬ್ಜರಾರಾ
ಜರಾ।

॥ರಾಜತ್ತುಂಗಸುಖೋದಯರ್, ಶರದನೆಂಬಾರಾಜತೇಜಸ್ಕರಂ॥೩೩॥

॥ಮತ್ತೇಭವಿಕ್ರೀಡಿತವೃತ್ತಂ॥

॥ಚಳಿಯಿಂ ದೋಳ್ವನೆಯಿಂ ಬಿಸಿಲ್ಗೆ ಸೊಗಸಿಂ ದೇಳ್ತುಂದುಕಾಯ್ಸತ್ಕಿ ಮೂ।

॥ಜೆಲರಿಂ ವ್ಯೈಯೊಡೆದಿಪ್ಪರ್ಗುಂ ಪೆತ್ತೊಡೆದಾಗೊಳ್ಳೆಂಣೆಯಂಸೀವಿವಿಂ।

॥ಪೊಲವಿಂದಂಕಡುಗಾಯಿದಗ್ಗಿರ್ವಿಯಿನುಟ್ಟೊಳ್ಳಟ್ಟಿಯಂತ್ರೊಟ್ಟು ಪ್ರೊ

॥ಪೆಳಸಿಪ್ರೊಳ್ವಸಿಗೊಳನುಂಡು, ಸಿರಿಗರ್ಪೆರ್ನಮೊಡಿಪ್ರೊಳ್ತುಟ್ಟುವರ್॥೫೩೪॥

॥ಇತಿಶರದೃತುವರ್ಣನಂ॥

ಧೋಂಡೊ ನರಸಿಂಹ ಮುಳಬಾಗಲ

ಮೆಹರಬಾನ ದಕ್ಷಿಣಭಾಗ ಶಾಲಾಪತ್ರಿಕೆಯು ಏಡಿಟರ ಮುಕ್ಕಾಮ ಬೆಳಗಾವ ಇಂವರಾಜೆ ಅಂಜೂಟಗಿ ತಾಲೂಕೆ ಇಂಡಿ ಜಿಲ್ಲಾ ಕಲಾದಗಿ ಇಲ್ಲಿಯ ಮಾಸ್ತರನ ವಿನಂತಿ ಏನಂದರೆ ಕೆಳಗೆ ಬರದ ನಾಲ್ಕು ಪಂಗ್ತಿಗಳನ್ನು ತಮ್ಮ ಪತ್ರದಲ್ಲಿ ಪ್ರಕಟಸುವಿರಿ ಎಂದು ಅಪೇಕ್ಷೆಯುಂಟು.

ತಾರೀಖು ೧೧ ಮಾಹೆ ಜನವರಿ ೧೮೭೩ ದಿವಸ ಈ ಶಾಲಾಕ್ಕೆ. ಮೆಹರಬಾನ ಅನಂತರಾವ ಭಾಸ್ಕರ ಡಿ.ಡಿ. ಜಿಲ್ಲಾ ಕಲಾದಗಿ ಇವರು ಸಾಲಿಯಲ್ಲಿ ಬಂದು ಮೊದಲನೇ ಎರ್ಡನೇ ವರ್ಗದ ಹುಡುಗರ ಪರೀಕ್ಷೆಯನ್ನು ತೆಗೆದುಕೊಂ

ಡು ರಜಿಷ್ಟರದಲ್ಲಿ ಸಾಲಿಸ್ಥಿತಿ ಬಗ್ಗೆ ಷರಾ ಸಹ ಬರದು ಇದ್ದಾರೆ. ಈ ಧೊರಗಳವರ ಅಪೇಕ್ಷೆಯು ವಿದ್ಯಾವೃದ್ಧಿಯ ಕಡೆಗೆ ಯಿದ್ದು ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡುವಲ್ಲಿ ಆಶೆಯುಳ್ಳವರಿದ್ದಾರೆ ಕಾರಣಾ ತಮ್ಮ ಕರಗಳಲ್ಲಿ ಹುಟ್ಟುವ ಪತ್ರಿಕೆಯಲ್ಲಿ ಮುದ್ರಿಸಲ್ಪಡುವಿರೆಂದು ಬಹಳ ಅಪೇಕ್ಷೆಯಿಂದ ಬರಕೊಂಡೆನು. ಮೆಹರಬಾನಿಯಿಂದ ಜಾಗಾ ದೊರೆಯಬೇಕು ತಾರೀಖು ೧೪ ಮಾಹೆ ಜನವರಿ ೧೮೭೪

ಮುಕ್ಕಾಮ ಅಂಜೂಟಗಿ { ಸಹಿ ಜಿವಾಜಿ ದೊಂಡದೇವ ದಾತ್ರೆ ಗಜೇಂದ್ರಗಡಕರ ಸ್ಕೂಲಮಾಸ್ತರ ಅಂಜೂಟಗಿ.

ಪತ್ರಗಳನ್ನು ಕಳುಹಿದವರಿಗೆ ಉತ್ತರವು.

ನೀಲಕಂಠ ಚಿಕ್ಕೋಡೀ ಕುಲಕರಣಿ, ಕೃಷ್ಣ ನಾಗನಾಥ ಧಾರೇಶ್ವರ, ಒಬ್ಬ ಘಿರಸ್ತನು, ಕೃಷ್ಣಾಜೀ ಮಹಾದೇವ ಸೊಲ್ಲಾಪುರ, ಮುರಹರ ರುದ್ರೋ—ನಿಮ್ಮ ಪತ್ರಗಳಿಗೆ ಸ್ಥಳ ಕೊಡಲಿಕ್ಕೆ ಅನುಕೂಲವಿಲ್ಲ. ಸದಾಶಿವ ಶಿವರಾಮ ಗಳತಗೆಕರ, ಶಿವಾಜೀ ಅಪ್ಪಾಜೀ ಶಿರಸಂಗಿ—ನಿಮ್ಮ ಪತ್ರಗಳು ಮುಂದೆ ಅನುಕೂಲ ವಾದಂತೆ ಪ್ರಸಿದ್ಧಿಸಲ್ಪಡುವವು.

ಪ. ಕ.

ಶಾಲಾಪತ್ರಕವು.

—000—

ಪುಸ್ತಕ V] [ಸಂಚಿಕೆ ೧೩.

ಬೆಳಗಾವಿ, ಮಾಹೆ ಮಾರ್ಚ ೧೮೭೨.

SELF HELP.

ತನಗೆ ತಾನೇ ನೆರವಾಗುವದು.

ಕೇವಲ ಉದ್ಯೋಗಕಾಲವಿನಿಯೋಗಗಳ ಬಲದಿಂದಲೇ ಜನರಲ್ಲಿ ಅತ್ಯುತ್ತಮ ಕೀರ್ತಿಯನ್ನು ಸಂಪಾದಿಸಿದ ಉದಾಹರಣೆಯು ಡಿಸರಾಯಲೀ ಯೆಂಬವನದಾದರೂ ಇದೇ ಮೇರಿಗೆ ಉಂಟು. ಬುಲ್ವರನಂತೆ ಇವನಾದರೂ ಮೊದಲು ಗ್ರಂಥಗಳನ್ನು ರಚಿಸುವ ಯತ್ನ ಮಾಡಿ, ಯೆಷ್ಟೋಸಾರಿ ಅವರಲ್ಲಿ ಅಪಯಶ ಪಟ್ಟಾಗ್ಯೂ, ಧೈರ್ಯಗುಂದದೆ ಪುನಃ ಯತ್ನ ನಡಿಸಿ ಜಯ ಹೊಂದಿದನು. ಅವನು ಮೊದಲು ಬರೆದ "ಅಲನಿರ್ಯ ಆಶ್ಚರ್ಯದ ಕಥೆಯು," "ರಾಜ್ಯಕ್ರಾಂತಿಯ ಶೌರ್ಯ ವರ್ಣನೆ", ಯೆಂಬ ಗ್ರಂಥಗಳು ಜನರ ಹಾಸ್ಯಕ್ಕೆ ಮಾತ್ರ ಕಾರಣವಾಗಿದ್ದವು; ಇಂಥಾ ಗ್ರಂಥಗಳು ಕೇವಲ ಹುಚ್ಚು ಮನುಷ್ಯರಾದ ಗ್ರಂಥಕರ್ತರಿಂದ ಉಂಟಾಗತಕ್ಕವುಗಳೆಂದು ಜನರು ಯೆಣಿಸಿದರು. ಆದರೆ ಅವನು ಪುನಃ ಬೇರೆ ಮಾರ್ಗದಿಂದ ಯತ್ನ ನಡಿಸಿ ರಚಿಸಿದ "ಕಾನಿಂಗ್ಸಬೀ", "ಸಿಬಿಲ್", "ಟಾನಕ್ರೆಡ" ಯೆಂಬ ಪುಸ್ತಕಗಳಿಂದ ಅವನ ನಿಜವಾದ ಸ್ವರೂಪವು ಜನರಲ್ಲಿ ಪ್ರಕಟವಾಯಿತು. ವಕ್ತೃತ್ವದಲ್ಲಿಯೂ, ಇವನು ಮೊದಲು ಹಾಸ್ಯಾಸ

ಕಾಮನ್ಸ ಯೆಂಬ ಸಭೆಯಲ್ಲಿ ಮಾತಾಡಿದಾಗ ಜನರು ಇವನಿಗೆ ಬಹಳ ನಕ್ಕರು; ಇವನ ಮಾತಿನಲ್ಲಿ ಕೂಗಾಟವೇ ಬಹಳವೆಂದು ಅನ್ನುತ್ತಿದ್ದರು. ಆಗ ಇವನು ನುಡಿದ ಪ್ರತ್ಯೇಕ ವಾಕ್ಯವು ಭವ್ಯವಾದ ದೊಡ್ಡಸ್ತಿಕೆಯ ವಿಚಾರಗಳಿಂದ ಗರ್ಭಿತವಾದಾಗ್ಯೂ, ಅದನ್ನು ಕೇಳಿ ಅಲ್ಲಿ ನೆರೆದವರು ಹೊಳ್ಳನೆ ನಗುತ್ತಿದ್ದರು; 'ಹಾಮಲೆಟ' ಯೆಂಬ ನಾಟಕದ ಚಾರ್ವಾಕತನದ ಆಟವು ಇವನ ಸಂಭಾಷಣೆಯು ಮುಂದೆ ಯೇನೂ ಅಲ್ಲವೆಂದೆನ್ನಬಹುದಾಗಿತ್ತು. ಆದರೆ ಇವನು ಕಟ್ಟಕಡೆಯಲ್ಲಿ ಒಂದು ವಾಕ್ಯವನ್ನು ನುಡಿದನು; ಅದರಲ್ಲಿ ಭವಿಷ್ಯವನ್ನೇ ನುಡಿದನೆಂದೆನ್ನಬಹುದು. ತಾನು ಬಹು ಶ್ರಮ ಪಟ್ಟು ಕಲಿತುಕೊಂಡು ಬಂದ ವ್ಯಾಖ್ಯಾನವು ಈ ಮೇರಿಗೆ ನಗಗೇಡಾಯಿತೆಂದು ನೋಡಿ ತುಂಬಾ ವೇಗದಿಂದ ಅವನು ಅಂದದ್ದೇನಂದರೆ, "ನಾನು ಅನೇಕ ಸಂಗತಿಗಳನ್ನು ಯೆಷ್ಟೋ ಸಾರೆ ಆರಂಭ ಮಾಡಿ, ಕಡೆಯಲ್ಲಿ ಅವೆಲ್ಲವುಗಳನ್ನು ಕಡೆಗಾಣಿಸಿದ್ದೇನೆ. ಈಗ ನಾನು ಕೂಡ್ರುತ್ತೇನೆ; ಆದರೆ ನೀವೆಲ್ಲರು ಮನಸಿಟ್ಟು ನನ್ನ ಮಾತುಗಳನ್ನು ಕೇಳಿಕೊಳ್ಳುವಂಥ ಸಮಯವು ಒಂದಿಲ್ಲಒಂದು ದಿವಸ ಬಂದೇಬರುವದು." ಅಂಥಾ ಸಮಯವು ಕಡೆಯಲ್ಲಿ ಒದಗಿತು. ಡಿಸರಾಯಲಿಯು ಕಡೆಯಲ್ಲಿ ಭೂಮಿಯಲ್ಲಿ ದೊಡ್ಡಮನುಷ್ಯರ ಮುಖ್ಯಸಮುದಾಯವೆಂದೆನಿಸಿಕೊಳ್ಳುವ ಸಭೆಯವರ (ಪಾರ್ಲಿಮೆಂಟಿನವರ) ಲಕ್ಷ್ಯವನ್ನು ಹ್ಯಾಗ ಯೆಳಕೊಂಡನೆಂಬದು ಸಾಹಸದಿಂದಲೂ, ದೃಢನಿಶ್ಚಯದಿಂದಲೂ ಯೇನು ಫಲವಾಗುತ್ತದೆಂಬದರ ಅತ್ಯುತ್ತಮ ಉದಾಹರಣೆಯಾಗಿರುತ್ತದೆ. ಒಮ್ಮೆ ಆಶಾಭಂಗವಾದ

ಮೇಲೆ ಯೆಷ್ಟೋ ಮನುಷ್ಯರು ಉದಾಸೀನರಾಗಿ ಮೂಲೆಗೆ ಬಿದ್ದು ಖೇದದೊಳಗೆ ಆಯುಷ್ಯ ಹರಣ ಮಾಡುವಂತೆ ಇವನು ಮಾಡದೆ, ಚಡಪಡಿಕೆಯಿಂದ ಪುನಃ ತನ್ನ ಕೆಲಸವನ್ನು ನಡಿಸೇ ನಡಿಸಿದನು. ಇವನು ತನ್ನ ತಪ್ಪುಗಳನ್ನು ಜಾಗ್ರತೆಯಿಂದ ಲಕ್ಷ್ಯಕ್ಕೆ ತಂದು ತಿದ್ದಿಕೊಂಡನು, ಸಭೆಯಲ್ಲಿ ತನ್ನ ಭಾಷಣೆಗಳ ಕೇಳುವದಕ್ಕೆ ಕೂಡ್ರುವವರ ಸ್ಥಿತಿ ರೀತಿ ಮುಂತಾದವುಗಳನ್ನು ಚನ್ನಾಗಿ ತಿಳಿದುಕೊಂಡನು, ಮನಃಪೂರ್ವಕವಾಗಿ ವಕ್ತೃತ್ವದ ವಿದ್ಯವನ್ನು ಕಲಿತುಕೊಂಡನು, ಪಾರ್ಲಿಮೆಂಟಿನ ಸಂಬಂಧದ ಜ್ಞಾನದಿಂದ ತನ್ನ ಮನಸ್ಸನ್ನು ತ್ವರೆಯಾಗಿ ತುಂಬಿಕೊಂಡನು. ಇವನು ತನ್ನ ಅಭೀಷ್ಟವನ್ನು ಕೈಗೂಡಿಸಿಕೊಳ್ಳುವದರ ಯತ್ನವನ್ನು ಬಹು ತಾಳ್ಮೆಯಿಂದ ನಡಿಸಿದಂತೆ ಅದು ಮೆಲ್ಲ ಮೆಲ್ಲಗೆ ಅವನ ಕೈವಶವಾಯಿತು. ಕಡೆಯಲ್ಲಿ ಪಾರ್ಲಿಮೆಂಟಿನವರು ಅವನ ಮಾತಿಗೆ ಉಪಹಾಸದಿಂದ ನಗುವದಕ್ಕೆ ಬದಲಾಗಿ ಸಂತೋಷದಿಂದ ನಗಹತ್ತಿದರು; ಅವರು ಇವನ ಮೊದಲಿನ ಅಪ್ರತಿಷ್ಠೆಯನ್ನು ಮರೆತರು; ಇವನು ಪಾರ್ಲಿಮೆಂಟಿನಲ್ಲಿ ಯೆಲ್ಲಕ್ಕೂ ಹೆಚ್ಚು ಮಾತಾಡುವವನೆಂದು ಕಡೆಯಲ್ಲಿ ಸಮಸ್ತರೂ ಸಂಮತಿ ಪಟ್ಟರು.

ಈ ಉದಾಹರಣೆಗಳಿಂದಲೂ ಮುಂದೆ ಬರೆಯಲ್ಪಡುವ ಉದಾಹರಣೆಗಳಿಂದಲೂ ಮನುಷ್ಯನು ತನ್ನ ಸ್ವಂತ ಬಲದಿಂದಲೂ ಉದ್ಯೋಗದಿಂದಲೂ ಬಹಳ ಲಾಭ ಮಾಡಿಕೊಳ್ಳಬಹುದೆಂದು ಸಿದ್ಧವಾಗುತ್ತಿದ್ದಾಗ್ಯೂ, ನಾವು ನಮ್ಮ ಈ ಲೋಕದ ವ್ಯವಹಾರಗಳಲ್ಲಿ ಪರರಿಂದ ಸಂಪಾದಿಸಿದ ಸಹಾಯವಾದರೂ ಬಹು ಪ್ರಯೋಜನವುಳ್ಳದ್ದಾಗಿರುತ್ತದೆಂದು

ಒಪ್ಪಿಕೊಳ್ಳಬೇಕಾಗಿದೆ. ವರ್ಡ್ಸ್ವರ್ಥನೆಂಬ ಕವಿಯು
ಸಮರ್ಪಕವಾಗಿ ನುಡಿದದ್ದೇನೆಂದರೆ, "ಪೌರುಷ್ಯದ ಪಾರ
ತಂತ್ರ್ಯವೂ, ಪೌರುಷ್ಯದ ಸ್ವಾತಂತ್ರ್ಯವೂ, ಪೌರುಷ್ಯ
ದಿಂದ ಪರರನ್ನು ನಂಬುವದೂ, ಪೌರುಷ್ಯದಿಂದ ತನ್ನನ್ನು
ತಾನೇ ನಂಬುವದೂ, ಈ ಸಂಗತಿಗಳು ಒಂದಕ್ಕೊಂದು ವಿ
ರುದ್ಧವಾಗಿ ತೋರಿದಾಗ್ಯೂ, ಒಂದಕ್ಕೊಂದು ಜೊತೆಯಾಗಿ
ಯೇ ಇರತಕ್ಕವು. ಮನುಷ್ಯನು ಚಿಕ್ಕಂದಿನಿಂದ ಮುದಿ
ತನದ ವರೆಗೂ ತನ್ನ ಪ್ರತಿಪಾಲನಕ್ಕೋಸ್ಕರವಾಗಿಯೂ,
ಸುಧಾರಣೆಯ ನಿಮಿತ್ತವಾಗಿಯೂ ಬಹಳಾಗಲಿ, ಸ್ವಲ್ಪವಾ
ಗಲಿ, ಪರರಿಂದ ಉಪಕಾರ ಪಟ್ಟಿರುತ್ತಾನೆ. ಮನುಷ್ಯ
ರು ತಮ್ಮಲ್ಲಿ ಸಾಮರ್ಥ್ಯವೂ ಸೌಜನ್ಯವೂ ಹೆಚ್ಚು ಇದ್ದಂತೆ
ಈ ಉಪಕಾರವನ್ನು ಹೆಚ್ಚು ಸಂತೋಷದಿಂದ ಒಪ್ಪಿಕೊಳು
ತ್ತಾರೆ. ಉದಾಹರಣಾರ್ಥವಾಗಿ ಸ್ವಲ್ಪ ಕಾಲದ ಹಿಂದೆ ಆ
ಗಿ ಹೋದ ಅಲೆಕ್ಸಿಸತಾಕವಿಲ್ಲೆಂಬವನ ಕೃತ್ಯಗಳನ್ನೇ ತೆ
ಗೆದು ಕೊಳುವ. ಇವನು ಇಮ್ಮಡಿಯಾಗಿ ಮನೆತನಸ್ಥ
ನು; ಯಾಕೆಂದರೆ, ಇವನ ತಂದೆಯು ಫ್ರಾನ್ಸದ ದೊಡ್ಡ ಮ
ನುಷ್ಯರಲ್ಲಿ ಹೆಸರಾದವನು ಇದ್ದದ್ದಲ್ಲದೆ, ಇವನ ತಾಯಿ
ಯು ಮಾಲೆಬಾರ್ಬೀಯೆಂಬ ಘನಸ್ಥನ ಮೊಮ್ಮಗಳು ಇ
ದ್ದಳು. ಆದದರಿಂದ ಇವನ ಮನೆತನದ ದೊಡ್ಡಸ್ತಿಕೆಯ
ಕಾರಣದಿಂದ ಇವನು ಇಪ್ಪತ್ತೈದು ವರ್ಷದವನಾದಾಗ ವ
ರ್ಸಲಿಸ ಪಟ್ಟಣದಲ್ಲಿ ಮುಖ್ಯ ನ್ಯಾಯಾಧೀಶನ ಕೆಲಸಕ್ಕೆ
ನೇಮಿಸಲ್ಪಟ್ಟನು. ಆದರೆ ಇವನು ಈ ಅಧಿಕಾರವು ತನ
ಗೆ ತನ್ನ ತಂದೆ ತಾಯಿಗಳ ದೊಡ್ಡಸ್ತಿಕೆಯ ಸಂಬಂಧದಿಂ
ದ ಶಿಕ್ಕಿತೇ ಹೊರತು ತನ್ನ ಸ್ವಂತ ಯೋಗ್ಯತೆಯಿಂದ ಶಿಕ

ಲಿಲ್ಲೆಂದು ಬಹುಶಃ ತಿಳಿದು, ಅದನ್ನು ಬಿಟ್ಟುಕೊಟ್ಟು, ತನ್ನ ಸ್ವಂತ ಪರಾಕ್ರಮದಿಂದಲೇ ದೈವ ತೆಗೆಯಬೇಕೆಂದು ನಿಶ್ಚೈಸಿಕೊಂಡನು. ಈ ನಿಶ್ಚಯವು ಮೂರ್ಖತನವದ್ದೆಂದು ಕೆಲವರು ಅನ್ನುವರು; ಆದರೆ ಜೋಶಾಕೆವಿಲ್ಲನು ಶೌರ್ಯದಿಂದ ಇದನ್ನು ಕಡೆಗಾಣಿಸಿದನು. ಇವನು ತೀವ್ರವೇ ತನ್ನ ಕೆಲಸವನ್ನು ಬಿಟ್ಟುಕೊಟ್ಟು, ಅಮೇರಿಕದ ಸಂಯುಕ್ತ ರಾಜ್ಯದೊಳಗೆ ಅಡ್ಡಾಡುವದಕ್ಕೋಸ್ಕರವಾಗಿ ತನ್ನ ದೇಶವನ್ನು ಬಿಡುವ ಯೆತ್ತುಗಡೆ ಮಾಡಿದನು. ಈ ಪ್ರವಾಸದ ಸಂಗತಿಗಳೆಲ್ಲ "ಅಮೇರಿಕದ ಪ್ರಜಾಸತ್ತಾತ್ಮಕ ರಾಜ್ಯ"ವೆಂಬ ಹೆಸರಿನ ಇವನು ಬರೆದ ದೊಡ್ಡ ಪುಸ್ತಕದಲ್ಲಿ, ವರ್ಣಿಸಲ್ಪಟ್ಟವೆ. ಇವನ ಮಿತ್ರನೂ, ಪ್ರವಾಸದ ಜೊತೆಗಾರನೂ ಆದ ಗಸ್ತೇವಡೀ ಬೋಮಂಟೆ ಯೆಂಬ ಗೃಹಸನು, ಇವನು ಊರೂರು ತಿರುಗುತ್ತಿರಲಾಗಿ ಯೆಡೆಬಿಡದೆ ನಡಿಸಿದ ಉದ್ಯೋಗವನ್ನು ವರ್ಣಿಸಿದ್ಧಾನೆ. ಬೋಮಂಟನು ಬರೆದದ್ದೇನಂದರೆ, "ಇವನ ಸ್ವಭಾವವು ಸೋಮಾರಿತನಕ್ಕೆ ಪೊಚ್ಚು ಪಂಥಾವಲ್ಲ; ಇವನು ಮಾರ್ಗ ನಡೆಯುವಾಗಲೂ, ವಿಶ್ರಾಂತಿಯು ಸಲುವಾಗಿ ಒಂದು ಕಡೆಯಲ್ಲಿ ಕೂತಾಗಲೂ, ಇವನ ಮನಸ್ಸು ಏಕಪ್ರಕಾರವಾಗಿ ವಿಚಾರದಲ್ಲಿಯೇ ತೊಡಗಿರುತ್ತಿತ್ತು; ಅತಿಶಯ ಪ್ರಯೋಜನಕರವಾದ ಸಂಗತಿಯನ್ನು ಕುರಿತು ಮಾತಾಡುವದೇ, ಇವನಿಗೆ ಅತಿಶಯ ಪ್ರಿಯವಾದ ಹರಟೆಯು; ವ್ಯರ್ಥವಾಗಿ, ಅಥವಾ, ಅಪ್ರಯೋಜಕವಾಗಿ ಕಳೆಯಲ್ಪಟ್ಟ ದಿವಸವೇ ಇವನಿಗೆ ಬಹು ಕೇಡುಳ್ಳ ದಿವಸವು; ಅತಿ ಸ್ವಲ್ಪ ವೇಳೆಯಾದರೂ ವ್ಯರ್ಥ ಹೋದರೆ ಇವ

ನಿಗೆ ಬಹು ಖೇದವಾಗುತ್ತಿತ್ತು." ತಾಕೆವಿಲ್ಲನು ಒಬ್ಬ ಸ್ನೇಹಿತನಿಗೆ ತಾನು ಸ್ವತಃ ಬರೆದದ್ದೇನಂದರೆ, "ನಮ್ಮ ಜೀವಮಾನವಿರುವ ಮಟ್ಟಿಗೂ ನಮ್ಮ ವ್ಯಾಪಾರವು ತೀರ ನಿಂತು ಹೋಗಲಾರದು; ಯಾಕಂದರೆ, ಮನುಷ್ಯನಿಗೆ ಶರೀರ ವ್ಯಾಪಾರವು ಅವಶ್ಯಕವಿದ್ದದಕ್ಕಿಂತ ಹೆಚ್ಚು ಮನೋವ್ಯಾಪಾರವು ಅವಶ್ಯಕವಿರುತ್ತದೆ; ಇದಲ್ಲದೆ ಈ ಯೆರಡೂ ವ್ಯಾಪಾರಗಳು ತಾರುಣ್ಯಾವಸ್ಥೆಯಲ್ಲಿ ಅವಶ್ಯಕವಾಗಿದ್ದಷ್ಟೇ (ಒಂದು ವೇಳೆ ಹೆಚ್ಚೆಂದರೂ ಚಿಂತಿಲ್ಲ) ವಾರ್ಧಿಕ್ಯದಲ್ಲಿ ಸಹ ಅವಶ್ಯಕವಾಗಿರುತ್ತವೆ; ಈ ಲೋಕನಿವಾಸಿಗಳ ಸ್ಥಿತಿಯು, ಒಬ್ಬ ಹೆಜ್ಜೆ ಹೆಜ್ಜೆ ತಂಪಾದ ಪ್ರದೇಶಕ್ಕೆ ಹೋಗುವ ಮನುಷ್ಯನ ಸ್ಥಿತಿಯಂತೆ ಇರುತ್ತದೆಂದು ನಾನು ಯೋಚಿಸುತ್ತೇನೆ; ಈ ಪ್ರವಾಸಿಕನು ಹೆಚ್ಚು ಹೆಚ್ಚು ಮುಂದಕ್ಕೆ ಹೋದಂತೆ ಹೆಚ್ಚು ಹೆಚ್ಚು ತೀವ್ರವಾಗಿ ನಡಿಯಲಿಕ್ಕೆ ಬೇಕು; ತಂಪು ಗುಣವೇ (ಆಲಸ್ಯವೇ) ನಮ್ಮ ಆತ್ಮದ ದೊಡ್ಡ ರೋಗವು; ಆದದರಿಂದ ಈ ಭಯಂಕರವಾದ ಕೇಡನ್ನು ಪರಿಹರಿಸುವದಕ್ಕೋಸ್ಕರ, ನಮ್ಮ ಮನಸ್ಸು ಯಾವಾಗಲೂ ಉದ್ಯೋಗದಲ್ಲಿ ತೊಡಗೇ ಇರಬೇಕೆಂಬದಿಷ್ಟೇ ಅಲ್ಲ, ನಮ್ಮ ವ್ಯವಹಾರಗಳಲ್ಲಿ ನಮ್ಮ ನೆರೆಯವರ ಸಹಾಯವಾದರೂ ಇರಲಿಕ್ಕೆ ಬೇಕು."

Champu Ramayen and Champn Bharata with commentaries in Canarese by Mr. Shantaviraya

ಶಾಂತವೀರ ರಾಜದೇವ ಕೃತಕರ್ನಾಟಕ

ವ್ಯಾಖ್ಯಾನಗಳು.

॥ಚಂಪುಭಾರತೆ ಸವ್ಯಾಖ್ಯಾನೆ ಪ್ರಥಮಸ್ತಬಕಃ॥

॥ವಸಂತತಿಲಕಾವೃತ್ತ॥

ವಕ್ತ್ರಂವಿಲಾಸಮಣಿದರ್ಪಣಧಾರ್ಯಮಾಣಂ।
ವಾಮಾಹಿಮಾಂಶುರಯಮಿತ್ಯವಧಾರ್ಯಯಸ್ಯಾಂ॥
ಆದರ್ಶಬಿಂಬಧೃತಿರಸ್ತ್ಯದೃಷ್ಟಪೂರ್ವಾ।
ತಸ್ಯೇತಿತಾದೃಶಧಿಯಂವಿನಿವರ್ತಯಂತಿ॥೨॥

॥ಅನ್ವಯಃ॥

ಯಸ್ಯಾಂ=ಪಟ್ಟಣದಲ್ಲಿ। ವಾಮಾಃ=ಸುಂದರ ಸ್ತ್ರೀಯರು। ವಿಲಾಸಮಣಿದರ್ಪಣಧಾರ್ಯಮಾಣಂ; ವಿಲಾಸ=ವಿನೋದದ, ಮಣಿದರ್ಪಣ=ರನ್ನಗನ್ನಡಿಯಿಂದ, ಧಾರ್ಯಮಾಣಂ=ಧರಿಸಿದಂಥ। ವಕ್ತ್ರಂ=ಮುಖವನ್ನು। ದೃಷ್ಟ್ವಾ=ನೋಡಿ। ಹಿಮಾಂಶುಃ=ಚಂದ್ರನು। ಇತಿ=ಇಂತೆಂದು। ಅವಧಾರ್ಯ=ಭ್ರಮಿಸಿ। ತಸ್ಯ=ಆ ಚಂದ್ರನ। ಆದರ್ಶಬಿಂಬಧೃತಿಃ, ಆದರ್ಶ=ದರ್ಪಣದಲ್ಲಿಯು, ಬಿಂಬ=ಪಡಿನೆಳಲಿನ, ಧೃತಿಃ=ಧಾರಣವು। ಅಸ್ತ್ಯದೃಷ್ಟಪೂರ್ವಾ=ಕೇಳದೆ ಕಾಣದೆ ಯಿದ್ದಂಥಾದು। ಇತಿ=ಇಂತೆಂಬ, ತಾದೃಶಧಿಯಂ=ಆ ಪ್ರಕಾರವಾದ ಬುದ್ಧಿಯನ್ನು। ನಿವರ್ತಯಂತಿ=ಬಿಡುವರು.

॥ಶಾಸ್ತ್ರವಿಷಯಃ॥

ನಿವರ್ತಯಂತಿ=(ನಿ+ವೃತ್=ವ್,ಅರ್,ತ್+ಅಯ್+ಅಂತಿ) ವೃತ್ ೬೦ ಚೆಲ್ಲುವಲ್ಲಿ, ನಿ ಎಂಬುದು ಉಪಸರ್ಗ

ವೃತ್ ಎಂಬುದು ಧಾತು, ಅಯ್ ಎಂಬುದು ವಿಕರಣ, ಅಂತಿ ಎಂಬುದು ಲಟ್‌ಲಕಾರ, ಪರಸ್ಮೈಪದ, ಬಹುವಚನ, ಭೂತಕಾಲ, ಅರ್ ಎಂಬುದು ಆದೇಶವು, ಪ್ರಯೋಗ—ಮಾಮಾಃ ಕರ್ತೃ, ಧಿಯಂ ಕರ್ಮ, ನಿವರ್ತಯಂತಿ ಕ್ರಿಯಾಪದ, ಸಕರ್ಮಕ, ಕ. ಪ್ರ. ಪ್ರತ್ಯಕ್ಷಾಲಂಕಾರ.

||ಭಾವಾರ್ಥಃ||

ಹಸ್ತಿನಾವತಿಯಲ್ಲಿರುವ ಸುಂದರ ಸ್ತ್ರೀಯರು ವಿಲಾಸಾರ್ಥವಾಗಿ ಹಿಡಿದ ರನ್ನಗನ್ನಡಿಯಲ್ಲಿ ಪ್ರತಿಬಿಂಬಿಸುವ ತಮ್ಮ ಮುಖವನ್ನು ನೋಡಿಕೊಂಡು ಚಂದ್ರನೆಂದು ಭ್ರಮಿಸಿದ ಕೂಡಲೆ (ಸಕಳಂಕನೆಂಬ ಕಾರಣದಿ) ಆ ದರ್ಪಣದಲ್ಲಿ ಹೊಳೆವ ಚಂದ್ರಬಿಂಬವು ಇದಲ್ಲವೆಂಬ ಬುದ್ಧಿಯನ್ನು ಬಿಟ್ಟು ಸಮ್ಮ ಮುಖಪ್ರತಿಬಿಂಬವೆಂದು ತಿಳಿದರು.

||ಚಂಪೂರಾಮಾಯಣಸವ್ಯಾಖ್ಯಾನಬಾಲಕಾಂಡಃ||

||ಅನುಷ್ಟುಪ್, ಶ್ಲೋಕಃ||

೧ ಮಾನಿಷಾದಪ್ರತಿಷ್ಠಾಂತ್ವ।
೨ ಮಗಮಶ್ಶಾಶ್ವತೀಸ್ಸಮಾಃ।
೩ ಯತ್ಕ್ರೌಂಚಮಿಥುನಾದೇಕ।
೪ ಮವಧೀಃ ಕಾಮಮೋಹಿತಂ||೭||

||ಅನ್ವಯಃ||

ಇದರಲ್ಲಿ ಶ್ಲೇಷಾರ್ಥವುಂಟು.

ಹೇನಿಷಾದ=ಎಲೆ ಕಿರಾತನೆ। ತ್ವಂ=ನೀನು (ಮಾನಿಷಾದತ್ವಂ=ಶ್ರೀರಾಮತ್ವವು) ಶಾಶ್ವತೀಃ ಸಮಾಃ=ಅನಂತವರ್ಷಗಳ। ಪ್ರತಿಷ್ಠಾಂ=ಸ್ಥಿತಿಯನ್ನು। ಮಾಆಗಮಃ=ಪಡೆಯಬೇಡ (ಆಗಮಃ=ಪಡಿ) ಯತ್ಕ್ರೌಂಚಮಿಥುನಾತ್, ಯ

ತ್=ಯಾವ, ಕ್ರೌಂಚ=ಚಕ್ರವಾಕ ಪಕ್ಷಿಗಳ (ಮಂಡೋದರೀ ರಾವಣರ) ಮಿಥುನಾತ್=ಜೋಡಾದ ದಂಪತಿಗಳ ದೆಸೆಯಿಂದ। ಕಾಮಮೋಹಿತಂ=ಕಾಮಾಸಕ್ತವಾದಂಥ। ಏಕಂ=ಒಂದ ಗಂಡಹಕ್ಕಿಯನ್ನು (ಒಬ್ಬ ರಾವಣನನ್ನು) ಅವಧೀಃ=ಕೊಂದವನಾಗಿದ್ದಿ.

॥ಶಾಸ್ತ್ರವಿಷಯಃ॥

ಅಗಮಃ=(ಅ+ಗಮ್+ಅಃ) ಗಮ್ಲೃ=ಗತಿಯಲ್ಲಿ, ಅ ಎಂಬುದು ಆಗಮ, ಗಮ್ ಎಂಬುದು ಧಾತು, ಅಃ ಎಂಬುದು ಲಙ್‌ಲಕಾರ, ಭೂತಕಾಲ, ಮಧ್ಯಮಪುರುಷ, ಏಕವಚನ, ಪರಸ್ಮೈಪದ. ಅವಧೀಃ=(ಅ+ವಧ್+ಈಃ) ಅ ಎಂಬುದು ಆಗಮ, ವಧ್ ಎಂಬುದು ಧಾತು, ಈಃ ಎಂಬುದು ಲುಙ್‌ಲಕಾರ, ಭೂತಕಾಲ, ಮಧ್ಯಮಪುರುಷ, ಏಕವಚನ, ಪರಸ್ಮೈಪದ, "ಹಂತೇರ್ಲುಙಿ, ಹನೋವಧಾದೇಶಃ=ಲುಙ್‌ಲಕಾರದಲ್ಲಿ ಹನ್ ಎಂಬ ಧಾತುವಿಗೆ ವಧಾದೇಶವು ಬರುವದು" ವಧ=ಹಿಂಸಾಯಾಂ ಎಂಬುದು ಸಾರಸ್ವತದಲ್ಲಿ ಉಂಟು. ॥ಕ್ರುಂಚ=ಗತಿಕೌಟಿಲ್ಯಾಲ್ಪೀಭಾವಯೋರಿತಿಧಾತುಃ, ಕ್ರುಂಚಾರಾಕ್ಷಸೀಕ್ಯೈಕಸೀ, ತಸ್ಯಾ ಅಪತ್ಯಂಪುಮಾನ್ ರಾಕ್ಷಸಃರಾವಣಃ,ತಸ್ಯಾ ಪತ್ನ್ಯಮಿತ್ಯಣ್, ತಸ್ಯ ಪತ್ನೀ ಕ್ರೌಂಚೀ ಮಂಡೋದರೀ, ಅತ್ರ ಪೂರ್ವವದೇಕಶೇಷಃ.

॥ಭಾವಾರ್ಥಃ॥

ಎಲೆ ಕಿರಾತನೆ ನೀನು ಚಿರಕಾಲ ಈ ಸ್ಥಿತಿಯನ್ನು ಪಡೆಯಬೇಡ; ಈಗ ಒಂದು ಗಂಡಹಕ್ಕಿಯನ್ನು ಕೊಂದವನಾ

ದಿ ಎಂಥು ಸರಸ್ವತಿಯು ನುಡಿದಳು.

NOTICES.

ನೋಟಿಸುಗಳು.

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ ತಿಳಿಸುವದೇನಂದರೆ— ಚಿದಂಬರ ಕೃಷ್ಣ ಬನಪ್ಪನವರ ಸ್ಕೂಲಮಾಸ್ತರ ತುಂಬಗಿ ಯಿವರು ಒಂದು ತಿಂಗಳ ರಜಾ ತಗೊಂಡು ಹೋಗಿ ಮುದತಶಿರ ಹಜರಾಗದೆ ಯಿರುವ ಕಾರಣ ಆ ಮುದತಿಯ ಅವರ ಪೂರಾ ಸಂಬಳ ವಜಾಮಾಡಿದ್ದಲ್ಲದೆ ಒಂದು ರೂಪಾಯಿ ದಂಡ, ಮೋಹರಬಾನ ಇ. ಇನಸ್ಪೇಕಟರ ಸಾಹೇಬ ಬಹಾದ್ದುರವರ ಮಂಜೂರಿಯಿಂದ, ಮಾಡಿರುತ್ತದೆ. ಇದು ಯಾವತ್ತು ಸ್ಕೂಲಮಾಸ್ತರರು ಲಕ್ಷ್ಯದಲ್ಲಿಟ್ಟು, ಶಿಕ್ಷಕ್ಕೆ ಪಾತ್ರ ಆಗುವಂಥಾ ಕೆಲಸಾ ಮಾಡಬಾರದು. ತಿಳಿಯುವದು ತಾ|| ೫ ಫೆಬ್ರುವಾರಿ ೧೮೭೫ ಇಸವಿ.

Ramchandra. A. Sawanoor.

ಡಿ. ಇ. ಇ. ಜಿಲ್ಲಾ ಕಲಾದಗಿ.

Correspondence.

ಪತ್ರವ್ಯವಹಾರವು.

ಶ್ರೀಮಂತ ರಾಜಮಾನ್ಯರಾಜಶ್ರೀ ಕನ್ನಡ ಕಾಲಪತ್ರಿಕೆಯ ಕರ್ತೃಗಳ ಸಂನಿಧಾನಕ್ಕೆ—

ಸೇವಕನಾದ ಕಾಗಿನ್ಹೆಲ್ಲೀ ಕನ್ನಡ ಸ್ಕೂಲ ಮಾಸ್ತರನ ವಿಜ್ಞಾಪನೆ ನಡೆಯುವ ತಿಂಗಳಕಾಲಾ ಪತ್ರಿಕೆಯಲ್ಲಿ ಭೋಜ

ಸ್ಕೂಲಮಾಸ್ತರರು ಒಂದು ಸಂಸ್ಕೃತದ ಪದ್ಯವನ್ನು ಕೊಟ್ಟು ಅದರ ಅರ್ಥವನ್ನು ಬೇಡಿರುತ್ತಾರೆ.

೨ ಬದನಗೋಡ ಸ್ಕೂಲಮಾಸ್ತರರು ಒಂದು ಕನ್ನಡ ಪದ್ಯವನ್ನು ಕೊಟ್ಟು ಅದರ ಅರ್ಥ ತೋರಿಸಿ ಇಷ್ಟ ಶಬ್ದವನ್ನು ಬೇಡಿರುತ್ತಾರೆ.

೩ ಸದರ್ಹು ಉಭಯತರಿಗೂ ಕ್ರಮದಿಂದ ಕೆಳಗೆ ಆರ್ಯಾ ಪದ್ಯಮುಖದಿಂದ ಉತ್ತರವನ್ನು ನಾನು ಬರೆದಿದ್ದೇನೆ.

॥ಶಾರ್ದೂಲವಿಕ್ರೀಡಿತ॥

॥ನೇತ್ರೇ ವಾಮಸುದಕ್ಷಿಣೇ ಕಮಲಿನೀಪಾತ್ರಾತು ಲಕ್ಷ್ಮೀಪತೇಃ।
॥ಕ್ರೀಡಾಕಾಲಯಥೋಚಿತೌ ಜಲಚರಿವ್ಯಾಪ್ತೋದಯಾಸ್ತಾತಯೋಃ॥
॥ದೃಷ್ಟ್ವಾ ತನ್ನಿಜ ವಿಪ್ರಿಯಂ ನಯನಪದ್ಮೇ ಪದ್ಮಜಾ ವದ್ಮಸೀ।
॥ಪಾಣಿಭ್ಯಾಂ ಸಮರುಂಧಯತ್ಕ್ಷಕಮಲಾ ನೋಚಿತ್ರದಾವಾಗಿಯಂ॥೧॥

ಈ ಪದ್ಯವು ಚನ್ನಾಗಿ ಉತ್ತರವನ್ನು ಕೊಡುತ್ತದೆ. ಅರ್ಥವನ್ನು ಇವರಲ್ಲಿ ವ್ಯಕ್ತ ಮಾಡಿದ್ದೇನೆ. ಒಂದು ವೇಳೆ ತಿಳಿಯದಿದ್ದರೆ ಹಿಂದಾಗಿ ಗದ್ಯದಲ್ಲಿ ಕೊಟ್ಟೇನು.

।ಹಾಸ್ಯಂ ಕವ್ಯಕೆ, ಮೌನ, ಮುತ್ತರಮುದಾ ಮೋಲರ್ಥಕಂ, ಚಿತ್ರಕಂ
।ಲಾಸ್ಯಂ, ಕರ್ತೃಸುಯುಕ್ತಿಯಿಂ ಪ್ರಥಮದಾ ಹಾಸ್ಯಕ್ಕೆ ಹಾಸ್ಯಂ, 'ತದಾ॥
।ಸ್ಯಸ್ಯಾತ್ ಸ್ಮಾರಕ ಪದ್ಯ' ಮೆಂದೆನೆ ಮನಸ್ಸೀ ಪದ್ಯಮನ್ನಿಂ

ದನ್ಯೈ।

॥ಜ್ಯಾಸ್ಯೋಕ್ತ್ಯಂ, ಪ್ರೊರಮೊಟ್ಟ "ಮಾದಿತ್ರಿಪದಾದಿತ್ರ್ಯಕ್ಷ
ರಂ ಸೂತ್ರರಂ"॥೧॥

ಉತ್ತರ ಬೇಡಿದವರು ಈ ಪದ್ಯವನ್ನು ಅರ್ಥ ಮಾಡಿದರೆ ಕೆಳದ ಮೂರು ಇಷ್ಟಾಕ್ಷರಗಳು ಶಿಕ್ಕುವು; ಇಲ್ಲವೆ ಸೂಕ್ಷ್ಮ ದೃಷ್ಟಿಯಿಂದ ಶೋಧಿಸಿದರೆ ಇಷ್ಟಾಕ್ಷರಗಳು ಕಣ್ಣಿಗೆ ಬಿದ್ದಾವು; ಅಥವಾ" "ಈ ಅವರಣ ಚಿಹ್ನಗಳೊಳಗಿನ ವಾಕ್ಯದ ಅರ್ಥವನ್ನು ತಿಳಕೊಂಡರೆ ಇಷ್ಟವಾದ ಮೂರಕ್ಷಗಳು ದೊರದಾವು, ಹಾಗಾಗದ ಪಕ್ಷದಲ್ಲಿ ಹಿಂದಿನಿಂದಾ ನಾನೇ ಅದನ್ನು ವ್ಯಕ್ತಪಡಿಸೇನು!

ಲೋಭವಿರಬೇಕು ಇಂತೀ ನಮಸ್ಕಾರಗಳು.

ತಾ॥೨೭ ಜನವರಿ ಸನ್ನ ೧೮೭೩ } ಧೋಂಡೋ ನರಸಿಂಹ ಮುಳಬಾಗಲ ಸ್ಕೂಲ ಮಾಸ್ತರ ಕಾಗಿನೆಳ್ಳಿ.

ಮಾಹೆ ನವಂಬರ ಸನ್ನ ೧೮೭೨ನೇ ಇಸವಿ ೧೮೫೬ನೇ ಶಾಖಾಪತ್ರಕದಲ್ಲಿ ಹುಬ್ಬಳ್ಳಿ ಮಾಸ್ತರರು ವಿಜಯ ರಾಘವಾಚಾರ್ಯನೆಂಬ ಪಂಡಿತನು ಬೆಂಗಳೂರಲ್ಲಿ ಲಿಂಗವಂತರ ಕೂಡ ವಾದ ಮಾಡಹತ್ತಿ ೮ ತಿಂಗಳ ಮುದ್ದತ್ತಿನ ಪೊಂದು ಜಾಹೀರನಾಮೆ ಕೊಟ್ಟಿರುತ್ತಾನೆಂದು ಒಂದು ಸುಳ್ಳ ಹರಟೆಯ ಪತ್ರವನ್ನು ಛಾಪಿಸಿದ್ದಾರೆ. ಇದು ಸತ್ಯವೆಂದು ನಂಬುವದಕ್ಕೆ ಯೇನೂ ಆಧಾರವಿಲ್ಲ. ಕಾರಣವೇನೆಂದರೆ ಮತದ ಸಂಬಂಧದಿಂದ ವಾದ ಮಾಡಬೇಕಾದರೆ ಮುದ್ದತಿನ ಜಾಹೀರನಾಮೆ ಯಾಕೆ? ೧೨೦೦೦ ಗ್ರಂಥಗಳನ್ನು ತಾನು ಹೇಳುತ್ತಾನೆಂತ ೨೪೦೦೦ ಗ್ರಂಥಗಳನ್ನು ಲಿಂಗವಂತರು ಹೇ

ಳಬೇಕಂತ!! ಇದಕ್ಕೆ ಬುದ್ಧಿವಂತರು ನಗಲಾರರೊ! ಲಿಂಗ ವಂತರೇ ವೀರಶೈವ ಮತದವರೆಂಬ ಬಗ್ಗೆ ವೀರಶೈವಾಮೃತ, ವೀರಶೈವಪ್ರದೀಪಿಕೆ, ವೀರಶೈವಕೌಸ್ತುಭ, ವಿರಾಗಮ, ಸುಪ್ರಭೇದಾಗಮ ಮುಂತಾದ ಗ್ರಂಥಗಳುಂಟು. ಇವೆಲ್ಲ ಲಕ್ಷಸಂಖ್ಯೆಯ ಮೇಲಾಗುವವು. ಇವುಗಳನ್ನು ಆ ಪಂಡಿತನು ನೋಡಿರಲಿಕ್ಕಿಲ್ಲ. ಮತದ ಸಂಬಂಧದ ವಾದಕ್ಕೆ ಕವಿಷನರ ಸಾಹೇಬರ್ಯಾಕೆ? ನಮ್ಮ ಮತದ ಬಗ್ಗೆ ಕೇಳುವದೇ ಸತ್ಯವಿದ್ದರೆ ನಮ್ಮ ಸಿಂಹಾಸನಾಧಿಪತಿಗಳೆಂಬ ಗುರುಗಳನ್ನು ಕೇಳಬಹುದಾಗಿತ್ತು. ಇದರೊಳಗೆ ಹಮ್ಮಿಗೀ ಮಾಸ್ತರನ್ಯಾಕೆ? ಈ ಯಾವತ್ತು ಕಾರಣಗಳ ಮೇಲಿಂದ ನೋಡಲಾಗಿ ಸುಳ್ಳು ಹರಟೆಯು ಸತ್ಯವೆಂಬುವದಾಗಿ ತೋರುತ್ತದೆ.

ರುಜು ಅಡಿವೆಪ್ಪ ಶಿವಲಿಂಗಪ್ಪ ಸ್ಕೂಲಮಾಸ್ತರ ನೇಸರಗಿ.

ಬನವಾಶೀ; ದೇವಸ್ಥಾನದಲ್ಲಿರುವ; ಕಲ್ಲಿನ ಮಗ್ಗಲದ ಮೇಲಿರುವಂಥಾ.

ಶಿಲಾಲೇಖಯು;

वृत्त, श्लोक;

।४६

...वर्षे, विभवे, ऋतौचशशिरे, माघाख्यमासे, सिते-।
...से, तच्छिवरात्र, सौम्य, दिवसे, सोदारकुम्भाभृता॥
...र्पको, इममयं; वसंतकुतुका: आस्थानकेमंटपे।
...त, श्रीमधुकेश्वराय, रुचिर; श्रीमज्जयंती *पुरे॥१॥

---

* ಈ ಕ್ಷೇತ್ರಕ್ಕೆ ಜಯಂತೀಕ್ಷೇತ್ರವೆನ್ನುವರು.

ಅರ್ಥ.

ಶ್ರೀ ವರ್ಷ, “ಅಂಕಾನಾಂವಾಮತೋಗತಿಃ” ಅಂದರೆ, ಶಕೆ ೧೪೪೧ ನೇ, ವಿಭವಸಂ॥ ಶಿಶಿರಋತು; ಮಾಘಮಾಸ; ಪದ್ಯಪಕ್ಷ. ಚತುರ್ದಶಿ, ಬುಧವಾರ; ಈ ದಿವಸ; ಸೋದೆ, ರಘುರಾಜರೆಂಬ, ಅರಸರು; ಈ ಮನೋಹರ ಮಂಟಪದಿಂದ ಯುಕ್ತವಾದ ಕಲ್ಲಿನ ಮಂಚವನ್ನು ಶ್ರೀಜಯಂತೀ ಪುರದಲ್ಲಿ; ಶ್ರೀಮಧುಕೇಶ್ವರ ದೇವರಿಗೋಸ್ಕರ ಕೊಡಲ್ಪಟ್ಟರು.

ಪತ್ರಕರ್ತರಾಯರೇ; ಈ ನೋಲಿನ ಮಂಚವು; ಈಗಲೂ, ಸದರಪ್ರ; ಬನವಾಶೀಯಲ್ಲಿ ಉಂಟು; ಅದನ್ನು ಎಷ್ಟೋ ಜನರು, ಬುದ್ಧಿಪೂರ್ವಕವಾಗಿ, ನೋಡುವದಲ್ಲದೇ, ಅದರಂತೇ ಚಿತ್ರ, ಎತ್ತಿಕೊಂಡು ಬಯ್ದವರುಂಟು; ಈ ಮಂಚವು, ಸುಮಾರು ೬ ಫೂಟು ಉದ್ದ; ಸುಮಾರು ೫ ಫೂಟಹರ; ೧ ಫೂಟ ಬಂಡ; ಇಷ್ಟು ಇದ್ದು; ಕೆಳಗೆ ನಾಲ್ಕು ಕಾಲು; ಮೇಲೆ“ಛಪ್ರಪಲ್ಲಂಗ” ದಂತೆ ಇದ್ದು ಚಿತ್ರ ವಿಚಿತ್ರವಾದ, ನಕಶೆ, ಗಳನ್ನು ಕೊರೆದದ್ದು ನೋಡಲಾಗಿ; ಮೋಣದಿಂದಸಹ; ಆಪ್ರಕಾರ, ಬೊಗ್ಗಿಸೋಣ; ನಯಮಾಡೋಣ, ದಬಗ್ಗ—ಈಗ್ಗ ವಾನವಾ, ನೇಸರಿ.

ಮತ್ತು ಇಂಥಾದ್ದೇ ಬಂದು; ಇದೇ ಅಳತೆಯುಳ, ೫ ಕಾಲಿನ ಮಂಚವು. ಸೋದೆ; ಕೋಟಿ, (ಅರಮನೆ)ಯಲ್ಲಿ ಉಂಟು, ಅದಕ್ಕೆ ಮೇಲ್ಛಪ್ರವಿಲ್ಲ. ನಕಶೆಯೂ, ಇಲ್ಲ;

ವಿಸ್ತಾರವಾದ ಪೂಶೀ ಇರಲಿ; ಯುಕ್ತಿ ಚತು ಇನಾವಿಗ ಪಾತ್ರನ್ನ ಮಾಡಿರಿ ಅಷ್ಟೇ ಪ್ರಾರ್ಥನೆಯು; ,,ಶ್ರೇಷ

रण प्रसिद्ध पुरुषोत्तम” ಸೂಜ್ಞರೇ ಇದ್ದೀರಿ, ಅಂತೀವಿನಂತಿ.

ಬದನಗೋಡ. ೨೦-೧೨-೭೨ } ಶ್ರೀನಿವಾಸ ರಾಮಚಂದ್ರ ಬಂಕಾಪ್ಪೂರ ದಂತೋಜಿ.

ಬೆಡಗು.

ವೆ॥ರಾ॥ರಾ॥ಕನ್ನಡ ವಾರಪತ್ರಕರ್ತರಿಗೆ-

ವಿ॥ವಿ॥ನಾನು ಬರೆದ ನಾಲ್ಕು ಪಂಕ್ತಿಗಳಿಗೆ ಇನ್ನೊಂದಾವರ್ತಿ ಕಿಂಚಿತ ಸ್ಥಳ ದೊರೆಯುವ ಗೋಸ್ಕರ, ಆಶಿಸುತ್ತೇನೆ. ಅಚ್ಚು ಹಾಕುವದಕ್ಕೆ ಯೋಗವಿದ್ದರೆ ಪ್ರಸಿದ್ಧ ಮಾಡಬೇಕು ಹಾಗು ಇದಕ್ಕೆ ದಾರಾದರು ಉತ್ತರ ಕೊಟ್ಟರೆ ಇದೇ ಪತ್ರದ್ವಾರದಿಂದಾ ತಿಳುಹಿಸುವಿರೆಂದು, ಪ್ರಾರ್ಥಿಸುತ್ತೇನೆ.

ಧಾಟಿ ಚೌಪದನದಂತೆ.

ತಾಯಿವಬ್ಬಳುಎನಗೆ।ತಂದಿಬ್ಬರಯ್ಯಾ॥
ಮೂವರ್ಗಂಡರುಮತ್ತೆ।ಸುತರಿಬ್ಬರೈಯ್ಯಾ॥೧॥
ಬಂಧುಗಳುನಾಲ್ವರು।ಮತ್ತೆಕೇಳೈಯ್ಯಾ॥
ಹತ್ತುಜನತಂಗಿಯರು।ಇದುಹೇಳರೈಯ್ಯಾ॥೨॥
ಮೂವರೂಕಂನೇರು।ಎನ್ನಹೊಟ್ಟೆಯುಲೀ॥
ಅಣ್ಣತಂಗಿಗೆಲಗ್ನವಾಯಿತಿದುಕ್ವೋಲೀ॥೩॥
ನಾನುಹೇಳದಬೆಡಗು।ನೀನುಹೇಳೈಯ್ಯಾ॥
ಇದುಹೇಳದವರಿಗೆ।ಬಹುಮಾನವೈಯ್ಯಾ॥೪॥

ತಾ॥೪ ಮಾಹೆ ಜನೆವರಿ ಸನ್ ೧೮೭೩ ಇ॥ ಮು॥ ಮೋಟೇಬಿನ್ನೂರ ತಾ. ರಾ. ಜಿ. ಧಾ. } ಸಹಿ ಜಗನ್ನಾಥ ಶ್ರೀಧರ ಗೋಖಲೇ ಹೆಡ್ಡಮಾಸ್ತರ ಮೋಟೆಬಿನ್ನೂರ.

ಮ॥ರಾ॥ರಾ॥ದಕ್ಷಿಣ ಭಾಗದ ಶಾಲಾಪತ್ರಕದ ಕರ್ತರಿಗೆ ವಿ॥ವಿ॥ಅಯ್ಯಾ ಘನವುಳ್ಳ ಎಡೀಟರ ಮಹಾರಾಯರೇ; ನಾನು ಬರೆದು ಕಳುಹಿಸಿದ ಪತ್ರಗಳಿಗೆ ಸ್ಥಳದೊರಿಯಿತೆಂದು ನೋಡಿ; ಪುನಃ ಎರಡು ಸಾಲುಗಳನ್ನು ಬರೆದು ಕಳುಹಿಸಿರುತ್ತೇನೆ. ಪ್ರಸಿದ್ಧ ಮಾಡುವ ಕ್ರಮವನ್ನು ಲಕ್ಷಕ್ಕೆ ತಾರದೆ ಈ ನನ್ನ ಕಿಂಚಿತ್ ಪ್ರಾರ್ಥನೆಯನ್ನು ನೆರವೇರಿಸುವಿರೆಂದು ಬಿನ್ನಪಂಗೈಯುತ್ತೇನೆ.

ಶ್ಲೋಕ

ಎಣಿಸಾಪಂಗ್ತಿಯಾಲೆಖ್ಖಾ।ಗುಣಿಸಾ ಈರೈದರಿಂದಾ॥
ಧನದೊಳಗೆರಿಣಪಂಕಳಿಯಲು।*ರವಣಿತಪ್ಪ ದೆವಪ್ಪಾ॥

ಈ ಶ್ಲೋಕದ ಅಭಿಪ್ರಾಯ ಏನಂದರೆ; *ಅಸಂಖ್ಯೆ ಪಂಗ್ತಿಗಳ ಬೇರೀಜು, ತಕ್ಷಣವೇ ಮಾಡುವದು, ಪರಂತು, ಈ ಶ್ಲೋಕದಲ್ಲಿ ಧನ, ರಿಣ ಎಂಬೋದರ ಅರ್ಥವು ಯಾವದಕ್ಕೆ ಆಗುತ್ತದೆಂಬುವದು ತಿಳಿಯದ ಮೂಲಕ ತಮ್ಮ ಕಡಿಗೆ ಅಚ್ಚುಕೂಟದಲ್ಲಿ ಮುದ್ರಿಸಿ ನಮ್ಮ ಬಂಧುಗಳಾದ ಮಾಸ್ತರ ಜನರಿಗೆ ತಿಳುಹಿಸುವದರ ಸಲುವಾಗಿ ಕಳುಹಿಸಿರುತ್ತೇನೆ. ದಾರಾದರು ಉತ್ತರ ಕೊಟ್ಟರೆ, ಇದೇ ಪತ್ರಕದ್ವಾರದಿಂದಾ ತಿಳುಹಿಸುವಿರೆಂದು ಕೋರುತ್ತೇನೆ.

ತಾರೀಖು।೩।೬।೭೩ } ಸಹಿ ಜಗನ್ನಾಥ ಶ್ರೀಧರ ಗೋಖಲ
ಹೆಡ್ಡಮಾಸ್ತರ ಮೋಟೇ ಬಿನ್ನೂರ.

(ಪು॥ ೫ ಪಾಠ ೬೪ ನೇದರ ಮೊದನೇ ವಾಕ್ಯವು.)

“ಮೇವಾಡದ ರಾಯಮಲ್ಲರಾಜನ ಮಗನಾದ ಪೃಥ

---

*(ಬೇರೀಜು)(*ಅನೇಕ.)

ಾಜನ ತಂಗಿಯನ್ನು ಸಿರೋಹಿರಾಜನಿಗೆ ಕೊಟ್ಟತ್ತು" ಯಿ
ರ ವ್ಯಾಕರಣ ಮಾಡುವದು ಹ್ಯಾಗೆ–ಕರ್ತೃ, ಕರ್ಮ, ಪ್ರ
ಯೋಗ ಸಹವಾಗಿ ನಮ್ಮ ಸ್ಕೂಲಬಾಂಧವರಾದ ಟ್ರೇಂಡ
ಮಾಸ್ತರರು ಅಥವಾ ಬೇರೆ ವಿದ್ವಜ್ಜನರು ದಯ ಮಾಡಿ
ರೆದು ಸಂಶಯ ದೂರ ಮಾಡ್ಯಾರೆಂಬೊ ಆಶೆಯುಂಟು.

ಮೇಲೆ ಬರೆದ ನಾಲ್ಕು ಸಾಲುಗಳು ಶಾಲಾಪತ್ರಿಕದಲ್ಲಿ
ಅದರ ಕರ್ತೃ ಯವರು ಮೇಹರಬಾನಗಿಯಿಂದ ಅಚ್ಚು ಹಾ
ಕಿಸುವಿರೆಂದು ಕೋರುತ್ತೇನೆ.

ತಾ|| ೨೯ ಜಾನೇವರಿ ಸನ್ನ ೧೮೭೩ ಇ. — ರಾ|| ಅ|| ಸ್ಕೂ|| ಮಾ|| ಹಾನಗುಂದ.

ಮಹಾರಾಜ ರಾ|| ರಾ||ಕಂನಡಮಾಠಪತ್ರಿಕಕರ್ತರಿಗೆ
ವಿಂ ಐಯಸ್ಯಾ—ಮಹಾರಾಯರೇ ನಿಮ್ಮ ಕರದಲ್ಲಿ ಹುಟ್ಟ
ಸ್ಟ್ಟ ಜನವಾರಿ ತಿಂಗಳದ ಪತ್ರಿಕದಲ್ಲಿ ಮುದಗಮಾಸೂರ
ಮಾಸ್ತರರಾದ ಮಸಾಜಿ ಶೇಜೋ ಇವರು ಮಾಡಿದ ಪ್ರಶ್ನೆ
ಗಳನ್ನು ನೋಡಿ ಬಹು ಆನಂದವಾಗಿ ತಿಳಿದಷ್ಟಂದ ಉತ್ತರ
ರೆದು ತಮ್ಮ ಸುಂದರ ಪತ್ರಿಕದ ದ್ವಾರದಿಂದ ಸದರ ಮಾ
ಸ್ತರರಿಗೂ, ಮತ್ತು ರಸಿಕಜ್ಞಾನಿಗಳಿಗೂ ತಿಳಿಯಬೇಕೆಂಬ ಅ
ಪೇಕ್ಷದಿಂದ ಸ್ವಲ್ಪದರಲ್ಲಿಯೇ ತಿಳಿಯುವ ಮೇರಿಗೆ ಬರೆ
ಯುತ್ತದೆ. ದಯಮಾಡಿ ಪ್ರಸಿದ್ಧ ಮಾಡಬೇಕೆಂದು ವಿನ
ಯೋಕ್ತಿಗಳಿಂದ ಬೇಡಿಕೊಳ್ಳುತ್ತೇನೆ. ಪ್ರಶ್ನಕ್ಕೆ ಉತ್ತರ—
ಸೂರ್ಯಕಿರಣ ಯೋಗದಿಂದ ಸಮುದ್ರ, ನದಿ, ಕೆರಿಮುಂ
ತಾದ ಜಲಾಶಯಗಳೊಳಗಿನ ನೀರು ಹವೆಯಾಗಿ ಮೇಲ
ಕ್ಕೆ ಹೋಗಿ ಅಲ್ಲಿಯ ಶೀತಹವೆಯ ಯೋಗದಿಂದ ಘನ

ನೀರಾಗಿ ಪರ್ಜನ್ಯ ರೂಪದಿಂದ ಭೂಮಿಯ ಮೇಲೆ ಬೀಳು
ತ್ತದೆ. ಆದರೆ ಅದರಲ್ಲಿ ಸದರ ಮಾಸ್ತರರು ಪ್ರಶ್ನೆ ಮಾ
ಡಿದಂತೆ ಕಪ್ಪೆ, ಏಡಿ ಮೊದಲಾದ ಜಲಪ್ರಾಣಿಗಳಿರುವದು
ಸತ್ಯ. ಅಲ್ಪವಿಚಾರದಿಂದ ನೋಡಿ ಇವು ಎಲ್ಲಿಂದ ಬಂದವೆಂ
ಬದು ಬಹು ಕೌತುಕವಾಗಿ, ಕಾಣುತ್ತದೆ. ಪರಂತು ಇ
ನ್ನು ಸ್ವಲ್ಪ ದೀರ್ಘ ದೃಷ್ಟಿಯನ್ನಿಟ್ಟು ನೋಡಲಾಗಿ ದೇ
ವರ ಅಗಮ್ಯವಾದ ಚಮತ್ಕಾರವು ತಿಳಿಯಬರುತ್ತದೆ. ಅ
ದು ಎಂತೆಂದಡೆ ಯಾವತ್ತು ಅಂದರೆ ನಾವು ಕುಡಿಯುವ ಅ
ಡಿಗೆ ಮಾಡುವ ನೀರಿನಲ್ಲಿ ಸಹಾ ಅನೇಕ ಜೀವರಾಶಿಗಳಿದ್ದು ಅ
ವು ನಮ್ಮ ಕಣ್ಣಿಗೆ ಕಾಣಿಸದೆ ಸೂಕ್ಷ್ಮದರ್ಶಕ ಎಂತ್ರದಿಂದ
ನೋಡಲಾಗಿ ಅನೇಕ ಪ್ರಾಣಿಗಳುಂಟೆಂಬದು ಸ್ಪಷ್ಟವಾಗಿ
ಕಾಣುತ್ತದೆ. ಆದರೆ ಮೇಲೆ ಹೇಳಿದಪ್ರಕಾರ ಸೂರ್ಯ
ಕಿರಣಯೋಗದಿಂದ ಹೋಗುವ ನೀರಿನಲ್ಲಿ ಬಹು ಚಿಕ್ಕ ಚಿ
ಕ್ಕ ಪ್ರಾಣಿಗಳಿದ್ದು ಅವು ಸಹ ನೀರಿನಕೂಡ ಮೇಲಕ್ಕೆ ಹೋ
ದ ಅಲ್ಲಿ ಸೀತ ಹವೆಯಲ್ಲಿ ನಿಲ್ಲುವ ನೀರಿನಲ್ಲಿ ದೊಡ್ಡವಾ
ಗಿ ಮಳೆಸುರಿಯುವಾಗ ಕೆಳಗೆ ಬೀಳುತ್ತವೆಂಬುದಾಗಲಿ ಅಥ
ವಾ ಮೇಲೆ ಹೋಗಿ ನಿಲ್ಲುವ ನೀರಿನಲ್ಲಿ ಅಲ್ಲೇ ಜೀವರಾ
ಶಿಗಳು ಉದ್ಭವಿಸಿ ಕೆಳಗೆ ಬೀಳುತ್ತವೆಂಬುದಾಗಲೀ ಸತ್ಯವಾ
ಗಿ ತೋರುತ್ತದೆ. ಹೊರ್ತು ಹಿಂದು ಶಾಸ್ತ್ರದಪ್ರಕಾರ ಮೋ
ಡ ಬಂದು ಸಮುದ್ರದಲ್ಲಿಯೇ ನೀರು ಪ್ರಾಣಿಸಹಿತವಾಗಿ
ಪೈಯುತ್ತದೆಂಬುವದು ಅಸತ್ಯವಾದ ಮಾತು ಎಂದು ತಿಳಿ
ಯುತ್ತದೆ. ಇದರಲ್ಲಿ ಯಾರಿಗಾದರೂ ಸಂಶಯಬಂದರೆ,
ಅವರು ದಯಮಾಡಿ ಇದೇ ಪತ್ರಕದ ದ್ವಾರದಿಂದ ಪ್ರಶ್ನರೂ
ಪದಿಂದ ಕೇಳಿದರೆ, ಅವರಿಗೆ, ನಾನು ಇನ್ನೂ ತಿಳಿದಷ್ಟು

ಸ್ಪಷ್ಟ ಕರ್ಣರೀತಿಯಿಂದ ಉತ್ತರಕೊಡುವೆನು. ಪತ್ರದ ವಿಸ್ತಾರವು ಬಹಳವಾಯಿತು ಕ್ಷಮಾ ಇರಬೇಕು.

ತಾ॥೨೪॥೧। ೭೩ ಇಸ್ವಿ } ಮಲ್ಲಪ್ಪಾ ಕೆಂಚಪ್ಪಾ ಸವದತ್ತಿ
ಮುಕ್ಕಾಮ ಹುಣಶೀಕಟ್ಟಿ } ಕರ ಪಂತೋಜಿ ಹುಣಶಿಕಟ್ಟಿ

ಮಹಾರಾಜ ರಾ॥ರಾ॥ ರಾವಸಾಹೇಬ ಕನ್ನಡ ಶಾಲಾ
ಪತ್ರಕರ್ತರಿಗೆ—

ವೆಂಕಟರಮಣ ಸುಬ್ರಾವ ಎಣ್ಣೆಮಡಿಕತ ಇವನ ವಿನಯಪೂರ್ವಕವಾದ ವಿನಂತಿ ಏನಂದರೆ—ತಮ್ಮ ಮಠಪತ್ರಿಕೆಯು ಎಲ್ಲಾ ಮಾಸ್ತರಜನರಿಗೂ ಆಶ್ರಯೇಚ್ಛತರಿಗೂ ಸ್ಥಾನದೊರಿಯಲಿಕ್ಕೆ ಕಾರಣ ಭೂತವಾಗಿರುವದರಿಂದ ನನಗೂ ಒಂದು ಸ್ಥಳ ಸಿಕ್ಕೀತೆಂದು ಈ ಕೆಳಗೆ ವಿವರಿಸುವ ಎರಡು ಹೊಸ ಕವಿತ್ವಗಳನ್ನು ಇದರ ಲಗತ್ತವಾಗಿ ಕಳುಹಿಸಿದ್ಧೇನೆ.

ಇವು ಸುಂದರವಾದ ತಮ್ಮ ಪತ್ರಿಕೆಯಲ್ಲಿ ಛಾಪಿಸುವಿರಿ ಎಂದು ನಂಬಿದ್ಧೇನೆ.

ವಿನಾಯಕಸ್ತುತಿ॥ರಾಗಕಲ್ಯಾಣಿ ಆದಿತಾಳಾ॥(ಯಾರಿಗುಸುಲಿ। ಸಾರತತ್ವವಿ। ಚಾರಭವದೂರಾ॥ ಎಂಬ ಪದದಂತೆ ಯಾಗಿರುತ್ತದೆ).

ಏಕದಂತವಿ। ವೇಕಪಂತಪ। ನಾಕಿಜಗಣಕಾಂತಾ॥ಪಲ್ಲಾ॥ಆಖುವರರಥಗು। ಣಾಕರನಾಥವಿ। ಶೋಕೋಪಲಪವಿ। ನೀಕೇತಾಸ್ಫುರ।ಜೇ॥ ಅನುಪಲ್ಲಾ॥ ಮಾರಸಂನಿಭವಸರ। ಸೀರುಹಾಂಬಿಕಸುರ। ವಾರವಂದಿತಚರ। ಣಾರವಿಂದವ್ವಯ॥ ವಾರಣಮುಖಧಾರಿ। ಭವಸಂ। ತಾರಣದುರಿತಾರಿ। ಸುಕ್ವತ। ಕಾರಣದೈತ್ಯವಿ। ದಾರಣಕಾಪವಿ। ಪೂರಣಭಕ್ತ್ರೋ। ದ್ಧಾರಣಸುಖದಸ।

ದೆ॥೧॥ ಕರಚತುಷ್ಟಯಾವರ। ಹರಿವೇಷ್ಟಿತೋದರ। ಪರಶು
ತ್ರಿಶೂಲಧರ। ಪರಮಮೋದಕರ॥ ಗಿರಿವರಜಾತ್ಮಭವಾ।ಸಂ
ನೂ। ಪುರಪದಕೇಚರವಾ। ರಸಕೋ। ತ್ಕರಪರಿಪಾಲಪಿ। ವರ
ಗುಣಲೋಲಕು। ನರಹ್ವಚ್ಛೊಲಸು। ಕರುಣವಿಶಾಲಮು। ಹೈ
॥೨॥ಮುಘನಾಗಕುಸಯುಲು। ನುತಿಮಾತ್ರದಿಂಸುರ। ಪತಿಗೊಲೆ
ದಮರಸಂ।ಸುತಶೈಲನಿಭಕನು॥ ಅತಿಚಿತ್ರಗಳೊಂದಗೆ। ಸಂಸ್ವ
ಜೆ। ಸುತಶ್ವಷ್ಟಿಯೊಳಜಗೆ। ಕರುಣಾ। ಯುತದಿಂವಿಘ್ನ। ಪ್ರ
ತತಿಯನುಳಸದ। ಸತತಾನತರ। ಕ್ಷಿತವಿಖ್ಯಾತಪ್ರ। ನೈ॥೩॥
ಆದಿಪ್ರಾರ್ಥನದಸು। ಮೋದಂಗಳಿಂದನಿ। ಜಾಧೀನರೋಮಪಿ।
ನೋದಪೊಳಲ್ಲನೈ॥ ಪಾದಾನತರಲ್ಲಿ। ಬಾಯ್ಗನಿ। ದಾದದ
ಮೆಲುವ್ರತಲಿ। ಆಯ್ತು। ಭೂಧರದೊಲುಲಂ। ಬೋದರವೆಂ
ದುಮು। ಹೂವರದಿಂಭು। ಕ್ರೋಧಧನಲಿವವ॥ ನೈ॥೪॥ ಪರಿಣ
ತೇಷ್ಟಗಳನು। ಕರುಣದಿಂಸಲಿಸುತ। ಪರಮಪಾವನಮಲಿ।
ವರಗ್ರಾಮನಿಲಯನೆ॥ ಗುರುಕೇಳೋಶಿಯಲಿ। ನೆಲಸಹ। ವ
ರಶಾಂಕಾಂಬೆಯಲಿ। ಸಂಭವಿ। ಸುರುತರದಿಂಭು। ಕ್ತರಪರಿಪಾಲಿ
ಪ। ಶರಣಾಗತಸ। ತ್ಸರಕುಜನಮೊಜಯು। ದೇಕ॥೫॥

ಶಾರದಾಸ್ತುತಿ॥ (ಮೋಹನರಸಿಯಾಂ। ಆಯ್ಬುನಿಯಾಮೆ। ಘೂಲರಹಿಸಬಕಲೀಕಲೀರೆ॥ಮೊ॥ಪಲ್ಲ॥ ಎಂಬ ಹಿಂದುಸ್ಥಾನಿ ಪದದಂತೆಯಾಗಿರುತ್ತದೆ).

॥ಶ್ರೀಜಗದಂಬೇ। ಭಕ್ತಕುಟುಂಬೇ।ಕೇಜಜರಾಣಿಸು। ಗುಣೇ
ಸುಚರಣೇ ॥ಶ್ರೀ॥ಪಲ್ಲ॥ ಮೋಹನಗಾತ್ರವಿ। ಮಾಹೆಸುನೇ
ತ್ರೀಮು। ಹೂಹಿಮಸಂಕರ। ಮುಖವಿಧಸಖೀ॥ಶ್ರೀ॥೧॥
ಗಿರಿರ್ಧಿದ್ವೈಪತಿ। ಪೂರ್ನತ್ವಪಾಯುತಿ। ಆನಿರ್ನನಗೆಣಿಜಕ।ಕಲೇ
ವಿಶಾಲೇ॥ಶ್ರೀ॥೨॥

ರಾವಣಭ್ರಾತೃವಸು। ಭಾವವಕುಂದಿಸ। ಅವರಕೇಡಿಸದ। ದಯಾ
ಭಗಾವಿದೇ॥ಶ್ರೀ॥೨॥
ಭಾರತಿನಿಜಪದ। ಸಾರಸನುತಪರ। ವಾರಸುರಕ್ಷಿತೆ। ಧ್ವರೆ
ಸಾಗತಿನೀ॥ಶ್ರೀ॥೪॥
ಶೃಂಗಪುರೇಶಿಸು। ಮಂಗಲಶೀಲೆಸ। ದಾಂನಿಶಾಂತಿತಾ। ಪ್ರ
ಯೋದಯೋಶೇ॥ಶ್ರೀ॥೫॥

ತಾರೀಖು ೨೦ನೇ ದಶಂಬರ ೧೮೭೭ ನೇ ಇಸ್ವಿ.

Venketrumen. Soobrao.
ಸ್ಕೂಲ್ ಮಾಸ್ತರ ಹೆಗಡೆ ತಾಲೂಕ
ಕುಮಟಾ ಜಿಲ್ಲಾ ಕಾನಡಾ.

ಇತ್ತಲಾಗಿ ಮಾಸ್ತರ ಜನರು ಬಹಳ ಪತ್ರಗಳನ್ನು ಬರೆಯುವದು ನೋಡಿ ನಾವು ಸಂತೋಷಪಟ್ಟಾಗ್ಯೂ, ಯೆಷ್ಟೋ ಪತ್ರಗಳು ಛಾಪಿಸಕೂಡದಷ್ಟು ದೊಡ್ಡವಿರುತ್ತವೆಂದು ನೋಡಿ ಖೇದಪಡುತ್ತೇವೆ. ತಮ್ಮ ಶ್ರಮವು ವ್ಯರ್ಥವಾಗ ಬಾರದೆಂದು ಅಪೇಕ್ಷಿಸುವವರು ಉಪಯುಕ್ತ ವಿಷಯಗಳನ್ನು ಕುರಿತು ಸ್ವಲ್ಪದರೊಳಗೆ ಬರೆಯ ಬೇಕೆಂದು ನಾವು ಇನ್ನೊಮ್ಮೆ ಸೂಚಿಸುತ್ತೇವೆ.

ಭೋಜ ಸ್ಕೂಲಮಾಸ್ತರರೂ, ಬದನಗೋಡ ಸ್ಕೂಲಮಾಸ್ತರರೂ ಕೇಳಿದ ಉತ್ತರಗಳ ಬಗ್ಗೆ ೧೦ ಪತ್ರಗಳು ಬಂದಿರುತ್ತವೆ. ಅವುಗಳಲ್ಲಿ ಧೋಂಡೋ ನರಸಿಂಹನ ಪತ್ರವು ಛಾಪಿಸಲ್ಪಟ್ಟದೆ.

ಕುದುರೆಯ ಲೆಕ್ಕದ ಪತ್ರಗಳು ೨೨ ಬಂದಿರುತ್ತವೆ. ಅವುಗಳ ತಾತ್ಪರ್ಯವು, ಯೆರಡು (ಒಂದೇ ಕರ್ಣರೇಷೆ

ಯು) ಮೂಲೆಗಳಲ್ಲಿ ಆರಾರು, ಉಳಿದ ಯೆರಡು ಮೂಲೆ ಗಳಲ್ಲಿ ಐವ್ವೈದು, ನಡುವೆ ಒಂದೊಂದು, ಕುದುರೆಗಳನ್ನು ಕಟ್ಟ ಬೇಕೆಂದುಂಟು.

ಛೀ. ವಿ. ಹೊನವಾಡಕರ— ಇವರು ಮುಚ್ಚಿದ ಹಗೆಗಳೊಳಗೂ ಮೆತ್ತಿಗೆ ಹಾಕಿದ ಗಳಗೆಗಳೊಳಗೂ ಧಾನ್ಯದೊಳಗೆ ಕೇರಿಕೊಂಡ ಹುಳಗಳಿಗೆ ಹವೆ ಯೆಲ್ಲಿಂದ ಸಿಗುತ್ತದೆಂದು ಕೇಳುತ್ತಾರೆ. ಇವೇ ಮಾಸ್ತರರು ಕೆಳಗಿನಶ್ಲೋಕವನ್ನು ಕಳುಹಿರುತ್ತಾರೆ.

ಹದಿನಾರು ಮನೆಯೊಳಗೆ ಇದ್ದೊಬ್ಬ ಶೆಟ್ಟಿ। ಅಧಿಕದಿಂದಾರಾರು ಕುದುರೆಯನು ಕಟ್ಟಿ। ಆ ಬೀದಿ ಈ ಬೀದಿ ಸಾವಿರದ ಶೆಟ್ಟಿ। ಇದು ಹೇಳದ ಅಣ್ಣಗಳು ಲೆಕ್ಕದಲಿ ಘಟ್ಟಿ

ಸಿ. ಜ. ಮಾಸ್ತರ ಬೇಟಗೇರಿ— ಶಾಲೆಯು ಹನುಮಂತ ದೇವರ ಗುಡಿಯು ಧರ್ಮಶಾಲೆಯೊಳಗಿದ್ದು, ಹುಡುಗರಿಗೆ ಚಳಿಗಾಳಿಯ ಉಪದ್ರವವು ಬಹಳ ವಾಗುವದು ನೋಡಿ, ಕಮಾವಿಸದಾರರಾದ ವೆಂಕಾಜೀ ಭಿಮರಾವ ದೇಶಪಾಂಡೆ ಯೆಂಬವರೂ, ಬೇರೆ ಕೆಲಜನರೂ ಕೂಡಿ ೨೭ ರೂಪಾಯಿ ವೆಚ್ಚಮಾಡಿ ಶಾಲೆಯನ್ನು ಸುಧಾರಿಸಿರುತ್ತಾರೆ.

ಟಿ. ಜ. ಮಾಸ್ತರ ಧವಳಗಿ— ಮಡಿವಾಳ ಗೌಡರೂ, ಕುಲಕರ್ಣಿ ಭಿಮರಾಯರೂ ಸರಕಾರೀ ಶಾಲೆಗೆ ಬಹಳ ಸಹಾಯ ಮಾಡುತ್ತಾರೆ.

ಅ. ಜೀ. ಗರ್ಲ್‌ಸ್ಕೂಲ ಮಾಸ್ತರ ಮುದ್ದೇಬಿಹಾಳ- ಮಿ. ಅನಂದರಾವ ಭಾಸ್ಕರಜೀ ಡಿ. ಡಿ. ಇವರು ಬಹು ಶ್ರಮಪಟ್ಟು ಜನರಿಗೆ ತಿಳಿಯಹೇಳಿ ಸದರಿ ಗ್ರಾಮದಲ್ಲಿಯೂ ಶಾಳಕೋಜಿಯಲ್ಲಿಯೂ ಹೆಣ್ಣು ಹುಡುಗಿಯರ ಶಾಲೆಗಳ

ನ್ನು ಸ್ಥಾಪಿಸಿದ್ದಲ್ಲದೆ ಇನ್ನು ಕೆಲವು ಸ್ಥಾಪಿಸುವವರಿರು ತ್ತಾರೆ. ರಾ. ಸಾ. ಗೋಪಾಳ ಗಣೇಶ ಮಾಮಲೇದಾರರಾದರೂ ತಾವು ಸ್ವತಃ ಹುಡುಗಿಯರಿಗೆ ಕಲಿಸಿ, ಇನಾಮುಗಳನ್ನು ಕೊಟ್ಟು, ತಾಯಿತಂದೆಗಳಿಗೆ ತಿಳಿಯಹೇಳಿ, ಬಹು ಸಹಾಯ ಮಾಡುತ್ತಾರೆ.

ರಾ. ರಾ. ಶಿಕ್ಷಕ ಹಬ್ಬಳ್ಳಿ, ರಾ. ದೇ. ಶಿಕ್ಷಕ ಬಾಗೋಡಿ— ನೀವು ಕಳುಹಿದ ಲೆಕ್ಕಗಳು ಹಳೆಯವು, ನಿಃಸಾರವು ವುಂಟು.

ಜ. ಶ್ರೀ. ಮಾಸ್ತರ ಪೋಬೇಬಿನ್ನೂರ— ನಿಮ್ಮ ಯೆರಡು ಪತ್ರಗಳಿಗೆ ಸ್ಥಳದೊರೆಯುವದು. ಉಳಿದ ಯೆರಡನ್ನು ಛಾಪಿಸಕೂಡದು. ಶಾಲಾಪತ್ರಕಕ್ಕೆ ಕಳುಹುವ ಪತ್ರಗಳ ಕ ಚನ್ನಾಗಿ ವಿಚಾರ ಮಾಡಿ ಕಳುಹಿದರೆ ವೊಳ್ಳೇದು.

ಧ ತಿ. ರಾ. ಮಾಸ್ತರ ಮಂಜಗುಣಿ— ನಿಮ್ಮ ದೊಡ್ಡ ಪತ್ರವನ್ನು ಛಾಪಿಸುವದರಿಂದ ಲಭ್ಯಾಂಶವೇನು ತೋರುವದಿಲ್ಲ.

ಬ. ವೀ. ಮಾಸ್ತರ ಚಿಕ್ಕಬಾಸೂರು— ಹಾಯಸ್ಕೂಲಿನ ವರ್ಣನೆಯೊಳಗಿನ ದೋಷಗಳನ್ನು ಕುರಿತು ಆ ವರ್ಣನೆಯನ್ನು ರಚಿಸಿದವರಿಗೆ ಬರೆಯಿರಿ.

—◆—

ಮಹಾರಾಜ ರಾ|| ರಾ|| ಬೆಳಗಾವಿ ಕನ್ನಡಮಠಪತ್ರ
ಕರ್ತರ ಸನ್ನಿಧಿಗೆ—

ಕೆಳಗೆ ಸಹಿ ಮಾಡುವವನ ಬಿನ್ನಹ. ನಾನು ಬರೆವ ಕೂವತ್ತು ಪಂಕ್ತಿಗಳಿಗೆ, ಸ್ಥಳ ದೊರೆಯಬೇಕೆಂದು ಬೇಡ್ತೇನೆ.

ಮೆ|| ಹಾಡನ್‌ಸಾಹೇಬರವರು ಮಾಡಿದ ಬೀಜಗಣಿತದ-

ಳಗಿನ ಏಕವರ್ಣ ಹಾಗೂ ವರ್ಗಸಮೀಕರಣಗಳು ಪ್ರಶ್ನೆ ಸಹಿತವಾಗಿ ರೀತಿಯಿಂದ ಬಿಡಿಶಿ ಕನ್ನಡಿಶಿದ್ಧೇನೆ. ಅದನ್ನು ಮುದ್ರಿಸುವದಕ್ಕೆ ಪ್ರಾರಂಭವಾಗದೆ. ಆದರೆ ನಮ್ಮ್ರ ಬಂಧುಗಳಾದ ವಿದ್ವಾನ ಮಾಸ್ತರಜನರು ನನಗೆ ಸಹಾಯ್ಯ ಮಾಡಿದರೆ ಬಹಳ ಉಪಯೋಗಿಸುವದು. ಮುಂಚೆ ಹಣ ಕೊಟ್ಟವರಿಗೆ ಎಂಟು ಆಣೆದಂತೆ ದರವಂದ ಪ್ರತಿ ಶಿಗುವದು. ಹಿಂದಾಗಿ ಹನ್ನೆರಡು ಆಣೆ ಬೀಳುವದು. ತಮಗೆ ಎಷ್ಟು ಪ್ರತಿಗಳು ಬೇಕೆಂಬುದು ನನಗೆ ಪತ್ರದ್ವಾರದಿಂದ ತಿಳುಹಿಸಬೇಕು. ಇಂತಿ ಬಿನ್ನಹ.

ಸಿವಾಜಿ ಅಪ್ಪಾಜಿ ಸಿರಸಂಗಿಕರ ಸ್ಕೂ
ಲಮಾಸ್ತರ ಭೋಜ ತಾ॥ಚಿಕ್ಕೋಡಿ..

ಶಾಲಾಪತ್ರ ಕವು.

---000---

ಪುಸ್ತಕ ೯] [ಸಂಚಿಕೆ ೨.

ಬೆಳಗಾವಿ, ಮಾಹೆ ಮೇ ೧೮೭೨.

SELF HELP.

ತನಗೆ ತಾನೇ ನೆರವಾಗುವದು.

ಹೊಸ ವಸ್ತುಗಳನ್ನುಂಟುಮಾಡಿದವರಿಂದಲೇ ಈ ಲೋಕದೊಳಗಿನ ದೊಡ್ಡ ದೊಡ್ಡ ಕಾರಖಾನೆಗಳು ಉಂಟಾಗಿವೆ. ಮನುಷ್ಯರಿಗೆ ಪ್ರತಿ ದಿವಸದಲ್ಲಿ ಅವಶ್ಯಕವಾಗಿರುವ ಅನೇಕ ಮುಖ್ಯ ಒಡಿವೆಗಳೂ, ಸುಖಕಾರಕವಾದ ವಸ್ತ್ರಪ್ರಾವರಣ ಮುಂತಾದವುಗಳೂ, ಉಪಭೋಗದ ವಸ್ತುಗಳೂ, ಅವರಿಂದಲೇ ಉಂಟಾದವು. ಅವರ ಬುದ್ಧಿಯಿಂದಲೂ, ಉದ್ಯೋಗದಿಂದಲೂ, ಮನುಷ್ಯನ ನಿತ್ಯ ಕ್ರಮವು ಹೆಚ್ಚು ಸುಖಕಾರಕವೂ, ಹೆಚ್ಚು ಭೋಗಾರ್ಹವೂ ಆಗಿರುತ್ತದೆ. ನಮ್ಮ ಅನ್ನವೂ, ನಮ್ಮ ವಸ್ತ್ರಗಳೂ, ನಮ್ಮ ಮನೆಯೊಳಗಿನ ಸಾಮಾನುಗಳೂ, ಚಳಿಗಾಳಿಗಳನ್ನು ಹೊರಗೆ ಬಿಟ್ಟು ಬೆಳಕನ್ನು ಮಾತ್ರ ನಮ್ಮ ಮನೆಯೊಳಗೆ ತರುವದಕ್ಕೋಸ್ಕರವಾಗಿ ನಾವು ಕಿಡಿಕೆಗಳಿಗೆ ಹಚ್ಚುವ ಕನ್ನಡಿಯೂ, ನಮ್ಮ ಪಟ್ಟಣಗಳ ಬೀದಿಗಳಲ್ಲಿ ಪ್ರಕಾಶವನ್ನುಂಟುಮಾಡುವಂಥ ಧೂಮ್ರವೂ, * ಭೂಮಿಯ ಮೇಲಿಂದಲೂ, ನೀರಿನ ಮೇ

* ಇಂಗ್ಲಂಡದ ಪಟ್ಟಣ ಬೀದಿಗಳಲ್ಲಿ ರಾತ್ರಿಯೊಳಗೆ ಮುಂಬಯಿಯಲ್ಲಿ ಹಚ್ಚುವಂಥ ಹೊಗೆ ದೀಪಗಳನ್ನು ಹಚ್ಚುವ ವಾಡಿಕೆಯುಂಟು.

ಲಿಂದಲೂ ನಮ್ಮ ಪ್ರವಾಸಕ್ಕೆ ಸಾಧನವಾದ ವಾಹನಗಳೂ, ನಮಗೆ ಬೇಕಾದ ಒಡವೆಗಳನ್ನು ಹುಡುಕುವದಕ್ಕೋಸ್ಕರವಾಗಿ ಉಪಯೋಗಿಸಲ್ಪಡುವ ಶಸ್ತ್ರಗಳೂ, ಇವೆಲ್ಲ ಬಹು ಜನರ ಶ್ರಮದಿಂದಲೂ, ಬುದ್ಧಿ ಕೌಶಲ್ಯದಿಂದಲೂ ಉಂಟಾಗಿವೆ. ಇಂಥಾ ಹೊಸಶೋಧಗಳಿಂದಲೇ ಸಾಧಾರಣವಾಗಿ ಸರ್ವ ಮನುಷ್ಯ ಜಾತಿಯು ಹೆಚ್ಚು ಸುಖಿಯಾಗಿದೆ; ಇವುಗಳಿಂದ ಒಬ್ಬೊಬ್ಬ ಮನುಷ್ಯನಿಗೂ, ಬಹು ಜನರ ಸಮುದಾಯಗಳಿಗೂ ಉಂಟಾಗುವ ಲಾಭಗಳು ದಿನ ದಿನಕ್ಕೆ ಹೆಚ್ಚಾಗುತ್ತನಡೆದವೆ.

ಯಂತ್ರಗಳ ಅರಸನೆಂದೆನಿಸಿಕೊಂಬ ಉಗಿ ಯಂತ್ರದ ಉತ್ಪತ್ತಿಯು ಹಾಗೆ ನೋಡಿದರೆ ನಮ್ಮ ಸ್ವಂತ ಕಾಲದಲ್ಲಿಯೇ ಆಯಿತೆಂದೆನ್ನಬಹುದಾದಾಗ್ಯೂ, ಅದರ ಕಲ್ಪನೆಯು ನೂರಾರು ವರುಷಗಳ ಹಿಂದೆ ಉಂಟಾಯಿತು. ಬೇರೆ ಶೋಧಗಳಂತೆಯೂ, ಯುಕ್ತಿಗಳಂತೆಯೂ ಇದಾದರೂ ಕ್ರಮ ಕ್ರಮವಾಗಿ ರಚಿಸಲ್ಪಟ್ಟಿತು. ಇದು ಬಹು ಕಾಲದವರೆಗೆ ಕೇವಲ ನಿರುಪಯುಕ್ತವಾಗಿ ತೋರಿದಾಗ್ಯೂ, ಒಬ್ಬ ಮನುಷ್ಯನು ಇದನ್ನು ಕುರಿತು ತಾನು ಮಾಡಿದ ಶ್ರಮದ ಪರಿಣಾಮವನ್ನು ತನ್ನ ಮುಂದಿನ ಸಂತತಿಯವರಿಗೆ ತಿಳಿಸಲಾಗಿ, ಅವರು ಇದನ್ನು ಇನ್ನೊಂದು ಹೆಜ್ಜೆ ಮುಂದಕ್ಕೆ ಒಯಿದು ತಮ್ಮ ಮುಂದಿನ ಸಂತತಿಯವರ ವಶದಲ್ಲಿ ಕೊಟ್ಟುಬಿಟ್ಟರು. ಈ ಮೇರಿಗೆ ಇದರ ಶೋಧವು ಈಗಿನಂತೆ ಪೂರ್ಣತ್ವಕ್ಕೆ ಬರಬೇಕಾದರೆ ಯೆಷ್ಟೋ ಸಂತತಿಗಳು ಅಳಿದುಹೋದವು. ಅಲೆಕ್ಸಾಂಡ್ರಿಯ ಪಟ್ಟಣದ ನಿವಾಸಿಯಾದ ಹೀರೋಯೆಂಬವನಿಂದ ಉಂಟಾದ ಕಲ್ಪನೆಯು ಯಾವಕಾಲದಲ್ಲಿ ಯಾ

ತೀರ ಮರೆಯಾಲ್ಪಡಲಿಲ್ಲ; ಇಜಿಪ್ತದೇಶದೊಳಗಿನ * ಮಮೀ ಯೆಂಬ ಹೆಣಗಳ ಕೈಯೊಳಗಿನ ಗೋಧಿಕಾಳನಂತೆ ಇದ್ದು ನೂತನ ಶಾಸ್ತ್ರವೆಂಬ ಬೆಳಕಿನಲ್ಲಿ ಬರಲಾಗಿ, ಇದಕ್ಕೆ ಪುನಃ ಅಂಕುರವುಂಟಾಗಿ ವೇಗದಿಂದ ಫಲಿಸಿತು. ಆದರೂ ಇದರ ಸಿದ್ಧತೆಯು ಮನುಷ್ಯರ ಮನಸ್ಸಿನೊಳಗಿಂದ ಹೊರಬಿದ್ದು, ವ್ಯವಹಾರ ಚತುರರಾದ ಯಂತ್ರಜ್ಞರು ಕೈಕೊಳ್ಳುವವರೆಗೂ ಈ ಯಂತ್ರವು ಯೇನು ಪ್ರಯೋಜನದ್ದಾಗಿದ್ದಿಲ್ಲ. ಈಗ ಕೌತುಕವಾದ ಈ ಯಂತ್ರವನ್ನು ನೋಡಿದ ಕ್ಷಣವೇ ಇದನ್ನು ಕುರಿತು ಯಾರು ಯಾರು ಹ್ಯಾಗೆ ಹ್ಯಾಗೆ ತಾಳ್ಮೆಯಿಂದಲೂ, ಕಷ್ಟದಿಂದಲೂ ಶೋಧ ನಡಿಸಿದರು, ಯಾರಿಗೆ ಹ್ಯಾಗೆ ವಿಘ್ನಗಳುಂಟಾದವು, ಅವು ಯಾವ ವಿಧವಾದ ಶೌರ್ಯದ ಉದ್ಯೋಗದಿಂದ ಪರಿಹರಿಸಲ್ಪಟ್ಟವು, ಯೆಂಬ ಮೊದಲಾದ ಸಂಗತಿಗಳ ಹೊಗಳತಕ್ಕ ಕಥೆಗಳು ಯೆಷ್ಟೆಷ್ಟು ನೆನಪಾಗುತ್ತವೆ! ಸರಿ, ತನಗೆ ತಾನೇ ಸಹಾಯ ಮಾಡಿಕೊಳ್ಳುವ ಶಕ್ತಿಯು ಮನುಷ್ಯನಲ್ಲಿ ಯೆಷ್ಟು ಮಟ್ಟಿಗೆ ಉಂಟೆಂಬದರ ಸ್ಮಾರಕ ಕೃತ್ಯವೇ ಇದೊಂದಾಗಿರುತ್ತದೆ. ಈ ಯಂತ್ರದ ಶೋಧದಲ್ಲಿ ಆಯುಷ್ಯ ಹಾಕಿದವರು ಯಾರು ಯಾರೆಂದು ವಿಚಾರಿಸಿ ನೋಡಲಾಗಿ, ಪಳಸಂಬಂಧದ * ಇಂಜಿನೀಯರನಾದ ಸೇವರೀಯೆಂಬವನು; ಡಾರ್ಟಮಥ್ ಯೆಂಬಲ್ಲಿಯ ಕಮ್ಮಾರನಾದ ನ್ಯೂಕ

---

* ಅಲ್ಲಿ ಸಾವಿರಾರು ವರ್ಷಗಳ ಹಿಂದೆ ಕೆಡದಂತೆ ಚಾತುರ್ಯದಿಂದ ಇಟ್ಟಿರುವ ಈ ಹೆಣಗಳು ಇನ್ನು ಹಾಗೇ ಇರುತ್ತವೆ. ಆ ಕಾಲದಲ್ಲಿ ಇವುಗಳ ಕೈಯೊಳಗೆ ಗೋಧಿಯ ಕಾಳನ್ನು ಮುಚ್ಚಿಡುವ ಸಂಪ್ರದಾಯವಿತ್ತು.

* ಲೈನ ಮಾರ್ಗಗಳನ್ನು, ಇಮಾರತುಗಳನ್ನು ಕಟ್ಟಿಸುವ ಕೆಲಸದವನು.

ಮೆನ್ನೆಂಬವನು; ಕಸ್ಸುರಿಗಳ ಕೆಲಸ ಮಾಡುವವನಾದ ಕಾಲೇ
ಯೆಂಬವನು; ಯಂತ್ರ ನಡಿಸುವ ಹುಡುಗನಾದ ಪಾಟರನೆಂ
ಬವನು; ಸ್ಮೀತನ್ನನೆಂಬ ಇನ್ನೊಬ್ಬ ಇಂಜಿನೀಯರನು; ಇ
ವರೆಲ್ಲರು ನೆನಪಾಗುತ್ತಾರೆ; ಆದರೆ ಅತಿ ಕಷ್ಟ ಪ್ರಯಾಸ
ಪಟ್ಟವನೂ, ಬಹು ಸಮಾಧಾನ ವೃತ್ತಿಯವನೂ, ಯೆಂದಿಗೂ
ದಣಿಯದವನೂ ಆದ ಜೇಮ್ಸ್ ವಾಟ್ಟನೆಂಬ ಯಾಂತ್ರೀಕ ಶ
ಸ್ತ್ರಗಳನ್ನು ಮಾಡುವ ಕೆಲಸದವನು ಈ ಯೆಲ್ಲರಿಗಿಂತ ಹೆ
ಚ್ಚಿನವನು.

ಅತಿಶಯ ಉದ್ಯೋಗಿಗಳೆಂದೆನಿಸಿಕೊಳ್ಳುವವರಲ್ಲಿ ವಾ
ಟ್ಟನನ್ನು ಯೆಣಿಸತಕ್ಕದ್ದು. ಯೆಲ್ಲರ ಅನುಭವದಿಂದ ತಿ
ಳಿದಂಥ ಸಂಗತಿಯೇ ಇವನ ವೃತ್ತಾಂತದಿಂದ ಸಿದ್ಧವಾಗು
ತ್ತದೆ. ಅದು ಯೇನಂದರೆ, ಅತಿಶಯವಾಗಿ ಶಾರೀರ
ಮಾನಸಿಕ ಸಾಮರ್ಥ್ಯವೂ, ಯೋಗ್ಯತೆಯೂ ಉಳ್ಳವನೇ
ಅತಿಶಯ ದೊಡ್ಡ ಕೃತ್ಯಗಳನ್ನು ಮಾಡುವವನಲ್ಲ; ಆದ
ಯಾವಾತನು ತನ್ನ ಸಾಮರ್ಥ್ಯವನ್ನು ಅತಿಶಯವಾದ ಉ
ದ್ಯೋಗದಿಂದಲೂ, ಬಹು ಜಾಗ್ರತೆಯಾದ ಚಾತುರ್ಯದಿಂ
ಲೂ ಪ್ರಯೋಗಿಸುತ್ತಾನೋ, ಅವನು; ಶ್ರಮ, ಅಭ್ಯಾಸ
ಅನುಭವಗಳಿಂದ ಕೌಶಲ್ಯವನ್ನು ಪಡೆದು ಕೊಂಡವನೇ ಇ
ಥಾ ಕೆಲಸಗಳನ್ನು ಮಾಡತಕ್ಕವನು. ವಾಟ್ಟನ ಕಾಲ
ಲ್ಲಿ ಅವನಿಗಿಂತ ಬಹಳ ಹೆಚ್ಚು ಬಲ್ಲವರು ಬಹು ಜನರಿದ್ದ
ರು; ಆದರೆ ತನಗೆ ತಿಳಿದದ್ದನ್ನೆಲ್ಲ ವ್ಯವಹಾರಕ್ಕೆ ಪ್ರಯೋ
ಜನವಾಗುವಂತೆ ಮಾಡಿಕೊಳ್ಳುವದಕ್ಕೋಸ್ಕರವಾಗಿ ಇವ
ಷ್ಟು ಸಾಹಸ ಪಟ್ಟವರು ಯಾರು ಇದ್ದಿಲ್ಲ. ಇಂಥಾ ಸ
ಗತಿಯು. ಅಥವಾ ನಿಯಮವು ನಿರ್ಬಾಧವಾಗಿ ನಿಜವೆಂ

ಕಿಳದನಂತರ ದೃಢನಿಶ್ಚಯದಿಂದ ಅದಕ್ಕೆ ಹತ್ತಿಕೊಳ್ಳುವ ಗುಣವು ಇವನಲ್ಲಿ ಯೆಲ್ಲಕ್ಕೂ ಹೆಚ್ಚು. ಅವನು ತನ್ನ ಕಣ್ಣೆದುರಿಗೆ ಬರುವ ಸಂಗತಿಗಳಿಗೆ ಜಾಗ್ರತೆಯಿಂದ ಲಕ್ಷ್ಯ ಕೊಡುವ ಸ್ವಭಾವವನ್ನು ಮೊದಲು ಕಲಿತುಕೊಂಡನು; ಕೆಲಸ ಮಾಡುವ ಹೆಚ್ಚಿನ ಗುಣಗಳೆಲ್ಲ ಈ ಸ್ವಭಾವವನ್ನೇ ಅವಲಂಬಿಸಿಕೊಂಡಿರುತ್ತವೆ. ಎಜ್ಜವರ್ಥನೆಂಬ ವಿದ್ವಾಂಸನು ಹೇಳಿದ್ದೇನಂದರೆ, ಆರಂಭದಲ್ಲಿ ಈ ಸ್ವಭಾವವು ಮನುಷ್ಯರಿಗೆ ಹೆಚ್ಚು ಕಡಿಮೆ ಹತ್ತಿದಂತೆ ಅವರ ಬುದ್ಧಿಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ, ಅವರವರ ಶಾರೀರ ಮಾನಸಿಕ ಸಾಮರ್ಥ್ಯಗಳ ಹೆಚ್ಚು ಕಡಿಮೆಯಿಂದ ಅಷ್ಟು ಹೆಚ್ಚು ಕಡಿಮೆಯಾಗುವದಿಲ್ಲ; ಈ ಮಾತು ನಿಜವೇ.

ವಾಟ್ಟನು ಚಿಕ್ಕವನಿದ್ದಾಗ ತನ್ನ ಆಟಿಕೆಗಳಲ್ಲಿಯೇ ವಿದ್ಯಾಸಾಧನಕ್ಕೆ ಆರಂಭ ಮಾಡಿದನು. ಅವನ ತಂದೆಯು ಕೈಕೆಳಗಿದ್ದ ಬಡಿಗನ ಅಂಗಡಿಯಲ್ಲಿ ನೆಲದಮೇಲೆ ಬಿದ್ದಿರುವ *ತುರ್ಯ ಯಂತ್ರಗಳನ್ನು ನೋಡಿ ಅವನು ದರ್ಶನಶಾಸ್ತ್ರವನ್ನೂ, ಪ್ರಕಾಶ ಧರ್ಮಗಳ ಶಾಸ್ತ್ರವನ್ನೂ, ಜ್ಯೋತಿಷವನ್ನೂ ಕಲಿಯುವ ಅಭ್ಯಾಸಕ್ಕೆ ಯೆಸಗಿದನು; ತನ್ನ ಶರೀರ ಪ್ರಕೃತಿಯಲ್ಲಿ ಸ್ವಸ್ಥತೆಯಿಲ್ಲದ ಕಾರಣದಿಂದ ಅವನು ಶರೀರ ರಚನೆಯನ್ನು ತಿಳಿಸುವಂಥ ಶಾರೀರ ಶಾಸ್ತ್ರವನ್ನು ಕಲಿಯಬೇಕಾಯಿತು; ಇವಲ್ಲದೆ ಅವನು ತಾನು ಒಬ್ಬನೇ

---

* ಒಂದು ಚಿಕ್ಕ ಹಲಿಗೆಯಮೇಲೆ ಒಂದು ವರ್ತುಲದ ಚತುರ್ಥಾಂಶವನ್ನು ಕೊರೆದು ಅದರ ಮಧ್ಯಸ್ಥಾನದಲ್ಲಿ ಒಂದು ಕೆಳಗೆ ಮೇಲೆ ಆಗುವಂಥ ಕೊಳವೆಯನ್ನೂ ಒಂದು ಜೋತಾಡುವ ಗುಂಡನ್ನೂ ಹಚ್ಚಿರುತ್ತಾರೆ. ಈ ಯಂತ್ರವು ಕೋನಗಳನ್ನೂ ಅಂತರಗಳನ್ನೂ ಅಳೆಯುವದಕ್ಕೆ ಪ್ರಯೋಜನವಾಗಿರುತ್ತದೆ.

ತಿರುಗಾಡುವಾಗ ನೋಡಿದ ಸಂಗತಿಗಳಿಂದ ವನಸ್ಪತಿ ಶಾಸ್ತ್ರವನ್ನೂ, ಇತಿಹಾಸವನ್ನೂ ಕಲಿಯುವದಕ್ಕೆ ಉತ್ಸುಕನಾದನು. ಇವನು ಗಣಿತದ ಯಂತ್ರವನ್ನು (ಮೇಲಿನ ತುರ್ಯ ಯಂತ್ರದಂಥ) ಮಾಡುವ ಕೆಲಸ ನಡಿಸುತ್ತಿರಲಾಗಿ, ಒಂದು ಗಾಯನದ ವಾದ್ಯವನ್ನು ರಚಿಸುವದಕ್ಕೋಸ್ಕರ ಇವನಿಗೆ ಅಪ್ಪಣೆಯಾಯಿತು. ಆದದರಿಂದ ತಾನು ಎಷ್ಟು ಮಾತ್ರವೂ ಗಾಯನವನ್ನು ಅರಿಯದವನಿದ್ದಾಗ್ಯೂ, ಸ್ವರವಿದ್ಯವನ್ನು ಕಲಿತುಕೊಂಡು, ಆ ವಾದ್ಯ ರಚಿಸುವ ಕೆಲಸವನ್ನು ಕಡೆಗಾಣಿಸಿದನು. ಇದೇ ಮೇರಿಗೆ ಗ್ಲಾಸಗೋ ಪಟ್ಟಣದ ಯುನಿವರ್ಸಿಟಿಯ ವಶದಲ್ಲಿರುವ ನ್ಯೂಕಮೆನ್ನನೆಂಬವನು ಮಾಡಿಟ್ಟ ಉಗಿ ಯಂತ್ರದ ಚಿಕ್ಕ ಮಾದರಿಯು ಕೆಟ್ಟದ್ದು ನೆಟ್ಟಗೆ ಮಾಡುವದಕ್ಕೋಸ್ಕರವಾಗಿ ಇವನ ಕೈಯಲ್ಲಿ ಬರಲಾಗಿ, ಇವನು ಆ ಕಾಲದಲ್ಲಿ, ಶೆಖೆ, ಬಾಷ್ಪಭವನ, ಉಗಿಯನ್ನು ಒತ್ತುವ ಯುಕ್ತಿ, ಇವುಗಳನ್ನು ಕುರಿತು ಗೊತ್ತಾಗಿದ್ದ ಸಂಗತಿಗಳನ್ನೆಲ್ಲ ಕಲಿತುಕೊಳ್ಳುವದಕ್ಕೆ ತಾತ್ಕಾಲವೇ ಆರಂಭಿಸಿದನು. ಇದಲ್ಲದೆ ಅದೇ ಸಮಯದಲ್ಲಿ ಯಂತ್ರ ಶಾಸ್ತ್ರವನ್ನೂ, ಅವುಗಳನ್ನು ರಚಿಸುವ ವಿದ್ಯವನ್ನೂ ಪ್ರಯಾಸಪಟ್ಟು ಅಭ್ಯಾಸಿಸಿದನು. ಈ ಎಲ್ಲ ಎತ್ನದ ಫಲವು ಕಡೆಯಲ್ಲಿ ಏನಾಯಿತೆಂದರೆ, ಅವನು ಉಗಿಯನ್ನು ಒತ್ತುವದೊಂದು ಹೊಸ ಯಂತ್ರವನ್ನು ರಚಿಸಿದನು.

Champu Ramayen and Champu Bharata with Commentaries in Canarese by Mr. Shantaviraya.

ಶಾಂತವೀರ ರಾಜದೇವ ಕೃತಕರ್ನಾಟಕ ವ್ಯಾಖ್ಯಾನಗಳು.

॥ಚಂಪೂರಾಮಾಯಣೇ ಸವ್ಯಾಖ್ಯಾನೇ ಬಾಲಕಾಂಡಃ॥

॥ಗದ್ಯಂ॥

ತದನುಸಮಯೋಚಿತಕೃತ್ಯಂನಿರ್ವರ್ತ್ಯಸ್ವಾಶ್ರಮಮುಪಗತವತಿಭಗವತಿವಾಲ್ಮೀಕೌ.

॥ಅನ್ವಯಃ॥

ತದನು=ಆ ಅನಂತರದಲ್ಲಿ। ಭಗವತಿ=ಪೂಜ್ಯನಾದ। ವಾಲ್ಮೀಕೌ=ವಾಲ್ಮೀಕಿಯು। ಸಮಯೋಚಿತಕೃತ್ಯಂ, ಸಮಯೋಚಿತ=ಕಾಲೋಚಿತವಾದ, ಕೃತ್ಯಂ=ಸ್ನಾನಾದಿ ಕರ್ಮಗಳನ್ನು। ನಿರ್ವರ್ತ್ಯ=ಮಾಡಿ। ಸ್ವಾಶ್ರಮಂಪ್ರತಿ=ತನ್ನ ಆಶ್ರಮವನ್ನು ಕುರಿತು। ಉಪಗತವತಿಸತಿ=ಪ್ರವೇಶಿಸಲಾಗಿ.

॥ಭಾವಾರ್ಥಃ॥

ಪೂಜ್ಯನಾದ ವಾಲ್ಮೀಕಿಯು ಕಾಲೋಚಿತವಾದ ಸ್ನಾನಾದಿ ಕರ್ಮಗಳನ್ನು ತೀರಿಸಿಕೊಂಡು ತನ್ನ ಆಶ್ರಮವನ್ನು ಪೊಕ್ಕನು.

ಚಂಪೂಭಾರತೇ ಸವ್ಯಾಖ್ಯಾನೇ ಪ್ರಥಮಸ್ತಬಕಃ

॥ವಸಂತತಿಲಕಾವೃತ್ತಂ॥

ಆಲಾಪಕಾಲಸಮುಪಲ್ಲವಿತಾಂಕವೀಣಾ।
ಸೌರಭ್ಯಪಾತಿಮಧುಪಾರವಸಂಕುಲಸ್ಯ।
ತಂತ್ರೀಸ್ವರಸ್ಯಸವಿತ್ರೌತರುಣೀಸ್ವನಸ್ಯ।
ಜಾನಾತಿಯತ್ರಚತುರೋಪಿನತಾರತಮ್ಯಂ॥೪॥

॥ಅನ್ವಯಃ॥

ಯತ್ರ=ಯಾವ ಪಟ್ಟಣದಲ್ಲಿ। ಆಲಾಪಕಾಲಸಮಪಲ್ಲವಿತಾಂಕವೀಣಾಸೌರಭ್ಯಪಾತಿಮಧುಪಾರವಸಂಕುಲಸ್ಯ, ಆಲಾಪ=ಪರಸ್ಪರ ಸಂಬೋಧನ ಪೂರ್ವಕವಾದ ಭಾಷಣದ (ಸಂಗೀತ ಶಾಸ್ತ್ರ ಕಲಾ ಚರ್ಚೆಯಿಂದ ಪೂರ್ಣವಾದ ವಸಂತ ರಾಗಾಲಾಪದ) ಸಮಕಾಲ=ಸಮಕಾಲದಲ್ಲಿ। ಪಲ್ಲವಿತಾ=ಮೊಗುಳೊಡೆದ, ಅಂಕವೀಣಾ=ತೊಡೆಯ ಮೇಲಿನ ವೀಣೆಯ, ಸೌರಭ್ಯ=ಸುಗಂಧಕ್ಕೆ, ಪಾತಿ=ಎರಗಿದ, ಮಧುಪ=ಭ್ರಮರಗಳ, ಆರವ=ಸ್ವರಗಳ, ಸಂಕುಲಸ್ಯ=ಸಮೂಹದ। ತಂತ್ರೀಸ್ವರಸ್ಯ=ತಂತಿಗಳ ಸ್ವರದ। ತರುಣೀಸ್ವನಸ್ಯ=ತರುಣಿಯರ ಸ್ವರದ। ಸಮಿತೌ=ಸಂಗಮದಲ್ಲಿ। ತಾರತಮ್ಯಂ=ಹೆಚ್ಚು ಕಡಿಮೆಯನ್ನು। ಚತುರ ಅಪಿ=ಪಂಡಿತನಾದರು। ನಜಾನಾತಿ=ತಿಳಿಯಲಿಲ್ಲ.

॥ಶಾಸ್ತ್ರವಿಷಯಃ॥

ಚತುರಃ ಕರ್ತೃ, ತಾರತಮ್ಯಂ ಕರ್ಮ, ನಜಾನಾತಿ=ಕ್ರಿಯಾಪದಂ, ಸಕರ್ಮಕ ಕ. ಪ್ರ. —ಜಾನಾತಿ=(ಜ್ಞಾ+ನಾ+ತಿ) ಜ್ಞಾ ಎಂಬುದು ಧಾತು, ನಾ ಎಂಬುದು "ಕ್ರ್ಯಾದಿಭ್ಯಃ ಶ್ನಾ" ಈ ಸೂತ್ರದಿಂದ ನೆ ವಿಕರಣ, ತಿ ಎಂಬುದು ಲಟ್ ಲಕಾರ, ವರ್ತಮಾನಕಾಲ, ಪರಸ್ಮೈಪದ, ಪ್ರಥಮಪುರುಷ, ಏಕವಚನ. —ಆ— "ಸಮರ್ಥನೀಯಸ್ಯಾರ್ಥಸ್ಯ ಕಾವ್ಯಲಿಂಗಂ ಸಸಮರ್ಥನಂ" ಈ ಪ್ರಮಾಣದಿಂದ ಸಮರ್ಥನಾಪೇಕ್ಷವಾದ ಅರ್ಥಕ್ಕೆ ಸಮರ್ಥನವು ಬೆರೆಯಲು ಕಾವ್ಯಲಿಂಗಾಲಂಕಾರವು.

॥ಭಾವಾರ್ಥಃ॥

ವಸಂತ ರಾಗವನ್ನು ಮಾಡುವ ಕಾಲದಲ್ಲಿ ಮುಗುಳೊಡೆದ ತೋಪೆಯ ಮೇಲಿನ ಚಂದನದ ವೀಣೆಯ ಸುಗಂಧಕ್ಕೆ ಯೆರಗುವ ಭ್ರಮರಗಳ ಝೇಂಕಾರ ಮಂಜುಲ ಸ್ವರಗಳೂ, ತಂತ್ರಿಗಳ ಮಧುರ ಸ್ವರಗಳೂ, ತರುಣಿಯರ ಇಂಗೊರಲ ಕೋಮಲಸ್ವರಗಳೂ ಸಂಗಮವಾಗಲು ವಿದ್ವಾಂಸರಾದರು ಆ ಸ್ವರಗಳ ಭೇದಗಳನ್ನು ತಿಳಿಯಲಿಲ್ಲ.

ಶಾಂತವೀರ ರಾಚಯ್ಯಾ ಕಿತ್ತೂರ ಟ್ರೇನಿಂಗ ಕಾಲೇಜ್.

NOTICES.

ನೋಟೀಸುಗಳು.

ಕಲಾದಗಿಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ತಿಳಿಯ ಪಡಿಸುವದೇನಂದರೆ— ನಾವು ಹೋದ ತಿಂಗಳಲ್ಲಿ ಬೇಹೂರ ಸಾಲಿಯ ಪರೀಕ್ಷೆಕ್ಕೆ ಹೋಗಿದ್ದವಿ. ಆಗ್ಗೆ ಆ ಸಾಲಿಯ ಹಾಜರಿ ನೋಡಲಾಗಿ ಅದು ಬರೋಬರಿ ರೀತಿಯಿಂದ ಮಾಸ್ತರನು ಇಟ್ಟಿದ್ದಿಲ್ಲಾ, ವ ಫೀ ಹಣಾ ವೇಳೆ ವೇಳೆಕ್ಕೆ ಸರಕ್ಯೂಲರ ಹುಕುಮ ಪ್ರಕಾರ ಭರಣಾ ಮಾಡಿದ್ದಿಲ್ಲಾ. ಹೀಗೆ ನಮ್ಮ ನಜರಿಗೆ ಬಂದದರಿಂದ ಈ ಬಗ್ಗೆ ಮಾಸ್ತರನಿಗೆ, ಮೇ॥ ಇ. ಇನಸ್ಪೇಕಟರ ಸಾಹೇಬ ಬಹಾದ್ದೂರ ದಕ್ಷಿಣ ಭಾಗ ಇವರ ಮಂಜೂರಿಯಿಂದ ೧ ರುಪಾಯಿ ದಂಡಮಾಡಿರುತ್ತದೆ.

ಮೇಲಿನ ಮಜಕೂರು ಯಾವತ್ತು ಮಾಸ್ತರರು ಲಕ್ಷ್ಯದಲ್ಲಿಟ್ಟು, ಜಾಗ್ರತೆಯಿಂದ ವರ್ತಿಸಬೇಕು. ತಿಳಿಯುವದು

ತಾ॥ ೨೩ ಯಾಪ್ರೀಲ ೧೮೭೩ ಇ॥

Ramchandra A. Sawnoor.

ಡಿ. ಇ. ಇ. ಜಿಲ್ಲಾ ಕಲಾದಗಿ.

ಧಾರವಾಡಜಿಲ್ಹೆದೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗು ಮತ್ತು ಅಶಿಷ್ಟಾಂಟ ಮಾಸ್ತರರಿಗು ಈ ಸರಕ್ಯೂಲರದಿಂದ ತಿಳಹಿಸುವದೇನಂದರೆ—

ಸಂಬಳ ಹೆಚ್ಚಾಗಬೇಕೆಂತ್ರ ನಮ್ಮ ಕಡಿಗೆ ಮಾಸ್ತರ ಜನರು ಅಶಿಷ್ಟಾಂಟಮಾಸ್ತರ ಜನರು ರಿಪೋರ್ಟಗಳನ್ನು ಮಾಡುತ್ತಾರೆ. ಈ ರಿಪೋರ್ಟಗಳಿಂದ ನಮ್ಮ ಕಚೇರಿಯಲ್ಲಿ ನಿರರ್ಥಕ ಕೆಲಸವು ಮಾತ್ರ ಬೆಳಯುತ್ತದೆ. ಸಂಬಳ ಹೆಚ್ಚಾಗಬೇಕೆಂತ್ರ ಯೆಷ್ಟು ಬರಕೊಂಡರು ನಾವು ಅವರ ಸಂಬಳವನ್ನು ಹೆಚ್ಚು ಮಾಡುವದಿಲ್ಲಾ ಅವರವರ ಯೋಗ್ಯತೆಯಂತ್ರೆ ಸಂಬಳವನ್ನು ಹೆಚ್ಚು ಮಾಡುತ್ತೇವೆ ಅಥವಾ ಕಡಿಮೆ ಮಾಡುತ್ತೇವೆ. ಅದರಿಂದ ಈ ಸರಕ್ಯುಲರ ಮುಟ್ಟಿದ ಬಳಿಕ ಇಂಥಾ ರಿಪೋರ್ಟಗಳನ್ನು ನಮ್ಮ ಕಡಿಗೆ ಕಳುಹಿಸಬಾರದು. ತಾರೀಖು ೨೬ ನೇ ಯಾಪ್ರೀಲ ಸನ್ನ ೧೮೭೩ ಇಸವಿ ಯೆಲ್ಲಾಪೂರ

(Signed) Chanbussappa B. Dharwar,

ಡಿ. ಯೆ. ಇ. ಜಿಲ್ಲಾ ಧಾರವಾಡ

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—